ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
ಇದರ ಸ್ವಾಭಿಮಾನಿ ಸಹಕಾರಿ ಪತ್ರಿಕೆಯ ಜ್ಞಾನ ಜ್ಯೋತಿ
ಅಂಕಣದ ಸಂಗ್ರಹ ಪುಸ್ತಕ

# ಜ್ಞಾನ ಜ್ಯೋತಿ

(ದಿ. ಎಂ. ಬಸಪ್ಪ ನವರು, ಸಹಕಾರ ಸಂಘಗಳ ಉಪನಿಬಂಧಕರು (ನಿವೃತ್ತ),
ಡಿ.ವಿ.ಜಿಯವರ ಮಂಕು ತಿಮ್ಮನ ಕಗ್ಗ ಪದಗಳನ್ನು
ಆಯ್ಕೆ ಮಾಡಿ ಸಹಕಾರಿಗಳಿಗೆ ನೀಡಿರುವ ಮಾರ್ಗದರ್ಶನಗಳು)

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.
ಸೌಹಾರ್ದ ಸಹಕಾರಿ ಸೌಧ, ನಂ.68, 17&18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560055 ದೂ : 080-23378375-80, ವೆಬ್ ತಾಣ : www.Souharda.coop

# ಋಗ್ವೇದದಲ್ಲಿ ಸಹಕಾರದ ಐಕ್ಯ ಮೂಲಮಂತ್ರ

ಓಂ ಸಂಗಚ್ಛಧ್ವಂ ಸಂ ವದಧ್ವಂ ಸಂ ವೋ ಮನಾಂಸಿ ಜಾನತಾಮ್ ।
ದೇವಾ ಭಾಗಂ ಯಥಾ ಪೂರ್ವೇ ಸಂ ಜಾನಾನಾ ಉಪಾಸತೇ॥
ಒಂದಾಗಿ ನಡೆಯಿರಿ ಒಮ್ಮತದಿಂದ ಮಾತನಾಡಿರಿ
ನಿಮ್ಮ ಅಂತರಂಗದ ಭಾವನೆಗಳು ಒಂದೇ ರೀತಿ ಇರಲಿ.
ಹಿಂದೆ ದೇವತೆಗಳು ಪರಸ್ಪರ ಸಹಕಾರದಿಂದ ತಮ್ಮ ತಮ್ಮ
ಪಾಲನ್ನು ಪಡೆದುಕೊಂಡಂತೆ ನೀವೂ ಒಟ್ಟಿಗೆ ಸಾಧನೆ
ಮಾಡಿ ನಿಮ್ಮ ಅಭೀಷ್ಟವನ್ನು ಈಡೇರಿಸಿಕೊಳ್ಳಿ.

ಸಮಾನೋ ಮಂತ್ರಃ ಸಮಿತಿಃ ಸಮಾನೀ
ಸಮಾನಂ ಮನಃ ಸಹ ಚಿತ್ತಮೇಷಾಮ್।
ಸಮಾನಂ ಮಂತ್ರಮಭಿ ಮಂತ್ರಯೇ ವಃ
ಸಮಾನೇನ ವೋ ಹವಿಷಾ ಜುಹೋಮಿ॥
ನಿಮ್ಮ ಕಾರ್ಯವಿಚಾರ ಒಂದೇ ಆಗಿರಲಿ. ಅಂದರೆ ಎಲ್ಲರ
ನಿರ್ಣಯ ಒಮ್ಮುಖವಾಗಿರಲಿ. ಸೇರುವ ಸಭೆಯೂ ಒಂದೇ
ಆಗಿರಲಿ. ಎಲ್ಲರ ಚಿತ್ತ ಮನಸ್ಸುಗಳು ಒಂದಾಗಿರಲಿ. ಇಂತಹ
ಐಕ್ಯಕ್ಕಾಗಿಯೇ ಪ್ರಯತ್ನಿಸೋಣ.

ಸಮಾನೀ ವ ಆಕೂತಿ ಸಮಾನಾ ಹೃದಯಾನಿ ವಃ ।
ಸಮಾನಮಸ್ತು ವೋ ಮನೋ ಯಥಾ ವಃ ಸುಸಹತಿ ॥
ಸಂಕಲ್ಪಗಳು ಸಮಾನವಾಗಿರಲಿ. ಹೃದಯಗಳೂ ಒಂದಾಗಲಿ,
ಮನಸ್ಸುಗಳು ಒಂದಾಗಲಿ. ಅಂತಹ ಪರಸ್ಪರ ಸಹಕಾರದಿಂದ
ಕಾರ್ಯವು ಸುಗಮವಾಗಲಿ.
ಓಂ ಶಾಂತಿಃ ಶಾಂತಿಃ ಶಾಂತಿಃ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ಸ್ವಾಭಿಮಾನಿ ಸಹಕಾರಿ ಮಾಸ ಪತ್ರಿಕೆಯ ಜ್ಞಾನ ಜ್ಯೋತಿ ಅಂಕಣದ ಸಂಗ್ರಹ ಪುಸ್ತಕ

# ಜ್ಞಾನ ಜ್ಯೋತಿ

(ಧಿ. ಎಂ. ಬಸಪ್ಪ ನವರು, ಸಹಕಾರ ಸಂಘಗಳ ಉಪನಿಬಂಧಕರು (ನಿ) ಡಿ.ವಿ.ಜಿಯವರ ಮಂಕು ತಿಮ್ಮನ ಕಗ್ಗ ಪದಗಳನ್ನು ಆಯ್ಕೆ ಮಾಡಿ ಸಹಕಾರಿಗಳಿಗೆ ನೀಡಿರುವ ಮಾರ್ಗದರ್ಶನಗಳು)

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ಸ್ವಾಭಿಮಾನಿ ಸಹಕಾರಿ ಪತ್ರಿಕೆಯ ಜ್ಞಾನ ಜ್ಯೋತಿ ಅಂಕಣದ ಸಂಗ್ರಹ ಪುಸ್ತಕ**


ಪ್ರಕಾಶಕರು : **ವ್ಯವಸ್ಥಾಪಕ ನಿರ್ದೇಶಕರು**
**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ಸೌಹಾರ್ದ ಸಹಕಾರಿ ಸೌಧ, ನಂ.68, 17&18ನೇ ಅಡ್ಡರಸ್ತೆ ಮಧ್ಯೆ,
ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055
ದೂರವಾಣಿ: 080–23378375–80
ಇ–ಮೇಲ್: souharda@souharda.coop
ವೆಬ್‌ಸೈಟ್: www.souharda.coop

ಬೆಲೆ : 50/–

ಪ್ರತಿ : 200

ವರ್ಷ : ಸೆಪ್ಟೆಂಬರ್ 2022

ವಿನ್ಯಾಸ : ಶಂಕರ ಎಸ್.

ಮುದ್ರಕರು :

# ಪರಿವಿಡಿ


| ವಿಷಯಗಳು | ಪುಟ ಸಂಖ್ಯೆ |
|---|---|
| 1. "ಮಂಕುತಿಮ್ಮನ ಕಗ್ಗದಲ್ಲಿ ಸಹಕಾರ ಕ್ಷೇತ್ರದ ಹಿರಿಮೆ – 1" | 16–17 |
| 2. "ಕಗ್ಗ ಪದ್ಯಗಳಲ್ಲಿ ಸಹಕಾರ "ಸಾರ", "ಬಿಡಿಯಾದರೆ ಅಳಿದೇವು", "ಇಡಿಯಾದರೆ ಉಳಿದೇವು" | 18–18 |
| 3. "ಕಗ್ಗ ಪದ್ಯಗಳಲ್ಲಿ ಸಹಕಾರ ಸಾರ – 2" | 19–19 |
| 4. "ಕಗ್ಗ ಪದ್ಯಗಳಲ್ಲಿ ಸಹಕಾರದ ಕಂಪು" ದೈವ ಸೃಷ್ಠಿಯ ಉತ್ತುಂಗ – ಮಾನವ" | 20–20 |
| 5. "ಮಂಕು ತಿಮ್ಮನ ಕಗ್ಗದಲ್ಲಿ ಸಹಕಾರ ಕ್ಷೇತ್ರದ ಹಿರಿಮೆ – 2" | 21–21 |
| 6. "ಮಂಕುತಿಮ್ಮನ ಕಗ್ಗದಲ್ಲಿ ಸಹಕಾರ ಕ್ಷೇತ್ರದ ಹಿರಿಮೆ – 3" | 22–23 |
| 7. "ಕಗ್ಗ ಪದ್ಯಗಳಲ್ಲಿ ಸಹಕಾರದ ಕಂಪು" ದೈವ ಸೃಷ್ಠಿಯ ಉತ್ತುಂಗ – ಮಾನವ" | 24–24 |
| 8. ಕಗ್ಗ ಪದ್ಯಗಳಲ್ಲಿ ಸಹಕಾರದ ಕಂಪು "ಒಬ್ಬನು ಎಲ್ಲರಿಗಾಗಿ, ಎಲ್ಲರೂ ಎಲ್ಲರಿಗಾಗಿ" | 25–25 |
| 9. "ಜೀವನಾವಶ್ಯಕ ಆಹಾರ, ನೀರು, ಗಾಳಿ ಹಾಗೂ ವಸ್ತ್ರಗಳು ಭೂಮ್ಯಾಕಾಶಗಳ ಯಂತ್ರ ಸಂಘದುತ್ಪನ್ನಗಳು"ಮಾನವನ ಬದುಕಿಗೆ ಇವುಗಳೇ ಸಹಕಾರ" | 26–27 |
| 10. "ನೋವಿಲ್ಲದರು ನೊಂದವರನು ಸಂತಯಿಸುತಿರೆ ಜೀವನವು ಕಡಿದಹುದೆ?" | 28–28 |
| 11. "ದಕ್ಕಿತೇಂ ಕುರುಪಾಂಡವತನಯರ್ಗೆ ರಾಜಸುಖ" | 29–30 |
| 12. "ಇವರೀರ್ವರು "ಗರ್ವಪಡದುಪಕಾರಿ ದರ್ಪಬಿಟ್ಟಧಿಕಾರಿ" ಅತಿಶಯರು" | 31–31 |
| 13. "ತಾಯಿಯಾದವಳು ತನ್ನ ಹೊಟ್ಟೆ ತುಂಬಿಸುವಿಕೆಗೆ ಕಾತರಿಸುವಳೇ?" | 32–32 |
| 14. "ತತ್ವವೊಂದರ ಹಿಡಿತಕೊಗ್ಗದಿಹ ಬಾಳೇನು ಕಿತ್ತಗಾಳಿಯ ಪಟವೋ" | 33–33 |
| 15. "ಅಧಿಕಾರಿ ನೀನಲ್ಲ ವಿಧಿ ಬೆಪ್ಪನಲ್ಲ" | 34–34 |
| 16. "ಸಹಕಾರಿ ನಾಯಕ" | 35–35 |
| 17. "ನಂಬಿಕೆಯಿಂದ ಸದ್ಗತಿ ಪ್ರಾಪ್ತಿ" | 36–37 |
| 18. "ಧರಿಸು ಲೋಕದ ಭರವ ಪರಮಾರ್ಥವನು ಬಿಡದೆ" | 38–38 |
| 19. "ಏಕಾಕಿತನವ ತೊರೆ ಸಾಂಘಿಕ ಜೀವನಕ್ಕೆಡೆ ಮಾಡಿಕೊ" "ಜಗವನೊತ್ತಟ್ಟಿಗಿಡುವೆನೆನೆ ನಷ್ಟವಾರಿಗೋ ಮರುಳೆ"? | 39–39 |
| 20. "ಪ್ರಕೃತಿಯ ಋಣ ತೀರಿಸು" | 40–41 |
| 21. "ದೈವಾತ್ಮಭಾವದಲಿ ಧನ್ಯಳಾದಳು ಶಬರಿ" | 42–42 |
| 22. "ಆತ್ಮೋದ್ಧಾರದ ದಾರಿ ಸಹಕಾರ" | 43–43 |
| 23. "ತಿಂದ ನಿನ್ನನ್ನ ಋಣ ತೀರುತಲೆ ಪಯಣ" | 44–45 |

| | |
|---|---|
| 24. "ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ" ಕಗ್ಗ ಪದ್ಯಗಳಲ್ಲಿ ಸಹಕಾರ ಸಾರ – 24 ತುಳಿದು ಬದುಕುವುದಕ್ಕಿಂತ ತಿಳಿದು ಬದುಕು" | 46–46 |
| 25. "ರಾತ್ರಿ ಮೂರಾಯ್ತು ಹೊರಡೆನೆ ತೆರಳಿದೊಡೆ, ಪಾರುಪತ್ಯದವನು ಮೆಚ್ಚುವನು" | 47–47 |
| 26. "ತಂದೆ ಬಗೆಯಿಂ ಬಗೆದು ಶಾಸನೋಗ್ರವನಿನಿತು ಕುಂದಿಸಲಿಕಾಗದೇಂ" | 48–48 |
| 27. "ನಮ್ಮಿಷ್ಟಗಳನರಿತು ನೀಡುವುದವನಿಗರಿದೇಂ?" | 49–49 |
| 28. "ಪ್ರಕೃತಿಯ ಋಣ ತೀರಿಸು" | 50–50 |
| 29. "ಅದಮ್ಯ ಅಗೋಚರ ಶಕ್ತಿಯ ಆಶ್ರಯಿಸಿ ಸಹಕಾರಿಯಾಗಿ ಬಾಳು" | 51–51 |
| 30. "ಏಕಾಗ್ರತೆಯಿಂದ ಸಾಧನೆ" | 52–53 |
| 31. "ತಾಳ್ಮೆ, ಆತ್ಮವಿಶ್ವಾಸ ಯಶಸ್ಸಿನ ಮೂಲ" | 54–54 |
| 32. "ಪ್ರದರ್ಶನಬೇಡ, ನಿದರ್ಶನವಿರಲಿ" | 55–55 |
| 33. "ತಲ್ಲಣಿಸದಿರು ಕಂಡ್ಯಾ ತಾಳು ಮನವೆ" | 56–56 |
| 34. "ಪರರ ಸುಖವನ್ನು ತನ್ನದಾಗಿಸಿಕೊಳ್ಳುವ ಪರರ ಸುಖ ಹಾಗೂ ಭಾಗಿಯಾಗುವ ಮನೋಭಾವದಲ್ಲಿ ಪರಿವರ್ತನೆ" | 57–58 |
| 35. "ಸ್ವಾರ್ಥವ ತೊರೆದು ವಿಶ್ವಪ್ರೇಮಿಯಾಗು" | 59–59 |
| 36. "ಪರಿಶ್ರಮದಿಂದ ಮಾತ್ರ ಫಲವೇ ಹೊರತು ಪಲಾಯನದಿಂದಲ್ಲ" | 60–61 |
| 37. "ಸ್ಥಿರತೆಯಿಂದ ಸುಖವನ್ನರಸಿ ನಿನ್ನದಾಗಿಸಿಕೋ" | 62–62 |
| 38. "ಭಗವಂತನ ಬಹುರೂಪಿತ್ವ" | 63–63 |
| 39. ಭಗವಚ್ಛಕ್ತಿ ಗುಪ್ತಗಾಮಿನಿ" | 64–64 |
| 40. "ಧರ್ಮನಿಷ್ಠ ಆಡಳಿತಗಾರರಿಂದ ಮಾತ್ರ ಸಂಪತ್ಸಮೃದ್ಧಿಗಳ ಅಕ್ಷಯತೆ" | 65–66 |
| 41. "ತಾನು ಬಯಸುವುದು ಒಂದು ಆಗುವುದು ಮತ್ತೊಂದು" | 67–68 |
| 42. "ಭಗವಂತನ ಸೃಷ್ಠಿಯಲ್ಲಿ ವ್ಯರ್ಥವೆಂಬುದಿಲ್ಲ. ಭರವಸೆಯೊಂದಿದ್ದರೆ ಸರ್ವವೂ | 69–70 |
| 43. "ಬದುಕಿನ ಶ್ರೇಷ್ಠತೆಗೆ ಪರಮಾತ್ಮ ನೆನಪು ಅತ್ಯಗತ್ಯ" | 71–71 |
| 44. "ಕಾಲಗತಿಯಿಂದಾಗಿ ಅಚಿಂತ್ಯ ದುಷ್ಕೃತ್ಯಾವಲೋಕನ" | 72–72 |
| 45. "ಹುದ್ದೆಯ ಆಡಂಬರಕ್ಕಿಂತ ಕರ್ತವ್ಯ ನಿರ್ವಹಣಾ ಉತ್ಕೃಷ್ಟತೆಗೆ ಆದ್ಯತೆ" | 73–73 |
| 46. "ನಿನ್ನ ದುಡಿಮೆಯಿಂದ ತೃಪ್ತಿ ಪಡೆ" | 74–74 |
| 47. "ಮಾತಲ್ಲಿ ಸತ್ಯವಿರಲಿ, ಮೊಗದಲ್ಲಿ ನಗುವಿರಲಿ" | 75–75 |
| 48. "ಜೀವನವದೆಷ್ಟು ಕ್ಷಣಭಂಗುರ" | 76–76 |
| 49. "ಕಣ್ಮುಂದಿರುವವರು ಕೈಬಿಟ್ಟಾಗ ಕಾಣದವನು ಕೈ ಹಿಡಿಯುತ್ತಾನೆ" | 77–77 |
| 50. "ಭವಿಷ್ಯದ ಉನ್ನತಿಗೆ ವರ್ತಮಾನವನ್ನು ಗೌರವಿಸಿ" | 78–78 |

| | |
|---|---|
| 51. ಮನದ ತೃಪ್ತಿಗೆ ಭಗವಂತನ ಪೂಜೆ ಪ್ರಸಾದ ಅತ್ಯವಶ್ಯಕ ?" | 79–79 |
| 52. "ಗುಪ್ತ ಗಾಮಿನಿಯೋ ಋಣ" | 80–80 |
| 53. "ಪ್ರಕೃತಿ ಮಹಾತ್ಯಾಗಿ" | 81–81 |
| 54. "ಮಾನವನು ಅಂತಿಮವಾಗಿ ಒಂಟಿಯೇ" | 82–82 |
| 55. "ಸೋಲೊಪ್ಪಿಕೊಳ್ಳದೇ ಪ್ರಕೃತಿಯಿಂದ ನಿತ್ಯನಿರಂತರ ಪ್ರೇರಿತವಾಗುತ್ತಿರು" | 83–83 |
| 56. "ಹೊಸ ಚಿಗುರು ಮತ್ತು ಹಳೆಬೇರಿನಿಂದ ಮರದ ಸೊಬಗು" | 84–84 |
| 57. "ಇರುವ ಭಾಗ್ಯವ ನೆನೆದು ಬಾರದೆಂಬುದನು ಬಿಡು" | 85–85 |
| 58. "ಜನ್ಮ ತಾಳಿದ ಪ್ರತಿ ವಸ್ತು, ವ್ಯಕ್ತಿಗೂ ನಾಶವಿದ್ದೇ ಇದೆ " | 86–86 |
| 59. "ಕಣ್ಣಿದುರಿಗಿರುವವರೆಲ್ಲಾ ಕೈಬಿಟ್ಟಾಗ ಕಾಣದವನೊರ್ವ ಕೈ ಹಿಡಿಯುತ್ತಾನೆ" | 87–87 |
| 60. "ನ್ಯಾಯಾಧಿಪತಿಯಂತೆ ಜಗದ ಶ್ರೇಯಸ್ಸಿಗೆ ಶ್ರಮಿಸು" | 88–88 |
| 61. "ಸದ್ದು ಗದ್ದಲಕ್ಕೆಡೆಗೊಡದೇ ಸೇವಾನಿರತನಾಗು" | 89–89 |
| 62. "ಧರ್ಮೋ ರಕ್ಷತಿ ರಕ್ಷಿತ" | 90–91 |
| 63. "ಹುಟ್ಟು ಆಕಸ್ಮಿಕ – ಮರಣ ಖಚಿತ" | 92–92 |
| 64. "ಒಳ್ಳೆಯವರು ಕೆಟ್ಟವರು ಸದಾಕಾಲಕ್ಕೂ ಇದ್ದವರೇ ಹಾಗೂ ಇರುವವರೇ" | 93–94 |
| 65. "ನರಳುತ್ತಾ ಶಪಿಸುತ್ತಾ ನರಕ ಸೃಷ್ಟಿಸುವುದಕ್ಕಿಂತ ನಗುನಗುತ್ತಾ ನಂದನವನ ನಿರ್ಮಿಸು" | 95–95 |
| 66. "ನಿರಂತರ ಸೃಷ್ಟಿಕಾರ್ಯದಲ್ಲಿ ನಿರತವಾದ ಪರಬ್ರಹ್ಮ" | 96–96 |
| 67. "ಸಂಕಷ್ಟಗಳನ್ನು ಧೈರ್ಯವಾಗಿ ಎದುರಿಸಿದಾಗ ಪರಿಹಾರ ಸುಲಭ" | 97–97 |
| 68. "ಬಂಧನ, ನೋವು, ನರಳಾಟಗಳು ಬಾರದಂತೆ ಜೀವನ ಕ್ರಮವಿರಲಿ" | 98–98 |
| 69. "ಸೋಲಿನಿಂದೆದೆಗುಂದದೆ ಮರಮರಳಿ ಪ್ರಯತ್ನಿಸು" | 99–99 |
| 70. "ಉಣೀಸನೀವನು ದನಕೆ ತಣಿಪನೀವನು ಜನಕೆ ಗುಣಶಾಲಿತೃಣಸಾಧು" | 100–101 |

## ಅಭಿನಂದನೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಪ್ರಕಟಿಸುತ್ತಿರುವ ಸ್ವಾಭಿಮಾನಿ ಸಹಕಾರಿ ಮಾಸ ಪತ್ರಿಕೆ ರಾಜ್ಯದ ಸೌಹಾರ್ದ ಸಹಕಾರಿಗಳ ಮುಖವಾಣಿ. ಸೌಹಾರ್ದ ಸಹಕಾರಿ ಕ್ಷೇತ್ರದ ಸಮಗ್ರ ಮಾಹಿತಿಗಳನ್ನು ಪ್ರಕಟಿಸುವುದರ ಜೊತೆಗೆ ಸರಕಾರದ ಸಹಕಾರ ಇಲಾಖೆಯ ಹಾಗೂ ರಾಜ್ಯ ಹಾಗೂ ರಾಷ್ಟ್ರದ ಸಹಕಾರ ಸಂಸ್ಥೆಗಳ ಅಗತ್ಯ ಸುತ್ತೋಲೆಗಳನ್ನು ಸಹಕಾರಿಗಳ ಮಾಹಿತಿಗಾಗಿ ಪ್ರಕಟಿಸುತ್ತಿರುವುದು ರಾಜ್ಯದ ಸೌಹಾರ್ದ ಸಹಕಾರಿಗಳು ತುಂಬು ಹೃದಯದಿಂದ ಸ್ವಾಗತಿಸುತ್ತಿರುವುದು ಹೆಮ್ಮೆಯ ವಿಷಯ.

ಈ ಪತ್ರಿಕೆಯಲ್ಲಿ ಸಹಕಾರ ಇಲಾಖೆಯ ನಿವೃತ್ತ ಉಪನಿಬಂಧಕರಾದ ದಿವಂಗತ ಶ್ರೀ ಎಂ. ಬಸಪ್ಪನವರು ಡಿವಿಜಿಯವರು ಮಂಕುತಿಮ್ಮನ ಕಗ್ಗದಿಂದ ಆಯ್ದ ಕೆಲವು ಚುಟುಕುಗಳನ್ನು ಸಹಕಾರ ಕ್ಷೇತ್ರಕ್ಕೆ ಹೋಲಿಸಿ ಸಹಕಾರಿಗಳಿಗೆ ಮಾರ್ಗದರ್ಶನ ನೀಡುವಂತಹ ನೀತಿ ಪಾಠವನ್ನು ಹೇಳುವಂತಹ ಅಂಕಣವನ್ನು ಕಳೆದ 70 ಸಂಚಿಕೆಗಳಿಂದಲೂ ಸತತವಾಗಿ ಬರೆದಿದ್ದಾರೆ. ದಿವಂಗತ ಶ್ರೀಯುತ ಬಸಪ್ಪನವರು ಸಹಕಾರ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ, ಸಹಕಾರಿಗಳ ಹಾಗೂ ಸಹಕಾರಿ ಅಧಿಕಾರಿ ಸಿಬ್ಬಂದಿಯವರಿಗೆ ನೈತಿಕ ಮಟ್ಟವನ್ನು ಹೆಚ್ಚಿಸುವಂತಹ ಹಾಗೂ ಅವರ ಜ್ಞಾನದ ಮಟ್ಟವನ್ನು ಹೆಚ್ಚಿಸುವಂತಹ ಲೇಖನವನ್ನು ಒದಗಿಸುತ್ತ ಬಂದಿದ್ದಾರೆ. ಸ್ವಾಭಿಮಾನಿ ಸಹಕಾರ ಮಾಸ ಪತ್ರಿಕೆಯ ಗುಣಮಟ್ಟ ಹೆಚ್ಚಿಸಲು ಸಹಕರಿಸಿದ್ದಾರೆ.

ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

**ಶರಣಗೌಡ ಜಿ. ಪಾಟೀಲ**
ವ್ಯವಸ್ಥಾಪಕ ನಿರ್ದೇಶಕರು

**ಜಿ. ನಂಜನಗೌಡ**
ಅಧ್ಯಕ್ಷರು

## ಎಂ. ಬಸಪ್ಪ

ಭಗವದ್ಗೀತೆ ಶಂಕರನ ಭಜಗೋವಿಂದಂ ಮತ್ತು ಡಿ.ವಿ.ಜಿಯವರ ಕಗ್ಗ ಪದ್ಯಗಳಿಂದ ತನ್ನನ್ನು ಜ್ಞಾನದೆಡೆಗೆ ತರೆದುಕೊಂಡು ಆಧ್ಯಾತ್ಮಿಕತೆಯ ತುಡಿತವನ್ನ ಮೈಗೂಡಿಸಿ ಕೊಂಡವರು. ಚಿನ್ಮಯ ಮಿಷನ್‌ನ ಸ್ವಾಮೀಜಿಗಳಾದ ಬ್ರಹ್ಮಾನಂದ ಸರಸ್ವತಿಯವರ ರಾಗಬದ್ಧ ಕಗ್ಗ ಪದ್ಯ ವಿತರಣೆ ಹಾಗೂ ನಿಬಂಧಕರಾಗಿದ್ದ ಶ್ರೀ ಗೋಪಾಲಕೃಷ್ಣ ಗೌಡ ಐ.ಎ.ಎಸ್. ರವರ ಕಗ್ಗ ಪದ್ಯ ಸ್ಮರಣೆಗಳು ಇವರನ್ನು ಪ್ರೇರೇಪಿಸಿದ ಕಾರಣ ಕಗ್ಗ ಪಧ್ಯವನ್ನು ಮನದಾಳದಿಂದ ಮೆಚ್ಚಿ ಆಂದಷ್ಟು ಹೆಚ್ಚಿನ ಪದ್ಯಗಳನ್ನು ಕಂಟಗಾನ ಮಾಡಿ ಮೈಗೂಡಿಸಿಕೊಂಡಿದ್ದರು.

ನಿವೃತ್ತಿಯ ನಂತರವೂ ಕರ್ನಾಟಕ ರಾಜ್ಯ ಸಹಕಾರ ಆಪೆಕ್ಸ್ ಬ್ಯಾಂಕಿನ ಅಪರ ನಿಬಂಧಕರ ನ್ಯಾಯಾಲಯದಲ್ಲಿ ನ್ಯಾಯಾಲಯದ ಸಲಹೆಗಾರನಾಗಿ ಕಾರ್ಯ ನಿರ್ವಹಿಸಿ 7 ವರ್ಷಗಳ ಅವಧಿಗೆ ಸೇವೆ ಸಲ್ಲಿಸಿದ್ದರು. ನೆರವು ಮಾರ್ಗದರ್ಶನ ಕೋರಿ ಬರುವ ಸಹಕಾರಿಗಳಿಗೆ ಹಾಗೂ ಸಹಕಾರ ಸಂಸ್ಥೆಗಳಿಗೆ ದೂರವಾಣಿ ಮೂಲಕ ಮಾರ್ಗೋಪಾಯಗಳನ್ನು ಸೂಚಿಸುತ್ತಿದ್ದರು.

ನಿವೃತ್ತರಾಗಿ ಶ್ರೀ ಎಂ. ಬಸಪ್ಪನವರು ಮಡದಿ. ಮಕ್ಕಳು ಮತ್ತು ಮೊಮ್ಮಕ್ಕಳೊಂದಿಗೆ ವಿಶ್ರಾಂತ ಜೀವನವನ್ನು ಸುಖಮಯವಾಗಿ ಅನುಭವಸಿ ಕಳೆದ ವರ್ಷ 24 ಫೆಬ್ರವರಿ 2022 ರಂದು ಕೈಲಾಸ ಸೇರಿದರು. ಅವರ ಆತ್ಮಕ್ಕೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಹಾಗೂ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಶಾಂತಿಪೂರ್ವಕ ನಮನಗಳನ್ನು ಸಲ್ಲಿಸಿದ್ದಾರೆ.

# ಅಧ್ಯಕ್ಷರ ನುಡಿ



ದಿ. ಎಂ ಬಸಪ್ಪನವರು ಸಹಕಾರ ಇಲಾಖೆಯ ನಿವೃತ್ತ ಉಪನಿಬಂಧಕರು, ಸಜ್ಜನರು, ಮಂಕುತಿಮ್ಮನ ಕಗ್ಗಗಳನ್ನು ಸರಾಗವಾಗಿ ಹೇಳುತ್ತ ಅವುಗಳ ಅರ್ಥವನ್ನು ಜೀವನದ ಎಲ್ಲ ಸ್ತರಗಳಿಗೆ ಹೋಲಿಸುವ ಜಾಣ್ಮೆವುಳ್ಳವರಾಗಿದ್ದರು.

ಸ್ವಾಭಿಮಾನಿ ಸಹಕಾರ ಪತ್ರಿಕೆಯ ಜ್ಞಾನ ಜ್ಯೋತಿ ಅಂಕಣದಲ್ಲಿ ಕಳೆದ 70 ಸಂಚಿಕೆಯಲ್ಲಿ ಮಂಕು ತಿಮ್ಮನ ಕಗ್ಗದ ಒಂದು ಪದ್ಯವನ್ನು ಆಯ್ಕೆಮಾಡಿ ಅದರ ಅರ್ಥವನ್ನು ವಿವರಿಸಿ ಅದನ್ನು ಸಹಕಾರ ಕ್ಷೇತ್ರಕ್ಕೆ ಅನ್ವಯಿಸುತ್ತ ಸಹಕಾರ ಕ್ಷೆತ್ರದ ಅಭಿವೃದ್ದಿಗೆ ಪರೋಕ್ಷವಾಗಿ ಮಾರ್ಗದರ್ಶನ ನೀಡುತ್ತ ಬಂದಿದ್ದಾರೆ.

ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯವರು ಅವರ ಲೇಖನಗಳನ್ನು ಪರಿಶೀಲಿಸಿ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಅವರ ಲೇಖನಗಳು ಮಾರ್ಗದರ್ಶನ ಮಾಡಲು ಸಾಧ್ಯವಾಗುತ್ತದೆ. ಸಹಕಾರಿಗಳಲ್ಲಿ ಸ್ಫೂರ್ತಿ ತುಂಬುವಂತಹದ್ದಾಗಿವೆ. ಆದ್ದರಿಂದ ಅವುಗಳನ್ನು ಪುಸ್ತಕ ರೂಪದಲ್ಲಿ ಮುದ್ರಿಸಿ ಸಹಕಾರಿಗಳಿಗೆ ಒದಗಿಸಬೇಕೆಂಬುದು ಸಂಯುಕ್ತ ಸಹಕಾರಿಯ ಆಪೇಕ್ಷೆಯಾಗಿದೆ.

ಸಹಕಾರಿಗಳು ಓದುಗರು ಪುಸ್ತಕ ಓದಿ ಪ್ರೋತ್ಸಾಹಿಸುವಿರಾಗಿ ಆಶಿಸಲಾಗಿದೆ.

**– ಜಿ. ನಂಜನಗೌಡ**



ದಿ. ಎಂ  ಬಸಪ್ಪರವರೊಂದಗಿನ ನಮ್ಮ ಸಂಬಂಧ ಬಹಳ ಹಿಂದಿನದು ಶ್ರೀಯುತರು ಸಹಕಾರ ಇಲಾಖೆಯಲ್ಲಿ ಉಪನಿಬಂಧಕರಾಗಿದ್ದ ಹೊತ್ತಿನಲ್ಲಿ ನಾವು ವಿವಿಧ ಸಹಕಾರ ಸಂಸ್ಥೆಗಳಲ್ಲಿ ವಿವಿಧ ಜವಾಬ್ದಾರಿಗಳನ್ನು ಹೊಂದಿದ್ದೆವು. ಈ ಸಂದರ್ಭದಲ್ಲಿ ಶ್ರೀಯುತರೊಂದಿಗೆ ಉತ್ತಮ ಬಾಂದವ್ಯವನ್ನು ಹೊಂದಿದ್ದು, ಶ್ರೀಯುತರು ಸಹಕಾರ ಸಂಸ್ಥೆಗಳ ನಿಭಾವಣೆಗಾಗಿ ನಮಗೆ ಉತ್ತಮ ಮಾರ್ಗದರ್ಶನವನ್ನು ನೀಡಿದ್ದು, ಇದು ನಮ್ಮ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ನಮಗೆ ನೆರವಾಗಿದೆ.

ದಿ. ಬಸಪ್ಪನವರು ಒಬ್ಬ ಉತ್ತಮ ಸಾಹಿತಿಯೂ ಹೌದು. ಶ್ರೀಯುತರು ಮಂಕುತಿಮ್ಮನ ಕಗ್ಗವನ್ನು ಸಹಕಾರ ಕ್ಷೇತ್ರಕ್ಕೆ  ಹೋಲಿಸಿ ಸಹಕಾರಿಗಳಿಗೆ ಮತ್ತು ಸಹಕಾರ ಕ್ಷೇತ್ರದಲ್ಲಿ ಕೆಲಸ ಮಾಡಿದವರಿಗೆ ಉತ್ತಮ ಸಂದೇಶಗಳನ್ನು ರವಾನಿಸುವ ಕೆಲಸವನ್ನು ಬಹಳ ಸೊಗಸಾಗಿ ಮಾಡಿದ್ದಾರೆ. ಅವರ ಈ ಕೃತಿಗಳು ಸ್ವಾಭಿಮಾನಿ ಸಹಕಾರಿ ಮಾಸಪತ್ರಿಕೆಯ ಜ್ಞಾನಜ್ಯೋತಿ ಅಂಕಣದ ಮೂಲಕ ಮೂಡಿಬಂದಿದ್ದು ಸುಮಾರು 70 ಅಂಕಣಗಳಾಗಿ ಕಗ್ಗದ ಸಾರವನ್ನು ಸಹಕಾರಿಗಳಿಗೆ ಉಣಬಡಿಸಿ ಜವಾಬ್ದಾರಿಯುತ ನಡೆಯನ್ನು ತೋರಿದ್ದಲ್ಲದೆ ಸಾಹಿತ್ಯದಲ್ಲಿನ ತಮ್ಮ ಪ್ರೌಡಿಮೆಯನ್ನು ಮೆರೆದಿದ್ದಾರೆ.

ಶ್ರೀಯುತರು ಅಕಾಲಿಕವಾಗಿ ದಿವಂಗತರಾಗಿರುವುದು ಸಹಕಾರ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ. ಅವರ ಅಗಲಿಕೆಯನ್ನು ಹಾಗೂ ದುಃಖವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಅವರ ಕುಟುಂಬಕ್ಕೆ ನೀಡಲಿವೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

**– ಎಸ್. ಆರ್ ಸತೀಶ್ಚಂದ್ರ, ನಿಕಟ ಪೂರ್ವ ಅಧ್ಯಕ್ಷರು, ಕ್ಯಾಂಪ್ಕೋ ನಿ., ಮಂಗಳೂರು**




**ಆತ್ಮೀಯ ಮಿತ್ರ ಬಸಪ್ಪನವರೆ,**

ಕಗ್ಗದ ಹಿಗ್ಗನ್ನು ಕುಗ್ಗಿಸದೆ, ಸಹಕಾರಿ ಕ್ಷೇತ್ರಕ್ಕೂ ಹಮ್ಮಿ ರಸದೌತಣ ನೀಡಿರುವ ನಿಮಗೆ ಹೃದಯ ಪೂರ್ವಕ ಶುಭಾಶಯಗಳು.

ಸಾಧಾರಣ ಸಂಸಾರದಲ್ಲಿ ಹುಟ್ಟಿದರು, ಅಸಾಧಾರಣ ವ್ಯಕ್ತಿತ್ವವನ್ನು ಹೊಂದಿರುವಿರಿ ಸಹಕಾರಿ ರಂಗದಲ್ಲಿ ಅಧಿಕಾರಿಯಾಗಿದ್ದರು. ಸಲ್ಲದ ಆರೋಪಗಳನ್ನು ಮೆಟ್ಟಿ ಎಲ್ಲರೊಡನೆ ಸಹಕಾರದಿಂದಲೇ ಬದುಕಿದಿರಿ, ಡಿ.ವಿ.ಜಿ ಯವರ ಮಂಕುತಿಮ್ಮನ ಕಗ್ಗ ಕನ್ನಡದ ಭಗವತ್ ಗೀತೆ, ವಾಸ್ತವಿಕ ಸತ್ಯವನ್ನು ಸಮಾಜಕ್ಕೆ ತಿಳಿಸಲು ಡಿವಿಜಿಯವರು ತಮ್ಮ ಆಧ್ಯಾತ್ಮಿಕ ಆಳವನ್ನರಿತು, ನಮ್ಮನ್ನು ಎಚ್ಚರಿಸಲು ಬರೆದ ಕವನಗಳು, ಅವರಿಗೆ ನನ್ನ ಶಿರ ಸಾಸ್ಟಾಂಗ ನಮನಗಳನ್ನು ಅರ್ಪಿಸುವೆ, ಕಗ್ಗದ ಬಗ್ಗೆ ನಿಮಗಿರುವ ಆಸಕ್ತಿ, ಅರ್ಥೈಸಿ ಕೊಳ್ಳುವ ಶಕ್ತಿ, ಶ್ಲಾಘನೀಯ, ಮಾತು ಮಾತಿನ ಮಧ್ಯೆ ಕಗ್ಗದ ಕವನಗಳನ್ನು ಉದಹರಿಸುತ್ತಿದ್ದುದು ನಾನು ಮರೆತಿಲ್ಲ ನಿತ್ಯ ಜೀವನದಲ್ಲೂ ಕಗ್ಗದ ಅರ್ಥವನ್ನು ಒಗ್ಗಿಸಿ ಕೊಳ್ಳಲು ಪ್ರಯತ್ನಿಸುತ್ತಿರುವವರ ಪೈಕಿ ನೀವು ಒಬ್ಬರು ಜೀವನದ ಏರು ಪೇರುಗಳ ಮಧ್ಯೆ, ಬಹಳ ಪರಿಶ್ರಮದಿಂದ ತಾಳ್ಮೆಯಿಂದ ಸಂಸಾರವನ್ನು ಸಾಗಿಸಿ, ಸಾಮಾಜಿಕ ಹೊಣೆಯನ್ನು ಸುಸೂತ್ರವಾಗಿ ನೆರವೇರಿಸಿದ್ದೀರಿ, ಹೇಳಬೇಕೆಂದರೆ ಕಷ್ಟ ಸಾಧ್ಯವಾದ ಎಷ್ಟೊ ವಿಚಾರಗಳನ್ನು ನಿರ್ವಿಕಾರವಾಗಿ ನಿಬಾಯಿಸಿದ್ದೀರಿ. ಸಮಾಜದ ಅಂಕು ಡೊಂಕುಗಳನ್ನರಿತು ಸಂದರ್ಭನುಸಾರ ಹೊಂದಿಕೊಂಡು ಹೋಗುವ ಕಲೆಯನ್ನು ನಿಮ್ಮಿಂದ ಕಲಿಯಬೇಕು.


**– ಟಿ.ಎಲ್ ಗೋವಿಂದಸ್ವಾಮಿ, ಮಾಜಿ ಸದಸ್ಯ, ಪುರಸಭೆ, ತರೀಕರೆ, ಹಾಗೂ ವರ್ತಕ.**



ದಿ. ಎಂ. ಬಸಪ್ಪವನರು ನನ್ನ ಸಹೋದ್ಯೋಗಿಯಾಗಿದ್ದು, 1971 ರಿಂದ ಇದುವರೆಗೆ ನಮ್ಮ ಒಡನಾಟ ಮುಂದುವರೆದಿದ್ದು ಈಗಲೂ ಅದೇ ರೀತಿ ಹಸಿರಾಗಿಯೇ ಇದೆ. ಅವರ ಸ್ನೇಹ ಪರತೆ, ಸರಳತೆ ಮತ್ತು ಸೌಜನ್ಯತೆ ಎಲ್ಲರನ್ನೂ ಚುಂಬಕದಂತೆ ಸಳೆಯುತ್ತದೆ. ಅವರು ತಮ್ಮ ಸಂಪರ್ಕದಲ್ಲಿ ಬರುವ ಎಲ್ಲಾ ವ್ಯಕ್ತಿಗಳೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿರುತ್ತಾರೆ. ಅವರ ನೆನಪಿನಶಕ್ತಿ ಅಗಾಧ, ಅವರು ಕಾರ್ಯನಿರ್ವಹಿಸಿದ ಸ್ಥಳದಲಿದ್ದ ವಿವಿಧ ಸಂಘ ಸಂಸ್ಥೆಗಳಲ್ಲಿ ಇದಂತಹ ಪದಾಧಿಕಾರಿಗಳು ಸಿಬ್ಬಂದಿಗಳ ಹೆಸರುಗಳನ್ನು ಈಗಲೂ ಹೇಳುತ್ತಾರೆ. ಪ್ರಾರಂಭದ ದಿನಗಳಲ್ಲಿ ಕೌಟುಂಬಿಕ ತೊಂದರೆಗಳಿದ್ದರೂ. ತಮ್ಮ ಕರ್ತವ್ಯಗಳನ್ನು ನಿಸ್ಪೃಹತೆಯಿಂದ ನಿರ್ವಹಿಸಿ ಎಲ್ಲರ ಆದರಕ್ಕೆ ಪಾತ್ರರಾಗಿದ್ದಾರೆ. ಅವರ ನೆನಪಿನ ಶಕ್ತಿಗೆ ಉದಾಹರಣೆಯೆಂದರೆ, ಕಗ್ಗದ ಹೆಚ್ಚಿನ ಪದ್ಯಗಳನ್ನು ಈಗಲೂ ಪೂರ್ಣವಾಗಿ ಹೇಳುತ್ತಾರೆ. ಅವರ ಮಕ್ಕಳು, ಮೊಮ್ಮಕ್ಕಳು ಮತ್ತು ಕುಟುಂಬದ ಎಲ್ಲಾ ಸದಸ್ಯರಿಗೂ ಒಳಿತಾಗಲಿ ಎಂದು ಹಾರೈಸುತ್ತಾ, ಇಂತಹ ವ್ಯಕ್ತಿಯು ನನ್ನ ಸಹೋದ್ಯೋಗಿಯಾಗಿ ಸ್ನೇಹಿತರಾಗಿರುವುದು ನನ್ನ ಸುಕೃತ ಎಂದು ಭಾವಿಸುತ್ತೇನೆ.

ಶ್ರೀಯುತರು ಅಕಾಲಿಕವಾಗಿ ದಿವಂಗತರಾಗಿರುವುದು ಸಹಕಾರ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ. ಅವರ ಅಗಲಿಕೆಯನ್ನು ಹಾಗೂ ದುಃಖವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಅವರ ಕುಟುಂಬಕ್ಕೆ ನೀಡಲಿವೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

**– ಪಿ.ಎನ್. ಶಿವರುದ್ರಪ್ಪ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, (ನಿವೃತ) ತುಮಕೂರು.**



ಶ್ರೀ ದಿ. ಎಂ. ಬಸಪ್ಪವನರು ಸ್ವಾಭಿಮಾನಿ ಸಹಕಾರಿ ಮಾಸಪತ್ರಿಕೆಯಲ್ಲಿ ಜ್ಞಾನ ಜ್ಯೋತಿ ಅಂಕಣದಲ್ಲಿ ಮಂಕುತಿಮ್ಮನ ಕಗ್ಗದ ಬಗ್ಗೆ 70 ಸಂಚಿಕೆಗಳನ್ನು ಪೂರೈಸಿದ ಪ್ರಯುಕ್ತ ಪುಸ್ತಕೀಯ ರೂಪದಲ್ಲಿ ಹೊರತರುತ್ತಿರುವುದು ಸಂತೋಷ ಹಾಗೂ ಪ್ರಶಂಶಿಯವಾದದ್ದು, ಶ್ರೀಯುತರು ನನಗೆ ಚಿರಪರಿಚಿತರು, ನೆಚ್ಚಿನ ಸಹದ್ಯೋಗಿ ಮಿತ್ರರು ಹಾಗೂ ಸಹೃದಯ ವ್ಯಕ್ತಿತ್ವವುಳ್ಳವರು. ನಾವು ಒಟ್ಟಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರಿ ಸೇವೆ ಸಲ್ಲಿಸಿದ ಅವಧಿಯಲ್ಲಿ ಅವರ ಸರ್ಕಾರಿ ಸೇವೆಯ ನಿಷ್ಠೆ, ಸಮಯಪ್ರಜ್ಞೆ ಹಾಗೂ ಮಾನವೀಯತೆಯನ್ನು ಹತ್ತಿರದಿಂದ ಬಲ್ಲೆನು, ಶ್ರೀಯುತರು ಸಾಹಿತ್ಯ ಮತ್ತು ವೈಚಾರಿಕ ಅಭಿರುಚಿ ಮತ್ತು ಚಿಂತನೆಯುಳ್ಳರಾಗಿರುತ್ತಾರೆ. ವಿಶೇಷವಾಗಿ ಮಂಕುತಿಮ್ಮನ ಕಗ್ಗದ ವಿಚಾರ ಅರ್ಥವನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿರುವುದಲ್ಲದೆ ಬೇರೆಯವರು ಸಹ ಅನುಸರಣೆಗೆ ಪ್ರೇರೇಪಿತರಾಗಿರುವುದು ಮೆಚ್ಚುವ ವಿಷಯವಾಗಿದೆ.

ಶ್ರೀಯುತರು ಅಕಾಲಿಕವಾಗಿ ದಿವಂಗತರಾಗಿರುವುದು ಸಹಕಾರ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ. ಅವರ ಅಗಲಿಕೆಯನ್ನು ಹಾಗೂ ದುಃಖವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಅವರ ಕುಟುಂಬಕ್ಕೆ ನೀಡಲಿವೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

**– ಹೆಚ್. ಎಸ್. ನಾಗರಾಜಯ್ಯ**



ಸಹಕಾರ ವ್ಯವಸ್ಥೆಗೆ ಸಾತ್ವಿಕ ಮತ್ತು ಧಾರ್ಮಿಕ ಸ್ಪರ್ಶ ಇರಬೇಕೆಂಬುದು ಅನುಭವದಿಂದ ಕಂಡು ಬಂದಿದೆ. ಸಹಕಾರ ಇಂದು ಕೇವಲ ವ್ಯಾಪಾರ, ವ್ಯವಹಾರಕ್ಕೆ ಸೀಮಿತವಾಗಿಲ್ಲ. ಜನರ ಬದುಕನ್ನು ಕಟ್ಟಿ ಕೊಡುವ ಪ್ರಕ್ರಿಯೆಯಲ್ಲಿ ಅದು ತೊಡಗಿಸಿಕೊಂಡಿದೆ. ವ್ಯಾಪಾರ, ವ್ಯವಹಾರದಲ್ಲೂ ನೈತಿಕತೆಯನ್ನು ಕಾಪಾಡಿಕೊಂಡು ಬರಬೇಕಾದ ಅಗತ್ಯವಿರುವುದನ್ನು ಮನಗಂಡಿದೆ.

ಇದರ ಹಿನ್ನಲೆಯಲ್ಲಿ ಸಹಕಾರಿ ಸಾಹಿತ್ಯ ಸೃಷ್ಠಿಗೆ ನೈತಿಕತೆಯ ಸಾತ್ವಿಕ ಸ್ಪರ್ಶ ನೀಡುವ ಅಗತ್ಯವಿದೆ.

ಈ ಕೆಲಸವನ್ನು ಸನ್ಮಿತ್ರರಾದ ಶ್ರೀ ದಿ. ಎಂ. ಬಸಪ್ಪರವರು ಮಾಡಿಕೊಂಡು ಬಂದಿದ್ದಾರೆ.

ಶ್ರೀ ದಿ. ಎಂ. ಬಸಪ್ಪವನರು ಸಹಕಾರ ಇಲಾಖೆಯಲ್ಲಿ ಅಧಿಕಾರಿಯಾಗಿ 44 ವರ್ಷಗಳ ಸೇವೆ ಸಲ್ಲಿಸಿ ಹಿರಿಯರ ಕಿರಿಯರ ಮೆಚ್ಚಿಗೆಗೆ ಪಾತ್ರಾರಾದ ದಿನದಿಂದಲೂ ನಾನು ಅವರನ್ನು ಬಲ್ಲೆ, ಅಲ್ಲದೆ. ಶ್ರೀ ದಿ. ಎಂ. ಬಸಪ್ಪವನರು ನನ್ನೊಂದಿಗೂ ಸಹ ಆಪೆಕ್ಸ್ ಬ್ಯಾಂಕಿನ ನಿ., 441 ರ ನ್ಯಾಯಾಲಯದಲ್ಲಿ ನ್ಯಾಯಾಧೀಶನಾಗಿ ಕೆಲಸ ಮಾಡಿದ ಸಂದರ್ಭದಲ್ಲಿ ಒಟ್ಟಿಗೆ ಕೆಲಸ ಮಾಡಿರುತ್ತೇವೆ. ಶ್ರೀ ಎಂ ಬಸಪ್ಪನವರು ಅಧ್ಯಯನ ಶೀಲರು, ಉತ್ತಮ ಬರಹಗಾರರು, ಅವರ ಬರಹಗಳಲ್ಲಿ ನೈತಿಕತೆಗೆ ಮತ್ತು ಧಾರ್ಮಿಕತೆಗೆ ಒತ್ತು ನೀಡಿರುವುದನ್ನು ಕಾಣಬಹುದಾಗಿದೆ.

ಸೌಹಾರ್ದ ಸಂಯುಕ್ತ ಸಹಕಾರಿಯ ಹೆಮ್ಮೆಯ ಪ್ರಕಟಣೆಯಾದ ಸ್ವಾಭಿಮಾನಿ ಸಹಕಾರಿ ಮಾಸಪತ್ರಕೆಯಲ್ಲಿ ಎಂ. ಬಸಪ್ಪವನರು ಅಂಕಣಕಾರರಾಗಿ ನಿರಂತರ ಲೇಖನಗಳನ್ನು ಬರೆಯುತ್ತಿದ್ದಾರೆ. ಅವರ ಲೇಖನಗಳಿಗೆ ಧಾರ್ಮಿಕ, ನೈತಿಕ ಸ್ಪರ್ಶ, ನೀಡಲು ಕನ್ನಡದ ಖ್ಯಾತ ಸಾಹಿತಿ ಶ್ರೇಷ್ಠ ಚಿಂತಹ ಡಿ.ವಿ ಗುಂಡಪ್ಪರವರ ಮಂಕುತಿಮ್ಮನ ಕಗ್ಗದ ಸಾಲುಗಳನ್ನು ಬಳಸಿಕೊಂಡಿದ್ದಾರೆ. ಬಸಪ್ಪವನರಿಗೆ ಡಿ.ವಿ. ಗುಂಡಪ್ಪರವರ ಬಗ್ಗೆ, ಮಂಕುತಿಮ್ಮನ ಕಗ್ಗ ಕೃತಿಯ ಬಗ್ಗೆ ಅಪಾರ ಅಭಿಮಾನ, ಭಕ್ತಿ, ಇರುವುದಿಂದಲೇ ಅಲ್ಲಿಯ ನೈತಿಕ ಹೂರಣವನ್ನು ತಮ್ಮ ಲೇಖನಗಳಲ್ಲಿ ಅಡಗಿಸಿ ಇಟ್ಟಿದ್ದಾರೆ.

ದಿ. ಬಸಪ್ಪವನರ ಲೇಖನಗಳು ಸಾಂಸ್ಕೃತಿಕವಾಗಿಯೂ ಓದುಗರರಲ್ಲಿ ಆಸ್ತೆಯನ್ನುಂಟು ಮಾಡುತ್ತದೆ. ಸಹಕಾರಿ ಸಾಹಿತ್ಯ ಕ್ಷೇತ್ರಕ್ಕೆ ಬಸಪ್ಪನವರ ಕೊಡುಗೆ ಸ್ತುತ್ಯಾರ್ಹವಾದುದು.

ದಿ. ಬಸಪ್ಪನವರ ಆಯ್ದ ಲೇಖನಗಳನ್ನು ಸಂಗ್ರಹಿಸಿ ಕೃತಿ ರೂಪದಲ್ಲಿ ಸೌಹಾರ್ದ ಸಂಯುಕ್ತ ಸಹಕಾರಿ ಪ್ರಕಟಿಸುತ್ತಿರುವುದು ಸಂತೋಷವೆನಿಸುತ್ತದೆ. ಇದೊಂದು ಉಪಕೃತ ಕಾರ್ಯ ಆಗಿದೆ.

ಶ್ರೀಯುತರು ಅಕಾಲಿಕವಾಗಿ ದಿವಂಗತರಾಗಿರುವುದು ಸಹಕಾರ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ. ಅವರ ಅಗಲಿಕೆಯನ್ನು ಹಾಗೂ ದುಃಖವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಅವರ ಕುಟುಂಬಕ್ಕೆ ನೀಡಲಿವೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

**– ಎಸ್.ಎನ್ ಅರುಣ್ ಕುಮಾರ್, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ.,**

# "ಮಂಕುತಿಮ್ಮನ ಕಗ್ಗದಲ್ಲಿ ಸಹಕಾರ ಕ್ಷೇತ್ರದ ಹಿರಿಮೆ – 1"

ಪ್ರಕೃತಿಯ ಪಂಚ ಮಹಾಭೂತಗಳಂತೆ ವರ್ತಿಸು : ಆಂತರಿಕ ಸಂಬಂಧಗಳನ್ನು ಬೆಳೆಸು ಜಗನ್ನಿಯಾಮಕನ ಅದ್ವಿತೀಯ ಕಾರ್ಖಾನೆ ಈ ಜೀವ ಜಗತ್ತು. ತನ್ನ ಸೃಷ್ಟಿ ಕೌಶಲದಿಂದ ವೈವಿಧ್ಯಮಯ ಜೀವ ರಾಶಿಗಳನ್ನು ಸೃಷ್ಟಿಸಿದ ದೇವರು ಮನುಜರಾದ ನಮ್ಮನ್ನೆಲ್ಲಾ ಸಹೋದರರೆಂಬಂತೆ ಬದುಕಿ ಸಮಾಜದ ಸ್ವಾಸ್ಥ್ಯವನ್ನು ಕಾಯ್ದುಕೊಂಡು ಮುಂದಿನ ಪೀಳಿಗೆಗೆ ಉತ್ತಮ ಸಮಾಜವನ್ನು ಕೊಡುಗೆಯಾಗಿ ಕೊಡಲು ಶಾಸ್ತ್ರಗಳ ಮೂಲಕ ನಿರ್ದೇಶನ ನೀಡಿರುತ್ತಾನೆ. "ಡಿವಿಜಿ"ಯವರ ಚಿಂತನೆಯ ಹರವು ಸಮಗ್ರವಾಗಿದ್ದು, ಸರ್ವರ ಅಭಿವೃದ್ಧಿಯನ್ನು ಸಹಕಾರ ಮನೋಭಾವದಿಂದ ಆಶಿಸುವಂತಹದ್ದಾಗಿದೆ. ತತ್ಕಾರಣ ಜೀವಿಗಳಾದ ನಮ್ಮ ಬಾಳಿನ ಉತ್ತಮ ದಾರಿಯನ್ನು ಕ್ರಮಿಸಲು ಉದಾಹರಣಾರ್ಥವಾಗಿ ಪ್ರಕೃತಿಯಲ್ಲಿ ಅಡಕವಾಗಿರುವ ಸಹಕಾರ ಮನೋಭಾವವನ್ನು ಈ ಕೆಳಗಿನ ಪದ್ಯ ಹಾಗೂ ವಿವರಣೆಯಲ್ಲಿ ಸ್ಪಷ್ಟೀಕರಿಸಲಾಗಿದೆ. ನಾವು ಪ್ರಕೃತಿಯ ಕಡೆಗೆ ವಿಹಂಗಮ ನೋಟವನ್ನು ಹರಿಸಿ ತದೇಕಚಿತ್ತರಾಗಿ ವೀಕ್ಷಿಸಿದಲ್ಲಿ ರಾತ್ರಿಯ ವಿಶಾಲವಾದ ನಭದಲ್ಲಿ ಜಗಮಗಿಸುವ ನಕ್ಷತ್ರಗಳ ಸುಂದರ ದೃಶ್ಯ, ಜುಳುಜುಳು ಹರಿಯುತ್ತಿರುವ ನದಿಗಳು ಕಾಣಬರುತ್ತವೆ. ಸೂರ್ಯನು ನಿರಂತರವಾಗಿ ಬೆಳಕನ್ನು ನೀಡಿ ಸಸ್ಯ, ಪ್ರಾಣಿ ಹಾಗೂ ನರನಿಗೆ ಆರೋಗ್ಯ ಶಕ್ತಿಗಳನ್ನು ನೀಡುತ್ತಿದ್ದಾನೆ. ಕಾಲಕಾಲಕ್ಕೆ ಸರಿಯಾಗಿ ಮಳೆಯು ಸುರಿದು ಧರೆಯನ್ನು ತಂಪಾಗಿಸಿ ಬೆಳೆ ನೀಡಿ ಜನ, ಸಸ್ಯ, ಪ್ರಾಣಿಗಳಿಗೆ ಶಕ್ತ್ಯಾರೋಗ್ಯಗಳನ್ನು ನೀಡುತ್ತಿದ್ದಾನೆ. ನದಿಗಳು ಹರಿಯುವ ಸುಂದರ ದೃಶ್ಯ, ಸಸ್ಯಗಳು, ಗಿಡಬಳ್ಳಿಗಳು, ಸುಂದರ ಸುಗಂಧ ಹೂಗಳನ್ನು ಬಿಟ್ಟು ಜನಸಮುದಾಯದ ಆರೋಗ್ಯವನ್ನು ವರ್ಧಿಸಿವೆ. ಸಾಗರಗಳು ಉನ್ನತೋನ್ನತ ಶಿಖರಗಳು ಸ್ಥಿರವಾಗಿ ನಿಂತಿವೆ. ಇವುಗಳೇ ಅಲ್ಲದೇ ಇನ್ನು ಬಹುವಿಧದಲ್ಲಿ ಪ್ರಕೃತಿ ಮಾತೆಯು ತ್ಯಾಗಮಯಿಯಾಗಿ ಸೇವೆ ಗೈಯುತ್ತಿದ್ದರೂ ಯಾರಿಂದಲೂ ಪ್ರಶಂಸೆಯನ್ನಾಗಲೀ ಹೆಗ್ಗಳಿಕೆಯನ್ನಾಗಲೀ ಬಯಸುತ್ತಿಲ್ಲ, ತಮ್ಮ ಸೇವೆಯನ್ನು ಸ್ತುತಿ ಮಾಡುತ್ತಿಲ್ಲವೆಂದು ಎಂದೂ ಗೊಣಗಲಿಲ್ಲ, ತಮಗೆ ಭಗವಂತನು ಹಂಚಿ ಹಾಕಿದ ಕರ್ತವ್ಯವನ್ನು ಏಕಮನಸ್ಸಿನಿಂದ ನಿಸ್ವಾರ್ಥತೆಯಿಂದ ಕರ್ತವ್ಯ ನಿರ್ವಹಿಸಿ ಸಂತುಷ್ಟತೆಯನ್ನು ಕಂಡಿವೆ. ಭಗವಂತನು ತನ್ನ ಸೃಷ್ಟಿಯಲ್ಲಿ ಪೂರ್ಣ ವಿಕಾಸಿತ ಹಾಗೂ ಶ್ರೇಷ್ಠ ಮಟ್ಟದ ಜೀವಿಯಾದ ಮಾನವನಿಗೆ ಜನ್ಮ ನೀಡಿ ಆತನನ್ನು ಸೃಷ್ಟಿ ಜಗತ್ತಿನ ಶಿಖರಪ್ರಾಯನನ್ನಾಗಿ ಸೃಷ್ಟಿಸಿದ್ದಾನೆ. ಸೃಷ್ಟಿಯ ಕಳಸ ಪ್ರಾಯ ಮಾನವ ಎಂಬುದು ಸರ್ವವಿಧಿತ. ಪ್ರಕೃತಿಯಲ್ಲಿನ

ಅಂಶಗಳಾದ ಸೂರ್ಯ, ಆಕಾಶ, ಭೂಮಿ, ಗಾಳಿ ಇವುಗಳ ಅವಿರತ ಕಾರ್ಯಚರಣೆಯಿಂದ ಜಗದ ಜನರ ಸುಖಬಾಳ್ವೆ ಏರ್ಪಟ್ಟಿದೆಯೆಂದು ಈ ಕೆಳಗಿನ ಪದ್ಯದಲ್ಲಿ ಚಿತ್ರೀಕೃತವಾಗಿ ವಿವರಿಸಲ್ಪಟ್ಟಿದೆ. "ತರಣಿ ಕಿರಣದ ನಂಟು ಗಗನ ಸಲಿಲದ ನಂಟು ಧರಣಿ ಚಲನೆಯ ನಂಟು ಮರುತನೊಳ್ನಂಟು ಪರಿಪರಿಯ ನಂಟುಗಳಿನೊಂದು ಗಂಟೀ ವಿಶ್ವ ಕಿರಿದು ಪಿರಿದೊಂದುಂಟು ಮಂಕುತಿಮ್ಮ" ಈ ಪದ್ಯದಲ್ಲಿ ಜಗತ್ತಿಗೂ ಮನುಷ್ಯನಿಗೂ ಇರುವ ನಂಟಿನ ಸಂಬಂಧವು ವಿವರಿಸಲ್ಪಟ್ಟಿದೆ. ಸೂರ್ಯನಿಗೂ ರಶ್ಮಿಗಳಿಗೂ ನಂಟು, ಆಕಾಶಕ್ಕೂ ಮೋಡದಿಂದ ಬರುವ ನೀರಿಗೂ ನಂಟು, ಭೂಮಿಯ ಪಥ ಚಲನೆಯ ನಂಟು, ಗಾಳಿಗೆ ಬೀಸುವ ಕಾರ್ಯ ಹೀಗೆ ಬಗೆಬಗೆಯ ವಿಧವಿಧದ ನಂಟುಗಳು. ಈ ಒಂದರೊಂದರ ಸಹಕಾರದಿಂದ ಜಗದ ಯಶಸ್ವಿ ನಿರ್ವಹಣೆ ಸಾಧ್ಯವಾಗಿದೆ. ಈ ಅಂಶದಿಂದ ನಾವು ಕಲಿಯಬೇಕಾದ ಪಾಠವೆಂದರೆ ನಾವುಗಳೆಲ್ಲರೂ ಸಹ ಬಂಧುಗಳಂತೆ ವರ್ತಿಸಿ ಸಂಪದಭಿವೃದ್ಧಿಗಳನ್ನು ಪಡೆಯೋಣ ಹಾಗೂ ಸಹಕಾರದಿಂದ ಬದುಕೋಣ ಸಹಕಾರ ಕ್ಷೇತ್ರದಲ್ಲಿ ಆಂತರಿಕ ಸಂಬಂಧಗಳ ನಿರ್ವಹಣೆಗೆ ಆದ್ಯತೆ ನೀಡೋಣ ಎಂಬುದು ಈ ಪದ್ಯದ ಸಂದೇಶವಾಗಿದೆ. ಮಾನವನ ಜೀವನದ ಪಾವನತೆ ಸಹಕಾರದಿಂದ, ಒಂದಾಗಿ ಬಾಳಿ ಸಮಗ್ರ ಅಭಿವೃದ್ಧಿಯತ್ತ ಸಾಗುವುದರಲ್ಲಿ ಅಡಕವಾಗಿದೆ. ಆದಕಾರಣ ಡಿವಿಜಿಯವರ ಕರೆಯಿದಾಗಿದೆ "ವಸುದೈವ ಕುಟುಂಬಂ", ಜಗತ್ತೇ ಒಂದು ಸಂಸಾರ ಆ ಬೃಹತ್ ಸಂಸಾರದ ಸದಸ್ಯರು ನಾವೆಂದು ಭಾವಿಸಿ, ಉತ್ತಮ ಹಾಗೂ ಕ್ರಿಯಾಶೀಲರಾಗಿ ಬದುಕನ್ನು ನಿರ್ವಹಿಸಬೇಕೆಂದು ಅವರ ಆಶೋತ್ತರವಾಗಿದೆ. ಇದನ್ನರಸಿ ಪ್ರಕೃತಿಯ ಪಂಚಭೂತಗಳಾದ ಅಗ್ನಿ, ಆಕಾಶ, ಭೂಮಿ, ವರುಣ, ವಾಯುಗಳಂತೆ ನಿಸ್ವಾರ್ಥವಾಗಿ ಯಜ್ಞ ಭಾವದಿಂದ ಕಾರ್ಯ ಪ್ರವೃತ್ತರಾಗೋಣವೆಂಬುದು ಈ ಪದ್ಯದಲ್ಲಿ ಅಡಕವಾಗಿರುವ ಅಂಶವಾಗಿದೆ.

........................................................................................................

Cooperative is a golden mean between capitalism and socialism

**- Jawaharlal Nehru**

# ಕಗ್ಗ ಪದ್ಯಗಳಲ್ಲಿ ಸಹಕಾರ 'ಸಾರ', 'ಬಿಡಿಯಾದರೆ ಅಳಿದೇವು', 'ಇಡಿಯಾದರೆ ಉಳಿದೇವು'

ನಾನು ಓದಿದ ಪುಸ್ತಕಗಳಲ್ಲಿ ನನ್ನನ್ನು ಬಹಳ ಹಾಗೂ ತೀಕ್ಷ್ಣವಾಗಿ ಆಕರ್ಷಿಸಿದ ಪುಸ್ತಕವೆಂದರೆ ಡಿವಿಜಿಯವರ ಮಂಕುತಿಮ್ಮನ ಕಗ್ಗ. ಇದು ಭಗವದ್ಗೀತೆ, ಬ್ರಹ್ಮಸೂತ್ರ ಹಾಗೂ ಉಪನಿಷತ್ತುಗಳ ತ್ರಿವೇಣಿ ಸಂಗಮ. ಇದರಲ್ಲಿ ಜೀವನದ ಸಾರಸರ್ವಸ್ವವಿದೆ. ಇವರ ಪದ್ಯಗಳಲ್ಲಿ ಧರ್ಮ, ರಾಜನೀತಿ, ಪ್ರಕೃತಿ ವರ್ಣನೆ, ಮನಸ್ಸಿನ ನಡೆಯ ಚಂಚಲತೆ, ಕುಟಿಲತೆ, ರಾಮಾಯಣ, ಮಹಾಭಾರತದ ಉಲ್ಲೇಖ ಇತ್ಯಾದಿ ಹಲವು ವಿನ್ಯಾಸಗಳನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಇವುಗಳಲ್ಲಿ ಸಹಕಾರಕ್ಕೆ ಸಂಬಂಧಿಸಿದ ಕೆಲವು ಪದ್ಯಗಳನ್ನು ಸಹಕಾರಿಗಳು ಗಮನಸಲಿ ಎಂದು ಪ್ರಕಟಿಸಲಾಗುತ್ತಿದೆ. ಸೃಷ್ಟಿ, ಸ್ಥಿತಿ, ಲಯ ಕರ್ತನಾದ ಭಗವಂತನು ಇತರೇ ಜೀವರಾಶಿಗಳಿಗಿಂತ ಮಾನವನನ್ನು ವಿಭಿನ್ನವಾಗಿ ಹಾಗೂ ಉತ್ಕೃಷ್ಟ ಸೃಷ್ಟಿಯನ್ನಾಗಿ ರಚಿಸಿ ಇವನನ್ನು ಸೃಷ್ಟಿಶೈಲದ ಶಿಖರವೆಂದೇ ಕರೆದಿದ್ದಾರೆ. ಇಂತಹ ಪರಮೋತ್ಕೃಷ್ಟ ಸೃಷ್ಟಿಯಾದ ಮಾನವ, ಸಮಾಜದಲ್ಲಿಯೂ ಉದಾಹರಣಾರ್ಥವಾಗಿ, ಸತ್ಸಂಪ್ರದಾಯಿಯಾಗಿ ಹಾಗೂ ಸಹಕಾರಿಯಾಗಿ ಬಾಳಬೇಕೆಂಬುದೇ ಜೀವನದ ಹೆಗ್ಗುರಿಯಾಗಬೇಕಾಗಿದೆ. ಸಹಕಾರ ಉಗಮದ ಒಂದೆರಡು ತುಣುಕುಗಳನ್ನು ನೋಡೋಣ. "ಒಬ್ಬನು ಎಲ್ಲರಿಗಾಗಿ", "ಎಲ್ಲರೂ ಎಲ್ಲರಿಗಾಗಿ", "ಬಿಡಿಯಾದರೆ ಅಳಿದೇವು", "ಇಡಿಯಾದರೆ ಉಳಿದೇವು", ಒಗ್ಗಟ್ಟಿನಲ್ಲಿ ಒಲವಿದೆ ಬಲವಿದೆ", "ಸರ್ವರ ಅಭಿವೃದ್ಧಿ ಸಹಕಾರದಿಂದ", "ಹನಿಹನಿಗೂಡಿದರೆ ಹಳ್ಳ ತೆನೆತೆನೆಗೂಡಿದರೆ ಬಳ್ಳ" ಎಂಬ ಧ್ಯೇಯ ವಾಕ್ಯಗಳು ಸಹಕಾರದ ತಳಹದಿ ವಾಕ್ಯಗಳಾಗಿವೆ. ಅರಣ್ಯದಲ್ಲಿ ಹಾರಾಡುವ ಹಕ್ಕಿ ಪಕ್ಷಿ, ಜೇನು, ಓಡಾಡುವ ಇರುವೆ, ಆನೆಗಳು ಇತ್ಯಾದಿ ಮೃಗಗಳನ್ನು ವೀಕ್ಷಿಸಿದ ಮಾನವ ತಾನೂ ಸಹ ಸಹಕಾರ ಜೀವನವನ್ನು ಒಗ್ಗೂಡಿಸಿಕೊಳ್ಳಬೇಕೆಂಬ ಮನಸ್ಸು ಮಾಡಿದ. ಅದೇಕೋ ಪ್ರಾಣಿ ಪಕ್ಷಿ ಸಂಕುಲದಷ್ಟು ಸಹಕಾರ ಪ್ರಗತಿಯನ್ನು ಮಾನವ ಸಾಧಿಸಿಲ್ಲವೆಂದೋ ಏನೋ ಡಿವಿಜಿಯವರು "ಒಟ್ಟುಬಾಳ್ವುದ ಕಲಿಯೋ" ಸಂದೇಶ ನೀಡಿಕೆಯ ಈ ಚಮತ್ಕಾರದ ಪದ್ಯವನ್ನು ನೀಡಿದ್ದಾರೆ: "ಪ್ರತ್ಯೇಕ ಸುಖವದಲ್ಪದುದು, ಗಳಿಗೆ ತೋರ್ಕೆಯದು ಆತ್ಮ ವಿಸ್ತಾರವಾಗಿಪುದೆ ನಿತ್ಯಸುಖ ವ್ಯಕ್ತಿ ಜೀವನದ ಸೊಂಪು ಸಮಷ್ಠಿ ಜೀವನದಿಂ ಒಟ್ಟು ಬಾಳ್ವುವ ಕಲಿಯೋ ಮಂಕುತಿಮ್ಮ"॥ ತಾನೊಬ್ಬನೇ ಸುಖವಾಗಿರಬೆಂಕೆಂದು ಬಯಸುವುದು ಬಹು ಸಣ್ಣದಾದ ವಿಚಾರ. ಒಂದು ಗಳಿಗೆಯ ತೋರಿಕೆಯಷ್ಟೆ. ನಮಗೆ ನಿತ್ಯಸುಖ ಬೇಕೆನಿಸಿದರೆ ನಮ್ಮ ಆತ್ಮ ವಿಸ್ತಾರವಾಗಬೇಕು, ಒಬ್ಬ ಮನುಷ್ಯನ ಜೀವನದ ಸೊಗಸು ಎಲ್ಲರ ಸುಖಮಯ (ಸಮಷ್ಠಿ) ಜೀವನದಿಂದ. ಆದ್ದರಿಂದ, ಸೇರಿ, ಕೂಡಿ ಬಾಳುವುದನ್ನು ಕಲಿ ಅಂದರೆ ಸಹಕಾರವನ್ನು ಮೈಗೂಡಿಸಿಕೋ ಹಾಗೂ ಸಹಕಾರ ಸುಖಜೀವನದ ಅಡಿಪಾಯ ಎಂಬ ಸಂದೇಶವನ್ನು ನೀಡುವ ಪದ್ಯವಿದಾಗಿದೆ.

# "ಕಗ್ಗ ಪದ್ಯಗಳಲ್ಲಿ ಸಹಕಾರ ಸಾರ – 2"

"ಲೋಕಾಃ ಸಮಸ್ತಾಃ ಸುಖಿನೋ ಭವಂತು" ಎಂಬುದು ವಿಶ್ವದ ಸಮಸ್ತ ಜೀವರಾಶಿಗಳ ಸುಖ ಮತ್ತು ಕಲ್ಯಾಣಗಳನ್ನು ಬಯಸುವ ವಿಶ್ವವ್ಯಾಪ್ತಿ ಲೋಕೋಕ್ತಿ. ತಾನೊಬ್ಬ ಚೆನ್ನಾಗಿದ್ದರೆ ಸಾಲದು, ತನ್ನ ಪರಿಸರದವರು ಮತ್ತು ನೆರೆಹೊರೆಯವರು ಸುಖದಿಂದಿರ ಬೇಕು ಎನ್ನುವುದರ ಪ್ರಕಂಪನದ ಚಿಂತನಾಶೀಲತೆಯೇ ಮೇಲಿನ ಶ್ಲೋಕ ಸಂದೇಶದ ಸಾರ. ಈ ಮೂಲ ಚಿಂತನೆಯ ಸಾರ ಸಂಗ್ರಹವೇ ಸಹಕಾರ ಚಳುವಳಿಯ ಮೂಲೋದ್ಧೇಶ. ಕೆಳಸ್ತರದ, ಕಡುಬಡವರನ್ನು ಮೇಲ್‌ಸ್ತರಕ್ಕೆ ತರುವಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಲವು ನೂರೆಂಟು ಕಲ್ಯಾಣ ಯೋಜನೆಗಳನ್ನು ರೂಪಿಸಿ, ಅನುಷ್ಠಾನಕ್ಕೆ ತರುತ್ತಿವೆ. ಅದೇಕೋ ಬಡವ ಬಡವನಾಗುತ್ತಲೇ, ಶ್ರೀಮಂತ ಶ್ರೀಮಂತನಾಗುತ್ತಲೇ ಇರುವುದು ಜನಜನಿತ ಹಾಗೂ ಕಠೋರ ಸತ್ಯ. ಇದರ ವಾಸ್ತವತೆಯ ಪರಿಶೀಲನೆಗೆ ಹೋದಾಗ ಯೋಜನೆಯ ನಿರೂಪಣೆಯಲ್ಲಿ ಸದುದ್ಧೇಶವಿರುವ ಅಂಶ ಮೇಲ್ನೋಟಕ್ಕೆ ಕಂಡುಬಂದರೂ ಅನುಷ್ಠಾನ ಹಂತದಲ್ಲಿ ಲೋಪವಿರುವುದು ವ್ಯಕ್ತವಾಗುತ್ತದೆ. ತಾಂತ್ರಿಕತೆಯ ತಾಕಲಾಟದಲ್ಲಿ ಹಾಗೂ ನಾಗರೀಕತೆಯ ನಾಗಾಲೋಟದಲ್ಲಿ ಸಿಲುಕಿಕೊಂಡಿರುವ ಮಾನವನು ಅಂತರಿಕ್ಷದಲ್ಲಿ ಹಕ್ಕಿಯಂತೆ ಹಾರುವುದನ್ನು ಕಲಿತ, ನೀರಿನಲ್ಲಿ ಮೀನಿನಂತೆ ಈಜುವುದನ್ನು ಕಲಿತ, ಆದರೆ ಸಹಕಾರದಿಂದ ಮನುಜ ಮನುಜರ ಅಭಿವೃದ್ಧಿಗಾಗಿ ದುಡಿಯುವುದನ್ನು ಮರೆತ. ಈ ಕೊರತೆಯನ್ನು ಅರಿತು ಸಹಬಾಳ್ವೆಯನ್ನು ಅನುಷ್ಠಾನಗೊಳಿಸುತ್ತಾ ಸರ್ವತೋಮುಖ ಅಭಿವೃದ್ಧಿಗಾಗಿ ಜಗತ್ತಿನ ಸರ್ವಜನರನ್ನು "ಸಹೋದರರರನ್ನಾಗಿ ತಬ್ಬಿಕೋ" ಅಂದರೆ ಅರ್ಥೈಸಿಕೊಂಡು ನಡೆ ಎಂಬ ಸಂದೇಶವನ್ನು ಈ ಚಮತ್ಕಾರಿಕ ಪದ್ಯದಲ್ಲಿ ಮಾನ್ಯ ಡಿವಿಜಿಯವರು ಕರೆ ಕೊಡುತ್ತಿದ್ದಾರೆ. "ಒಬ್ಬನುಣುವೂಟದಲಿ ಸವಿಯಿಲ್ಲ ಸೊಗಸಿಲ್ಲ ಇಬ್ಬರಾಗುವೆನೆಂದನಂತೆ ಪರಬೊಮ್ಮಂ ಹೆಬ್ಬದುಕನೊಂಟಿತನದೊಳೇನು ಕಳೆಯುವಿಯೋ "ತಬ್ಬಿಕೊಳೋ ವಿಶ್ವವನು" ಮಂಕುತಿಮ್ಮ" ಭಗವಂತನೂ ಸಹ ಒಂದು ದಿನ ಊಟಕ್ಕೆ ಕುಳಿತಾಗ ಒಬ್ಬನೇ ಉಣ್ಣುವುದರಲ್ಲಿ ರುಚಿಯಿಲ್ಲವೆಂದು ಬೇಸರಗೊಂಡನಂತೆ. ಆದ ಕಾರಣ ಜಗತ್ತಿನ ವಿವಿಧ ರೂಪವಾಗಿ ಹೊರಹೊಮ್ಮಿದನಂತೆ. ಹಿರಿದಾದ ಮಹತ್ವವಾದ ಬದುಕನ್ನು ಒಂಟಿತನದೊಳು ಕಳೆದು ವ್ಯರ್ಥಗೊಳಿಸುವುದಕ್ಕಿಂತ ಒಟ್ಟಾಗಿ ಬಾಳಿ ಸಹಕಾರವನ್ನು ಬದುಕಿನಲ್ಲಿ ತನ್ನಿ ಎನ್ನುವ ಸಂದೇಶವನ್ನು ಈ ಪದ್ಯ ಸಾರುತ್ತದೆ. ಆಧುನಿಕ ಭಗವದ್ಗೀತೆಯೆನಿಸಿದ ಮಂಕುತಿಮ್ಮನ ಕಗ್ಗದಲ್ಲಿ ಡಿವಿಜಿಯವರು ಧರ್ಮ, ಸತ್ಯ, ಪ್ರಕೃತಿ, ಮಾನಸಿಕ ತೊಳಲಾಟ ಇತ್ಯಾದಿಗಳ ಬಗ್ಗೆ ಎಲ್ಲಾ ಪ್ರಾಕಾರಗಳನ್ನು ಒಳಗೊಂಡಂತೆ ಪದ್ಯಗಳನ್ನು ರಚಿಸುತ್ತಾ, ಸಹಕಾರ ಮನೋಭಾವವನ್ನು ಬೆಳೆಸಿಕೊಂಡು “"ತಬ್ಬಿಕೊಳೋ ವಿಶ್ವವನು" ವಿಶ್ವದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲು ಕರೆನೀಡಿರುತ್ತಾರೆ. ಆದಕಾರಣ ನಾವೆಲ್ಲರೂ ಸಹಕಾರದ ಈ ಭಾವವನ್ನು ಅನುಷ್ಠಾನಕ್ಕೆ ತರುತ್ತಾ, ಕೇವಲ ನುಡಿವೀರರಾಗದೇ ನಡೆವೀರರಾಗುವ ಮೂಲಕ ಅಂದರೆ ಮಾತಿಗಿಂತ ಕೃತಿಯಲ್ಲಿ ತೊಡಗೋಣವೆಂಬ ಮನಪರಿವರ್ತನೆ ಮಾಡಿಕೊಂಡು ಸಹಕಾರದ ಅಭ್ಯುದಯಕ್ಕೆ ಶ್ರಮಿಸೋಣ.

# "ಕಗ್ಗ ಪದ್ಯಗಳಲ್ಲಿ ಸಹಕಾರದ ಕಂಪು" ದೈವ ಸೃಷ್ಠಿಯ ಉತ್ತುಂಗ – ಮಾನವ

ಸನ್ಮಾನ್ಯ ಡಿ.ವಿ.ಜಿಯವರ ಮಂಕುತಿಮ್ಮನ ಕಗ್ಗದಲ್ಲಿ ಪ್ರಸ್ತಾಪಿಸದ ವಿಷಯಗಳೇ ಇಲ್ಲ. ಮಾನವನ ಹುಟ್ಟಿನಿಂದ ಚಟ್ಟದವರೆಗೆ ಪ್ರಾಪ್ತವಾಗುವ ಎಲ್ಲಾ ಹಂತಗಳ ಬಗ್ಗೆಯೂ ಉಲ್ಲೇಖವಿದೆ. ಇಂತಹ ಮಾನವನನ್ನು ಸೃಷ್ಠಿ ಸ್ಥಿತಿ ಲಯ ಕರ್ತವಾದ, ಆದಿ ಮಧ್ಯಂತರಹಿತನಾದ ಭಗವಂತನು ಅತ್ಯುತ್ಕೃಷ್ಟ ರಚನೆಯಾಗಿ ಸೃಷ್ಠಿಸಿದ್ದಾನೆಂಬ ಬಗ್ಗೆ ಡಿ.ವಿ.ಜಿ.ಯವರು ಮಾನವನ ದೇಹದ ರಚನೆಯ ವಿಶಿಷ್ಟತೆಯ ಬಗ್ಗೆ ಪ್ರಸ್ತಾಪಿಸುತ್ತಾ ಅವನನ್ನು ಸೃಷ್ಠಿ ಶೈಲದ ಶಿಖರವೆಂದಿದ್ದಾರೆ. ಭಗವಂತನು ಮಾನವನನ್ನು ಸೃಷ್ಠಿಸುವಾಗ್ಗೆ ತನ್ನೆಲ್ಲ ಜಾಣ್ಮೆ ಕೌಶಲಗಳನ್ನು ಬಳಸಿ, ಧಾರೆಯೆರೆದು ಶಿಖರ ಪ್ರಾಯ ರಚನೆಗೈದಿದ್ದಾನೆ. ದೇಹ ರಚನೆಯ ಬಗ್ಗೆ ವಿವರಣೆಯಿರುವ ಈ ಚಮತ್ಕಾರಿಕ ಪದ್ಯವನ್ನು ಗಮನಿಸಿ. "ಎಷ್ಟು ಬಗೆ ಯಂತ್ರಗಳೊಳ್ ಎಷ್ಟು ರಸಮಿಶ್ರದಿಂ : ದೆಷ್ಟಾದಿ ಭೂತಗಳು ಪರಿಪಾಕ ಹೊಂದಿ : ಒಟ್ಟು ಸೇರಿಹವು ನರನೆಂಬ ಸಿದ್ದಿಯೊಳವನು : ಸೃಷ್ಠಿ ಶೈಲದ ಶಿಖರ ಮಂಕುತಿಮ್ಮ" ದೇಹದ ಅಂಗ ರಚನೆಯ ಪ್ರಕಾರ ಶಿರೋಭಾಗ, ಉದರಭಾಗ ಹಾಗೂ ಕೈಕಾಲುಗಳೆಂದು ವಿಂಗಡಿಸಲ್ಪಡಲಾಗಿದ್ದು, ಅವುಗಳ ಯಶಸ್ವಿ ಕಾರ್ಯಚರಣೆಗೆ ಅವಶ್ಯಕವಾದ ರಸಗಳು ಹಾಗೂ ಪಂಚಭೂತಗಳು ಸಮಸ್ಥಿತಿಯಲ್ಲಿ ಸೇರಿ ಪರಿಪಾಕ ಹೊಂದಿ, ಆಕರ್ಷಣೆಯ ದೇಹ ರಚನೆಯಾಗಿದೆಯೆಂದೂ ಅಂತಹ ದೇಹದ ವಿವಿಧ ಭಾಗಗಳಿಗಿರುವ ಅನ್ಯೋನ್ಯತೆಯನ್ನು ವಿಶ್ಲೇಷಿಸಿ ನೋಡಿದಾಗ ಅವುಗಳೊಳಗಿನ ಸಹಕಾರ ಊಹಿಸಲಸದಳವೆಂದಿದ್ದಾರೆ. ಕಾಲಿಗೊಂದು ಮುಳ್ಳು ಒಕ್ಕಿದಾಗ, ತಕ್ಷಣ ಆದ ನೋವಿನ ಮಾಹಿತಿಯನ್ನು ನರಗಳು ಮೆದುಳಿಗೆ ರವಾನಿಸಿ, ತದನಂತರ ಮೆದುಳು ನರಕೋಶಗಳ ಮೂಲಕ ಕೈಗೆ ನಿರ್ದೇಶನ ನೀಡಿ, ಒಕ್ಕಿದ ಮುಳ್ಳನ್ನು ತೆಗೆದು ಆಗಿರುವ ನೋವನ್ನು ನಿವಾರಿಸುವ ತಾತ್ಕ್ಷಣಿಕ ಕ್ರಿಯೆಯನ್ನು ಪರಿಶೀಲಿಸಿದಾಗ ಅಂಗಾಂಗಗಳಲ್ಲಿರುವ "ಸಹಕಾರ" ಹುಬ್ಬೇರುವಂತೆ ಮಾಡುತ್ತದೆ. ಹೇಗೆ ದೇಹ ಹಾಗೂ ನಿಸರ್ಗಗಳಲ್ಲಿ ಅಂತರ್ಗತವಾದ ಸಹಕಾರ ಹಾಸುಹೊಕ್ಕಾಗಿದೆಯೋ ಅಂತಹುದೇ ನೈಜ ಸಹಕಾರವನ್ನು ಸಹಕಾರ ಕ್ಷೇತ್ರದಲ್ಲಿ ಅಳವಡಿಸಿ ಎಂಬ ಮಾರ್ಮಿಕ ಸಂದೇಶವನ್ನು ಈ ಪದ್ಯದ ಮೂಲಕ ನೀಡುತ್ತಾ ಭಗವಂತನ ಉತ್ಪನ್ನಗಳಾದ ಚರಾಚರಗಳಲ್ಲಿ ಮಾನವ ದೇಹವು ಸೃಷ್ಠಿ ಶೈಲದ ಶಿಖರವೆಂದು ಉಧ್ಘೋಷಿಸಿರುತ್ತಾರೆ. ಇಂತಹ ಶಿಖರಪ್ರಾಯ ಸೃಷ್ಠಿಯಾದ ಮಾನವನು ತನ್ನ ಬದುಕನ್ನು ಉದಾಹರಣಾರ್ಥವಾಗಿ ನಡೆಸಬೇಕಲ್ಲವೇ? ಸಹಕಾರ ಜೀವನದ ಪದ್ಧತಿಯನ್ನು ಮೈಗೂಡಿಸಿಕೊಳ್ಳಿ ತನ್ಮೂಲಕ ಸಮಾಜದ ಅಭಿವೃದ್ಧಿಯನ್ನು ಸಾಧಿಸುತ್ತಾ ವೈಯಕ್ತಿಕ ಜೀವನವನ್ನು ವರ್ಧಿಸಿ, ವೃದ್ಧಿಸಿ ಅಭಿವೃದ್ಧಿಸಿಕೊಳ್ಳಿ ಎಂಬುದಾಗಿದೆ.

# "ಮಂಕು ತಿಮ್ಮನ ಕಗ್ಗದಲ್ಲಿ ಸಹಕಾರ ಕ್ಷೇತ್ರದ ಹಿರಿಮೆ-2"

ಕೆಳಸ್ತರದ ಜನರಿಗೆ, ದೀನ ದುರ್ಬಲರಿಗೆ ನೆರವಿನ ಹಸ್ತವನ್ನು ನೀಡಲು ಮುಂದಾಗುತ್ತಾ ಶುದ್ಧ ಹಾಗೂ ಗುಣಾತ್ಮಕ ಸಮಾಜ ನಿರ್ಮಾಣಕ್ಕೆ ಕರೆಕೊಟ್ಟ ರಾಷ್ಟ್ರಪಿತ ಮಹಾತ್ಮ ಗಾಂಧಿ, ಲಾಲ್ ಬಹದ್ದೂರ್ ಶಾಸ್ತ್ರಿಗಳೇ ಏಕೆ ಇತ್ತೀಚಿನ ದಿ॥ ಅಬ್ದುಲ್ ಕಲಾಂಜಿ ಇತ್ಯಾದಿ ದೇಶ ನಾಯಕರುಗಳು ಆರೋಗ್ಯಕರ ಹಾಗೂ ಹರ್ಷದಾಯಕ ಸಮಾಜದ ಕನಸು ಕಂಡಿದ್ದರು.

ವಿಶ್ವದ ಆಧ್ಯಾತ್ಮಿಕ ಭೂಪಟದಲ್ಲಿ ಭಾರತ ತನ್ನ ವಿಶಿಷ್ಟ ಸ್ಥಾನವನ್ನು ಪಡೆದಿದೆಯೆಂದರೆ ಅತಿಶಯೋಕ್ತಿಯೇನಲ್ಲ. ಹಿಂದಿನ ಸಂತರು, ದಾರ್ಶನಿಕರು, ಚಿಂತನಶೀಲರು ನುಡಿದ ಉವಾಚಗಳು, ನಡೆದು ಬಂದ ಜೀವನದ ಶೈಲಿ, ಸರ್ವರಿಗೂ ಆದರ್ಶಪ್ರಾಯ. "ಸುಖೀ ಸಾಮ್ರಾಜ್ಯದಿಂದ ಸ್ವಸ್ಥ ಸಮಾಜವೆಂಬ" ಅಂಶವನ್ನರಿತು ಬಸವಾದಿ ಶರಣರು "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ಎನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡವೆಂಬ" ಸಪ್ತ ಸೂತ್ರಗಳನ್ನು ಹಾಕಿಕೊಟ್ಟರು. ಈ ಅಂಶಗಳನ್ನು ಪ್ರತಿಯೊಬ್ಬನೂ ಪಾಲಿಸಿದಲ್ಲಿ ತನಗೂ ಸುಖ ಹಾಗೂ ಸಮಾಜಕ್ಕೂ ಸುಖ ಎಂಬ ಅಂಶ ವ್ಯಕ್ತವಾಗಿರುತ್ತದೆ. ಬಡತನದ ರೇಖೆಗಿಂತ ಕೆಳಗಿರುವ ಜನ ಸಮುದಾಯವನ್ನು ಮೇಲೆತ್ತುವುದನ್ನೇ ಪ್ರಮುಖ ಗುರಿಯನ್ನಾಗಿಸಿಕೊಂಡು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಲವು ಹನ್ನೆರೆಡು ಜನಪ್ರಿಯ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿರುತ್ತವೆ. ಆದರೆ, ವೈಚಿತ್ರವೆಂದರೆ ನೈಜತೆಯಲ್ಲಿ ಅದಿನ್ನೂ ಪ್ರತಿಬಿಂಬಿತವಾಗುತ್ತಿಲ್ಲವೆಂದೆನಿಸಿದೆ. ಡಿವಿಜಿಯವರು ತಮ್ಮ ಮನೋಜ್ಞವಾದ ಕೆಳಗಿನ ಪದ್ಯದಲ್ಲಿ ದೀನ ದುರ್ಬಲರನ್ನು ಮೇಲೆತ್ತಿ ಎಂದು ಕರೆನೀಡಿರುತ್ತಾರೆ. ಅಂತಹ ಮಾಂತ್ರಿಕ ಪದ್ಯವನ್ನು ಅರ್ಥೈಸಿಕೊಳ್ಳೋಣ. "ಬಿದ್ದುದನು ನಿಲ್ಲಿಪುದೆ ನರನ ಮೃತ್ಯುಂಜಯತೆ ಶುದ್ಧಿಸದೆ ನಭಧರೆಯ ಮರಮರಳಿ ಮಳೆಯಿಂ ಗದ್ದೆ ಕೊಯ್ಲಾಗೆ ಮುಗುಳ್ದದು ಬೆಳೆಯಕೊಡದಿಹುದೆ "ಬಿದ್ದ ಮನೆಯನು ಕಟ್ಟೋ" ಮಂಕುತಿಮ್ಮ" ಕೆಳಗೆ ಬಿದ್ದವನನ್ನು ಮೇಲೆ ಎತ್ತುವುದರಲ್ಲಿ ನರನ ಮೃತ್ಯುಂಜಯತೆಯಿದೆ. ಮಳೆಯು ಮರಮರಳಿ ಬಂದು ನೆಲವನ್ನು ಶುದ್ಧ ಮಾಡುವುದಿಲ್ಲವೇ? ಗದ್ದೆಯೊಂದು ಬತ್ತವನ್ನು ಕಲಾಯಿಸಿದ ನಂತರ ಮತ್ತೆ ಮುಂದಿನ ಬೆಳೆಯನ್ನು ನೀಡುವುದಿಲ್ಲವೇ? ಈ ಅಂಶಗಳನ್ನು ಮನನ ಮಾಡಿಕೊಂಡು ಪುನರಾವರ್ತಿತವಾಗಿ ನಿಮ್ಮ ನಿಮ್ಮ ಜೀವನದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಕಷ್ಟದಲ್ಲಿರುವವರಿಗೆ ಹಾಗೂ ದೀನ ದುರ್ಬಲರಿಗೆ ನೆರವು ನೀಡುವ ಮೂಲಕ ಸಹಕರಿಸಿ ಸಹಕಾರವನ್ನು ಬದುಕಿನಲ್ಲಿ ತನ್ನಿ ಎನ್ನುವುದೇ ಈ ಪದ್ಯದ ಸಾರವಾಗಿದೆ. ಈ ಕಾರ್ಯವನ್ನೇ ಸಹಕಾರ ಸಂಸ್ಥೆಗಳ ಮೂಲಕ ಮಾಡಲಾಗುತ್ತಿದೆ. ಇದನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದರಲ್ಲಿ ನಮ್ಮ ನಿಮ್ಮೆಲ್ಲರ ಪಾತ್ರ ಮಹತ್ವದ್ದಿದೆ ಎಂಬುದನ್ನು ಅರಿತು ಮುಂದೆ ಸಾಗೋಣ ಎಂಬುದು ಈ ಕಗ್ಗದ ಸಾರ.

# "ಮಂಕುತಿಮ್ಮನ ಕಗ್ಗದಲ್ಲಿ ಸಹಕಾರ ಕ್ಷೇತ್ರದ ಹಿರಿಮೆ – 3"

## ಪ್ರಕೃತಿಯ ಪಂಚ ಮಹಾಭೂತಗಳಂತೆ ವರ್ತಿಸು : ಆಂತರಿಕ ಸಂಬಂಧಗಳನ್ನು ಬೆಳೆಸು

ಜಗನ್ನಿಯಾಮಕನ ಅದ್ವಿತೀಯ ಕಾರ್ಖಾನೆ ಈ ಜೀವ ಜಗತ್ತು. ತನ್ನ ಸೃಷ್ಟಿ ಕೌಶಲದಿಂದ ವೈವಿಧ್ಯಮಯ ಜೀವ ರಾಶಿಗಳನ್ನು ಸೃಷ್ಟಿಸಿದ ದೇವರು ಮನುಜರಾದ ನಮ್ಮನ್ನೆಲ್ಲಾ ಸಹೋದರರೆಂಬಂತೆ ಬದುಕಿ ಸಮಾಜದ ಸ್ವಾಸ್ಥ್ಯವನ್ನು ಕಾಯ್ದುಕೊಂಡು ಮುಂದಿನ ಪೀಳಿಗೆಗೆ ಉತ್ತಮ ಸಮಾಜವನ್ನು ಕೊಡುಗೆಯಾಗಿ ಕೊಡಲು ಶಾಸ್ತ್ರಗಳ ಮೂಲಕ ನಿರ್ದೇಶನ ನೀಡಿರುತ್ತಾನೆ. "ಡಿವಿಜಿ"ಯವರ ಚಿಂತನೆಯ ಹರವು ಸಮಗ್ರವಾಗಿದ್ದು, ಸರ್ವರ ಅಭಿವೃದ್ಧಿಯನ್ನು ಸಹಕಾರ ಮನೋಭಾವದಿಂದ ಆಶಿಸುವಂತಹದ್ದಾಗಿದೆ. ತತ್ಕಾರಣ ಜೀವಿಗಳಾದ ನಮ್ಮ ಬಾಳಿನ ಉತ್ತಮ ದಾರಿಯನ್ನು ಕ್ರಮಿಸಲು ಉದಾಹರಣಾರ್ಥವಾಗಿ ಪ್ರಕೃತಿಯಲ್ಲಿ ಅಡಕವಾಗಿರುವ ಸಹಕಾರ ಮನೋಭಾವವನ್ನು ಈ ಕೆಳಗಿನ ಪದ್ಯ ಹಾಗೂ ವಿವರಣೆಯಲ್ಲಿ ಸ್ಪಷ್ಟೀಕರಿಸಲಾಗಿದೆ. ನಾವು ಪ್ರಕೃತಿಯ ಕಡೆಗೆ ವಿಹಂಗಮ ನೋಟವನ್ನು ಹರಿಸಿ ತದೇಕಚಿತ್ತರಾಗಿ ವೀಕ್ಷಿಸಿದಲ್ಲಿ ರಾತ್ರಿಯ ವಿಶಾಲವಾದ ನಭದಲ್ಲಿ ಜಗಮಗಿಸುವ ನಕ್ಷತ್ರಗಳ ಸುಂದರ ದೃಶ್ಯ, ಜುಳುಜುಳು ಹರಿಯುತ್ತಿರುವ ನದಿಗಳು ಕಾಣಬರುತ್ತವೆ. ಸೂರ್ಯನು ನಿರಂತರವಾಗಿ ಬೆಳಕನ್ನು ನೀಡಿ ಸಸ್ಯ, ಪ್ರಾಣಿ ಹಾಗೂ ನರನಿಗೆ ಆರೋಗ್ಯ ಶಕ್ತಿಗಳನ್ನು ನೀಡುತ್ತಿದ್ದಾನೆ. ಕಾಲಕಾಲಕ್ಕೆ ಸರಿಯಾಗಿ ಮಳೆಯು ಸುರಿದು ಧರೆಯನ್ನು ತಂಪಾಗಿಸಿ ಬೆಳೆ ನೀಡಿ ಜನ, ಸಸ್ಯ, ಪ್ರಾಣಿಗಳಿಗೆ ಶಕ್ತ್ಯಾರೋಗ್ಯಗಳನ್ನು ನೀಡುತ್ತಿದ್ದಾನೆ. ನದಿಗಳು ಹರಿಯುವ ಸುಂದರ ದೃಶ್ಯ, ಸಸ್ಯಗಳು, ಗಿಡಬಳ್ಳಿಗಳು, ಸುಂದರ ಸುಗಂಧ ಹೂಗಳನ್ನು ಬಿಟ್ಟು ಜನಸಮುದಾಯದ ಆರೋಗ್ಯವನ್ನು ವರ್ಧಿಸಿವೆ. ಸಾಗರಗಳು ಉನ್ನತೋನ್ನತ ಶಿಖರಗಳು ಸ್ಥಿರವಾಗಿ ನಿಂತಿವೆ. ಇವುಗಳೇ ಅಲ್ಲದೇ ಇನ್ನು ಬಹುವಿಧದಲ್ಲಿ ಪ್ರಕೃತಿ ಮಾತೆಯು ತ್ಯಾಗಮಯಿಯಾಗಿ ಸೇವೆ ಗೈಯುತ್ತಿದ್ದರೂ ಯಾರಿಂದಲೂ ಪ್ರಶಂಸೆಯನ್ನಾಗಲೀ ಹೆಗ್ಗಳಿಕೆಯನ್ನಾಗಲೀ ಬಯಸುತ್ತಿಲ್ಲ, ತಮ್ಮ ಸೇವೆಯನ್ನು ಸ್ತುತಿ ಮಾಡುತ್ತಿಲ್ಲವೆಂದು ಎಂದೂ ಗೊಣಗಲಿಲ್ಲ, ತಮಗೆ ಭಗವಂತನು ಹಂಚಿ ಹಾಕಿದ ಕರ್ತವ್ಯವನ್ನು ಏಕಮನಸ್ಸಿನಿಂದ ನಿಸ್ವಾರ್ಥತೆಯಿಂದ ಕರ್ತವ್ಯ ನಿರ್ವಹಿಸಿ ಸಂತುಷ್ಟತೆಯನ್ನು ಕಂಡಿವೆ. ಭಗವಂತನು ತನ್ನ ಸೃಷ್ಟಿಯಲ್ಲಿ ಪೂರ್ಣ ವಿಕಾಸಿತ ಹಾಗೂ ಶ್ರೇಷ್ಠ ಮಟ್ಟದ ಜೀವಿಯಾದ ಮಾನವನಿಗೆ ಜನ್ಮ ನೀಡಿ ಆತನನ್ನು ಸೃಷ್ಟಿ ಜಗತ್ತಿನ ಶಿಖರಪ್ರಾಯನನ್ನಾಗಿ ಸೃಷ್ಟಿಸಿದ್ದಾನೆ. ಸೃಷ್ಟಿಯ ಕಳಸ ಪ್ರಾಯ ಮಾನವ ಎಂಬುದು ಸರ್ವವಿಧಿತ. ಪ್ರಕೃತಿಯಲ್ಲಿನ ಅಂಶಗಳಾದ ಸೂರ್ಯ, ಆಕಾಶ, ಭೂಮಿ, ಗಾಳಿ ಇವುಗಳ ಅವಿರತ ಕಾರ್ಯಚರಣೆಯಿಂದ ಜಗದ ಜನರ ಸುಖಬಾಳ್ವೆ ಏರ್ಪಟ್ಟಿದೆಯೆಂದು ಈ ಕೆಳಗಿನ ಪದ್ಯದಲ್ಲಿ ಚಿತ್ರೀಕೃತವಾಗಿ

ವಿವರಿಸಲ್ಪಟ್ಟಿದೆ. "ತರಣಿ ಕಿರಣದ ನಂಟು ಗಗನ ಸಲಿಲದ ನಂಟು ಧರಣಿ ಚಲನೆಯ ನಂಟು ಮರುತನೊಳ್ನಂಟು ಪರಿಪರಿಯ ನಂಟುಗಳಿನೊಂದು ಗಂಟೀ ವಿಶ್ವ ಕಿರಿದು ಪಿರಿದೊಂದುಂಟು ಮಂಕುತಿಮ್ಮ" ಈ ಪದ್ಯದಲ್ಲಿ ಜಗತ್ತಿಗೂ ಮನುಷ್ಯನಿಗೂ ಇರುವ ನಂಟಿನ ಸಂಬಂಧವು ವಿವರಿಸಲ್ಪಟ್ಟಿದೆ. ಸೂರ್ಯನಿಗೂ ರಶ್ಮಿಗಳಿಗೂ ನಂಟು, ಆಕಾಶಕ್ಕೂ ಮೋಡದಿಂದ ಬರುವ ನೀರಿಗೂ ನಂಟು, ಭೂಮಿಯ ಪಥ ಚಲನೆಯ ನಂಟು, ಗಾಳಿಗೆ ಬೀಸುವ ಕಾರ್ಯ ಹೀಗೆ ಬಗೆಬಗೆಯ ವಿಧವಿಧದ ನಂಟುಗಳು. ಈ ಒಂದರೊಂದರ ಸಹಕಾರದಿಂದ ಜಗದ ಯಶಸ್ವಿ ನಿರ್ವಹಣೆ ಸಾಧ್ಯವಾಗಿದೆ. ಈ ಅಂಶದಿಂದ ನಾವು ಕಲಿಯಬೇಕಾದ ಪಾಠವೆಂದರೆ ನಾವುಗಳೆಲ್ಲರೂ ಸಹ ಬಂಧುಗಳಂತೆ ವರ್ತಿಸಿ ಸಂಪದಭಿವೃದ್ಧಿಗಳನ್ನು ಪಡೆಯೋಣ ಹಾಗೂ ಸಹಕಾರದಿಂದ ಬದುಕೋಣ ಸಹಕಾರ ಕ್ಷೇತ್ರದಲ್ಲಿ ಆಂತರಿಕ ಸಂಬಂಧಗಳ ನಿರ್ವಹಣೆಗೆ ಆದ್ಯತೆ ನೀಡೋಣ ಎಂಬುದು ಈ ಪದ್ಯದ ಸಂದೇಶವಾಗಿದೆ. ಮಾನವನ ಜೀವನದ ಪಾವನತೆ ಸಹಕಾರದಿಂದ, ಒಂದಾಗಿ ಬಾಳಿ ಸಮಗ್ರ ಅಭಿವೃದ್ಧಿಯತ್ತ ಸಾಗುವುದರಲ್ಲಿ ಅಡಕವಾಗಿದೆ. ಆದಕಾರಣ ಡಿವಿಜಿಯವರ ಕರೆಯಿದಾಗಿದೆ "ವಸುದೈವ ಕುಟುಂಬಂ", ಜಗತ್ತೇ ಒಂದು ಸಂಸಾರ ಆ ಬೃಹತ್ ಸಂಸಾರದ ಸದಸ್ಯರು ನಾವೆಂದು ಭಾವಿಸಿ, ಉತ್ತಮ ಹಾಗೂ ಕ್ರಿಯಾಶೀಲರಾಗಿ ಬದುಕನ್ನು ನಿರ್ವಹಿಸಬೇಕೆಂದು ಅವರ ಆಶೋತ್ತರವಾಗಿದೆ. ಇದನ್ನರಸಿ ಪ್ರಕೃತಿಯ ಪಂಚಭೂತಗಳಾದ ಅಗ್ನಿ, ಆಕಾಶ, ಭೂಮಿ, ವರುಣ, ವಾಯುಗಳಂತೆ ನಿಸ್ವಾರ್ಥವಾಗಿ ಯಜ್ಞ ಭಾವದಿಂದ ಕಾರ್ಯ ಪ್ರವೃತ್ತರಾಗೋಣವೆಂಬುದು ಈ ಪದ್ಯದಲ್ಲಿ ಅಡಕವಾಗಿರುವ ಅಂಶವಾಗಿದೆ.

.....................................................................................................

**ಆರ್ಥಿಕ ಸ್ವಾತಂತ್ರ್ಯಕ್ಕೆ ಸಹಕಾರವೇ ಹೆಬ್ಬಾಗಿಲು**

**– ಗಾಂಧೀಜಿ**

# "ಕಗ್ಗ ಪದ್ಯಗಳಲ್ಲಿ ಸಹಕಾರದ ಕಂಪು" ದೈವ ಸೃಷ್ಠಿಯ ಉತ್ತುಂಗ – ಮಾನವ

ಸನ್ಮಾನ್ಯ ಡಿ.ವಿ.ಜಿಯವರ ಮಂಕುತಿಮ್ಮನ ಕಗ್ಗದಲ್ಲಿ ಪ್ರಸ್ತಾಪಿಸದ ವಿಷಯಗಳೇ ಇಲ್ಲ. ಮಾನವನ ಹುಟ್ಟಿನಿಂದ ಚಟ್ಟದವರೆಗೆ ಪ್ರಾಪ್ತವಾಗುವ ಎಲ್ಲಾ ಹಂತಗಳ ಬಗ್ಗೆಯೂ ಉಲ್ಲೇಖವಿದೆ. ಇಂತಹ ಮಾನವನನ್ನು ಸೃಷ್ಠಿ ಸ್ಥಿತಿ ಲಯ ಕರ್ತವಾದ, ಆದಿ ಮಧ್ಯಂತರಹಿತನಾದ ಭಗವಂತನು ಅತ್ಯುತ್ಕೃಷ್ಟ ರಚನೆಯಾಗಿ ಸೃಷ್ಠಿಸಿದ್ದಾನೆಂಬ ಬಗ್ಗೆ ಡಿ.ವಿ.ಜಿ.ಯವರು ಮಾನವನ ದೇಹದ ರಚನೆಯ ವಿಶಿಷ್ಟತೆಯ ಬಗ್ಗೆ ಪ್ರಸ್ತಾಪಿಸುತ್ತಾ ಅವನನ್ನು ಸೃಷ್ಠಿ ಶೈಲದ ಶಿಖರವೆಂದಿದ್ದಾರೆ. ಭಗವಂತನು ಮಾನವನನ್ನು ಸೃಷ್ಠಿಸುವಾಗ್ಗೆ ತನ್ನೆಲ್ಲ ಜಾಣ್ಮೆ ಕೌಶಲಗಳನ್ನು ಬಳಸಿ, ಧಾರೆಯೆರೆದು ಶಿಖರ ಪ್ರಾಯ ರಚನೆಗೈದಿದ್ದಾನೆ. ದೇಹ ರಚನೆಯ ಬಗ್ಗೆ ವಿವರಣೆಯಿರುವ ಈ ಚಮತ್ಕಾರಿಕ ಪದ್ಯವನ್ನು ಗಮನಿಸಿ. "ಎಷ್ಟು ಬಗೆ ಯಂತ್ರಗಳೊಳ್ ಎಷ್ಟು ರಸಮಿಶ್ರದಿಂ : ದೆಷ್ಟಾದಿ ಭೂತಗಳು ಪರಿಪಾಕ ಹೊಂದಿ : ಒಟ್ಟು ಸೇರಿಹವು ನರನೆಂಬ ಸಿದ್ಧಿಯೊಳವನು : ಸೃಷ್ಠಿ ಶೈಲದ ಶಿಖರ ಮಂಕುತಿಮ್ಮ" ದೇಹದ ಅಂಗ ರಚನೆಯ ಪ್ರಕಾರ ಶಿರೋಭಾಗ, ಉದರಭಾಗ ಹಾಗೂ ಕೈಕಾಲುಗಳೆಂದು ವಿಂಗಡಿಸಲ್ಪಡಲಾಗಿದ್ದು, ಅವುಗಳ ಯಶಸ್ವಿ ಕಾರ್ಯಚರಣೆಗೆ ಅವಶ್ಯಕವಾದ ರಸಗಳು ಹಾಗೂ ಪಂಚಭೂತಗಳು ಸಮಸ್ಥಿತಿಯಲ್ಲಿ ಸೇರಿ ಪರಿಪಾಕ ಹೊಂದಿ, ಆಕರ್ಷಣೆಯ ದೇಹ ರಚನೆಯಾಗಿದೆಯೆಂದೂ ಅಂತಹ ದೇಹದ ವಿವಿಧ ಭಾಗಗಳಿಗಿರುವ ಅನ್ಯೋನ್ಯತೆಯನ್ನು ವಿಶ್ಲೇಷಿಸಿ ನೋಡಿದಾಗ ಅವುಗಳೊಳಗಿನ ಸಹಕಾರ ಊಹಿಸಲಸದಳವೆಂದಿದ್ದಾರೆ. ಕಾಲಿಗೊಂದು ಮುಳ್ಳು ಒಕ್ಕಿದಾಗ, ತಕ್ಷಣ ಆದ ನೋವಿನ ಮಾಹಿತಿಯನ್ನು ನರಗಳು ಮೆದುಳಿಗೆ ರವಾನಿಸಿ, ತದನಂತರ ಮೆದುಳು ನರಕೋಶಗಳ ಮೂಲಕ ಕೈಗೆ ನಿರ್ದೇಶನ ನೀಡಿ, ಒಕ್ಕಿದ ಮುಳ್ಳನ್ನು ತೆಗೆದು ಆಗಿರುವ ನೋವನ್ನು ನಿವಾರಿಸುವ ತಾತ್ಕ್ಷಣಿಕ ಕ್ರಿಯೆಯನ್ನು ಪರಿಶೀಲಿಸಿದಾಗ ಅಂಗಾಂಗಗಳಲ್ಲಿರುವ "ಸಹಕಾರ" ಹುಬ್ಬೇರುವಂತೆ ಮಾಡುತ್ತದೆ. ಹೇಗೆ ದೇಹ ಹಾಗೂ ನಿಸರ್ಗಗಳಲ್ಲಿ ಅಂತರ್ಗತವಾದ ಸಹಕಾರ ಹಾಸುಹೊಕ್ಕಾಗಿದೆಯೋ ಅಂತಹುದೇ ನೈಜ ಸಹಕಾರವನ್ನು ಸಹಕಾರ ಕ್ಷೇತ್ರದಲ್ಲಿ ಅಳವಡಿಸಿ ಎಂಬ ಮಾರ್ಮಿಕ ಸಂದೇಶವನ್ನು ಈ ಪದ್ಯದ ಮೂಲಕ ನೀಡುತ್ತಾ ಭಗವಂತನ ಉತ್ಪನ್ನಗಳಾದ ಚರಾಚರಗಳಲ್ಲಿ ಮಾನವ ದೇಹವು ಸೃಷ್ಠಿ ಶೈಲದ ಶಿಖರವೆಂದು ಉಧ್ಘೋಷಿಸಿರುತ್ತಾರೆ. ಇಂತಹ ಶಿಖರಪ್ರಾಯ ಸೃಷ್ಠಿಯಾದ ಮಾನವನು ತನ್ನ ಬದುಕನ್ನು ಉದಾಹರಣಾರ್ಥವಾಗಿ ನಡೆಸಬೇಕಲ್ಲವೇ? ಸಹಕಾರ ಜೀವನದ ಪದ್ಧತಿಯನ್ನು ಮೈಗೂಡಿಸಿಕೊಳ್ಳಿ ತನ್ಮೂಲಕ ಸಮಾಜದ ಅಭಿವೃದ್ಧಿಯನ್ನು ಸಾಧಿಸುತ್ತಾ ವೈಯಕ್ತಿಕ ಜೀವನವನ್ನು ವರ್ಧಿಸಿ, ವೃದ್ಧಿಸಿ ಅಭಿವೃದ್ಧಿಸಿಕೊಳ್ಳಿ ಎಂಬುದಾಗಿದೆ.

# ಕಗ್ಗ ಪದ್ಯಗಳಲ್ಲಿ ಸಹಕಾರದ ಕಂಪು"ಒಬ್ಬನು ಎಲ್ಲರಿಗಾಗಿ, ಎಲ್ಲರೂ ಎಲ್ಲರಿಗಾಗಿ"

ಇದುವರೆಗೆ ಹಿಂದಿನ ಶ್ರೇಣಿ ಬರಹಗಳಲ್ಲಿ ಪರೋಕ್ಷ ವಾಕ್ಯಗಳಾದ "ಪ್ರತ್ಯೇಕ ಸುಖವದಲ್ಪದದು", "ಒಬ್ಬನುಣುವೂಟದಲಿ ಸವಿಯಿಲ್ಲ", "ತರಣಿಕಿರಣದ ನಂಟು", "ಬಿದ್ದುದನು ನಿಲ್ಲಿಪುದೆ ನರನ ಮೃತ್ಯುಂಜಯತೆ" ಇವುಗಳಿಂದ ಸಹಕಾರ ತತ್ವದೆಡೆಗೆ ವಾಲಿ ಬದುಕನ್ನು ಹಸನುಗೊಳಿಸಿಕೊಳ್ಳಿಯೆಂದ ಡಿವಿಜಿಯವರು ಇದೀಗ ಸಹಕಾರ ತತ್ವದ ಮೂಲ ಧ್ಯೇಯವಾಕ್ಯವಾದ "ಎಲ್ಲರಿಗಾಗಿ ನಾನು, ನನಗಾಗಿ ಎಲ್ಲರೂ" ಎಂಬುದನ್ನು ಪ್ರಸ್ತಾಪಿಸಿ ನೇರವಾಗಿ ಸಹಕಾರ ತತ್ವವನ್ನು ಪ್ರತಿವಾದಿಸುತ್ತಾ ಇದಕ್ಕೆ ಮೂಲ ಘಟಕಗಳಾಗಿ, ಪರಿಕರಗಳಾಗಿ ಮನೆ, ರಾಜ್ಯ, ಸಂಸಾರಗಳನ್ನು ಉಲ್ಲೇಖಿಸಿದ್ದಾರೆ. ಈ ಬಗೆಗಿನ ಡಿವಿಜಿಯವರ ಚಮತ್ಕಾರದ ಪದ್ಯವನ್ನು ಗಮನಿಸಿ: "ಎಲ್ಲರಿಗಮಾಗಿ ತಾನ್ ಎಲ್ಲರುಂ ತನಗಾಗಿ ನಿಲ್ಲುವೇಕಾತ್ಮತೆಯ ಬಾಳ್ವೆಯಂ ಕಲಿಯಲ್ ಸಲ್ಲುವುಪಕರಣಗಳು ಮನೆರಾಜ್ಯ ಸಂಸಾರ ವಲ್ಲಗಳೆಯದಿರವನು ಮಂಕುತಿಮ್ಮ" ಡಿವಿಜಿಯವರು ಈ ಪದ್ಯದಲ್ಲಿ ಮೂಲ ಘಟಕಗಳಾದ ಮನೆ, ಸಂಸಾರ, ರಾಜ್ಯಗಳ ಬಗ್ಗೆ ಹೇಗೆ ನಾವು ಸ್ವಾಭಿಮಾನದ ನಿಲುವು ತಳೆಯುತ್ತೇವೆಯೋ ಅಂತೆಯೇ ನಮ್ಮ ನಮ್ಮ ನಡುವೆ ಉತ್ತಮ ಸಹಕಾರ ವೇರ್ಪಡಬೇಕಾದರೆ ಮನೆ, ಸಂಸಾರ, ರಾಜ್ಯಗಳ ಅಸ್ತಿತ್ವಗಳ ಇರುವಿಕೆಯನ್ನು ಅಲ್ಲಗಳೆಯದೇ ಒಪ್ಪಿಕೊಳ್ಳಿರೆಂದು ಪ್ರತಿಪಾದಿಸುತ್ತಾ ತನ್ಮೂಲಕ "ಒಬ್ಬನು ಎಲ್ಲರಿಗಾಗಿ, ಎಲ್ಲರೂ ಎಲ್ಲರಿಗಾಗಿ" ಬಾಳುತ್ತಾ ಸುಸಂಘಟಿತ ಬದುಕನ್ನು ಸಹಕಾರ ಸೇತುವೆಯ ಮೂಲಕ ಸಾಧಿಸಿಕೊಂಡು ಜೀವನದ ಸಾರ ಸಮದ್ಧಿಯನ್ನು ಪಡೆಯಿರೆಂದು ಕರೆಕೊಡುತ್ತಿದ್ದಾರೆ. ಆಧ್ಯಾತ್ಮ ಜೀವಿಯಾದ ಡಿವಿಜಿಯವರು ಈ ಪದ್ಯದ ಮೂಲಕ ನಮಗೆ ಏಕಾಕಿತನವನ್ನು ತೊರೆದು ನಮ್ಮ ಮನೆಯವರೆಂಬ, ರಕ್ತ ಸಂಬಂಧಿಗಳೆಂಬ ಭಾವನೆಯಿಂದ ಬದುಕು ನಡೆಸುತ್ತಾ ಭಗವಂತನನ್ನೂ ಸಹ ಜೊತೆಯಲ್ಲಿಟ್ಟುಕೊಳ್ಳಲು, ಸೂಚನೆ ನೀಡಿರುವುದು ಈ ಕೆಳಗಿನ ಸ್ವಾಮಿ ವಿವೇಕಾನಂದರ ಪದ್ಯವನ್ನು ನೆನಪಿಗೆ ತರುತ್ತದೆ. ಜಗವೆಲ್ಲ ಜೊತೆಗಿರಲು ನೀನೊಬ್ಬನಿಲ್ಲದಿರೆ ಸುಖವೇನು ಸುಖವೇನು ಪ್ರಭುವೇ ನೀನೊಬ್ಬ ಜೊತೆಗಿರಲು ಜಗವೆಲ್ಲವೆದುರಾಗೆ ಭಯವೇನು ಭಯವೇನು ಪ್ರಭುವೇ. ಮಾನವನಿಗೆ ನಿಸರ್ಗವು ದಟ್ಟಾರಣ್ಯದಲ್ಲಿ ಹಿಂಡು ಹಿಂಡಾಗಿ ಕಾಡಾನೆಗಳ ಬದುಕಿನ ಹಾಗೂ ಹಾರಾಡುವ ಕಾಗೆ, ಜೇನು ಹುಳುಗಳ ಮತ್ತು ಗುಂಪು ಗುಂಪಾಗಿ ಚಲಿಸುವ ಇರುವೆಗಳ ಸಾಮೂಹಿಕ ಜೀವನದ ಮೂಲಕ ಸಹಬಾಳ್ವೆ, ಪರಸ್ಪರ ನಂಬಿಕೆ, ಸಹಾಯ ಮತ್ತು ಸಹಕಾರದ ಮೂಲ ಪಾಠವನ್ನು ಹೇಳಿಕೊಡುತ್ತದೆ. ಅದನ್ನು ನಾವೆಲ್ಲರೂ ಅನುಸರಿಸೋಣ, ಅನುಷ್ಠಾನಕ್ಕೆ ತರೋಣ "ನುಡಿವೀರ"ರು ಮಾತ್ರವಾಗದೇ "ನಡೆವೀರ"ರಾಗೋಣ ಸಹಕಾರಂ ಗೆಲ್ಗೆ ಸಹಕಾರಂ ಬಾಳ್ಗೆ

# “ಜೀವನಾವಶ್ಯಕ ಆಹಾರ, ನೀರು, ಗಾಳಿ ಹಾಗೂ ವಸ್ತ್ರಗಳು ಭೂಮ್ಯಾಕಾಶಗಳ ಯಂತ್ರ ಸಂಘದುತ್ಪನ್ನಗಳು”ಮಾನವನ ಬದುಕಿಗೆ ಇವುಗಳೇ ಸಹಕಾರ

ಸೃಷ್ಠಿಸ್ಥಿತಿಲಯ ಕರ್ತನಾದ ಭಗವಂತನು ಪ್ರಸಕ್ತದ ಸೃಷ್ಠಿಯ ಪೂರ್ವ ತಾನೊಬ್ಬನೇ ಒಬ್ಬಂಟಿಯಾಗಿರುವುದು ಬೇಸರವೆನಿಸಿದ ಕಾರಣ ತಾನೇ ತನ್ನ ಸ್ವಮಹಿಮೆಯಿಂದ ಬಹು ಆತ್ಮಗಳ ಈ ಪ್ರಪಂಚವಾಗಿ ಪರಿವರ್ತಿತನಾಗಿ ತನ್ನ ಸೃಷ್ಠಿಯಲ್ಲಿ ಸಸ್ಯ, ಜೀವಿ ಹಾಗೂ ಮಾನವರನ್ನು ಸೃಷ್ಠಿಸಿ, ಇಂತಹ ಸೃಷ್ಠಿಕಾರ್ಯದಲ್ಲಿ ಮಾನವನನ್ನು ಅತ್ಯುನ್ನತವಾದ ಚಿಂತನಶೀಲ ಶಿಖರಪ್ರಾಯ ಸೃಷ್ಠಿಯನ್ನಾಗಿಸಿದನಂತೆ. ಹೀಗೆ ಸೃಷ್ಠಿಸಲ್ಪಟ್ಟ ಮಾನವನ ಸುಖಕರ ಬದುಕಿಗೆ ಎಲ್ಲಾ ಸೌಲಭ್ಯಗಳು ದೊರಕಲೆಂದು ಮಾನವನಿಗೆ ಪಂಚೇಂದ್ರಿಯಗಳನ್ನು ವಿಶ್ವನಿರ್ವಹಣೆಗಾಗಿ ಪಂಚಭೂತಗಳನ್ನು ನಿರ್ಮಿಸಿರುತ್ತಾನೆ. ಮನುಷ್ಯನ ಜೀವನ ಸುಖಮಯವಾಗಿರಬೇಕಾದರೆ ಆತನಿಗೆ ಉಣ್ಣಲು ಆಹಾರ, ಉಸಿರಾಡಲು ಗಾಳಿ, ಬಾಯಾರಿಕೆ ತಣಿಸಿಕೊಳ್ಳಲು ನೀರು ಹಾಗೂ ಮಾನಕಾಪಾಡಿಕೊಳ್ಳಲು ಬಟ್ಟೆ ಇವುಗಳು ಅತ್ಯವಶ್ಯಕವೆನಿಸಿದ ಕಾರಣ ಇವುಗಳೆಲ್ಲವೂ ದೊರಕುತ್ತಿರಲೆಂದು ಪ್ರಕೃತಿಯಲ್ಲಿನ ಅಗ್ನಿ, ಆಕಾಶ, ಭೂಮಿ, ವರುಣ, ವಾಯುಗಳನ್ನು ಸೃಷ್ಠಿಸಿ ತನ್ನ ಮಕ್ಕಳ ಕ್ಷೇಮರಕ್ಷಣೆಯನ್ನು ನೋಡಿಕೊಂಡಿರುತ್ತಾನೆ ಈ ಒಂದು ವ್ಯವಸ್ಥೆಯನ್ನು ಕಂಡು ಡಿವಿಜಿಯವರು ತಮ್ಮ ಪರಮಾದ್ಭುತ ಕಾವ್ಯಶಕ್ತಿಯಿಂದ ಈ ಕೆಳಗಿನ ಪದ್ಯನ್ನು ಹೊರ ತಂದಿದ್ದಾರೆ. "ನಾವುಣುವನ್ನಗಳು ನಾವು ಕುಡಿವುದಕಗಳು ನಾವುಸಿರುವೆಲರುಗಳು ನಾವುಡುವ ವಸ್ತ್ರ ಭೂವ್ಯೋಮಗಳ ಯಂತ್ರ ಸಂಘದುತ್ಪನ್ನಗಳು ಜೀವವೆರಡರ ಶಿಶುವು ಮಂಕುತಿಮ್ಮ" ಈ ಬದುಕಿನ ಅವಶ್ಯಕತೆಗಳಾದ ಅನ್ನ, ನೀರು, ಗಾಳಿ ಹಾಗೂ ಉಡುಪುಗಳು ಭೂವ್ಯೋಮಗಳ ಯಂತ್ರ ಸಂಘದುತ್ಪನ್ನಗಳೆಂದು ಕರೆದು, ಜೀವವನ್ನು ಭೂವ್ಯೋಮಗಳ ಶಿಶುವೆಂದು ಸಹ ಕರೆದಿದ್ದಾರೆ. ತನ್ಮೂಲಕ ವಿಶ್ವವನ್ನು ಒಂದು “ಕೈಗಾರಿಕಾ ಸಹಕಾರ ಸಂಘವೆಂದಿದ್ದಾರೆ. ನಾವು ಮಾನವರು ಭೂವ್ಯೋಮಗಳ ಶಿಶುಗಳಾಗಿದ್ದು, ಭೂವ್ಯೋಮಗಳ ಯಂತ್ರ ಸಂಘದುತ್ಪನ್ನಗಳನ್ನು ಸ್ವೀಕರಿಸಿ ಬೆಳೆಯುತ್ತಿದ್ದೇವಾದ ಕಾರಣ ನಮ್ಮ ಶ್ವಾಸಶ್ವಾಸದಲ್ಲಿಯೂ ಸಹಕಾರದ ಮನೋಭಾವವನ್ನು ಬೆಳೆಸಿಕೊಳ್ಳಬೇಕೆಂಬುದು ಕವಿಯವರ ಮನೋಇಂಗಿತವಾಗಿದೆ ಅದರಂತೆ ಅಳವಡಿಸಿಕೊಳ್ಳೋಣ ಸಹಕಾರದ ಹೆಜ್ಜೆಯನ್ನು ನಿತ್ಯಜೀವನದಲ್ಲಿ.

ಡಿವಿಜಿಯವರು ತಮ್ಮ ಅಪರಿಮಿತ ಕಲ್ಪನಾದೃಷ್ಟಿ ಹಾಗೂ ಸಂಪದ್ಭರಿತ ಪಾರಮಾರ್ಥಿಕ

ಜ್ಞಾನದಿಂದ ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತಗಳನ್ನು ಆಳವಾಗಿ ಬಲ್ಲವರಾಗಿದ್ದು, ವ್ಯಕ್ತಿ ವ್ಯಕ್ತಿಗಳ ಪರಸ್ಪರ ಸಹಕಾರದಂತೆಯೇ ಮಾನವನ ಪಂಚೇಂದ್ರಿಯಗಳಲ್ಲೊಂದಾದ ಕಣ್ಣಿಗೂ ಜಗತ್ತಿನ ಕಣ್ಣೆನಿಸಿಕೊಂಡಿರುವ ಸೂರ್ಯದೇವನಿಗೂ ಇರುವ ಅನ್ಯೋನ್ಯತೆಯನ್ನು ಕೆಳಗಿನ ಪದ್ಯದಲ್ಲಿ ಪ್ರಸ್ತಾಪಿಸಿರುತ್ತಾರೆ. "ಕಣ್ಣಿರದೆ ರವಿಯೇನು ರವಿಯಿರದೆ ಕಣ್ಣೇನು ಅನ್ಯೋನ್ಯ ಸಹಕೃತಿಯಿನುಭಯ ಸಾರ್ಥಕತೆ ನಿನ್ನಾತ್ಮ ಜಗದಾತ್ಮಕಂಥ ಸಂಬಂಧಗಳವು ವಹ್ನಿಸ್ಫುಲಿಂಗಗಳೊ ಮಂಕುತಿಮ್ಮ" ಮಾನವನು ಭಗವಂತನ ಅತ್ಯುತ್ಕೃಷ್ಟ ತಯಾರಿ. ಇತರೇ ಪ್ರಾಣಿಗಳಿಗಿಂತ ತೀರಾ ವಿಭಿನ್ನ. ಈತನ ದೇಹದ ವಿವಿಧ ಅಂಗಗಳಲ್ಲಿ ಅತಿ ಮುಖ್ಯವೆನಿಸಿದ ಕಣ್ಣಿನಿಂದ ಸಕಲ ಜಗತ್ತನ್ನು ವೀಕ್ಷಿಸಿ ಅನುಭವ ಪಡೆಯುತ್ತಾನೆ. ಹೀಗೆ ಕಣ್ಣಿನಿಂದ ಜಗತ್ತನ್ನು ವೀಕ್ಷಿಸಿ ಅನುಭವ ಪಡೆಯಬೇಕಾದರೆ "ರವಿ"ಯ ಸಹಕಾರ ಅತ್ಯಗತ್ಯ. ಸೂರ್ಯನಿಲ್ಲದಿದ್ದಲ್ಲಿ ಓರ್ವನ ಕಣ್ಣುಗಳು ಅದೆಷ್ಟೇ ಆರೋಗ್ಯಕರವಾಗಿದ್ದರೂ, ದೃಷ್ಟಿಯುಳ್ಳವುಗಳಾಗಿದ್ದರೂ ವಸ್ತುಗಳನ್ನು ವೀಕ್ಷಿಸಲು ಸಾಧ್ಯವಿಲ್ಲ. ಅಂತೆಯೇ ಕಣ್ಣಿಲ್ಲದಿದ್ದಲ್ಲಿ ಸೂರ್ಯನಿದ್ದರೂ ಏನು ಉಪಯೋಗ. ಸೂರ್ಯ ಇದ್ದು, ಕಣ್ಣುಗಳೂ ಸರಿಯಾಗಿದ್ದಲ್ಲಿ ಮಾತ್ರ ದೃಷ್ಟಿಗೋಚರತೆ ಸಾಧ್ಯ. ಸೂರ್ಯನ ಹಾಗೂ ಕಣ್ಣುಗಳ ಅನ್ಯೋನ್ಯ ಸಹಕಾರದಿಂದ ದೃಷ್ಟಿ ಸಾಧ್ಯವಾದಂತಾಯಿತು. ಡಿವಿಜಿಯವರು ಜೀವ ದೈವಂಗಳ ನಿರಂತರ ಸಂಬಂಧವನ್ನು ಇಲ್ಲಿ ಮನೋಜ್ಞವಾಗಿ ಚಿತ್ರಿಸಿದ್ದಾರೆ. ನನ್ನ ಜೀವವು ನನ್ನಾತ್ಮವಾದಂತೆ, ಸರ್ವಶ್ರೇಷ್ಠ ಪರಮಾತ್ಮನು ಜಗದಾತ್ಮನಾಗಿದ್ದಾನೆಂದೂ, ಜಗದಾತ್ಮನಿಗೂ, ಮಾನವಾತ್ಮನಿಗೂ ಇರುವ ಅನ್ಯೋನ್ಯ ಸಂಬಂಧವನ್ನು ಬೆಂಕಿಯ ಜ್ವಾಲೆ ಹಾಗೂ ಅದರಿಂದ ಹೊರಬರುವ ಕಿಡಿಗಳಿಗೆ ಹೋಲಿಸಿದ್ದಾರೆ. ಸಕ್ಕರೆಯು ಸಿಹಿಯಾಗಿದ್ದರೂ ನಾಲಿಗೆಯ ಸ್ಪರ್ಶವಿಲ್ಲದೇ ಅದರ ಸಿಹಿಯ ಅರಿವು ನಮಗಾಗದು. ಸಕ್ಕರೆಯನ್ನು ಅಂಗೈ ಮೇಲೆ ಇಟ್ಟಲ್ಲಿ ಸಿಹಿಯ ಅನುಭವವಾಗುವುದಿಲ್ಲ. ಹೀಗೆ ಜೀವ ದೈವಂಗಳ ಪರಸ್ಪರಾನ್ವೇಷನೆಯೇ ಸೃಷ್ಠಿಯ ಲಾವಣ್ಯವೆಂದಿರುತ್ತಾರೆ. ಇಷ್ಟೆಲ್ಲದರ ಸಾರಾಂಶವೆಂದರೆ ಕಣ್ಣು, ರವಿಗಳ ಸಹಕಾರದಿಂದ ಜಗತ್ತಿನ ವೀಕ್ಷಣೆ ಸಾಧ್ಯವಾಗಿದೆಯಾದ್ದರಿಂದ ನಮ್ಮ ದೈನಂದಿನ ಬದುಕಿನಲ್ಲೂ ಒಬ್ಬರಿಗೊಬ್ಬರು ಸಹಾಯ ಹಸ್ತ ಚಾಚುತ್ತಾ ಬದುಕನ್ನು ಸಹಕಾರದ ಹಾದಿಯಲ್ಲಿ ಕೊಂಡೊಯ್ಯೋಣ ಹಾಗೂ ಮನುಕುಲದ ಬದುಕನ್ನು "ಸಹ್ಯ"ವೆನಿಸೋಣವೆಂಬುದಾಗಿದೆ. ಹೀಗೆ ಒಬ್ಬರಿಗೊಬ್ಬರು ಸಹಕರಿಸಿ ನಡೆದಾಗ ಬದುಕು ವರ್ಧಿಸುತ್ತದೆ, ವೃದ್ಧಿಸುತ್ತದೆ ಹಾಗೂ ಅಭಿವೃದ್ಧಿಸುತ್ತದೆ ಎಂಬುದು ಈ ಪದ್ಯದ ಅಂತರಾರ್ಥವಾಗಿರುತ್ತದೆ.

# “ನೋವಿಲ್ಲದರು ನೊಂದವರನು ಸಂತಯಿಸುತಿರೆ ಜೀವನವು ಕಡಿದಹುದೆ?”

ಆಧ್ಯಾತ್ಮಜೀವಿಯಾಗಿ, ಚಿಂತಕರಾಗಿದ್ದ ಡಿವಿಜಿಯವರು ತನ್ನ ಶ್ರೇಷ್ಠ ಕೃತಿ ಕಗ್ಗದಲ್ಲಿ ಜೀವನದ ಸಕಲ ಮಜಲುಗಳನ್ನು ಒಳಗೊಂಡ ಜೀವನ ಸಿದ್ಧಾಂತವನ್ನು ಸಂಗ್ರಹಿಸಿಡುತ್ತಾ, ಜೀವನದಲ್ಲಿ ಬರುವ ಕಷ್ಟಕಾರ್ಪಣ್ಯಗಳ, ಏರುತಗ್ಗುಗಳ, ಓರೆಕೋರೆಗಳ ನಿಂದೆಸ್ತುತಿ, ಮಾನಾಪನಗಳ ಬಗ್ಗೆಯೂ ಚಿಂತಿಸಿದ್ದಾರೆ. ಇಂತಹ ಕಷ್ಟಗಳು ಬಂದಾಗ ಮನುಷ್ಯನ ನಿಜವಾದ ಆತ್ಮಸ್ಥೈರ್ಯ ಕುಗ್ಗಿ ಕಂಗಾಲಾಗಿ ಪ್ರಥಮವಾಗಿ ದೈವದ ನೆರವನ್ನೂ ಹಾಗೂ ತದನಂತರ ಸಹಪಾಠಿಗಳ ನೆರವಿಗಾಗಿ ಹಂಬಲಿಸುವುದು ಸಹಜ ಪ್ರಕ್ರಿಯೆಯೆಂದು ಒಪ್ಪಿದ್ದಾರೆ. ಅಂತಹ ನೋವಿಗೊಳಗಾದ ವ್ಯಕ್ತಿಗಳ ನೆರವಿಗೆ ಆಸರೆಯಾಗಿ ನಿಲ್ಲಬೇಕಾದ್ದು, ತನ್ನ ಕೈಯಿಂದಾದ ಸಹಾಯವನ್ನೆಸಗುವುದು ತನ್ಮೂಲಕ ನೊಂದ ಜೀವಿಗೆ ಸಾಂತ್ವನವನ್ನೀಯುವುದು ಪ್ರತಿ ಪ್ರಾಜ್ಞನ ಕರ್ತವ್ಯವೆಂದು ಹಿಂದಿನ ತತ್ವಜ್ಞರ, ವಿಚಾರವಂತರ, ಚಿಂತನಶೀಲರ ಅನಿಸಿಕೆಯಾಗಿದೆ. "ವಸುದೈವ ಕುಟುಂಬಂ" "ಸರ್ವೇಜನಾ ಸುಖಿನೋಭವಂತು" ಇತ್ಯಾದಿಗಳ ಮೂಲಕ ಜಗತ್ತೇ ಒಂದು ಕುಟುಂಬ, ಎಲ್ಲಾ ಪ್ರಜೆಗಳು ಸಹೋದರರೆಂಬ ವಿಶ್ವಭ್ರಾತೃತ್ವವನ್ನು ಹೊಂದಿ ಎಲ್ಲರೆಲ್ಲರ ನೆರವಿಗೆ ನಿಲ್ಲಬೇಕೆಂಬ ಅಂಶವನ್ನು ವ್ಯಕ್ತ ಪಡಿಸುವ ಡಿವಿಜಿಯವರ ಈ ಚಮತ್ಕಾರಿಕ ಪದ್ಯವನ್ನು ಗಮನಿಸಿ. "ವೈವಿಧ್ಯವೊಂದು ಕೃಪೆ ನಮಗಿರುವ ಕಷ್ಟದಲಿ ಆವರಿಸದಳಲ್ ಎಲ್ಲರನುಮೊಂದೆಸಮಯ ನೋವಿಲ್ಲದರು ನೊಂದವರನು ಸಂತಯಿಸುತಿರೆ ಜೀವನವು ಕಡಿದಹುದೆ ಮಂಕುತಿಮ್ಮ" ಮಾನವ ಮಾತ್ರ ಏನು, ಮೃಗ, ಪಕ್ಷಿ ಹಾಗೂ ಸಸ್ಯ, ಮರಗಳಿಗೂ ಕಷ್ಟ ಬರುವುದುಂಟೆಂದು ಸರ್ವರೂ ಒಪ್ಪಿಕೊಳ್ಳುತ್ತಾರೆ. ಆದರೆ ಬರತಕ್ಕಂತಹ ಬೇಗೆಗಳು, ನೋವುಗಳು ಒಂದೇ ಸ್ವರೂಪದ್ದಾಗಿರದೇ ಬೇರೆ ಬೇರೆಯವರಿಗೆ ಬೇರೆ ಬೇರೆ ವಿಧದ ನೋವುಗಳು ಬಂದೊದಗುವುದು ದೈವದ ಕೃಪೆಯೆನ್ನುತ್ತಾರೆ. ಸಂಸಾರದ ಯಾರೊಬ್ಬ ಸದಸ್ಯನಿಗೆ ಕಿವಿನೋವು ಇದ್ದರೆ ಇನ್ನೊಬ್ಬರಿಗೆ ಬೇರೆಯದೇ ರೀತಿಯ ನೋವು ಬರಬಹುದೆಂದೂ, ಅಂತೆಯೇ ಬರುವಂತಹ ನೋವು ಸಹ ಎಲ್ಲರಿಗೂ ಒಂದೇ ಸಾರಿಗೆ ಬಂದೊದಗದೇ ವಿವಿಧ ರೂಪದಲ್ಲಿ ಬಂದೊದಗುವುದನ್ನು ಗಮನಿಸಿ ಅಂತಹ ನೋವಿಗೊಳಗಾದ ಮಾನವಾತ್ಮರಿಗೆ ನೋವಿಲ್ಲದವರು ಅಂದರೆ ಉತ್ತಮ ಸ್ಥಿತಿಯಲ್ಲಿರುವವರು, ಸಂಕಷ್ಟದ ತೀವ್ರತೆಯನ್ನು ಅರಿತು ನೆರವಿನ ಹಸ್ತವನ್ನು ಚಾಚುವುದರ ಮೂಲಕ ನೋವಿಗೊಳಗಾದ ವ್ಯಕ್ತಿಯ ಕಷ್ಟದ ತೀವ್ರತೆಯನ್ನು ಕಡಿಮೆಗೊಳಿಸ ಬಹುದಾಗಿದೆಯೆಂದು ಅಭಿಪ್ರಾಯ ಪಡುತ್ತಾರೆ. ಇಂದುಟ್ಟಿ, ಮುಂದೆಂದೋ ಮೃತನಾಗಲಿರುವ ಮಾನವನು ತನ್ನ ಅನವರತ ದುಡಿಮೆ, ಸಂಗ್ರಹಣೆ, ಕೂಡಿಹಾಕುವಿಕೆಗಳಿಗೆ ಮಾತ್ರ ಗಮನವಿಡದೆ, ನಾವು ಈ ಜಗತ್ತಿನ ಯಾತ್ರೆಗೆ ಬಂದವರು ಕೆಲಕಾಲವಿದ್ದು, ಈ ಜೀವನಕ್ಕೆ ವಿದಾಯ ಹೇಳಬೇಕಾದವರು ತತ್ಕಾರಣ, ಬಂದ ದುಡಿಮೆಯ, ಸಂಗ್ರಹಣೆಯ ಧನವನ್ನು ಇತರ ಅರ್ಹ ಹಾಗೂ ಅವಶ್ಯಕತೆಯಿರುವವರಿಗೆ ನೀಡಿ ಜೀವನ ಸಾರ್ಥಕತೆಯನ್ನು ಪಡೆಯಿರೆಂಬುದು ತನ್ಮೂಲಕ ಸಂಕಷ್ಟದಲ್ಲಿರುವವರಿಗೆ ಸಹಕಾರ ನೀಡುತ್ತಾ ಸಹಕಾರ ಜೀವನವನ್ನು ಪ್ರೋತ್ಸಾಹಿಸಿರೆಂಬುದೇ ಈ ಪದ್ಯದ ರಹಸ್ಯಾರ್ಥವಾಗಿದೆ.

# "ದಕ್ಕಿತೇಂ ಕುರುಪಾಂಡವತನಯರ್ಗೆ ರಾಜಸುಖ"

ಇಂದಿನ ಸಮಾಜದಲ್ಲಿ ನಡೆಯುತ್ತಿರುವ ಆತುರದ ಕಾರ್ಯ ಗಳಾದ "ಕೂಸು ಹುಟ್ಟುವ ಮುನ್ನವೇ ಶಾಲೆ ನಿಗದಿಪಡಿಸಿ ಶುಲ್ಕ ಪಾವತಿಸುವುದನ್ನೂ" ಹಾಗೂ "ಹಣದ ಪ್ರಭಾವಲಯವಿರುವ ಇಲಾಖೆಗಳಲ್ಲಿ ತಮ್ಮ ಮಕ್ಕಳಿಗೆ ನೌಕರಿ ದೊರೆಯಬೇಕೆನ್ನುವ" ಅಂಶಗಳನ್ನು ಕಂಡು ಆಧ್ಯಾತ್ಮಿಕ ಚಿಂತಕರೂ, ಅನುಭಾವಿಗಳು, ಉತ್ತಮ ಸಮಾಜದ ನಿರೀಕ್ಷಕರೂ ಆಗಿದ್ದ ಡಿ.ವಿ.ಜಿ.ಯವರು ಮುಂದಿನ ಸಮಾಜದ ಮಕ್ಕಳನ್ನು ಹೇಗೆ ಬೆಳೆಸಬೇಕೆಂಬುದರ ಬಗ್ಗೆ ಬೆಳಕು ಚೆಲ್ಲುವ ಪ್ರಭಾವಿ ಪದ್ಯವೊಂದನ್ನು ಬರೆಯುತ್ತಾ "ಬಾರದು ಬಪ್ಪದು, ಬಪ್ಪುದು ತಪ್ಪದು" ಎಂಬ ನಿರ್ಣಾಯಕ ಕಟುಸತ್ಯವನ್ನು "ದಕ್ಕಿತೇಂ ಕುರುಪಾಂಡವತನಯರ್ಗೆ ರಾಜ್ಯಸುಖ" ಎಂಬ ಫಲಪ್ರದ ಸತ್ಯವಾಕ್ಯದಲ್ಲಿ ಬರೆದಿದ್ದಾರೆ. "ಮಕ್ಕಳ ಭವಿಷ್ಯಕ್ಕಾಗಿ ಕಕ್ಕಲುತೆಗೊಳಬೇಡ ಪಕ್ಕಾಗುವುದು ಭಾಗ್ಯವೆಂತೆಂತೋ ಜಗದಿ ದಕ್ಕಿತೇಂ ಕುರುಪಾಂಡವತನಯರ್ಗೆ ರಾಜ್ಯಸುಖ ದಿಕ್ಕವರಿಗವರವರೆ ಮಂಕುತಿಮ್ಮ" ಅತಿರಥ ಮಹಾರಥರುಗಳಾದ ದ್ರೋಣ, ಭೀಷ್ಮ, ಅಶ್ವತ್ಥಾಮ, ಕರ್ಣ ಇತ್ಯಾದಿಯಲ್ಲದೇ 18 ಅಕ್ಷೋಹಿಣಿ ಸೈನ್ಯವಿದ್ದರೂ ಕೌರವರಿಗೆ ರಾಜ್ಯ ಲಭ್ಯವಾಗಲಿಲ್ಲ, ಅಂತೆಯೇ ಪಾಂಡವರಿಗೂ ರಾಜ್ಯ ಸುಖ ಸಕಾಲದಲ್ಲಿ ಸಿಗಲೇ ಇಲ್ಲ. ಅವರವರು ಪಡೆದುಕೊಂಡಂತಹ ಭಾಗ್ಯ ಮಾತ್ರ ಖಂಡಿತ ದೊರೆಯುತ್ತದೆ ಎಂದೂ ಮಕ್ಕಳ ಭವಿಷ್ಯದ ಬಗ್ಗೆ ಅತಿಯಾದ ಹಾಗೂ ಆತುರದ ನಿರೀಕ್ಷೆಗಳು ಬೇಡವೆಂದು ತಂದೆತಾಯಿಗಳಿಗೆ ಸೂಕ್ತ ವಿಚಾರವನ್ನು ನೀಡುತ್ತಿದ್ದಾರೆ. ಉತ್ತಮ ಸಮಾಜ ನಿರ್ಮಾಣದ ಗುರಿ ಹೊತ್ತವರೆಲ್ಲರೂ ಕಾತರತೆ ಉದ್ವೇಗಗಳಿಲ್ಲದೇ ಸದಾಶಯವನ್ನಿಟ್ಟುಕೊಂಡು ಅವಶ್ಯಕವಾದ ವಿಚಾರವನ್ನು ಗ್ರಹಿಸಿ, ರಾಮಾಯಣದ ರಾಮ ಲಕ್ಷ್ಮಣ ಭರತರಂತೆ ಸಹೋದರತ್ವದ ಬದುಕನ್ನು ಕಲಿತು ಅಂದರೆ ಸಹಕಾರದಿಂದ ಬದುಕಿ ಎಲ್ಲರ ಬದುಕನ್ನು ಹಸನುಗೊಳಿಸಿಕೊಳ್ಳಿ ಎಂಬುದು ಇದರ ಸಾರಾಂಶವಾಗಿದೆ. ಈ ಪದ್ಯ ಅಬ್ರಹಾಂ ಲಿಂಕನ್‌ರವರು ತನ್ನ ಮಗನ ಗುರುಗಳಿಗೆ ಪತ್ರ ಬರೆದು ತನ್ನ ಮಗನನ್ನು ಈ ರೀತಿ ಅನುಭವೇದ್ಯ ಜ್ಞಾನ ಸಂಪನ್ನನಾಗಿಸಿರೆಂದು ಕೇಳಿಕೊಂಡಿರುವುದು. ಆ ಪತ್ರದ ಅಂಶಗಳು ಈ ಕೆಳಗಿನಂತಿವೆ.

1. ಈ ಜಗತ್ತು ಪಂಡಿತ ಪಾಮರದಿಂದ, ಭ್ರಷ್ಟಾಚಾರಿ ಶಿಷ್ಟಾಚಾರಿ, ಅನ್ಯಾಯಕಾರಿ ಸಂಪನ್ನ ಎಂಬಿತ್ಯಾದಿ ಅಸಮಾನತೆಯಿಂದ ಕೂಡಿದೆ ಇದರೊಳಗೆ ಒಳಿತನ್ನು ಆಯ್ಕೆ ಮಾಡುವ ಗುಣ ಬರಿಸಲು ಜ್ಞಾನ ನೀಡಿ.
2. ದುಡಿಮೆಯ ಬೆಲೆಯನ್ನು ತಿಳಿಸಿ, ವ್ಯರ್ಥ ವೆಚ್ಚಗಳನ್ನು ಕಡಿತಗೊಳಿಸಿ, ಅವಶ್ಯಕವಾದುದಕ್ಕೆ ವೆಚ್ಚ ಮಾಡಲು ತಿಳಿಸಿ.
3. ಸೋಲು ಗೆಲುವು ದ್ವಂದ್ವಗಳಲ್ಲಿ ಸ್ಥಿರಚಿತ್ತನಾಗಿರಲು ತಿಳಿಸಿ.
4. ಹೃತ್ಪೂರ್ವಕ ನಗುವಿನ ರಹಸ್ಯವನ್ನು ತಿಳಿಸುತ್ತಾ ಕಪಟದ ನಗುವನ್ನು ಅರ್ಥೈಸಿಕೊಳ್ಳುವಂತೆ ತಿಳಿಸಿ.
5. ಅಸೂಯೆ ಹಾಗೂ ಮತ್ಸರತೆಗಳಿಂದ ದೂರವಿರುವುದನ್ನು ತಿಳಿಸಿ.

6. ಪುಸ್ತಕದೊಂದಿನಿಂದ ದೊರೆಯುವ ಪರಮಾಶ್ಚರ್ಯ ಹಾಗೂ ಸಂತಸಗಳನ್ನು ತಿಳಿಸಿ.
7. ನಿಸರ್ಗದ ಪಕ್ಷಿ ಪ್ರಭೇದಗಳು ಹಾಗೂ ಸಸ್ಯಕಾಶಿಗಳ ಬಗ್ಗೆ ತಿಳಿಸಿ.
8. ಕಾಪಿ ಹೊಡೆಯುವುದಕ್ಕಿಂತ ಫೇಲಾಗಿ, ಪ್ರಯತ್ನಿಸಿ ಮೇಲೆ ಬರುವುದರ ರಹಸ್ಯ ತಿಳಿಸಿ.
9. ತನ್ನ ಯೋಚನಾ ಲಹರಿ ಸರಿಯಿಲ್ಲವೆಂದು ಯಾರಾದರೂ ತಿಳಿಸಿದರೆ ಅದನ್ನು ಬದಿಗೊತ್ತಿ ತಾನು ನಂಬಿದ ತತ್ವಗಳಿಗೆ ನಿಷ್ಠೆಯಿಂ ದಿರಲು ತಿಳಿಸಿ.
10. ಮೃದು ಸ್ವಭಾವದವರೊಡನೆ ಮೃದುವಾಗಿ, ಕಠಿಣ ಸ್ವಭಾವದವ ರೊಡನೆ ಕಠಿಣವಾಗಿರುವುದನ್ನು ತಿಳಿಸಿ.
11. ಗುಂಪಿನಲ್ಲಿ ಗೋವಿಂದಾ ಎಂಬ ಭಾವ ಬಾರದಂತೆ ಎಚ್ಚರಿಸಿ.
12. ಮುಕ್ತ ಮನಸ್ಸಿನಿಂದ ಕೇಳುವುದನ್ನು ಕಲಿಸಿ ಏಕೆಂದರೆ ಉತ್ತಮವಾಗಿ ಕೇಳುವುದರಿಂದ ಮನುಷ್ಯ ಬೆಳೆಯುತ್ತಾನೆ.
13. ಕೇಳಿದ ನಂತರ ಉತ್ತಮಾಂಶಗಳನ್ನು ಅನುಷ್ಠಾನಕ್ಕೆ ತರಲು ತಿಳಿಸಿ.
14. ದುಃಖದ ಸನ್ನಿವೇಶದಲ್ಲಿಯೂ ನಗು ಚೆಲ್ಲುವುದು ಹೇಗೆಂದು ತಿಳಿಸಿ.
15. ಕಣ್ಣೀರಿಡುವ ಪ್ರಸಂಗ ಬಂದರೆ ನಾಚಿಕೊಳ್ಳಬಾರದೆಂದು ತಿಳಿಸಿ.
16. ತಾಳ್ಮೆ ಕಳೆದುಕೊಳ್ಳುವ ಸಂದರ್ಭದಲ್ಲಿ ಧೈರ್ಯದಿಂದಿರುವುದನ್ನು ತಿಳಿಸಿ.
17. ಕ್ಷಮಿಸಿ ಕಾಪಾಡುವ ಮನ್ನಿಸಿ ಮುನ್ನಡೆಸುವ ಹರಸಿ ಹಾರೈಸುವ ಸೃಷ್ಟಿಸ್ಥಿತಿಲಯ ಕರ್ತನಲ್ಲಿ ದೃಢ ನಂಬಿಕೆಯಿಡಲು ತಿಳಿಸಿ.
18. ಮನುಕುಲದ ಮೇಲೆ ನಂಬಿಕೆ ಹಾಗೂ ಕರುಣೆಯಿಡಲು ತಿಳಿಸಿ. ಇಷ್ಟು ಅಂಶಗಳು ಬರುವಂತೆ ಪತ್ರ ಬರೆದು ಅವರು "ಪತ್ರ ಉದ್ದವಾಯಿತು ಆದರೂ ಇಷ್ಟಲ್ಲದೇ ಮಾನವತೆಯ ಸಂಪೂರ್ಣತೆಯನ್ನು ಮುಟ್ಟಲಾಗುವುದಿಲ್ಲ" ಎಂದು ಪತ್ರವನ್ನು ಮುಕ್ತಾಯಗೊಳಿಸುತ್ತಾರೆ.

ಅಂದರೆ ಪೋಷಕರುಗಳಾದ ನಾವುಗಳೆಲ್ಲರೂ ನಿಜ ಕರ್ತವ್ಯಗಳನ್ನರಿತು, ಸತ್ಯನಿಷ್ಟವಾದ ಗುರಿಗಳನ್ನು ಹೊಂದಿ ಭಗವಂತನಲ್ಲಿ ನಂಬಿಕೆಯಿಟ್ಟು ನಡೆದಲ್ಲಿ ಆಶಿತ ಫಲಗಳು ದೊರೆಯುತ್ತವೆಂಬುದು ಅವರ ಹಾಗೂ ಹಿಂದಿನ ಎಲ್ಲಾ ಚಿಂತನಾಶೀಲರ ಅಭಿಪ್ರಾಯ. ಗುಣಾತ್ಮಕ ಶಿಕ್ಷಣಕ್ಕೆ ಹಾಗೂ ಮಾನವ ಪ್ರತಿಭಾ ಬೆಳವಣಿಗೆಗೆ ಗಮನ ನೀಡಿ ಉತ್ತಮ ಸಹಕಾರಿಗಳಾಗೋಣ, ತನ್ಮೂಲಕ ಉತ್ತಮ ಸಮಾಜ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಳ್ಳೋಣವೆಂಬುದು ಡಿ.ವಿ.ಜಿ.ಯವರ ಆಶಯವಾಗಿದೆ.

# ಇವರೀರ್ವರು "ಗರ್ವಪಡದುಪಕಾರಿ ದರ್ಪಬಿಟ್ಟಧಿಕಾರಿ" ಅತಿಶಯರು

ಗತಕಾಲದ ನೆನಪನ್ನು ಹುಡುಕ ಹೊರಟಾಗ ದಾನಕ್ಕೆ ಕರ್ಣನೆಂದೂ, ಧರ್ಮಕ್ಕೆ ಧರ್ಮರಾಜನೆಂದೂ, ಸತ್ಯಕ್ಕೆ ಹರಿಶ್ಚಂದ್ರನೆಂದೂ, ದೌರ್ಜನ್ಯಕ್ಕೆ ದುರ್ಯೋಧನ, ರಾವಣರೆಂದು ಖ್ಯಾತರಾಗಿದ್ದ ಕಾಲವಿತ್ತು. ಆದರೆ, ಇಂದಿನ ಅವಿರತ ದುಡಿಮೆಯ ಪೆಡಂಭೂತದ ಪದಾಘಾತಕ್ಕೆ ಸಿಲುಕಿ ಉಸಿರು ಕಟ್ಟಿಕೊಂಡಂತಿರುವ ಮಾನವನು ದೈವೀಗುಣಗಳೆಲ್ಲವನ್ನೂ ಮರೆತು, ಮಾನವತೆಯನ್ನೂ ಭ್ರಷ್ಟಗೊಳಿಸಿಕೊಂಡಿರುವುದಕ್ಕೆ ಆಧ್ಯಾತ್ಮಿಕ ಕೊರತೆಯೇ ಮುಖ್ಯ ಕಾರಣವೆಂದು ಚಿಂತನಾಶೀಲರು, ಆಧ್ಯಾತ್ಮಿಕ ಜೀವಿಗಳೂ ಆಗಿರುವ ಡಿ.ವಿ.ಜಿ.ಯವರು ಜೀವಿಗಳು ಜಗತ್ತಿನ ಜನಗಳ ಕಾರ್ಯವೈಖರಿಯಲ್ಲಿನ ನ್ಯೂನತೆಗಳನ್ನು ಕೆಳಗಿನ ಪದ್ಯದಲ್ಲಿ ನಮ್ಮ ಗಮನಕ್ಕೆ ತರುತ್ತಿದ್ದಾರೆ. ಅಂದರೆ, "ಗರ್ವಪಡದುಪಕಾರಿ ದರ್ಪಬಿಟ್ಟಧಿಕಾರಿ ನಿರ್ವಿಕಾರದ ನಯನದೊಳ್ ನೋಳ್ಪುದಾರಿ ಸರ್ವಧರ್ಮಾಧಾರಿ ನಿರ್ವಾಣಸಂಚಾರಿ ಉರ್ವರೆಗೆ ಗುರುವವನು ಮಂಕುತಿಮ್ಮ" ಹುಟ್ಟಿದ ಪ್ರತಿ ಮನುಷ್ಯನು ತನ್ನ ಕಾರ್ಯಕ್ಷೇತ್ರದಲ್ಲಿದ್ದುಕೊಂಡು, ಕರ್ತವ್ಯಪರನಾಗಿ ಕಾರ್ಯನಿರ್ವಹಿಸುತ್ತಾ, ಇತರರಿಗೆ ತೊಂದರೆಯನ್ನು ಕೊಡದೇ ಬಾಳನ್ನು ನಿರ್ವಹಿಸುವುದರ ಜೊತೆಗೆ ಸಹನೆ, ಸಂಪನ್ನತೆ, ವಿನಯ, ವಿದ್ಯಾ ಮತ್ತು ನಿರ್ವಿಕಾರಗಳಿಂದ ಬದುಕಿ ಜೀವನದ ಅಂತಿಮ ಗುರಿಯಾದ ಮೋಕ್ಷವನ್ನು ಪಡೆಯಬೇಕೆಂಬುದು ಸರ್ವವಿಧಿತ. ಆದರೆ, ದೈನಂದಿನ ಜೀವನದಲ್ಲಿ ಜನರ ಕಾರ್ಯಶೈಲಿಯನ್ನು ಅವಲೋಚಿಸಲಾಗಿ ಯಾವುದಾದರೊಂದು ಕಿರುಕಾರ್ಯವೆನ್ನೆಸಗಿದರೂ ಅದರ ನಿರ್ವಹಣೆಯ ಸಂಬಂಧ ಮಿತಿಮೀರಿದ ಗರ್ವವನ್ನು ಪ್ರದರ್ಶಿಸುವ ಅಂಶವನ್ನು ಗಮನಿಸ ಬಹುದಾಗಿದೆ. ದೇವಸ್ಥಾನಕ್ಕೊಂದು ಕಿರುಗಂಟೆಯನ್ನು ಹಾಕಿಸಿದರೂ ಅದಕ್ಕೆ ದೊಡ್ಡದಾಗಿ ತನ್ನ ಹೆಸರನ್ನು ಬರೆಯಿಸಿಕೊಳ್ಳುವ ತವಕ, ಯಾರಿಗೋ ಒಂದು ನೌಕರಿ ಕೊಡಿಸಿದರೆ, ವರ್ಗಾವಣೆ ಮಾಡಿಸಿದರೆ, ವಧುವರರ ಲಭ್ಯತೆಯ ಬಗ್ಗೆ ಯತ್ನಿಸಿದ್ದಲ್ಲಿ ಅದೆಲ್ಲವನ್ನೂ ತಾನು ಮಾಡಿದೆನೆಂಬ ಅಹಂಭಾವದಿಂದ ಮೆರೆಯುವ ಜನರಿಗೆ ಕೊರತೆಯೇನಿಲ್ಲವೆಂಬುದನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ. ಸುಖೀ ಸಮಾಜದ ನಿರ್ಮಾಣಕ್ಕಾಗಿ, ಮುಂಬರುವ ಪೀಳಿಗೆಗೆ ಉತ್ತಮ ಸಮಾಜದ ಬಳುವಳಿಯಾಗಿ ಪ್ರತಿಯೊಬ್ಬ ಪ್ರಜೆಯೂ ವಿದ್ಯಾವಿನಯ ಸಂಪನ್ನರಾಗಿ ಕಾರ್ಯೋನ್ಮುಖರಾಗುವ ದಿಸೆಯಲ್ಲಿ ನೆರವು ನೀಡುವ ಬಗ್ಗೆ ಗರ್ವಪಡದೇ, ಅಧಿಕಾರಿಯಾಗಿ ಕೆಲಸ ನಿರ್ವಹಿಸಿದ ಬಗ್ಗೆ ದರ್ಪವಿರದೇ, ಪಕ್ಷಪಾತ ಮತ್ತು ಬೇಧಗಳನ್ನು ತೊರೆದು ಸದೃಷ್ಠಿಯಿಂದ ಯಾವುದೇ ಕಾರ್ಯನಿರ್ವಹಿಸುವಂತಾದಲ್ಲಿ ಅಂತಹನೋರ್ವ "ಪ್ರಪಂಚದ ಗುರುವಿನ" ಹಂತ ತಲುಪಿದವನಾಗುತ್ತಾನೆಂದೂ ಧರ್ಮ ಬೇಧಗಳಿಲ್ಲದೇ ಸರ್ವರನ್ನು ಪ್ರೀತಿಸುವ "ಸರ್ವಧರ್ಮಾಧಾರಿ, ನಿರ್ವಾಣಸಂಚಾರಿ ಮಹಾತ್ಮ"ನಾಗುತ್ತಾನೆಂದು ತಿಳಿಸುತ್ತಾ ಇಂದಿದ್ದು ನಾಳೆಗೆ ಜೀವನಾಂತ್ಯ ಕಾಣುವ ಮಾನವರಾದ ನಾವುಗಳು ನಿಗರ್ವಿಗಳಾಗಿ ದರ್ಪವನ್ನು ಬಿಟ್ಟು ಸರ್ವಧರ್ಮಪ್ರೀತಿಯುಳ್ಳವರಾಗಿ ಮೋಕ್ಷ ಪಥದಲ್ಲಿ ನಡೆದು "ಸರ್ವರಿಗೆ ಸಮಪಾಲು ಸರ್ವರಿಗೆ ಸಮಬಾಳಿನ" ಸಹಕಾರ ತತ್ವವನ್ನು ನಿಜ ಜೀವನದಲ್ಲಿ ಅನುಷ್ಠಾನಗೊಳಿಸಿರೆಂಬುದೇ ಡಿ.ವಿ.ಜಿ.ಯವರ ಸದ್ಬಯಕೆಯಾಗಿದೆ.

# "ತಾಯಿಯಾದವಳು ತನ್ನ ಹೊಟ್ಟೆ ತುಂಬಿಸುವಿಕೆಗೆ ಕಾತರಿಸುವಳೇ?"

ಭಗವಂತನಿಂದ ಜನಿತವಾದ ಪ್ರತಿ ಜೀವಿಯೂ ಸಕಾಲಿಕವಾದ ಆಹಾರ ಸೇವನೆಯಿಂದಲೇ ಸುಸ್ಥಿರ ದೇಹ ನಿರ್ವಹಣೆ ಸಾಧ್ಯವೆಂಬ ಅಂಶವು ಎಲ್ಲರೂ ಒಪ್ಪಿರುವ ವಿಚಾರ. ಆದರೆ, ಅಂತಹ ಸೇವನೆಯ ಪೂರ್ವ ತಾನು ಅನುಸರಿಸಬೇಕಾದ ವಿಧಿವಿಧಾನದ ಬಗ್ಗೆ ನಮ್ಮ ಪ್ರಾಥಮಿಕ ಶಾಲಾ ಶಿಕ್ಷಕರು ಹೇಳುತ್ತಿದ್ದ ಒಂದು ಚಿಕ್ಕ ಪ್ರಸಂಗ ನೆನಪಿಗೆ ಬರುತ್ತದೆ. ಅದೇನೆಂದರೆ, ಓರ್ವ ದಾನಿಯ ಮನೆಯಲ್ಲಿ ಹೇರಳವಾದ ಸಂಪತ್ತು, ಆಹಾರ ಧಾನ್ಯ, ಉತ್ತಮ ಹಾಗೂ ಉತ್ಕೃಷ್ಟ ಗುಣಮಟ್ಟದ ಊಟದ ಲಭ್ಯತೆ. ಪ್ರತಿದಿನ ಈರ್ವರು ಅತಿಥಿಗಳನ್ನು ಕರೆದು ಪ್ರತ್ಯೇಕ ಕೊಠಡಿಯಲ್ಲಿ ಊಟ ದಾನ ನೀಡುವ ವ್ಯವಸ್ಥೆ ಹಾಗೂ ಅಂದು ಕರೆದ ಈರ್ವರು ಅತಿಥಿಗಳಿಗೂ ಈ ದಾನಿಯ ಮನೆಯಲ್ಲಿನ ಹೇರಳವಾದ ಅಕ್ಷಯವಾದ ಲಭ್ಯತೆಯ ಮಾಹಿತಿಯಿತ್ತು. ಈ ಈರ್ವರು ಅತಿಥಿಗಳಲ್ಲಿ ಓರ್ವನಿಗೆ ಊಟ ಬಡಿಸಿದಾಗ "ತನಗೆ ಹೇಗೂ ಪುಷ್ಕಳವಾದ ಆಹಾರ ದೊರೆತಿದೆಯೆಂದು ತನಗೆ ಬೇಕಾದ್ದನ್ನೆಲ್ಲಾ ಸುರಿಸಿಕೊಂಡು ಹೊಟ್ಟೆ ತುಂಬಾ ಊಟ ಮಾಡುವ ಅಭ್ಯಾಸ". ಇನ್ನೊಬ್ಬನದು "ತಾನೊಬ್ಬನೇ ಊಟ ಮಾಡುವುದು ಬೇಡ, ಇನ್ನೋರ್ವ ಯಾರಾದರೂ ಬಾರದ ಹೊರತು ತಾನು ಊಟ ಮಾಡುವುದಿಲ್ಲವೆಂಬ ನಿರ್ಧಾರದ ಹೊರಹಾಕುವಿಕೆ". ಈ ಎರಡರಲ್ಲಿ ಉತ್ತಮನಾರೆಂದು ಜನವೇ ನಿರ್ಣಯಿಸಲೆಂದು ತೀರ್ಪನ್ನು ಕಾಯ್ದಿರಿಸಲು ತಿಳಿಸಿ, ವಿದ್ಯಾರ್ಥಿಗಳಿಗೆ ಈ ಅನುಭವವೇದ್ಯ ಕಥೆಯನ್ನು ಹೇಳಿ ಮುಂದಿನ ಭವಿಷ್ಯದ ದಿವಸಗಳಲ್ಲಿ ನಿಮ್ಮ ಜೀವನದಲ್ಲಿ ಯಾವ ತರಹದ ಅತಿಥಿ ನೀವಾಗಬೇಕೆಂಬುದನ್ನು ನಿರ್ಣಯಿಸಲು ನಮಗೇ ಬಿಡುತ್ತಿದ್ದರು. ಈ ಕಥೆಯು ನನಗೆ ದಾರ್ಶನಿಕ ಕವಿ ಡಿ.ವಿ.ಜಿ.ಯವರ ಅನುಭವವೇದ್ಯ ತ್ಯಾಗ ಪದ್ಯವೊಂದು ನೆನಪಾಗಿಸುತ್ತದೆ. "ತ್ಯಜಿಸಿ ಭುಜಿಸಲ್ಕಲಿತವನೆ ಜಗಕೆ ಯಜಮಾನ ನಿಜಕುಕ್ಷಿ ಚಿಂತೆಯೇಂ ಮೊದಲು ಮನೆತಾಯ್ಗೆ ಭುಜಿಪ ಪತಿಸುತರೊಪ್ಪು ತುಪ್ಪವವಳೂಟಕ್ಕೆ ಭಜಿಸು ನೀನಾ ವ್ರತವ ಮಂಕುತಿಮ್ಮ" ಇಲ್ಲದವರಿಗೆ, ನಿರ್ಗತಿಕರಿಗೆ, ಅಸಹಾಯಕರಿಗೆ, ಅತಿಥಿಗಳಿಗೆ ಊಟ ಮಾಡುವ ಅವಕಾಶವನ್ನು ಮಾಡಿ, ತದನಂತರ ತಾನು ಊಟ ಮಾಡುವವನು ಜಗತ್ತಿಗೆ ಯಜಮಾನನಾಗಬಲ್ಲನೆಂಬುದು ಹಿರಿಯರ ವಾಣಿ. ಜೀವನಾನುಭವಿಗಳಾದ ಡಿ.ವಿ.ಜಿ.ಯವರು ನಮ್ಮೆಲ್ಲರಿಗೆ ಹತ್ತಿರವಾದ ಉದಾಹರಣೆಯನ್ನು ನೀಡುತ್ತಾ, ಸಂಸಾರದಲ್ಲಿನ ತಾಯಿಯಾದವಳು, ತನ್ನ ಹೊಟ್ಟೆಯ ತೃಪ್ತಿಗೆ ಕಾತರಿಸುತ್ತಾಳೆಯೇ ಎಂದು ಪ್ರಶ್ನಿಸುತ್ತಾ, ಮರುಕ್ಷಣಕ್ಕೆ ಅವರೇ ಉತ್ತರಿಸುತ್ತಾ, ತನ್ನ ಗಂಡ, ಮಕ್ಕಳು ಮತ್ತು ಸಂಸಾರದ ಸದಸ್ಯರು ತೃಪ್ತಿಯಿಂದ ಊಟ ಮಾಡಿದರೆ ಅವಳೇ ತುಪ್ಪದೂಟ ಮಾಡಿದಂತೆ ಸಂತೋಷಿಸುತ್ತಾಳೆಂದಿದ್ದಾರೆ. ಇಲ್ಲಿ ಮಹತ್ವದ ಪದಗಳೆಂದರೆ "ಭಜಿಸು", "ನೀನು", "ಆ ವ್ರತವ" ಅಂದರೆ ನೀನು ಸಹ ಅಂತಹ ವ್ರತವನ್ನು ಅನುಸರಿಸು ಎನ್ನುವ ಡಿ.ವಿ.ಜಿ.ಯವರ "ದಾತನ ಸ್ಥಾನದಲ್ಲಿರುವ ಯಾರೇ ಆಗಲಿ ತಾನು ಸ್ವೀಕರಿಸುವ ಮೊದಲು ಇತರರಿಗೆ ನೀಡಿ ನಂತರ ತಾವು ಪಡೆಯಿರಿ" ಎಂಬ ಸಲಹೆಯು ಸಹಕಾರ ಕ್ಷೇತ್ರದ ಅಧ್ಯಕ್ಷರು, ನಿರ್ದೇಶಕರು ಹಾಗೂ ಸಿಬ್ಬಂದಿಯವರುಗಳಿಗೆ ಸಂಪೂರ್ಣವಾಗಿ ಅನ್ವಯವಾಗಲಿದೆ. ಇತರರ ಅಭ್ಯುದಯಕ್ಕೆ ಹಾಗೂ ಸೇವಗೆಂದೇ ಜನ್ಮತಾಳಿದ ಸಹಕಾರ ಸಂಸ್ಥೆಗಳಲ್ಲಿರುವವರು ಇತರರಿಗೆ ಸೇವೆ ನೀಡಿ ನಂತರ ತಾವು ಪಡೆಯಬೇಕೆಂಬುದು ಸೂಕ್ತ ಹಿತನುಡಿಯಾಗಿದೆಯೆನಿಸುತ್ತಿದೆ.

# "ತತ್ವವೊಂದರ ಹಿಡಿತಕೊಗ್ಗದಿಹ ಬಾಳೇನು ಕಿತ್ತಗಾಳಿಯ ಪಟವೋ"

"ಉದರ ನಿಮಿತ್ತಂ ಬಹುಕೃತ ವೇಷಂ" ಎಂಬ ಶಂಕರ ವಾಣಿಯನ್ವಯ ಹೊಟ್ಟೆಯ ಪಾಡಿಗಾಗಿ ಶತಸುಳ್ಳುಗಳನ್ನು ನುಡಿಯುವ ಇಂದಿನ ನಾವುಗಳು "ಹೇಳುವುದೊಂದಾದರೆ ಮಾಡುವುದೇ ಇನ್ನೊಂದು" ಹಣಸಂಗ್ರಹಣೆಯನ್ನೇ ಏಕೈಕ ಗುರಿಯನ್ನಾಗಿಸಿ ಕೊಂಡಿರುವ ಇಂದಿನ ಜನರ ತಾಕಲಾಟದ ಮನೋಭಾವವನ್ನು ವೀಕ್ಷಿಸಿದ ಡಿ.ವಿ.ಜಿ.ಯವರು ಬದುಕಿನ ಸಿದ್ಧಾಂತದ ಬಗ್ಗೆ ಬರೆದಿರುವ ಪದ್ಯವನ್ನು ಅರಿಯೋಣ. ಚಿಂತನಶೀಲ ಜೀವಿಗಳಾದ ಡಿ.ವಿ.ಜಿ.ಯವರು ಬದುಕಿದಂತೆ ಬರೆದು, ಬರೆದದ್ದನ್ನು ಜೀವಿತದಲ್ಲಿ ಪ್ರಾಯೋಗಿಕವಾಗಿ ತಂದವರೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅವರ ಪದ್ಯಗಳಲ್ಲಿ ಹುಟ್ಟಿನಿಂದ ಸಾವಿನವರೆಗೆ, ಆತ್ಮನಿಂದ ಪರಮಾತ್ಮನವರೆಗೆ ಮಾತ್ರವಲ್ಲದೇ ಇತರೇ ಪ್ರಾಕಾರದ ವಿಷಯಗಳನ್ನೂ ಸಹ ವಿಷದವಾಗಿ ಪ್ರಸ್ತಾಪಿಸಿದ್ದಾರೆ. ಶುದ್ಧ ಸಮಾಜ ನಿರ್ಮಾಣದ ಕನಸನ್ನು ಕಂಡವರಿವರಾದ್ದರಿಂದ ಸಮಾಜದ ಶಾಂತಿಯುತ ಹಾಗೂ ಸೌಹಾರ್ದಯುತ ಬೆಳವಣಿಗೆಗಾಗಿ ಜನರು ತಮ್ಮ ತಮ್ಮ ಬದುಕಿನಲ್ಲಿ ತತ್ವಗಳನ್ನು ಅಳವಡಿಸಿಕೊಳ್ಳುವುದು ಅತ್ಯವಶ್ಯಕವೆಂದಿದ್ದಾರೆ. ನಿತ್ಯಜೀವನದ ನಡವಳಿಗಳಲ್ಲಿ ಅಡಕವಾಗಿರುವ ಸರಳ ಅನಿಸಿದರೂ ಸುಂದರವಾದ ಉದಾಹರಣೆಗಳ ಮೂಲಕ ತತ್ವಾಚರಣೆಗಳನ್ನು ನಮ್ಮ ಕಣ್ಮುಂದೆ ಚಿತ್ರೀಕೃತವಾದಂತೆ ವರ್ಣಿಸುವ ಈ ಪದ್ಯದ ಸೊಬಗನ್ನು ಗಮನಿಸಿ. "ಸುತ್ತಸುತ್ತುವ ಖಗವ ಗೂಡನೆನಪೆಳೆಯುವುದು ಗೊತ್ತುನೂಲ್ ಪಿಡಿದಿಹುದು ದನವ ಬಯಲಿನಲಿ ತತ್ವವೊಂದರ ಹಿಡಿತಕೊಗ್ಗದಿಹ ಬಾಳೇನು ಕಿತ್ತ ಗಾಳಿಯ ಪಟವೋ ಮಂಕುತಿಮ್ಮ" ಪಕ್ಷಿಯೊಂದರ ತೀವ್ರ ಅಲೆದಾಟ ಹಾಗೂ ಹಾರಾಟದ ಮಧ್ಯೆಯೂ ತನ್ನ ಸ್ಥಿರನೆಲೆಯನ್ನು ನೆನಪಿನಲ್ಲಿಟ್ಟುಕೊಂಡಿರುವ ಹಾಗೂ ದನವೊಂದು ತನ್ನ ಹೊಟ್ಟೆ ತುಂಬಿಸಿಕೊಳ್ಳಲು ನಿರ್ದಿಷ್ಟ ಪರಿಧಿಯೊಳಗೆ ಸುತ್ತುವ ಉತ್ಕೃಷ್ಟವಾದ ಉದಾಹರಣೆಯನ್ನು ನೀಡುತ್ತಿದ್ದಾರೆ. ಮೃಗ ಖಗ ಪಕ್ಷಿಗಳು ತಮ್ಮಗಳ ಆಹಾರಾನ್ವೇಷಣೆಗಾಗಿ ಕಾಡಿನ ವಿವಿಧ ಮೂಲೆಮೂಲೆಗಳಲ್ಲಿ ಹಾರಾಡಿ ದಿನವನ್ನು ಕಳೆದರೂ ತನ್ನ ವಾಸದ ಮೂಲಗೂಡು ಎಲ್ಲಿದೆಯೆಂಬುದನ್ನು ತನ್ನ ಸ್ಥಿರ ನೆನಪಿನಲ್ಲಿಟ್ಟುಕೊಂಡಿರುತ್ತದೆ. ತೀವ್ರ ಅಲೆದಾಟದ ಮಧ್ಯೆಯೂ ಸ್ಥಿರ ನೆನಪಿನ ತತ್ವವನ್ನು (Fixed Memory Principle) ಜಗತ್ತೇ ಮೆಚ್ಚತಕ್ಕ ಅಂಶವೆಂದಿದ್ದಾರೆ. ಅಂತೆಯೇ ದನವೊಂದಕ್ಕೆ ತನ್ನ ಹೊಟ್ಟೆ ತುಂಬಿಸಿಕೊಳ್ಳಲು ಅವಕಾಶವಿದ್ದು, ಹುಲ್ಲಿನ ಮೈದಾನದಲ್ಲೆಲ್ಲಾ ದುರಾಸೆಯಿಂದ ಅತ್ತಿಂದಿತ್ತ ಓಡಾಡಿ ಅಲೆದಲೆದು ಹೊಟ್ಟೆ ತುಂಬಿಸಿಕೊಳ್ಳದೇ ಬರುವ ದನಕ್ಕಿಂತ ಒಂದು ಹಗ್ಗದಿಂದ ಬಂಧಿಸಲ್ಪಟ್ಟ ದನವಾದರೂ ತನ್ನ ಹಗ್ಗದ ನಿರ್ದಿಷ್ಟ ಪರಿಧಿಯೊಳಗೆ ಲಭ್ಯವಿರುವ ಹುಲ್ಲನ್ನು ಅಚ್ಚುಕಟ್ಟಾಗಿ ಮೇದು ತನ್ನ ಹೊಟ್ಟೆ ತುಂಬಿಸಿಕೊಂಡ ದನವು "ತೃಪ್ತಿಯ ದನ"ವೆಂಬ ಅಂಶವನ್ನು ಮೆಚ್ಚುಗೆಯ ವಿಷಯವಾಗಿ ತಂದಿದ್ದಾರೆ. ಬದುಕು ತಮಗೂ ಮತ್ತು ಇತರರಿಗೂ ಸಂತೋಷಮಯ ಹಾಗೂ ಸಂತೃಪ್ತವಾಗಬೇಕಾದರೆ ನಿರ್ವಹಣೆಯಲ್ಲಿ ತತ್ವ ಹಾಗೂ ಮಿತಿಗಳನ್ನು ಅರಸುವುದು ಅತ್ಯಂತ ಅವಶ್ಯಕವಾದದ್ದೆಂಬ ಅಂಶ ಈ ಪದ್ಯದಲ್ಲಿ ಹೊರಹೊಮ್ಮಿದೆ. ಯಾವುದೇ ವ್ಯಕ್ತಿಯಾಗಲೀ ತನ್ನ ಜೀವನವು ಆದರ್ಶಮಯವಾಗಿರಬೇಕಾದರೆ ಅಂತಹ ವ್ಯಕ್ತಿಯು ತನ್ನದೇ ಆದ ತತ್ವಾದರ್ಶಗಳನ್ನು ಹೊಂದಿದ್ದಲ್ಲಿ ಮಾತ್ರ ಅದು ಅನುಕರಣ ಯೋಗ್ಯವಾಗಿರುತ್ತದೆ. ಇಲ್ಲದಿದ್ದಲ್ಲಿ ಸೂತ್ರವಿಲ್ಲದ ಗಾಳಿಯ ಪಟದಂತಾಗುತ್ತದೆಯೆನ್ನುವ ಮೂಲಕ ಸರ್ವರಿಗೂ ಸುಖಮಯವಾಗುವ "ಸಾರ್ವತ್ರಿಕ ತತ್ವ"ವಾದ ಸಹಕಾರವನ್ನು ನಿಮ್ಮ ನಿಮ್ಮ ಬಾಳಿನಲ್ಲಿ ತಂದುಕೊಳ್ಳಿ, ಹಿತಮಿತಿಗಳಿಂದ ಬದುಕಿ ಜೀವನಾದರ್ಶಗಳನ್ನು ಅನುಕರಣೆಯಲ್ಲಿ ತಂದು ಸಹಕಾರದ ಸುಖೀ ಜೀವನವನ್ನು ಅನುಷ್ಠಾನಗೊಳಿಸಿರೆಂಬ ಕರೆಯನ್ನು ಈ ಪದ್ಯದ ಮೂಲಕ ನೀಡುತ್ತಿದ್ದಾರೆ. ಇದರ ಸಾರಾಂಶವೆಂದರೆ "ನಿನಗೇನು ಬೇಡವೋ ಅದನ್ನು ನೀನು ಬೇರೆಯವರಿಗೆ ಮಾಡಬೇಡ" "Do not do to others what you should not want to be done to you" ಎಂಬುದೇ ಆಗಿದೆ.

# "ಅಧಿಕಾರಿ ನೀನಲ್ಲ ವಿಧಿ ಬೆಪ್ಪನಲ್ಲ"

ನಿಸರ್ಗದ ನಿಯಮಗಳನ್ವಯ ನೀರು ಎತ್ತರದಿಂದ ಕೆಳಕ್ಕೆ ಹರಿಯುವುದನ್ನೂ, ಗಾಳಿಯು ಹೆಚ್ಚಿನ ಒತ್ತಡ ಪ್ರದೇಶದಿಂದ ಕಡಿಮೆ ಒತ್ತಡವಿರುವೆಡೆಗೆ ಚಲಿಸುವುದನ್ನು, ಉಷ್ಣಾಂಶವು ಹೆಚ್ಚಿದ್ದ ಕಡೆಯಿಂದ ಕಡಿಮೆಯಿರುವೆಡೆಗೆ ಪ್ರವಹಿಸುವುದನ್ನು ನಾವೆಲ್ಲರೂ ಗಮನಿಸಿರುವುದು ಸರ್ವವಿಧಿತ. ಅಂತೆಯೇ ಜ್ಞಾನ ಪ್ರಸಾರವೂ ಹೆಚ್ಚಿನ ಜ್ಞಾನ ಗಳಿಸಿರುವವರಿಂದ ಕಡಿಮೆ ಜ್ಞಾನವಿರುವವರಿಗೆ ಜ್ಞಾನದಾನ ಮಾಡುವುದನ್ನು ನಾವು ಕಾಣುತ್ತೇವೆ. "ವಿಧಿಗೆ ನೀಂ ಕಾರ್ಯ ನಕ್ಷೆಯ ವಿಧಿಸ ಹೊರಡದಿರು ಅಧಿಕಾರಿ ನೀನಲ್ಲ ವಿಧಿ ಬೆಪ್ಪನಲ್ಲ ಹದವರಿತು ವಿಧಿತಾನೆ ಕುದುರಿಸುವನೆಲ್ಲವನು ಅದಟದಿರು ನೀನವನ ಮಂಕುತಿಮ್ಮ" ಅಪ್ರಮೇಯನೂ ಸ್ವಪ್ರಕಾಶನೂ, ಏಕಮೇವಾದ್ವಿತೀಯನೂ ಸರ್ವ ಸೃಷ್ಠಿ-ಸ್ಥಿತಿ-ಲಯ ಕರ್ತನಾದ ಜ್ಞಾನ ಸಾಗರ, ಶಕ್ತಿ ಸಾಗರನಿಗೆ ನೀನೇನೂ ಬುದ್ಧಿ ಹೇಳಬೇಕಾದ ಹಾಗೂ ಕಾರ್ಯನಿರ್ವಹಣೆಗೆ ನಕ್ಷೆ (Blue Print) ಕೊಡುವ ಅವಶ್ಯಕತೆಯಿಲ್ಲ, ಸ್ವಯಂ ತನ್ನ ಲೀಲಾ ಶಕ್ತಿಯಿಂದ ತನ್ನಲ್ಲಿನ ಅಚಿಂತ್ಯ ಶಕ್ತಿಯನ್ನು ಬಳಸಿಕೊಂಡು ಜಗದೆಲ್ಲಾ ಕಾರ್ಯಗಳನ್ನು ನಿರ್ವಹಿಸಲು ಸರ್ವೇಶ್ವರನು ಶಕ್ತನಾಗಿದ್ದಾನೆ. ಋತುಮಾನಗಳನ್ನು ಯಾವಾಗ ಹೇಗೆ ಬದಲಿಸಬೇಕು, ಯಾರನ್ನು ಎಷ್ಟು ಕಾಲ ಬದುಕಿಸಬೇಕು, ಯಾರನ್ನು ಯಾವಾಗ ಸಾಯಿಸಬೇಕು, ಯಾವ್ಯಾವ ಸಸ್ಯಗಳಿಂದ ಪ್ರಜಾಮಕ್ಕಳ ಆಹಾರಕ್ಕೆ ಯಾವ ಆಹಾರ ಹಣ್ಣುಗಳನ್ನು ನೀಡಬೇಕು ಎಂಬಿತ್ಯಾದಿಗಳ ಬಗ್ಗೆ ಬಹು ಎಚ್ಚರಿಕೆಯ ಲೆಕ್ಕಾಚಾರದ ಲೆಕ್ಕಣಿಗನಾಗಿರುವ ಭಗವಂತನು ತನ್ನ "ಕಾಣದವನಾಳ್ಕೆ" (Invisible Administration) ತತ್ವದ ಮೂಲಕ ಎಲ್ಲಾ ವಸ್ತುವಿಷಯಗಳನ್ನು ನಿಯಂತ್ರಿಸಬಹುದಾದ ಸರ್ವೋತ್ಕೃಷ್ಟ ಪ್ರಭುವಾಗಿದ್ದಾನೆ. ಪ್ರಕೃತಿಯು ಪ್ರತಿ ಜೀವಿಯನ್ನೂ ಮುಪ್ಪು, ರೋಗ, ಸಾವುಗಳಿಗೀಡು ಮಾಡುತ್ತಾ ಪ್ರಪಂಚದ ಅತ್ಯಂತ ಬಲಿಷ್ಠ ಜಯಶಾಲಿಗಳನ್ನೂ ಸಹ ಸರ್ವಭಕ್ಷ ಸಾವಿನ ರೂಪದಲ್ಲಿ ಬಂದು ಜೀವನದ ರಣರಂಗದಿಂದ ಸೆಳೆದೊಯ್ಯುತ್ತದೆ, ಇಂತಹ ಸ್ಥಿತಿಯಿಂದ ಯಾರಿಗೂ ವಿನಾಯಿತಿಯಿಲ್ಲ, ಅದಕ್ಕೇನೇ ಇನ್ನೊಂದು ಕಡೆ ಡಿ.ವಿ.ಜಿ.ಯವರು "ಪ್ರಕೃತಿಯಿಂ ಹೊರಗಿರುವ ನರನಾರು ಸೃಷ್ಠಿಯಲಿ" ಎಂದು ಪ್ರಶ್ನಿಸುತ್ತಾ ಸರ್ವರೂ ದೈವದ ಆಜ್ಞಾಧಾರಕರೇ ಎಂಬ ಸಾರ್ವತ್ರಿಕ ಸತ್ಯವನ್ನು ಸಾರಿದ್ದಾರೆ. ನೀನೇನು ಅವನಿಗಿಂತ ಬುದ್ಧಿವಂತನಲ್ಲ, ಅವನು ದಡ್ಡನೂ ಅಲ್ಲ ಎಂಬ ಅಂಶವನ್ನು ತಿಳಿದು ವಿಧಿಯ ವಿಮರ್ಶೆಯನ್ನು ಬಿಟ್ಟು ಅವನು ನೀಡುವ ನಿರ್ದೇಶನಗಳನ್ನು, ಅವನು ನೀಡುವ ವರದಾನಗಳನ್ನು ಪ್ರಸಾದವೆಂದು ಪರಿಗಣಿಸಿ, ಲೋಕ ಕಲ್ಯಾಣ ಕಾರ್ಯದಲ್ಲಿ ತೊಡಗಿಸಿಕೊಂಡು, ಸರ್ವರ ಅಭಿವೃದ್ಧಿಯನ್ನು ಬಯಸುವ ಲೋಕತತ್ವ "ಸಹಕಾರ ತತ್ವ"ವನ್ನು ಒಪ್ಪಿಕೊಂಡು, ನಿನ್ನ ಬದುಕನ್ನು ಹಸನುಗೊಳಿಸಿಕೋ, ತನ್ಮೂಲಕ ಸರ್ವರ ಕನಸಿನ ರಾಮರಾಜ್ಯವನ್ನು ತರಲು ನೆರವಾಗೆಂಬುದೇ ಈ ಪದ್ಯದ ಸಾರಾಂಶವಾಗಿದೆ. ಆದ್ದರಿಂದ, ಅಲ್ಪಜ್ಞಾನರಾದ, ಅಲ್ಪಾಯುಗಳಾದ ನಾವುಗಳು ಅವನ ವಿಸ್ತರಿತ ಜ್ಞಾನದ ಅರಿವನ್ನು ಪಡೆದು "ಸರ್ವೇ ಜನ ಸುಖಿನೋಭವಂತು" ಎಂಬ ತತ್ವವಾದ ಸಹಕಾರವನ್ನು ಅನುಷ್ಠಾನಗೊಳಿಸೋಣ.

# "ಸಹಕಾರಿ ನಾಯಕ"

ಡಿ.ವಿ.ಜಿ.ಯವರ ಪದ್ಯವು ಸಮುದಾಯದ ನಾಯಕನ ಗುರಿ ಹಾಗೂ ಅವನ ಗುರಿಯ ನೆನಪುಗಳಿಗೆ ಸಂಬಂಧಿಸಿದ್ದಾಗಿದೆ. ಯಾರೊಬ್ಬ ಸಾಧಕನೇ ಆಗಿರಲಿ ಆತನು ತನ್ನ ಸಾಧನೆಗೆ ಪೂರ್ವ ಗುರಿಯನ್ನು ಖಚಿತ ಪಡಿಸಿಕೊಳ್ಳಬೇಕು. ಸಾಮಾಜಿಕ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ನಾಯಕರುಗಳ ವಿಷಯವನ್ನು ತೆಗೆದುಕೊಂಡಾಗ ಅವರುಗಳು ವ್ಯಾಪ್ತಿಯ ಜನಸಮುದಾಯವನ್ನು ಗಮನಿಸಿ ತಮ್ಮ ಗುರಿಯನ್ನು ಕರಾರುವಕ್ಕಾಗಿರಿಸಿಕೊಳ್ಳಬೇಕಾಗುತ್ತದೆ. ಇದನ್ನೇ ಸೂಚಿಸುವ ಮಹತ್ವದ ಡಿ.ವಿ.ಜಿ.ಯವರ ಪದ್ಯವನ್ನು ಗಮನಿಸಿರಿ. "ದಾರುಣಿಯ ನಡಿಗೆಯಲಿ ಮೇರುವಿನ ಗುರಿಯಿರಲಿ ಮೇರುವನು ಮರೆತಂದೆ ನಾರಕಕೆ ದಾರಿ ದೂರವಾದೊಡದೇನು ಕಾಲು ಕುಂಟಿರಲೇನು ಊರ ನೆನಪೇ ಬಲವೋ ಮಂಕುತಿಮ್ಮ" ಭೂಮಿಯ ಮೇಲೆ ನಡೆದಾಡುತ್ತಾ ಇತರ ಜನರಿಗೆ ಉದಾಹರಣಾರ್ಥವಾಗಿ ಬದುಕ ಬಯಸುವ ನಾಯಕನು ಮೇರು ಪರ್ವತವನ್ನು ತಲುಪುವ ಗುರಿಯನ್ನು ಹೊಂದಿರಬೇಕು. ಉನ್ನತದ ಗುರಿಯನ್ನು ಮರೆತಾಗ ಪ್ರಾಪಂಚಿಕ ಹಾಗೂ ಲೌಕಿಕದ ಆಕರ್ಷಣೆಗಳು ಅಂತಹ ನಾಯಕನನ್ನು ನರಕದ ಹೆಬ್ಬಾಗಿಲಿಗೆ ಕೊಂಡ್ಯೊಯ್ದು ಬಿಡುತ್ತದೆ. ಅಂತಹ ಉತ್ಕೃಷ್ಟ ಗುರಿ ಅದೆಷ್ಟೇ ಎತ್ತರ ಅಥವಾ ಮಹತ್ವದ್ದಾಗಿರಲಿ, ಅಂಗವೈಕಲ್ಯವಿದ್ದು ಕಾಲು ಕುಂಟವಾಗಿದ್ದರೂ ಮನದೊಳಗಿನ ಉತ್ಕಟ ಛಲ ಸಾಧನೆಗೆ ಸ್ಫೂರ್ತಿಯಾಗುತ್ತದೆ ಎನ್ನುತ್ತಾರೆ. ಈ ಪದ್ಯದಲ್ಲಿ ಸಮಾಜ ಸೇವಾ ಗುರಿ ಹಾಗೂ ಆ ಸದ್ಗುರಿಗಳ ನಿರಂತರ ಹಾಗೂ ಅಚ್ಚಳಿಯದ ನೆನಪಿನ ಬಲವನ್ನು ಉದಾಹರಿಸಿದ್ದಾರೆ. ಶತಶತಮಾನಗಳಿಂದ ನಡೆದು ಬಂದಿರುವ ಮನುಕುಲದ ಬದುಕನ್ನು ಅವಲೋಕಿಸಿದಾಗ ಮಹಾತ್ಮರು, ದಾರ್ಶನಿಕರು, ಚಿಂತನಾಶೀಲರು, ತತ್ವಜ್ಞಾನಿಗಳು, ದೇಶಾಭಿಮಾನಿಗಳು ಹಾಗೂ ದೈವಾಂಶ ಸಂಭೂತರು ತಮ್ಮ ಏಕಾಗ್ರ ಸಾಧನೆಗಳ ಮೂಲಕ ಪ್ರಸಿದ್ಧರಾಗಿ ತಮ್ಮ ಜೀವನ ನಿರ್ವಹಣೆಯ ಮೂಲಕ ಅವರದೇ ಆದ ವಿಶಿಷ್ಟ ಸಂದೇಶಗಳನ್ನು ಬಿಟ್ಟುಹೋಗಿದ್ದಾರೆ. ಸಮಾಜದಲ್ಲಿ ಸಹಕಾರಿ ನಾಯಕನಾದವನಿಗೆ ಜನಸಮುದಾಯದ ಸೇವೆ ಮಾಡಲು ವಿಫುಲ ಅವಕಾಶವಿದೆಯಾದ್ದರಿಂದ ಉದಾತ್ತವಾದ ಗುರಿಗಳನ್ನು ಹಾಕಿಕೊಂಡು ಅವುಗಳ ಸ್ಪಷ್ಟ ನೆನಪನ್ನು ಇರಿಸಿಕೊಂಡು ಛಲ ಬಿಡದ ತ್ರಿವಿಕ್ರಮನಂತೆ ಗುರಿ ಸಾಧನೆಯತ್ತಾ ಸಾಗಲೆಂಬ ಮಹದುದ್ಧೇಶ ಈ ಪದ್ಯದಲ್ಲಿ ಅಡಕವಾಗಿದೆಯೆಂದು ಕೊಳ್ಳೋಣವೇ?

# 'ನಂಬಿಕೆಯಿಂದ ಸದ್ಗತಿ ಪ್ರಾಪ್ತಿ'

"ನಂಬದಿರ್ದನು ತಂದೆ ನಂಬಿದನು ಪ್ರಹ್ಲಾದ ನಂಬಿಯುಂ ನಂಬದಿಹ ಇಬ್ಬಂದಿ ನೀನು ಕಂಬದಿನೋ ಬಿಂಬದಿನೋ ಮೋಕ್ಷವವರಿಂಗಾಯ್ತು ಸಿಂಬಳದ ನೊಣ ನೀನು ಮಂಕುತಿಮ್ಮ" – ಡಿ.ವಿ.ಜಿ. "ನಂಬಿ ಕರೆದರೆ ಓ ಎನ್ನನೇ ಶಿವನು?" ಎನ್ನುವ ದೃಢ ವಿಶ್ವಾಸದ ಉಕ್ತಿಯನ್ನು ನಂಬಿ ಬದುಕಿದವರು ನಮ್ಮ ಶರಣ ಶರಣೆಯರು, ವಚನಕಾರ್ತಿಯರು, ಋಷಿಮುನಿಗಳು, ಸಂತರು, ಚಿಂತನಶೀಲರು, ಅದರಲ್ಲೂ "ದೇವರಿದ್ದಾನೆ ಮಾತ್ರವಲ್ಲ, ನನಗಾಗಿಯೇ ದೇವರಿದ್ದಾರೆ" ಎಂಬ ತಗ್ಗದ ಕುಗ್ಗದ ಉತ್ಸಾಹದ ಭಕ್ತಿಯನ್ನು ಹೊಂದಿದ್ದ ಬಾಲ್ಯದಲ್ಲಿಯೇ ದೃಢಭಕ್ತಿಯ ಪರಾಕಾಷ್ಠೆಯನ್ನು ಪ್ರದರ್ಶಿಸಿ ತಮ್ಮ ವ್ಯಕ್ತಿತ್ವದ ದಿವ್ಯತೆಯನ್ನು ಮೆರೆದವರಲ್ಲಿ ದೃಢಭಕ್ತಿಯ ಧೃವ, ಪವಿತ್ರ ಪ್ರಹ್ಲಾದ, ನಿಷ್ಠೆಯ ನಚಿಕೇತ, ಮಹಿಮಾನ್ವಿತ ಮಾರ್ಕಾಂಡೇಯ ಇತ್ಯಾದಿ ಬಾಲಭಕ್ತರ ಸರಣಿಯೇ ನಮ್ಮ ಸ್ಮೃತಿಪಟಲದ ಮುಂದೆ ಹಾದು ಹೋಗುತ್ತದೆ. ಇಂದು ನಾವೆಲ್ಲರೂ ಹಂಚಿಕೊಳ್ಳಬೇಕಾದ ಡಿ.ವಿ.ಜಿ.ಯವರ "ನಂಬಿಕೆ" ಆಧಾರಿತ ಪದ್ಯವು ಪೌರಾಣಿಕಜನಿತ ಉಪಮೆಯನ್ನು ಒಳಗೊಂಡಿರುವುದಾಗಿದೆ. ಪದ್ಯದ ವಿವರಣೆ ಪೂರ್ವ ನಂಬಿಕೆ ಆಧಾರಿತ ಪುಟ್ಟ ಕಥೆಯೊಂದು ನನ್ನ ನೆನಪಿಗೆ ಬರುತ್ತಿದೆ. ಅದನ್ನು ಸವಿದು ನಂತರ ಪದ್ಯದ ತಿರುಳನ್ನು ಅರಿಯೋಣ. ಪ್ರಸವ ವೇದನೆಯ ಜಿಂಕೆಯೊಂದು ತನ್ನ ಮರಿಗೆ ಜನ್ಮ ನೀಡಿ ಈ ಜಗತ್ತಿಗೆ ಅದರ ಅಸ್ತಿತ್ವವನ್ನು ವಂಶಾವಳಿ ಮೂಲಕ ಮುಂದುವರಿಸಲು ಸುರಕ್ಷಿತ ಸ್ಥಳವೊಂದರ ಶೋಧನೆಯಲ್ಲಿ ತೊಡಗಿ ಕೊನೆಯಲ್ಲಿ ದಟ್ಟಾರಣ್ಯದಲ್ಲಿ ರಹಸ್ಯ ತಾಣವೊಂದರಲ್ಲಿ ಸ್ಥಿತವಾಗಿ ಇನ್ನೇನು ಮರಿಗೆ ಜನ್ಮ ನೀಡಬೇಕೆಂಬ ಗಳಿಗೆಯಲ್ಲಿ ನಾಲ್ಕೂ ದಿಕ್ಕುಗಳಿಂದ ಒದಗಿ ಬಂದಿರುವ ಅವಘಡದ ಭಯಾನಕ ದೃಶ್ಯವಾಗಿ ಒಂದು ದಿಕ್ಕಿನಲ್ಲಿ ಬಂದೂಕುಧಾರಿಯಾದ ಬೇಟೆಗಾರ ಗುಂಡು ಹಾರಿಸಲು ಸಿದ್ಧನಾಗಿದ್ದರೆ, ಇನ್ನೊಂದು ದಿಕ್ಕಿನಲ್ಲಿ ಹಸಿದ ಹೆಬ್ಬುಲಿ ಘರ್ಜಿಸುತ್ತಿದ್ದರೆ, ಮತ್ತೊಂದು ದಿಕ್ಕಿನಲ್ಲಿ ಪ್ರಜ್ವಲಿಸುವ ಕೆನ್ನಾಲಿಗೆಯ ಬೆಂಕಿ, ಮಗದೊಂದು ದಿಕ್ಕಿನಲ್ಲಿ ಗುಡುಗು ಸಿಡಿಲಿನ ಆರ್ಭಟ ಕೇಳಿ ಬಂದು ಜಿಂಕೆಯ ಜಂಘಾಬಲವೇ ಉಡುಗಿ ಹೋಯಿತು, ಆದರೆ ತುಂಬುಗರ್ಭಿಣಿಯಾಗಿದ್ದ ಜಿಂಕೆಗೆ ಅಲ್ಲಿಯೇ ಜನ್ಮ ನೀಡದ ಹೊರತು ಬೇರೆ ದಾರಿಯಿರಲಿಲ್ಲ. ತನ್ನ ದೈನ್ಯ ಸ್ಥಿತಿಯ ಅರಿವನ್ನು ತಿಳಿದುಕೊಂಡ ಜಿಂಕೆಯು ಮನದಾಳದ ಭಕ್ತಿಯಿಂದ ತನ್ನನ್ನು ಹಾಗೂ ಮರಿಯನ್ನು ರಕ್ಷಿಸಿಕೊಡೆಂದು ಸರ್ವಾಂತರ್ಯಾಮಿ, ಸರ್ವಶಕ್ತ ಭಗವಂತನಲ್ಲಿ ಮೊರೆಯಿಟ್ಟಿತು. ಮನದ ಕರೆಯು ಅಸದೃಶ್ಯವಾಗಿದ್ದರೂ ಅದರ ಶಕ್ತಿ ಅದ್ಭುತವಾಗಿತ್ತು, ಅಂತೆಯೇ ಜಿಂಕೆಯ ಪ್ರಾರ್ಥನೆಯು "ನಿಸ್ತಂತು ಮಾಧ್ಯಮ"ದ (Wireless Media) ಮೂಲಕ ಕ್ಷಣಾರ್ಧದಲ್ಲಿ ಸರ್ವಶಕ್ತಿಯ ಮೂಲವಾದ ದೇವನನ್ನು ತಲುಪಿ ಜಿಂಕೆಯ ಮನದಾಳದ ನಿಸ್ವಾರ್ಥ ಭಕ್ತಿಗೆ ಒಲಿದ ಭಗವಂತನು ತನ್ನ ಅಸದೃಶ್ಯ ಶಕ್ತಿಯಿಂದ ಕಾರ್ಯತತ್ಪರನಾದ ಪರಿಣಾಮವಾಗಿ ಗುಡುಗು ಸಿಡಿಲಿನ ಹೊಡೆತದಿಂದ ಬಂದೂಕುಧಾರಿ ಸಾವನ್ನಪ್ಪಿದ, ಬಂದೂಕುಧಾರಿಯ ಕೈಗೆ ಸ್ಪರ್ಶವಾಗಿ ಬಂದೂಕು ಚಾಲನೆಯಾಗಿ ಗುಂಡು "ಡಂ" ಎಂಬ ಶಬ್ಧದೊಂದಿಗೆ ಹುಲಿಗೆ ಬಡಿಯಿತು, ಈ ಹೊಡೆತದಿಂದ ಹುಲಿಯೂ ಸತ್ತಿತು. ಮಾಯದಂತಹ ಎಡೆಬಿಡದ

ಮಳೆಸುರಿದು, ಕೆನ್ನಾಲಿಗೆಯ ಬೆಂಕಿಯೂ ನಂದಿತ್ತು. ಮೇಲಿನ ಪ್ರಕ್ರಿಯೆಗಳ ಮೂಲಕ ಜಿಂಕೆಗೆ ಪ್ರತ್ಯಕ್ಷದರ್ಶಿಗಳಾಗಿದ್ದ ಆಪತ್ತಿನ ಮೂಲಗಳು ಕಣ್ಮುಂದೆಯೇ ಕ್ಷಣಾರ್ಧದಲ್ಲಿ ನಾಶವಾಗುವ ಮೂಲಕ ಸಂದಿತ್ತು ಭಕ್ತಿಗೆ ಬೆಲೆ. ಬಾಲಕ ಪ್ರಹ್ಲಾದನಿಗೆ ಪ್ರತಿಶತ ನೂರರಷ್ಟು ಭಗವಂತನಲ್ಲಿ ನಂಬಿಕೆ. ಅಷ್ಟೇ ತದ್ವಿರುದ್ಧ ದಿಕ್ಕಿನ ಚಿಂತನೆ ಹರಿದ್ವೇಷಿಯಾದ ತಂದೆ ಹಿರಣ್ಯಕಶ್ಯಪುವಿನದು. ಪ್ರೀತಿಯಿಂದ ಪ್ರಹ್ಲಾದನು ದೇವರನ್ನು ನೆನೆದರೆ ಹಿರಣ್ಯಕಶ್ಯಪುವೂ ಸಹ ದ್ವೇಷದಿಂದಲೇ ಸದಾ ಹರಿಯ ನೆನಪಿನಲ್ಲಿಯೇ ಕುದಿಯುತ್ತಲಿದ್ದ. ಈ ಉದಾರಣೆಯಲ್ಲಿ ಈರ್ವರೂ ಹರಿಸ್ಮರಣೆಕಾರರೇ, ಸ್ಮರಣೆಯ ದಿಕ್ಕು ಬೇರೆ ಬೇರೆ. ಆದರೆ ತತ್ಫಲವಾಗಿ ಈರ್ವರಿಗೂ ಸರ್ವಶಕ್ತ ಭಗವಂತನ ದರ್ಶನ ಹಾಗೂ ಜೀವನ್ಮುಕ್ತಿ ನೀಡಿಕೆ ಲಾಭ. ಆದರೆ ನಮ್ಮ ಪಾಡೋ ಒಂದು ಸಾರಿ ನಂಬಿಕೆಯಿದೆ ಎಂದವರು ಮುಂದಿನ ಗಳಿಗೆಯಲ್ಲಿ ನಂಬಿಕೆಯಿಲ್ಲದವರಾಗಿರುತ್ತೇವೆ. ದೇವರಿದ್ದಾನೆಯೇ ಎಂದು ಯಾರಾದರೂ ಕೇಳಿದರೆ "ಇದ್ದಾನೇನೋ ಇರಬಹುದೇನೋ" ಎಂದು ಕೆಲವರು ಉತ್ತರಿಸಿದರೆ ಇನ್ನೂ ಕೆಲವರು ಪ್ರಾಯೋಗಿಕ ಪರೀಕ್ಷೆ ನಡೆಸಿ ಪೂರ್ಣ ಫಲಿತಾಂಶ ಪಡೆದವರಂತೆ "ದೇವರಿಲ್ಲವೇ ಇಲ್ಲ" ಎನ್ನುವವರೂ ಇದ್ದಾರೆ. ಇಂತಹ ನಮ್ಮ ಇಬ್ಬಗೆಯ ಸ್ಥಿತಿಯನ್ನು ಕಂಡು ಕವಿ ಮಹಾಶಯರು ಸಿಂಬಳದಲ್ಲಿ ಸಿಕ್ಕುಹಾಕಿಕೊಂಡ ನೊಣದ ಉದಾಹರಣೆ ನೀಡುತ್ತಾ ಅದಕ್ಕೆ ಸಿಂಬಳದ ಸ್ನಿಗ್ಧತೆಯ ಸ್ಪರ್ಶದಿಂದ ಬಿಡುಗಡೆಯೂ ಇಲ್ಲ ಹಾಗೂ ಆ ಸಿಂಬಳವನ್ನು ಅದು ತಿನ್ನುವಂತೆಯೂ ಇಲ್ಲ ಇಂತಹ ಇಬ್ಬಗೆಯ ಮನಃಸ್ಥಿತಿಯವರು ನಾವೆಂದು ವರ್ಣಿಸುತ್ತಾ "ಹರಿಪ್ರಿಯ–ಹರಿದ್ವೇಷಿ"ಗಳಾದ ಈರ್ವರಿಗೂ ಮೋಕ್ಷ ದೊರೆಕಿತಾದ್ದರಿಂದ ನಮ್ಮನ್ನು ಸಹ ಒಂದು ದೈವಪ್ರೇರಿತ ನಿರ್ದಿಷ್ಟ ಚಿಂತನೆಯ ಬಲದಿಂದ ದೈವಾಂಶ ಪ್ರೇರಿತರಾಗಲು ತನ್ಮೂಲಕ ನಮ್ಮ ಜೀವನವನ್ನು ವಿಕಸಿತಕೊಳ್ಳುವಂತೆ ಕರೆ ನೀಡುತ್ತಿದ್ದಾರೆ. ಈ ಪ್ರಕ್ರಿಯೆಯ ಪರಿಚಿಂತನೆಯಲ್ಲಿಯೇ ತೊಡಗಿದ ಭಕ್ತರು, ಸಾಧುಸಂತರು, ದೈವಾಂಶಸಂಭೂತರು ಕರೆಕೊಟ್ಟಿರುವ ಮಾತಿದು "ನೀನು ನಿಸ್ವಾರ್ಥ ಕಾರ್ಯತತ್ಪರನಾಗು ಆಗ ದೈವವು ನಿನ್ನನ್ನು ತನ್ನದೇ ಸ್ವರೂಪದ ಪಾಲುದಾರೆಂದು ಪರಿಗಣಿಸಿ ನಿನಗಾರು ಎದುರಿಲ್ಲದಂತೆ ಆಶೀರ್ವದಿಸಿ, ನಿನಗೆ ಬೇಕಾದ ಯಶಸ್ಸನ್ನು ಇಳೆಬಾನ್ಗಳಲಿ ಭೋಮ್ಯಾಕಾಶಗಳಲ್ಲಿ ಯಾವ ಶಕ್ತಿಯೂ ತಡೆಹಿಡಿಯದಂತೆ ಆಶೀರ್ವದಿಸುತ್ತದೆ. ಮುಂದುವರೆದು ಒಂದೊಮ್ಮೆ ಅರಿತೋ ಅರಿಯದೆಯೋ ತಪ್ಪೆಸಗಲ್ಲಟ್ಟಿದ್ದರೆ ಕ್ಷಮಿಸಿ ಕಾಪಾಡಿ ಹರಸಿಹಾರೈಸಿ ಮನ್ನಿಸಿ ಮುನ್ನಡೆಸುತ್ತದೆಯೆಂದಿದ್ದಾರೆ. "When you are a partner of GOD, no force on earth and heaven can prevent success from you". ನಮ್ಮ ಆತ್ಮದ ಇರುವಿನ ಜೊತೆಗೆ ಜ್ಞಾನದ ಅರಿವನ್ನು ಪಡೆದು ಸರ್ವರಿಗೆ ಸುಖಮಯವಾದ ಸಹಕಾರ ಜೀವನವನ್ನು ನಡೆಸೋಣ, ಕೈಲಾದ ಸಹಾಯದ ಹಸ್ತವನ್ನು ಚಾಚೋಣವೆಂಬ ಬದಲಾವಣೆಯನ್ನು ತಂದುಕೊಳ್ಳೋಣ, ಸಹಾಯದ ಹಸ್ತ ನೀಡಲಾಗದಿದ್ದರೂ ಪರವಾಗಿಲ್ಲ ತೊಂದರೆ ಕೊಡದಿರೋಣ ಎಂಬ ಅಂಶವನ್ನು ಮೇಲಿನ ಪದ್ಯದಿಂದ ಅರಗಿಸಿಕೊಳ್ಳೋಣ.

# "ಧರಿಸು ಲೋಕದ ಭರವ ಪರಮಾರ್ಥವನು ಬಿಡದೆ"

ದುಷ್ಟ ಶಿಕ್ಷಣೆ, ಶಿಷ್ಟ ರಕ್ಷಣೆ ಹಾಗೂ ಧರ್ಮ ಸಂಸ್ಥಾಪನೆಗಳೆಂಬ ಮೂರು ಉದ್ದೇಶಗಳನ್ನು ಮುಂದಿಟ್ಟುಕೊಂಡು ಅವತರಿತನಾದ ಭಗವಂತ ಶ್ರೀಕೃಷ್ಣನು ಕುರುಕ್ಷೇತ್ರ ಸಮರದಲ್ಲಿ ತನ್ನ ಬಂಧು ಬಾಂಧವರನ್ನು ಕೊಲ್ಲಬೇಕಲ್ಲ ಎಂಬ ಹೃದಯ ದೌರ್ಬಲ್ಯಕ್ಕೊಳಗಾಗಿದ್ದಾಗ ಸಮಯೋಚಿತವಾಗಿ ಗೀತಜ್ಞಾನ ನೀಡಿ "ಕರ್ಮಯೋಗ" ಎಂಬ ಮಹಾಧ್ಯಾಯವನ್ನು ವರ್ಣಿಸಿ ಭಯವಿಹ್ವಲನಾದ ಅರ್ಜುನನನ್ನು ಕಾರ್ಯತತ್ಪರನನ್ನಾಗಿಸುತ್ತಾನೆ. ಇನ್ನು ವಚನ ಪುರುಷ "ಸಮಾನತೆಯ ಹರಿಕಾರ" ಭಕ್ತಿ ಭಂಡಾರಿ ಬಸವಣ್ಣನವರು "ಕಾಯಕವೇ ಕೈಲಾಸ"ವೆಂಬ ಮಹಾನ್‌ಉಕ್ತಿಯ ಮೂಲಕ ಕೆಲಸದ ಮಹತ್ವವನ್ನು ಅರಿವಿಗೆ ತಂದರು. ಜೀವನದ ನಿರ್ವಹಣೆಗೆ ಪ್ರತಿಯೊಬ್ಬನೂ ನಿಹಿತವಾದ ಕರ್ತವ್ಯವನ್ನು ಮಾಡುತ್ತಾ ದುಡಿಮೆಯನ್ನಾಧರಿಸಿ ಬದುಕಬೇಕೆಂಬುದು ಹಿಂದಿನಿಂದಲೂ ನಡೆದು ಬಂದಿರುವ ಪದ್ಧತಿ. ಆದರೆ ಅದೇಕೋ ಹಿಂದಿನವರಲ್ಲಿದ್ದ ಕರ್ತವ್ಯ ನಿಷ್ಠೆ, ಪ್ರಾಮಾಣಿಕತೆ, ಶ್ರದ್ಧೆ, ಪರಿಶ್ರಮಗಳು ಇಂದು ಇಲ್ಲವಾಗುತ್ತಿರುವುದು ಸಾಧಾರಣ ದೃಶ್ಯ. ಶ್ರಮವಿಲ್ಲದ ದುಡಿಮೆ ಬೇಕು, ಇತರರ ಬೆವರಿನಿಂದ ಬಂದ ಪ್ರತಿಫಲ ತಮ್ಮದಾಗಬೇಕೆಂಬ ಪರಾವಲಂಬಿ ಭಾವನೆ ಎದ್ದು ಕಾಣುತ್ತಿದೆ. "ನಿಷ್ಕಾಮಕರ್ಮ" ಫಲಾಪೇಕ್ಷೆಯಿಲ್ಲದೆ ಕೆಲಸ ಮಾಡೆಂದು ಧರ್ಮಗ್ರಂಥಗಳು ಸೂಚಿಸಿದರೆ ನಾವುಗಳು "ನಿಷ್ಕರ್ಮ ಕಾಮ" ಕೆಲಸ ಮಾಡದೇ ಫಲಬೇಕೆಂಬ ಮನಸಿಗರಾಗಿದ್ದೇವೆ. ಕೆಲಸ ಮಾಡದೇ ಸೋಮಾರಿಗಳಾದ ನಮಗೆ ಹಲವು ಕರ್ತವ್ಯಗಳು ಬಾಕಿಯುಳಿದ ಹಂತದಲ್ಲಿ ಇಂತಹದೊಂದು "More work, less time attitude" ಪರಿಸ್ಥಿತಿ ಬಹುಸಂಖ್ಯಾತ ಜನರಲ್ಲಿ ಹಬ್ಬಿದೆ. ಮೇಲಿನ ಎಲ್ಲಾ ಅಂಶಗಳನ್ನು ಬಹಳ ಹಿಂದಿನ ಕಾಲದಲ್ಲಿಯೇ ಗಮನಿಸಿದ ತಿಮ್ಮಗುರು ಡಿ.ವಿ.ಜಿ.ಯವರು ಕೆಲಸದ ಮಹತ್ವವನ್ನು ಸಾರುವ ಸುಂದರ ಪದ್ಯವನ್ನು ನಮಗಿತ್ತಿದ್ದಾರೆ, ಅದು ಹೀಗಿದೆ: "ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು ದೊರೆತುದ ಹಸಾದವೆಂದುಣ್ಣು ಗೊಣಗಿಡದೆ ಧರಿಸು ಲೋಕದ ಭರವ ಪರಮಾರ್ಥವನು ಬಿಡದೆ ಹೊರಡು ಕರೆ ಬರಲ್ ಅಳದೆ ಮಂಕುತಿಮ್ಮ" ಇದರ ಒಟ್ಟಾರೆ ತಾತ್ಪರ್ಯವೆಂದರೆ ಕಾರ್ಯತತ್ಪರನಾಗು, ತೃಪ್ತಿ ಹಾಗೂ ಸುಖವನ್ನು ಪಡೆ, ಇತರರ ಹಾಗೂ ಸಮಾಜದ ಸುಖವನ್ನು ಭರಿಸುವವನಾಗೆಂಬುದು. ಶ್ರದ್ಧೆ, ಭಕ್ತಿಗಳಿಂದ ಕಾರ್ಯತತ್ಪರನಾಗಿ ಭಗವಂತನನ್ನು ಹಿಂಗಾವಲು, ಮುಂಗಾವಲು, ಬೆಂಗಾವಲುಗಳನ್ನಾಗಿ ಹೊಂದಿ, ಎಲ್ಲಾ ಕಾರ್ಯಗಳಲ್ಲಿ ಜಯ ಪಡೆಯಿರಿ ಎಂಬುದೇ ಆಗಿದೆ. ಸರ್ವರ ಹಿತದ ತತ್ವವಾದ ಸಹಕಾರ ತತ್ವವನ್ನು ಅನುಷ್ಠಾನಕ್ಕೆ ತರುತ್ತಾ ಮನುಕುಲದ ಅಭಿವೃದ್ಧಿಯನ್ನು ಸಾಧಿಸಿರೆಂಬುದೇ ಈ ಪದ್ಯದ ಮಹದುದ್ದೇಶವಾಗಿದೆ. ಈ ಪದ್ಯದ ಅಂತಿಮ ಸಾಲು. "ಹೊರಡು ಕರೆ ಬರಲ್ ಅಳದೆ" ಸಾರವತ್ತಾಗಿದೆ. ಜಾತಸ್ಯ ಮರಣಂ ಧೃವಂ ಎಂಬ ಲೋಕೋಕ್ತಿಯನ್ವಯ ಪ್ರತಿಯೊಬ್ಬನೂ ಮೃತ್ಯುವಿನ ಅತಿಥಿಯೇ. ಇಂತಹ ನಿಜ ಅಂತ್ಯವನ್ನರಿತು ತನ್ನ ಹಾಗೂ ಇತರರಿಗೆ ಹಿತಕಾರಿಯಾಗುವಂತಹ ಸರ್ವರ ಅಭಿವೃದ್ಧಿಯ ಸಹಕಾರವನ್ನು ಅನುಷ್ಠಾನಕ್ಕೆ ತನ್ನಿ, ತನ್ಮೂಲಕ ಪರನಾತ್ಮನಿಗೆ ಪರಮಾಪ್ತನಾಗಿ ಎಂಬುದೇ ಮನದಾಳದ ಕರೆಯಾಗಿದೆ.

# "ಏಕಾಕಿತನವ ತೊರೆ ಸಾಂಘಿಕ ಜೀವನಕ್ಕೆಡೆ ಮಾಡಿಕೊ" "ಜಗವನೊತ್ತಟ್ಟಿಗಿಡುವೆನೆನೆ ನಷ್ಟವಾರಿಗೋ ಮರುಳೆ"?

ಲೋಕಾಃ ಸಮಸ್ತಾಃ ಸುಖಿನೋಭವಂತು ಎಂದು ಸರ್ವಕಾಲಿಕ ಹಿತಚಿಂತಕ ವೇದೋಕ್ತಿಗಳು ಅರುಹಿದರೆ ಕವಿವಾಣಿಯೊಂದು ಹೇಳುತ್ತದೆ "ಜೀವನವೆಂಬ ಬೆಂಗಾಡಿನಲ್ಲಿ ಬೀಸುವ ತಂಗಾಳಿಯೆಂದರೆ ಸ್ನೇಹವೊಂದೇ". ನಿಷ್ಠುರ ಪ್ರಜ್ಞೆಯ ಕವಿ ಡಿ.ವಿ.ಜಿ.ಯವರು ವ್ಯಕ್ತಿ ವಿಶಿಷ್ಟಸುಖ ಸ್ವಾರ್ಥಕ್ಕೆ ದಾರಿಯೆಂದು ತಿಳಿದು ಅದನ್ನು ವಿರೋಧಿಸುತ್ತಾರೆ. ಭವ್ಯ ಬಂಗಲೆಯನ್ನು ಕಟ್ಟಿಸಿಕೊಂಡು ಅದರ ಸುತ್ತ 10 ಅಡಿ ಕಾಂಪೌಂಡೊಂದನ್ನು ಕಟ್ಟಿಸಿಕೊಂಡು ಹೊರಗಿನ ಜನರಿವರನ್ನು ನೋಡಬಾರದು, ತಾವು ಅವರನ್ನು ನೋಡಬಾರದೆಂಬಂತೆ ಬದುಕುತ್ತಾ, ಉತ್ತಮ ತಳಿಯ ನಾಯಿಯನ್ನು ಸಾಕಿ ಅದನ್ನು ವಾಯುವಿಹಾರಕ್ಕೆ ಕರೆದೊಯ್ದು ಜನರ ಸಂಪರ್ಕವಿಲ್ಲದೇ "ತಾನಾಯಿತು ತನ್ನ ಸಂಪತ್ತಾಯಿತು ಯಾರು ಹೇಗೆ ಬದುಕಿದರೆ ತನಗೇನು" ಎನ್ನುವಂತೆ ಬದುಕುತ್ತಿರುವ ಐಶಾರಾಮಿ ವರ್ಗದವರನ್ನು ಕಂಡು ಈ ಪದ್ಯ ಬರೆದಿರಬಹುದೆನಿಸುತ್ತದೆ. ಆತ್ಮವಿಕಾಸಕ್ಕೆ ಸಂಗಾತಿತನ ಅತ್ಯಗತ್ಯವೆಂಬ ಅಂಶವನ್ನು ಸಾರುವ ಈ ಪದ್ಯವನ್ನು ಓದಿ. "ಪ್ರತ್ಯೇಕ ಸುಖವ ನೀಂ ಪ್ರತ್ಯೇಕ ಸಂಪದವ ನತ್ಯಾಸೆಯಿಂದರಸಿ ಮಿಕ್ಕೆಲ್ಲ ಜಗವ ನೊತ್ತಟ್ಟಿಗಿಡುವೆನೆನೆ ನಷ್ಟವಾಗಿರೋ ಮರುಳೆ ಬತ್ತುವುದು ನಿನ್ನಾತ್ಮ ಮಂಕುತಿಮ್ಮ" ಪ್ರತ್ಯೇಕವಾದ ಸುಖ ಮತ್ತು ಸಂಪತ್ತನ್ನು ಅತಿಯಾದ ಆಸೆಯಿಂದ ಹುಡುಕಿಕೊಂಡು ಮಿಕ್ಕೆಲ್ಲ ಜಗತ್ತನ್ನು ದೂರವಿಡುವೆನೆಂದರೆ ನಷ್ಟವಾರಿಗೋ ಮರುಳೇ ನಿನಗಲ್ಲದೇ ಬೇರೆ ಯಾರಿಗೂ ಅಲ್ಲ ನಿನ್ನಾತ್ಮ ಸೊರಗಿ ಕೃಷವಾಗಿ ಹೃದಯ ವೈಶಾಲ್ಯತೆ ದೂರದ ಮಾತಾಗುತ್ತದೆ ಎಂದಿದ್ದಾರೆ. "ಇಡಿಯಾದರೆ ಉಳಿದೇವು ಬಿಡಿಯಾದರೆ ಅಳಿದೇವು ಒಗ್ಗಟ್ಟಿನಲ್ಲಿ ಬಲವಿದೆ" ಎಂಬಿತ್ಯಾದಿ ವಾಕ್ಯಗಳೆಲ್ಲ ತಿಳಿಸುವುದು ಸರ್ವರ ಅಭಿವೃದ್ಧಿಗೆ ಹೆದ್ದಾರಿಯಾದ ಸಹಕಾರ ತತ್ವವನ್ನೇ. ಸರ್ವಧರ್ಮಗ್ರಂಥಗಳು ಸಹ ಲೋಕಹಿತವನ್ನೇ ಭೋದಿಸುತ್ತವೆ. ಇದೇ ಅಂಶವನ್ನು ಮೇಲಿನ ಪದ್ಯದಲ್ಲಿ ಕವಿವರ್ಯರು ಉವಾಚಿಸುತ್ತಾ ಒಟ್ಟಾಗಿ ಬಾಳುವುದು "ಸಹ್ಯ" ಬಿಡಿಬಾಳು "ಅಸಹ್ಯ" "ಒಂಟಿತನ ನರಕ" "ಒಟ್ಟಾಗಿ ಬಾಳುವುದೇ ಸ್ವರ್ಗ"ವೆಂಬುದಾಗಿ ತಿಳಿಸಿ ದುರುಳ ಹಾಗೂ ಮರುಳರಾಗದೇ ಸರಳ ಹಾಗೂ ತರಳರಾಗಿ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ ಸಹಕಾರ ತತ್ವವನ್ನು ಮೈಗೂಡಿಕೊಳ್ಳಿರೆಂಬುದೇ ಕವಿಗಳ ಮನದಾಳದ ಉತ್ಕಟೇಚ್ಛೆಯಾಗಿದೆ. ಆದ್ದರಿಂದ, ನಾವುಗಳು ಈ ಪದ್ಯದಿಂದ ಪ್ರೇರಿತರಾಗಿ "ಬೇರ್ಪಡಿಸುವ ಗೋಡೆಗಳಾಗದೇ ಜೋಡಿಸುವ ಸೇತುವೆಯಾಗು" (Don't be bifurcation walls but be adjoining bridges) ಎಂಬ ಅಂಶವನ್ನು ಅಳವಡಿಸಿಕೊಂಡು ಸರ್ವರ ಅಭಿವೃದ್ಧಿಗೆ ಮಹಾಮಂತ್ರವಾಗಿರುವ ಸಹಕಾರದಿಂದ ಹೆಜ್ಜೆಯಿಡೋಣ.

# "ಪ್ರಕೃತಿಯ ಋಣ ತೀರಿಸು"

ಪಾರಮಾರ್ಥಿಕ ಚಿಂತನೆಯ ಕವಿ ಡಿ.ವಿ.ಜಿ.ಯವರು ಈ ಭೂಮಿಯ ಮೇಲಿನ ಬದುಕನ್ನು ಸವೆಯಿಸಲು ಮಾನವರು ಪಡುತ್ತಿರುವ ಅವಿರತ ಬೆದಕಾಟ, ಅರಚಾಟ, ಕಿರುಚಾಟ, ಪರಚಾಟಗಳನ್ನು ಕಂಡು ನಮ್ಮೆಲ್ಲರ ಹುಟ್ಟಿಗೆ ಮೂಲವಾದ ನಿಸರ್ಗಕ್ಕೆ ಏನೇನೂ ಕೊಡುಗೆಯನ್ನೀಯದೆ ಕೃತಘ್ನನಾಗಿರುವುದನ್ನು ಕಂಡು ವ್ಯಕ್ತಪಡಿಸಿರುವ ಅಭಿಪ್ರಾಯ ಸಾರವೇ ಇಂದಿನ ಪದ್ಯವಾಗಿದೆ. ಕೇಂದ್ರ, ರಾಜ್ಯ ಸರ್ಕಾರಗಳಿಂದ ಹಾಗೂ ಮಹಾನಗರಪಾಲಿಕೆ ಮತ್ತು ಪಂಚಾಯಿತಿಗಳಿಂದ ವಿಧಿಸುತ್ತಿರುವ ವಿವಿಧ ತೆರಿಗೆಗಳಾದ ವರಮಾನ ತೆರಿಗೆ, ವಾಣಿಜ್ಯ ತೆರಿಗೆ, ನಿವೇಶನ ತೆರಿಗೆ, ಸಂಪತ್ತಿನ ತೆರಿಗೆ ಇತ್ಯಾದಿಗಳನ್ನು ಪಾವತಿಸುತ್ತೇವೆ. ಆದರೆ, ಅದೇಕೋ ಪಂಚಭೂತಗಳಾದ ಅಗ್ನಿ, ಆಕಾಶ, ಭೂಮಿ, ವರುಣ, ವಾಯುಗಳಿಂದ ನಮಗೆ ಬೇಕಾದ ಎಲ್ಲಾ ಸವಲತ್ತುಗಳನ್ನು ಪಡೆದಿದ್ದರೂ ಪ್ರಕೃತಿಗೆ ಯಾವುದೇ ರೀತಿಯ ತೆರಿಗೆಯನ್ನು ಪಾವತಿಸುತ್ತಿಲ್ಲ. ನಮಗೆ ಕೊಡಮಾಡಲ್ಪಟ್ಟಿರುವ ದೇಹ, ವಿವಿಧ ಅಂಗಾಗಗಳು, ಶ್ರವಣ ಶಕ್ತಿ, ದೃಷ್ಟಿ ಶಕ್ತಿ, ದೇಹ ಬಲ ಇವೆಲ್ಲವನ್ನೂ ನಿಸರ್ಗದಿಂದಲೇ ಪಡೆದಿದ್ದೇವೆ. ಹೀಗೆ ಪಡೆದ ವಿವಿಧ ಶಕ್ತಿಗಳಿಗೆ, ಸವಲತ್ತುಗಳಿಗೆ ಪ್ರತ್ಯುತ್ತರವಾಗಿ ಕೊಡಬೇಕೆಂಬ ಅಂಶ ಮಾತ್ರ ಚಿಂತನೆಯೂ ನಮ್ಮಗಳಲ್ಲಿಲ್ಲವೆಂಬ ಅಂಶವನ್ನು ಗಮನಿಸಿದ ಕವಿ ಡಿ.ವಿ.ಜಿ.ಯವರು ಪಾವತಿಸಬೇಕಾದ ಬಾಕಿಯನ್ನು ತೆರಿಗೆಯ ರೂಪದಲ್ಲಿ ಪಾವತಿಸೆಂದು ಕೋರುತ್ತಿದ್ದಾರೆ. ಪದ್ಯದ ಚಮತ್ಕಾರಿಕೆಯನ್ನು ಗಮನಿಸಿ. "ತೆರಿಗೆಗಳು ಹಲವುಂಟು ಪ್ರಕೃತಿಗಂ ಸಲ್ಲುವುವು ತೆರದೆ ನೀಂ ಮರೆಯೆ ದಂಡಿಪಳಾಕೆ ಮುನಿದು ಕರಣಂಗಳಾಕೆಯವು ಮಿತದೊಳವುಗಳ ಬಳಸಿ ತೆರುಸಲುವ ಬಾಡಿಗೆಯ ಮಂಕುತಿಮ್ಮ" ಯಾವುದೋ ಸೌಲಭ್ಯವನ್ನು ಪಡೆದಿದ್ದರ ಕುರುಹಾಗಿ ತೆರಿಗೆಯನ್ನು ಪಾವತಿಸುತ್ತೇವೆ. ಅಂತೆಯೇ ದೇಹೇಂದ್ರಿಯಗಳನ್ನು ಪಡೆದು ಸುಖಿಸಿದ್ದರ ಕುರುಹಾಗಿ ನಾವುಗಳು ಪ್ರಕೃತಿಗೆ ತೆರಿಗೆಯನ್ನು ಬಾಡಿಗೆಯ ರೂಪದಲ್ಲಿ ಪಾವತಿಸಲು ಕೂರುತ್ತಾ, ಕೊಡಲೇಬೇಕಾದ ಅಂತಹ ತೆರಿಗೆಯನ್ನು ದುರ್ಬಲರಿಗೆ ದಾನದ ರೂಪದಲ್ಲಿ, ದೈವಾರಾಧನೆ ಕಾರ್ಯದಲ್ಲಿ, ಗುರುಹಿರಿಯರುಗಳಿಗೆ ಪಾವತಿಸದಿದ್ದಲ್ಲಿ ಪ್ರಕೃತಿಯು ನಿಖರವಾದ ಲೆಕ್ಕವನ್ನರಿಸಿಕೊಂಡಿದ್ದು, ಕೊಡದಿದ್ದ ನಮ್ಮ ವಿಫಲತೆಯನ್ನು ಗಮನಿಸಿ ಸೂಕ್ತ ಶಿಕ್ಷೆಯನ್ನು ತಪ್ಪದೇ ನೀಡಲಿದ್ದಾಳೆಂದು ಎಚ್ಚರಿಸುತ್ತಿದ್ದಾರೆ. ಸರ್ವಶಕ್ತನ ಜ್ಞಾನದ ವಿಸ್ತಾರತೆಯ ಹಾಗೂ ನಮ್ಮ ಮಿತ ಬುದ್ಧಿಶಕ್ತಿಯ ಬಗ್ಗೆ ಆಂಗ್ಲ ಭಾಷಾ ಉಕ್ತಿ ಹೀಗೆ ಉವಾಚಿಸುತ್ತದೆ GOD has his own predermined ways and means, whereas we know not of them. ಡಿ.ವಿ.ಜಿ.ಯವರ ಮೂಲ ಚಿಂತನೆ ಋಣ ತೀರಿಸುವಿಕೆ. ಪಡೆದಿದ್ದೀಯಾದ್ದರಿಂದ ಕೊಡಲು ಸಿದ್ಧನಾಗೆಂಬುದು ಅವರ ಪದ್ಯದ ಇಂಗಿತವಾಗಿದೆ. ಕೊಟ್ಟು ನಂತರ ಹೇರಳವಾಗಿ ಪಡೆದುಕೊಂಡ ಒಂದು ಪೌರಾಣಿಕ ಕಥೆ ನೆನಪಿಗೆ ಬರುತ್ತದೆ.

ಒಂದು ದಿನ ಶ್ರೀ ಕೃಷ್ಣನು ತನ್ನ ತಂಗಿಯರಾದ ಸುಭದ್ರೆ ಹಾಗೂ ದ್ರೌಪದಿಯರೊಂದಿಗೆ ವಿಹಾರಾರ್ಥವಾಗಿ ಕಾಡಿನಲ್ಲಿ ನಡೆದಾಡುತ್ತಿದ್ದಾಗ ಇದ್ದಕ್ಕಿದ್ದಂತೆ ಇವರೀರ್ವರಲ್ಲಿ ನನ್ನ ಮೇಲೆ ಯಾರಿಗೆ ಎಷ್ಟು ಪ್ರೀತಿಯಿದೆ ಎಂದು ಪರೀಕ್ಷಿಸಲಿಚ್ಛಿಸಿ ನಾಟಕೀಯವಾಗಿ ತನ್ನ ಬೆರಳಿಗೊಂದು ಮುಳ್ಳು ಹೊಕ್ಕಿದಂತೆಯೂ ಧಾರಕಾರವಾಗಿ ರಕ್ತ ಹರಿಯುತ್ತಿರುವಂತೆಯೂ ನಟಿಸಲಾಗಿ ಸ್ವಂತ ತಂಗಿಯಾದ ಸುಭದ್ರೆಯು "ಅಣ್ಣಾ ನಿನಗೆ ಮುಳ್ಳು ಹೊಕ್ಕಿತೇ? ನಿನ್ನ ರಕ್ತ ಹಾಳಾಗಬಾರದು" ಎಂಬ ಬಾಯಿ ಮಾತಿನ ಕನಿಕರದಿಂದ ಸುಮ್ಮನಾಗುತ್ತಾಳೆ, ಆದರೆ ಸಾಕು ತಂಗಿಯಾದ ದ್ರೌಪದಿಯು ಕ್ಷಣ ನಷ್ಟವಿಲ್ಲದೇ ತನ್ನ ಸೀರೆಯ ಸೆರಗನ್ನೇ ಹರಿದು "ಅಣ್ಣಾ ನಿನ್ನ ರಕ್ತ ಹಾಳಾಗಬಾರದು" ಎಂದು ಕಾರ್ಯತತ್ಪರಳಾಗಿ ರಕ್ತ ಸೋರುವುದನ್ನು ನಿಲ್ಲಿಸುತ್ತಾಳೆ. ಅವಳು ಸೇವೆಗೈಯ್ದದ್ದನ್ನು ಭಗವಂತನು ಬಹು ಉದಾರ ದೃಷ್ಟಿಯಿಂದ ವೀಕ್ಷಿಸಿ "ತಂಗೀ ನನಗೆ ಬೇಕಾದಾಗ ವಸ್ತ್ರವನ್ನು ನೀಡಿ ರಕ್ತದ ಸೋರುವಿಕೆಯಿಂದ ರಕ್ಷಿಸಿದ್ದೀಯ, ಅಂತೆಯೇ ನಿನಗೆ ಬೇಕಾದಾಗ ಎಷ್ಟು ಬೇಕೋ ಅಷ್ಟಲ್ಲ ಬೇಕಾದ್ದಕ್ಕಿಂತ ಹೆಚ್ಚಾಗಿ ವಸ್ತ್ರದಾನ ಮಾಡುವೆ" ಎಂಬ ಅಭಯವನ್ನೀಯುತ್ತಾನೆ. ಇದರ ಅರ್ಥವತ್ತಾದ ಮುಂದುವರಿಕೆಯೇ "ನೀಚ ದುರ್ಯೋಧನ ದುಶ್ಯಾಸನರಿಂದ ದ್ರೌಪದಿಯ ವಸ್ತ್ರಾಪಹರಣ ಹಾಗೂ ಶ್ರೀ ಕೃಷ್ಣನಿಂದ ಅಪಾರ ವಸ್ತ್ರ ದಾನದ ಪ್ರಸಂಗ". ಇದರಿಂದ ನಾವು ಗ್ರಹಿಸಬೇಕಾದ ಮಹತ್ವದ ಅಂಶವೆಂದರೆ "ಕೊಡು" ಮತ್ತು "ಪಡೆ". ನಾವುಗಳೆಕೋ ಕೊಡಲೇ ಒಲ್ಲೆವು. ವಿಧಿ ವಿಧಾತ, ದಾತ, ಬ್ರಹ್ಮ ದೈವ ಇತ್ಯಾದಿ ಹೆಸರುಗಳಿಂದ ಕರೆಯಿಸಿಕೊಳ್ಳುವ ಮೂಲ ಶಕ್ತಿಯು ನಿಯಮಾನುಸಾರ ಸೃಷ್ಠಿ, ಸ್ಥಿತಿ, ಲಯ ಕಾರ್ಯನಿರ್ವಹಿಸುತ್ತಾ ನಿಖರವಾದ ಲೆಕ್ಕವಿರಿಸಿ ಸಾಧಿಸುವುದದೆಲ್ಲವನು ನಿಲ್ಲದೇ ತಪ್ಪದೆ ಬಿಡದೆ. ಈ ಎಲ್ಲಾ ಚಟುವಟಿಕೆಗಳ ಮೂಲಕರ್ತೃವಿನ ಆಳ್ವಿಕೆ ಕಾಣದವನಾಳ್ಕೆಯೆನಿಸಿಕೊಂಡಿದೆ (Invisible Administrator). ಆದ್ದರಿಂದ, ಕಾಣಿಸಿಕೊಳ್ಳದಿದ್ದರೂ ಇದ್ದೇ ಇರುವ ಹಾಗೂ ದೈನಂದಿನ ಎಲ್ಲಾ ಚಟುವಟಿಕೆಗಳನ್ನು ಚಾಚೂ ತಪ್ಪದೇ ನಿರ್ವಹಿಸುತ್ತಿರುವ ಭಗವಂತನ ನಿರಂತರ ಇರುವಿಕೆ ಹಾಗೂ ಅವನ ಲೆಕ್ಕಾಚಾರದ ನಿಯಮಗಳನ್ನು ಅರಿತು ನಮ್ಮ ಬದುಕಿನ ಬಗೆಯನ್ನು ಬದಲಿಸಿಕೊಂಡು ಸರ್ವರೂ ಸಹೋದರರಂತೆ ಸಹಕಾರದಿಂದ ಬಾಳಿರೆನ್ನುವುದೇ ಈ ಮೇಲಿನ ಪದ್ಯದ ಸಾರವಾಗಿದೆ.

# "ದೈವಾತ್ಮಭಾವದಲಿ ಧನ್ಯಳಾದಳು ಶಬರಿ"

ಜಗತ್ತಿನ ಎಲ್ಲಾ ಧರ್ಮಗ್ರಂಥಗಳೂ ಸಹ ವ್ಯಕ್ತಿ ಜೀವನದ ಉತ್ಕೃಷ್ಟತೆಗೆ ತ್ಯಾಗ ಹಾಗೂ ದಾನ ಪ್ರಕ್ರಿಯೆಗಳನ್ನು ನಿರ್ದೇಶಿಸುವುದನ್ನು ಕಾಣುತ್ತೇವೆ. ಎಷ್ಟೆಲ್ಲ ಧರ್ಮಗ್ರಂಥಗಳ ನಿರ್ದೇಶನಗಳು, ಧರ್ಮಗುರುಗಳ ಪ್ರವಚನಗಳು ಎಡಬಿಡದೇ ಪುಸ್ತಕ ರೂಪದಲ್ಲಿ ಅಥವಾ ಪ್ರಭಾವಿ ಮಾಧ್ಯಮಗಳ ಮೂಲಕ ಬಿತ್ತರವಾಗುತ್ತಿದ್ದರೂ, ಅನುಪಯುಕ್ತವಾಗಿ ಕಾಲ ಸಾಗುತ್ತಿದೆಯೇ ಹೊರತು ಬಹುಪಾಲು ಮನುಜರ ಬದುಕು ಅಸಹನೀಯವಾಗಿದೆ. ವಿಶ್ವಪಿತನ ಮಕ್ಕಳುಗಳಾದ ನಾವೆಲ್ಲಾ ಸುಖ ಶಾಂತಿಗಳಿಂದಿರಬೇಕೆಂಬ ನಿಜ ಹಂಬಲವನ್ನು ತೊರೆದು ಈಗಿನ ಜನ್ಮಮಾತ್ರಕ್ಕಲ್ಲದೇ ಮುಂದಿನ ತಲೆಮಾರಿನವರಿಗೂ ಕೂಡಿಡಬೇಕೆಂಬ ಕೆಟ್ಟ ಹಂಬಲ ಮನದಾಳದಿಂದ ಮೂಡಿ ಸಮಾಜದ ಬದುಕು ಕ್ರೂರವಾಗುತ್ತಿದೆ. ವಿಜ್ಞಾನದ ಮುನ್ನಡೆ ಹಾಗೂ ತಂತ್ರಜ್ಞಾನದ ಅಭ್ಯುದಯಗಳಿಂದ ಮಾನವ ಇತರೇ ಗ್ರಹಗಳಿಗೆ ಹೋಗುವುದನ್ನು ಕಲಿತ, ಆದರೆ ತನ್ನ ಸಹವರ್ತಿಗಳಾದ ಮನುಜರೊಡನೆ ಸಹೋದರ ಭಾವವನ್ನು ಮಾತ್ರ ಮರೆತು "ಬೆದಕಾಟ ಬದುಕೆಲ್ಲ ಚಣಚಣವು ಹೊಸಹಸಿವು ಅದಕಾಗಿ ಇದಕಾಗಿ ಮತ್ತೊಂದಕ್ಕಾಗಿ" ಹಾತೊರೆಯುವ ಸ್ವಭಾವ ಬೆಳೆಸಿಕೊಂಡಿರುವುದನ್ನು ಕಂಡ ಡಿ.ವಿ.ಜಿ.ಯವರು ರಾಮಾಯಣಜನಿತ "ಶಬರಿ"ಯ ಮನೋವಿಸ್ತಾರ, ದೈವಾತ್ಮಭಾವ, ಸ್ವಾರ್ಥರಹಿತ ಬದುಕಿನ ಜೊತೆಗೆ ಇತರರ ಸಂತುಷ್ಟಿಯನ್ನು ವೀಕ್ಷಿಸುವ ಉದಾಹರಣೆ ಮೂಲಕ ನಮ್ಮ ಕಣ್ಣುಗಳನ್ನು ತೆರೆಸುವ ಪದ್ಯದ ಮಧುರತೆಯನ್ನು ಗಮನಿಸಿ. "ತನ್ನ ರುಚಿ ರಾಮರುಚಿ ತನ್ನ ಸಂತುಷ್ಟಿ ಪರಿ– ಪೂರ್ಣವಪ್ಪುದು ರಾಮ ಸಂತುಷ್ಟಿಯಿಂದೆ ಎನ್ನುವಾ ಸಾಜದಾ ದೈವಾತ್ಮಭಾವದಲಿ ಧನ್ಯಳಾದಳು ಶಬರಿ ಮಂಕುತಿಮ್ಮ" ಶಬರಿಯು ಶ್ರೀರಾಮ ಭಕ್ತೆ. ತನ್ನ ಇಳಿವಯಸ್ಸನ್ನು ಕಾಡಿನಲ್ಲಿ ಕಳೆಯುತ್ತಾ ರಾಮನು ತನ್ನ ವನವಾಸ ಪ್ರಯಾಣದಲ್ಲಿ ತಾನಿರುವ ದಾರಿಯಲ್ಲೇ ಬರಲಿ ಎಂದು ಪ್ರಾರ್ಥಿಸಿ, ಆತನಿಗೆ ರುಚಿರುಚಿಯಾದ ಹಣ್ಣುಗಳನ್ನು ತಾನು ಮೊದಲು ರುಚಿ ನೋಡಿ ಸಿದ್ಧಪಡಿಸಿ, ಕಾಯುತ್ತಿದ್ದವಳು. ಅವಳ ನಿರೀಕ್ಷೆಯಂತೆಯೇ ರಾಮಾಗಮನವಾಯಿತು. "Prayers are certainly an ever present help in times of crisis" ಎನ್ನುವ ಉಕ್ತಿಯಂತೆ ಶಬರಿಯ ನಿರೀಕ್ಷೆಯ ಮಾತ್ರದಿಂದಲೇ ರಾಮ ಪಥವು ಬದಲಾಗಿ ಶಬರಿಯೆಡೆಗೆ ಬಂದದ್ದು ಬಹುಮುಖ್ಯವಾಗಿ ಗಮನಿಸಬೇಕಾದ ಅಂಶ. ರಾಮನಿಗೆ ನೀಡಿದ ರುಚಿಯುಕ್ತ ಹಣ್ಣುಗಳನ್ನು ಸ್ವೀಕರಿಸಿದ ಅವತಾರ ಪುರುಷ ರಾಮನು ಸಂತೃಪ್ತವಾದನೆಂಬ ಕಥೆಯಿಂದ ನಾವು ಅರಿಯಬೇಕಾದ ಅಂಶ ಬಹುಮುಖ್ಯ. ಸಹಕಾರಿ ಸಂಸ್ಥೆಗಳು ಪ್ರಥಮತಃ ಜನ ಸೇವಾ ಸಂಸ್ಥೆಗಳು. ಸರ್ಕಾರದ ನೆರವಿನಿಂದ ಹೆಚ್ಚೆಚ್ಚು ಜನ ಸೇವೆಯಲ್ಲಿ ತೊಡಗಿಸಿಕೊಳ್ಳುವ ಸಂಸ್ಥೆಗಳು. ಇಂತಹ ಜನಸೇವಾ ಕೇಂದ್ರಗಳಲ್ಲಿ ಕಾರ್ಯತತ್ಪರಾಗಿರುವ ಜನ ನಾಯಕರು ಅಂದರೆ ಸಹಕಾರಿಗಳು, ನೌಕರರು ಹಾಗೂ ಅಧಿಕಾರಿಗಳು ಇಂತಹ ಉದಾಹರಣೆಯಿಂದ ಪ್ರೇರಿತರಾಗಿ ಸುಖೀ ಸಮಾಜದ ಸ್ಥಾಪನೆಗಾಗಿ ಹೆಚ್ಚಿನ ತ್ಯಾಗ ಬುದ್ಧಿಯನ್ನು ಬಳಸಿಕೊಳ್ಳಲೆಂಬುದೇ ಆಗಿದೆ. ಆದ್ದರಿಂದ, "Man gets and forgets" "God gives and forgives" ಎಂಬುದನ್ನರಿಯ ಬೇಕಾಗಿದೆ. ಪದ್ಯವನ್ನು ಆಳವಾಗಿ ಅವಲೋಕಿಸಿದಲ್ಲಿ ಸ್ವಜನಪಕ್ಷಪಾತ, ಭ್ರಷ್ಟಾಚಾರ, ಮತೀಯತೆಗೊಳಗಾಗಿರುವ ಇಂದಿನ ಕಾಲಘಟ್ಟದ ನಾಯಕರುಗಳ ಮನೋಚಿಂತನೆಯ ಮಜಲನ್ನು ಬದಲಿಸಿಕೊಳ್ಳಲು ನೀಡಿರುವ ನಿರ್ದೇಶನದಂತೆ ಕಂಡು ಬರುತ್ತದೆ. ತತ್ಕಾರಣ ಶಬರಿಯ ಉದಾಹರಣೆಯನ್ನು ಅನುಸರಿಸುತ್ತಾ ನಮ್ಮ ಶಕ್ತ್ಯಾನುಸಾರ ತ್ಯಾಗ ದಾನಗಳತ್ತ ಗಮನಹರಿಸೋಣ.

# "ಆತ್ಮೋದ್ಧಾರದ ದಾರಿ ಸಹಕಾರ"

ಆಗಿನ ಕಾಲದಲ್ಲೊಬ್ಬ ಸತ್ಯ ಹರಿಶ್ಚಂದ್ರ ಸತ್ಯವನ್ನಲ್ಲದೇ ಸುಳ್ಳನ್ನು ಹೇಳುವವನಲ್ಲ ಎಂಬ ಅಂಶವನ್ನು ಬ್ರಹ್ಮರ್ಷಿ ವಿಶ್ವಾಮಿತ್ರರೇ ಸ್ವತಃ ಒಪ್ಪಿಕೊಂಡ ಕಥೆ ನಮಗೆಲ್ಲಾ ನೆನಪಿನಲ್ಲಿದೆ. ಅದಕ್ಕೆ ತದ್ವಿರುದ್ಧವಾಗಿ ಆಗೊಬ್ಬ ಧೃತರಾಷ್ಟ್ರ ತನ್ನ ವ್ಯಾಮೋಹ ಈಡೇರಿಕೆಯ ತುತ್ತತುದಿಯಾಗಿ ತನ್ನ ಮಗ ದುರ್ಯೋಧನನ ಪ್ರೇರೇಪಣೆಯಂತೆ ಕುಲದ ಸೊಸೆಯಾದ ದ್ರೌಪದಿಯನ್ನೇ ವಿವಸ್ತ್ರಳಾಗಿಸಲು ಪ್ರಯತ್ನಿಸಿದ ಮೋಹಾಂಧಕಾರದ ವ್ಯಕ್ತಿಯೆಂಬುದೂ ತಿಳಿದಿದೆ. ಕಾಲವೇನೋ ಉರುಳುತ್ತಲೇ ಇದೆ. ಆದರೆ, ಮೇಲಿನಂತಹ ದೃಷ್ಟಾಂತಗಳಿಂದ ಮಾನವರಾದ ನಾವುಗಳು ಮಾತ್ರ ಪಾಠ ಕಲಿಯುತ್ತಿಲ್ಲ. ಭ್ರಷ್ಟಾಚಾರ, ಹಿಂಸೆ, ಸುಳ್ಳಿನ ಸರಮಾಲೆಯಲ್ಲೇ ಮುಂದುವರೆದಿದ್ದೇವೆ. ದಿನನಿತ್ಯದಲ್ಲಿ ಅಧರ್ಮದ ಪ್ರಪಾತದಲ್ಲಿ ಮುಳುಗುತ್ತಿದ್ದೇವೆ. ಅಧಿಕಾರ ಗದ್ದುಗೆಗಾಗಿ ಒದ್ದಾಡುವ ದಂಡು ದಂಡು ಜನಗಳು, ಚುನಾವಣೆಯಲ್ಲಿ ಸೋತರೂ ಮತ್ತೆ ಮತ್ತೆ ಚುನಾವಣೆ ಪ್ರಚಾರದಿಂದ ಪ್ರಸಿದ್ಧಿಯನ್ನು ಗಿಟ್ಟಿಸುತ್ತಾ, ಕೈಗೆಟುಕದ ಆಶ್ವಾಸನೆಗಳನ್ನು ನೀಡುತ್ತಾ, ಗೆದ್ದುಬಂದ ನಂತರ ಆಶ್ವಾಸನೆಗಳನೆಲ್ಲಾ ಮರೆತು, ತಮ್ಮ ಭರವಸೆಗಳಿಗೆ ತದ್ವಿರುದ್ಧವಾಗಿ, ತನ್ನ ಆಸ್ತಿಯನ್ನು ಮಾತ್ರ ಹೆಚ್ಚಿಸಿಕೊಳ್ಳುತ್ತಿರುವ ಆಡಳಿತಗಾರರನ್ನುದ್ದೇಶಿಸಿ ಬರೆಯಲಾಗಿದೆಯೋ ಎನ್ನಿಸುವ ಏಳುಬೀಳಿನ ಗದ್ದಲ ಪ್ರಸಿದ್ಧತೆಯ ಹಾಗೂ ಆತ್ಮಶೂನ್ಯೋದ್ಧಾರದ ವಿವರಣಾ ಪದ್ಯವನ್ನು ಗಮನಿಸಿ. "ಎದ್ದೆದ್ದು ಬೀಳುತಿಹೆ ಗುದ್ದಾಡಿ ಸೋಲುತಿಹೆ ಗದ್ದಲವ ತುಂಬಿ ಪ್ರಸಿದ್ಧನಾಗುತಿಹೆ ಉದ್ಧರಿಸುವೆನು ಜಗವನೆನ್ನುತಿಹ ಸಖನೆ ನಿನ್ನದ್ಧಾರವೆಷ್ಟಾಯು? ಮಂಕುತಿಮ್ಮ" ಬಿದ್ದು ಮತ್ತೆ ಎದ್ದು, ಪುನಃ ಬಿದ್ದರೂ ಸೋಲೊಪ್ಪಿಕೊಳ್ಳದೇ ಸೆಣಸಾಡುವಲ್ಲಿ ಅತಿಯಾದ ಗಲಾಟೆ ಗದ್ದಲಗಳಿಂದ ಕೂಡಿದ ಭಾರೀ ಪ್ರಚಾರ ಮಾಡಿ ಗೆಲುವು ಸಾಧಿಸಲು ಮತ್ತೆ ಪ್ರಯತ್ನಿಸುತ್ತಿರುವೆ. ಈ ದೊಂಬರಾಟದಲ್ಲಿ ಅದೆಷ್ಟೋ ಸುಳ್ಳು ಭರವಸೆಗಳನ್ನೂ ಸಹ ಕೊಡುತ್ತಿದ್ದೀಯ. ಇದಲ್ಲದೇ ಜಗತ್ತನ್ನು ಉದ್ಧರಿಸುವೆನು ಎಂದೂ ಸಹ ಬೊಗಳೆ ಹೊಡೆಯುತ್ತಿರುವ ನಿನ್ನ ಆತ್ಮೋದ್ಧಾರದ ಸಂಬಂಧ ಎಷ್ಟು ಪ್ರಗತಿ ಹೊಂದಿದ್ದೀಯಾ ಎಂಬುದನ್ನು ಚಿಂತಿಸು ಎಂದು ಎಚ್ಚರಿಸುತ್ತಾ ಆಧ್ಯಾತ್ಮಿಕತೆಯನ್ನು ಜೀವನದ ಪ್ರತಿ ಹೆಜ್ಜೆಯಲ್ಲೂ ತಂದುಕೊಳ್ಳಬೇಕಾದ ಅವಶ್ಯಕತೆಯನ್ನು ಈ ಪದ್ಯದಲ್ಲಿ ನೆನಪಿಸಿದ್ದಾರೆ. ನಮ್ಮ ಹಿಂದಿನ ಜನರ ಆಶೋತ್ತರಗಳೇ ಬೇರೆಯದ್ದು "ವಸುದೈವ ಕುಟುಂಬಕಂ" ಜಗತ್ತಿನ ಸದಸ್ಯರೆಲ್ಲರೂ ನಮ್ಮ ಬಂಧುಗಳೆಂಬ ಭಾವನೆಯಿಂದ ಬದುಕಿದವರವರು. ಅವರುಗಳು ಸದಾ ಸರ್ವದಾ ನಿತ್ಯನಿರಂತರ ಭಗವತ್ಪ್ರೇಮಿಗಳಾಗಿ ಸಮಾಜದ ಜನಸ್ನೇಹಿಗಳಾಗಿ ಬದುಕುತ್ತಿದ್ದವರು. ಇಂದಿನ ನಾವುಗಳಾದರೋ ನಿತ್ಯಜೀವನದಲ್ಲಿ ಗದ್ದಲ, ಗುದ್ದಾಟ, ಪ್ರಸಿದ್ಧಿಯ ಹಂಬಲದಲ್ಲಿ ತೊಡಗಿಸಿಕೊಂಡು, ಆತ್ಮೋದ್ಧಾರವನ್ನೇ ಮರೆತಿರುವುದರ ಬಗ್ಗೆ ಕವಿಯವರು ಸೂಚ್ಯವಾಗಿ ಆತ್ಮೋದ್ಧಾರದ ಹಾದಿಯಲ್ಲಿ ಪ್ರಗತಿಯನ್ನು ಸಾಧಿಸಿರೆಂದು ಕರೆಕೊಡುತ್ತಿದ್ದಾರೆ. ಆತ್ಮೋದ್ಧಾರ ಪಡೆಯುವುದೆಂದರೆ ತನ್ನನ್ನರಿಯುವುದು ಹಾಗೂ ತನ್ನನ್ನು ನಿರ್ಮಿಸಿದವನನ್ನು ಅರಿಯುವುದು. ಈ ಅಂಶಕ್ಕೆ ಸಂಬಂಧಿಸಿದಂತೆ ನಾನು ಯಾರು? ದೇವರೆಂದರೆ ಯಾರು? ದೇವರೆಲ್ಲಿದ್ದಾನೆ? ನಾನೆಲ್ಲಿಂದಿಲ್ಲಿಗೆ ಬಂದೆ? ಎಲ್ಲಿಗೆ ಹೋಗುತ್ತೇನೆ? ಸಾವೆಂದರೇನು? ಧರೆಯ ಬದುಕೇನು ಅದರ ಗುರಿಯೇನು ಎಂಬೆಲ್ಲಾ ಅಂಶಗಳನ್ನು ಸಾವಕಾಶವಾಗಿ ಅರಿಯುವುದರ ಜೊತೆಗೆ ಸಹಜೀವಿಗಳಿಗೆ ತೆರೆದ ಮನಸ್ಸಿನಿಂದ ನೆರವಿನ ಭಾವವನ್ನು ವೃದ್ಧಿಸಿಕೊಳ್ಳುವುದಾಗಿದೆ. ಕೆಲವೊಂದು ಪ್ರಸಂಗಗಳಲ್ಲಿ ಅವ್ಯವಹಾರ ದುರುಪಯೋಗಗಳಿದ್ದರೂ ಸಹ ಕಲಿಯುಗದ ಕಾಮಧೇನು ಕಲ್ಪವೃಕ್ಷ ಎನಿಸಿಕೊಂಡಿರುವ "ಸಹಕಾರ" ತತ್ವದಲ್ಲಿ ಸರ್ವರ ಒಳಿತು ಅಡಗಿದೆ, ತಳಹಂತದವರನ್ನು ಮೇಲೆತ್ತುವ, ಅಬಲರಿಗೆ ಸಬಲತೆಯನ್ನು ನೀಡುವ ಕ್ಷೇತ್ರದಲ್ಲಿ ತೊಡಗಿಸಿಕೊಂಡು ನಂಬಿದವರಿಗೆ ಉಪದ್ರವಿಯಾಗದೇ ಉಪಕಾರ ಮಾಡುತ್ತಾ ತಮ್ಮ ಆತ್ಮೋದ್ಧಾರ ಮಾಡಿಕೊಳ್ಳಿರೆಂಬುದು ಕವಿಯ ಆಶಯವಾಗಿದೆಯೆನಿಸುತ್ತಿದೆ.

# "ತಿಂದ ನಿನ್ನನ್ನ ಋಣ ತೀರುತಲೆ ಪಯಣ"

"ಜಾತಸ್ಯ ಮರಣಂ ಧೃವಂ" ಎನ್ನುವ ಸರ್ವವ್ಯಾಪಕ ಲೋಕೋಕ್ತಿಯು ಹುಟ್ಟನ್ನು ಪಡೆದ ಪ್ರತಿ ಜೀವಿಗೂ, ವಸ್ತುವಿಗೂ ನಾಶವಿದ್ದೇ ಇದೆಯೆಂಬ ಕಠೋರ ಸತ್ಯವನ್ನು ಸಾರುತ್ತದೆ. ಇಂತಹ ಸಾವು ಅಥವಾ ನಾಶ ವಿಧಿಯಿಂದ ಪೂರ್ವ ನಿಶ್ಚಿತವಾಗಿರುತ್ತದೆಯೇ ಹೊರತು ತನ್‌ತಾನೇ ವ್ಯಕ್ತಿ ಬಯಸಿದಾಗ ನಿಗದಿಯಾದ ಕ್ಷಣಕ್ಕಿಂತ ಮೊದಲಾಗಲೀ, ಬಹುಕಾಲದ ನಂತರವಾಗಲೀ ಮರಣ ಹೊಂದುವ ಅವಕಾಶವಿರುವುದಿಲ್ಲ ಎಂಬುದು ಸತ್ಯಾಂಶ. ಈ ಅಂಶವನ್ನೇ ಹೋಲುವ ಘಟನೆ ನನ್ನ ಜೀವನದಲ್ಲಿ ನಡೆದಿದ್ದು, ಈ ಕೆಳಗಿನಂತಿದೆ : ಇತ್ತೀಚಿಗೆ ಒಂದು ದಿನ ಕಛೇರಿಯಿಂದ ಬೇಗ ಬಂದ ನಾನು ಸಾಯಂಕಾಲದ ಕಾಫಿಯನ್ನು ಮುಗಿಸಿ, ಐದು ನಿಮಿಷ ವಾಕಿಂಗ್ ಹೋಗಿ ವಾಪಾಸ್ಸು ಬರುತ್ತಿದ್ದಾಗ, ಅಲ್ಲೇ ಇದ್ದ ತೆಂಗಿನ ಮರದಿಂದ ಒಂದು ತೆಂಗಿನಕಾಯಿ ದೊಪ್ಪನೆ ಬಿದ್ದಿದ್ದು ಎಷ್ಟು ಸಮೀಪಕ್ಕೆಂದರೆ ಇನ್ನೇನು ಸ್ವಲ್ಪದರಲ್ಲಿ ನನ್ನ ತಲೆಯ ಮೇಲೆಯೇ ಬೀಳಬೇಕಾದದ್ದು ತಪ್ಪಿ ಕಿರು ಅಂತರದಲ್ಲಿ ಬಿದ್ದು ನನ್ನನ್ನು ಪ್ರಾಣಾಪಾಯದಿಂದ ಪಾರು ಮಾಡಿತ್ತು. ಇನ್ನೂ ಸ್ವಲ್ಪ ಕಾಲದ ಜೀವಿತಾವಧಿಯಿರುವ ಕಾರಣ ಪಾರಾಗಿದ್ದೆ ಎನಿಸುತ್ತದೆ. ನನ್ನ ಸಮೀಪದ ಸಂಬಂಧಿಯೊಬ್ಬರು ಈಗ್ಗೆ 3 ವರ್ಷಗಳ ಹಿಂದೆ ತೀವ್ರ ಅಸ್ವಸ್ಥರಾಗಿದ್ದು, ಇನ್ನೇನು ಉಳಿಯುವುದಿಲ್ಲವೆಂಬ ಸುದ್ಧಿಯನ್ನು ಅದೇ ಊರಿನ ನನ್ನ ಪರಿಚಿತರ ಮೂಲಕ ಸುದ್ಧಿ ಪಡೆದಿದ್ದೆ. ಈ ಮಧ್ಯದ ಸುದೀರ್ಘ ಅವಧಿಯ ನಂತರ ನಾನು ಕಡೂರಿಗೆ ರೈಲಿನಲ್ಲಿ ಪಯಣಿಸುವ ಬಗ್ಗೆ ದೂರವಾಣಿ ಮೂಲಕ ಮಾಹಿತಿ ನೀಡಿ ತೀವ್ರ ಅಸ್ವಸ್ಥರಾಗಿದ್ದ ವ್ಯಕ್ತಿಗೆ ಮಾತನಾಡಿದಾಗ, ಅವರ ಬಾಯಿಂದ ಬಂದ ಮಾತೆಂದರೆ, "ನೀವು ರೈಲ್ವೇ ಸ್ಟೇಷನ್‌ಗೆ ಬನ್ನಿ. ನಾನು ಬೈಕಿನಲ್ಲಿ ಬಂದು ನಿಮ್ಮನ್ನು ಸ್ಟೇಷನ್‌ನಿಂದ ಮನೆಗೆ ಬೈಕಿನಲ್ಲಿ ಕೊಂಡೊಯ್ಯುತ್ತೇನೆ" ಎಂದಾಗ ನನಗೆ ಸಖೇದಾಶ್ಚರ್ಯವಾಯಿತು. ನಿಜಕ್ಕೂ ಕಡೂರಿಗೆ ಹೋದಾಗ ಅದೇ ವ್ಯಕ್ತಿ ಬೈಕಿನಲ್ಲಿ ಬಂದು ನನ್ನನ್ನು ಅವರ ಮನೆಗೆ ಕೊಂಡೊಯ್ದಾಗ ಅವರ ದೇಹಸ್ಥಿತಿ ಮೊದಲಿನಂತೆಯೇ ಸುಧಾರಿತಗೊಂಡು ದೈನಂದಿನ ಎಲ್ಲಾ ಚಟುವಟಿಕೆಗಳನ್ನು ಉತ್ತಮವಾಗಿ ನಿರ್ವಹಿಸುತ್ತಿದ್ದರು. ತೆಂಗಿನಕಾಯಿ ಬೀಳುವಿಕೆಯಿಂದ ಪಾರಾದ ನನ್ನ ಹಾಗೂ ತೀವ್ರ ಅಸ್ವಸ್ಥರಾಗಿದ್ದ ನನ್ನ ಬಂಧುಗಳ ಆರೋಗ್ಯ ಚೇತರಿಕೆಯ ಅಂಶವು ಈ ಕೆಳಗಿನ ಪದ್ಯದ ನೆನಪನ್ನು ಕೊಟ್ಟಿತು. "ಒಂದಗಳು ಹೆಚ್ಚಿರದು ಒಂದಗಳು ಕೊರೆಯಿರದು ತಿಂದು

ನಿನ್ನನ್ನ ಋಣ ತೀರುತಲೆ ಪಯಣ ಹಿಂದಾಗದೊಂದು ಚಣ ಮುಂದಕುಂ ಕಾದಿರದು ಸಂದ ಲೆಕ್ಕವದೆಲ್ಲ ಮಂಕುತಿಮ್ಮ" ಶ್ರೀ ಮದ್ಭಾಗವತವನ್ನು ಅಭ್ಯಸಿಸಿದ ನನಗೆ ಒಂದು ಘಟನೆ ನಮ್ಮೆಲ್ಲರ ಕಣ್ಮನಗಳನ್ನು ತೆರೆಸುವಂತಾದ್ದು ಗಮನಕ್ಕೆ ಬಂತು. ಪಾಂಡುವಂಶದ ರಾಜ ಪರೀಕ್ಷಿತ ಮಹಾರಾಜನು ಸದ್ಭಕ್ತನೂ, ಧರ್ಮಾತ್ಮನೂ, ಪುಣ್ಯಶೀಲನೂ ಆಗಿದ್ದು, ಆಕಸ್ಮಿಕವಾಗಿ ಘಟಿಸಿದ ಒಂದು ತಪ್ಪಿನಿಂದಾಗಿ ಶಮಿಕ ಮುನಿಯ ಮಗ ಭೃಂಗಯಿಂದ ಶಾಪಕ್ಕೆ ತುತ್ತಾಗಿ ಪಕ್ಷಿ ಸರ್ಪವೊಂದರ ಕಡಿತದಿಂದಾಗಿ ಏಳು ದಿವಸಗಳೊಳಗಾಗಿ ಮರಣ ಸಂಭವಿಸುತ್ತದೆಂಬ ಪೂರ್ವಸೂಚನೆ ಪಡೆಯುವಷ್ಟು ಭಾಗ್ಯಶಾಲಿಯಾಗುತ್ತಾನೆ. ಅವನು ಬ್ರಾಹ್ಮಣನ ಶಾಪವನ್ನು ಅವಿವೇಕತನದ್ದಾದರೂ, ಅನುಗ್ರಹವೆಂದೇ ಭಾವಿಸಿಕೊಂಡನು ಹಾಗೂ ಮರಣವನ್ನು ನಗುನಗುತ್ತಾ ಯೋಗ್ಯ ರೀತಿಯಲ್ಲಿ ಎದುರಿಸಲು ಸ್ವಯಂ ಸಿದ್ಧತೆ ಮಾಡಿಕೊಂಡನು. ಸಾವಿನ ಆಗಮನದ ಸುದ್ಧಿ ದೊರೆತೊಡನೆ ಅತಿ ಸಂತೋಷದಿಂದ ಮುಂದಿನ ತನ್ನ ಬದುಕನ್ನು ಗಂಗಾನದಿಯ ತಟದಲ್ಲಿ ಶುಕಮುನಿಗಳಿಂದ ಭಗವದ್ಗೀತೆ ಹಾಗೂ ಭಾಗವತಾದ್ಯಾಯನಗಳಿಗೆ ತನ್ನ ಜೀವನದ ಅತ್ಯಲ್ಪ ಶೇಷಾವಧಿಯನ್ನು ಮೀಸಲಿರಿಸುತ್ತಾನೆ. ಇಂದಿನ ನಾವುಗಳಾಗಿದ್ದರೆ ಸಾವಿನ ದಿನಾಂಕ ಪ್ರಕಟಗೊಳ್ಳುತ್ತಿದ್ದಂತೆ ಹೊರ ದೇಶದ ಪ್ರಸಿದ್ಧ ಆಸ್ಪತ್ರೆಗಳಿಗೆ ಹೋಗಿ ಜೀವ ಉಳಿಸಿಕೊಳ್ಳಲು ಚಿಕಿತ್ಸಾ ಕ್ರಮಕ್ಕೆ ಶತಾಯಗತಾಯ ಪ್ರಯತ್ನಿಸುತ್ತಿದ್ದೆವು. ತತ್ಕಾರಣ ಜೀವಿತದ ಕ್ಷಣಬಂಗುರತೆಯನ್ನು ಅರಿತು ಭಗವದ್ಧಾಮಕ್ಕೆ ತೆರಳುವ ಪೂರ್ವ ನಮ್ಮ ಬದುಕಿನ ಗುಣಮಟ್ಟವನ್ನು ಸುಧಾರಿಸಿಕೊಳ್ಳಬೇಕಾದ್ದು ನಮ್ಮೆಲ್ಲರ ಕರ್ತವ್ಯ. "ನಿನಗಾಗಿ ಬದುಕಿದ್ದಲ್ಲಿ ಅಂತಹ ಬದುಕು ನಿನ್ನೊಂದಿಗೆ ಅಂತ್ಯ ಹಾಗೂ ಇತರರಿಗಾಗಿ ಬದುಕಿದಲ್ಲಿ ಕಾಲಕಾಲಕ್ಕೂ ನಿನ್ನ ಹೆಸರು ನಿಲ್ಲುತ್ತದೆ" ಎಂಬುದನ್ನರಿತು ಸರ್ವಾತ್ಮಗಳ ಸೇವಾ ಕ್ಷೇತ್ರವಾದ "ಸಹಕಾರ"ವನ್ನು ನಿನ್ನ ಜೀವಿತದಲ್ಲಿ ತಂದುಕೋ ಹಾಗೂ ಸ್ವಾರ್ಥಯುತ ಬದುಕನ್ನು ಬಿಟ್ಟು ಸರ್ವರಿಗಾಗಿ ಬದುಕಲು ಕಲಿ ಎಂಬುದೇ ಈ ಪದ್ಯದ ಸಾರಾಂಶ.

# "ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ" ಕಗ್ಗ ಪದ್ಯಗಳಲ್ಲಿ ಸಹಕಾರ ಸಾರ – 24 ತುಳಿದು ಬದುಕುವುದಕ್ಕಿಂತ ತಿಳಿದು ಬದುಕು

ವೈಜ್ಞಾನಿಕವಾಗಿ ಮೇರುಪರ್ವತದಂತೆ ಬೆಳೆದಿರುವವನಾದರೂ ಮಾನವತೆರಹಿತ ಹಾಗೂ ದೈವತ್ವರಹಿತರಾದ ಇಂದಿನ ನಮ್ಮಗಳಿಗೆ ನುಡಿದಂತೆ ನಡೆದು ಜೀವನ ನಿರ್ವಹಿಸಿದ ಡಿ.ವಿ.ಜಿ.ಯವರು ಅತ್ಯಂತ ಸಮಯೋಚಿತವಾದ ಹಾಗೂ ಅತ್ಯವಶ್ಯಕವಾದ ಉದಾಹರಣೆಗಳ ಮೂಲಕ ಅಂತರಂಗ ಪರಿವರ್ತನೆ ಕೋರಿ ಬರೆದಿರುವ ಈ ಪದ್ಯ ಬಹುಜನಪ್ರಿಯವಾದುದ್ದಾಗಿದೆ. ಎಲ್ಲರ ನಾಲಗೆಯ ಮೇಲೂ ನರ್ತಿಸುವ ಪದ್ಯವಾಗಿ ಪರಿವರ್ತಿತವಾಗಿದೆ. ಮಲ್ಲಿಗೆ ಹೂವಿನಷ್ಟೇ ಸೊಗಸಿನ ಪದ್ಯವಿದಾಗಿದೆ. ಇಂದಿನ ಜನರ ಮೂಲ ಸ್ವಭಾವವೇ "ಕಂಡದ್ದನೆಲ್ಲಾ ಅನ್ಯಾಯವಾಗಿಯಾಗಲೀ, ಭ್ರಷ್ಟಾಚಾರದ ಮೂಲಕವಾಗಲೀ ತನ್ನದಾಗಿಸಿಕೊಂಡು ಬೀಗುವಂತಹ ಮನೋಭಾವದವರಾಗಿರುವುದನ್ನು ಕಂಡು ಅಂತಹ ಮನಸ್ಥಿತಿಯನ್ನು ಬದಲಾಯಿಸಿಕೊಳ್ಳಲು ಕರೆ ಕೊಡುತ್ತಿದ್ದಾರೆ. ಪ್ರಜಾಪ್ರತಿನಿಧಿಗಳಾದ ಎಲ್ಲಾ ಶಾಸಕರು, ಸಂಸದರು, ಮಂತ್ರಿಗಳು ಹಾಗೂ ಆಡಳಿತದ ಹೊಣೆ ಹೊತ್ತ ಅಧಿ

**ಕಾರಿಗಳು ಓದಿ ಜೀರ್ಣಿಸಿಕೊಳ್ಳಬೇಕಾದ ಪದ್ಯವಿದಾಗಿದೆ.**

**"ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು,**
**ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ,**
**ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ ಎಲ್ಲರೊಳಗೊಂದಾಗು–ಮಂಕುತಿಮ್ಮ"**

ನಾವುಗಳು ಬದುಕುವ ಸ್ವಾರ್ಥಪರ ರೀತಿ, ಸ್ವಜನ ಪಕ್ಷಪಾತ, ಭ್ರಷ್ಟಾಚಾರಗಳನ್ನು ಬಿಡಿರೆಂದು, ಬದಲಾಗಿ ಹೇಗೆ ನಡೆದುಕೊಂಡರೆ ಚೆನ್ನ ಎನ್ನುವ ಬಗ್ಗೆ ಬೆಟ್ಟದ ಬುಡದಲ್ಲಿರುವ ಹುಲ್ಲಿನಂತಿರು, ಒಂದೊಮ್ಮೆ ಬೆಟ್ಟದ ತುದಿಯಿಂದ ಯಾರಾದರೂ ಜಾರಿ ಬಿದ್ದರೂ, ಪೆಟ್ಟು ಬೀಳದಂತೆ ತಡೆದು ಸುಖವಾಗಿರಿಸು. ಹಾಗೇ ಬೆಳೆದ ಹುಲ್ಲು ಹಸು–ಕರುಗಳ ಆಹಾರವಾಗಿ ಅವುಗಳು ತೃಪ್ತಿ ಪಡೆಯಲಿ – ಸಾರ್ವಜನಿಕ ಸೇವೆಯೆಂಬ ಸೋಗಿನಿಂದ ಕೇವಲ ಹೊರಗಿನವರ ಸಂಪರ್ಕಗಳಲ್ಲಿಯೇ ಕಾಲ ಕಳೆಯುವ ಬದಲು, ನಿನ್ನ ಮನೆಯವರಿಗೂ ನೀನು ಬೇಕಾದವನಾಗು. "ಮನೆಗೆ ಮಲ್ಲಿಗೆಯಾಗು" ಸುಗಂಧವನ್ನು ಬೀರುವ ಮಲ್ಲಿಗೆಯಷ್ಟು ಅಪ್ಯಾಯಮಾನವಾಗು. ವೈಯಕ್ತಿಕವಾದ ಜೀವನದಲ್ಲಿ ಕಷ್ಟಗಳ ಸಾಲು ಸಾಲೇ ಬಂದರೂ ಸೃಷ್ಟಿ ಸ್ಥಿತಿ ಲಯ ಕರ್ತನಾದ ದೇವರನ್ನು "ಕ್ಷಮಿಸಿ ಕಾಪಾಡು, ಹರಸಿ ಹಾರೈಸಿ, ಮನ್ನಿಸಿ, ಮುನ್ನಡೆಸಿ" ಎಂದು ಬೇಡುತ್ತಾ ಕಷ್ಟದ ದಿನಗಳನ್ನು ಕರಗಿಸಿ, ಸಂತೋಷದಾಯಕವಾದಂತಹ ಐಸ್ ಕ್ರೀಂ ಆಗಿ ಎಂದಿದ್ದಾರೆ. ಸೂರಿಲ್ಲದವರ, ರಕ್ಷಕರಿಲ್ಲದ ದೀನದುರ್ಬಲರಿಗೆ ಹಿತವನ್ನೇ ಬಯಸುವ ರಕ್ಷಣೆಯನ್ನು ನೀಡಬಲ್ಲ ಸಿಹಿಯಾದ ಬೆಲ್ಲ ಸಕ್ಕರೆಯಾಗೆಂದು ಕರೆ ಕೊಟ್ಟಿರುತ್ತಾರೆ. ತುಳಿದು ಬದುಕುವುದಕ್ಕಿಂತ ತಿಳಿದು ಬದುಕು ತುಳಿದು ಬದುಕಿದವರು ಬಹುಬೇಗ ಅಳಿದಿದ್ದಾರೆ ತಿಳಿ ತಿಳಿದು ಬದುಕಿದವರು ಅಳಿದ ಮೇಲೂ ಸ್ಮೃತಿಯಲ್ಲಿ ಉಳಿದಿರುತ್ತಾರೆ ತಿಳಿದವರು ಹೇಳಿದ ಅಚ್ಚಳಿಯದ ನಿಚ್ಚಳ ಸತ್ಯವೆಂದಿರುತ್ತಾರೆ. ಸಹಕಾರ ಕ್ಷೇತ್ರ ಸರ್ವರ ಬದುಕಿಗೆ ಸುವರ್ಣ ಸೇತುವೆ. ಈ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸುತ್ತಿರುವವರು ಈ ಪದ್ಯವನ್ನು ಓದಿ ಪ್ರೇರಿತರಾಗಿ ಕಾರ್ಯನಿರತನಾದಲ್ಲಿ ಸರ್ವರ ಅಭ್ಯುದಯ ಖಡಾಖಂಡಿತ ಎಂಬುದೇ ಈ ಪದ್ಯದ ಆಂತರ್ಯದ ಅಳಲು.

# "ರಾತ್ರಿ ಮೂರಾಯ್ತು ಹೊರಡೆನೆ ತೆರಳಿದೊಡೆ, ಪಾರುಪತ್ಯದವನು ಮೆಚ್ಚುವನು"

ಅಖಂಡ ವಿಶ್ವದ ಅನಿಯಂತ್ರಿತ ಹಾಗೂ ಸರ್ವತಂತ್ರ ಸ್ವತಂತ್ರ ಕರ್ತನಾದ ಭಗವಂತನು ತನ್ನ ಪ್ರಿಯ ಆಟಿಕೆಗಳಾದ ಮಾನವರುಗಳನ್ನು ಸೇರ್ಪಡೆ ಮಾಡುವ ಇಲ್ಲವೇ ಬೇರ್ಪಡೆ ಮಾಡುವ ಪರಮಾಧಿಕಾರಿವನ್ನು ತನ್ನ ಸುಪರ್ದಿನಲ್ಲಿರಿಸಿಕೊಂಡಿದ್ದಾನೆ ಹಾಗೂ ಜನನ ಮರಣಗಳು ಅನುಕ್ರಮವಾಗಿ ಸೇರ್ಪಡೆ ಹಾಗೂ ಬೇರ್ಪಡೆಗಳಾಗಿ ಒದಗಿಬರುತ್ತವೆಯೆಂದು ವೇದೋಕ್ತ ಗ್ರಂಥಗಳು ಉವಾಚಿಸುತ್ತವೆ. ಐಹಿಕ ಹಾಗೂ ಆಧ್ಯಾತ್ಮಿಕ ಜೀವಿಗಳಾಗಿದ್ದ ಡಿ.ವಿ.ಜಿ.ಯವರು ಬರೆದಿರುವ ಈ ಕೆಳಗಿನ ಪದ್ಯವು ಮಾನವನ ಜೀವನವನ್ನು ಒಂದು ಯಾತ್ರೆಯೆಂದು, ನಾವುಗಳು ಯಾತ್ರಿಕರೆಂದೂ ಈ ಜಗತ್ತೇ ಒಂದು ವಿಶಾಲ ಯಾತ್ರಾ ಸ್ಥಳವೆಂದು ವಿವರಿಸುತ್ತಾ, ಇಲ್ಲಿಗೆ ಬಂದವರು ಹೆಚ್ಚು ಕಾಲವಿರಲು ಸಾಧ್ಯವಿಲ್ಲವೆಂದು, ನಿಗದಿಪಡಿಸಿದ ಅವಧಿ ಮುಗಿದೊಡನೆ ಜಗದ ತ್ಯಾಗ ಮಾಡಬೇಕೆಂದು ಹಾಗೂ ಮಾಡಿದರೆ ಸರ್ವಶಕ್ತ ಭಗವಂತನಿಗೆ ಸಂತಸವಾಗುತ್ತದೆಂದು ವಿವರಿಸುತ್ತಾ ಹಾಗೆ ಮಾಡದಿದ್ದರೆ, ಬಲವಂತವಾಗಿ ಕಿತ್ತೆಸೆಯುತ್ತಾನೆಂಬ ಅಂಶವನ್ನು ಬಹು ಆಕರ್ಷಕವಾಗಿ ಕಣ್ಮುಂದೆ ತಂದಿದ್ದಾರೆ. ಪದ್ಯದ ಓಟ ಹೀಗಿದೆ : "ಯಾತ್ರಿಕರು ನಾವು ದಿವ್ಯಕ್ಷೇತ್ರವೀ ಲೋಕ, ಸತ್ರದಲಿ, ನೇಮದಿಂದಿರಲಿಕೆಡೆಯುಂಟು, ರಾತ್ರಿ ಮೂರಾಯ್ತು ಹೊರಡೆನೆ ತೆರಳಿದೊಡೆ, ಪಾರು ಪತ್ಯದವನು ಮೆಚ್ಚುವನು–ಮಂಕುತಿಮ್ಮ" ಇದೊಂದು ಸಾರ್ಥಕ ಬದುಕಿನ ಪರಿಕಲ್ಪನೆ. ಇಲ್ಲಿ ಬಳಕೆಯಾಗಿರುವ ಯಾತ್ರೆ, ಯಾತ್ರಾಸ್ಥಳ ಹಾಗೂ ನಿರ್ಧರಿತ ಸಮಯಕ್ಕೆ ಜಗದ ತ್ಯಾಗ ಮಾಡುವ ಅಂಶ ಪಾರುಪತ್ಯದವನಿಗೆ ಮೆಚ್ಚುಗೆ ತರುತ್ತದೆಂಬ ಉಪಮೆ ಅನುಪಮವಾಗಿದೆ. ಮಗುವಿನಿಂದ ಹಿರಿಯರೆನಿಸಿಕೊಂಡವರಿಗೆಲ್ಲಾ ಪ್ರವಾಸ ಹೋಗುವುದೆಂದರೆ ಸಂತಸ ತರುವ ವಿಷಯವೇ. ಹೋದವರು ಸ್ವಂತ ಊರಿಗೆ ಹಿಂತಿರುಗಬೇಕಾದಾಗ, ಹೋಗಿರುವ ಸ್ಥಳವನ್ನು ತ್ಯಜಿಸಿ, ಸ್ವಸ್ಥಾನಕ್ಕೆ ಬರಲೇಬೇಕೆಂಬುದು ಕಠೋರನಿಯಮ. 'ಜಾತಸ್ಯ ಮರಣಂ ಧೃವಂ' ಎಂಬ ಲೋಕೋಕ್ತಿ ಆತ್ಮ ಅಮರನಾದರೂ ದೇಹನಾಶಕ್ಕೊಳಪಡತಕ್ಕದೆಂಬ ಅಂಶವನ್ನು ಬಿತ್ತರಿಸುತ್ತದೆ. ಲೌಕಿಕದ ಪ್ರವಾಸಕ್ಕಿಂತಲೂ ತೀರ್ಥಯಾತ್ರೆಯೆಂದರೆ, ಬದಲಾದ ಸ್ಥಳದ ದರ್ಶನವಲ್ಲದೇ, ದೈವದರ್ಶನ, ಪ್ರಸಾದ ಸ್ವೀಕಾರ, ನೂತನ ದೃಶ್ಯಾವಳಿಗಳ ಅವಲೋಕನಗಳಿರುವುದರಿಂದ ನಮ್ಮಗಳ ಪಾಪಪುಣ್ಯಗಳು ಕರಗಿ ಪುಣ್ಯದ ಖಾತೆ ತೆರೆಯುತ್ತದೆಂಬ ಗ್ರಹಿಕೆಯಿರುತ್ತದೆ. ನಮ್ಮಲ್ಲಿ ಬಹಳಷ್ಟು ಜನರು ಉಡುಪಿ, ಹೊರನಾಡು, ಧರ್ಮಸ್ಥಳ, ಸುಬ್ರಹ್ಮಣ್ಯ, ಶೃಂಗೇರಿ, ತಿರುಪತಿ, ನಂಜನಗೂಡು, ಮೈಸೂರು, ಬಾದಾಮಿ, ಸವದತ್ತಿ, ಕೊಲ್ಲೂರು ಇತ್ಯಾದಿ ಪುಣ್ಯಕ್ಷೇತ್ರಗಳಿಗೆ ಭೇಟಿ ನೀಡಿದ ಅನುಭವವಿರುತ್ತದೆ. ಅಲ್ಲಿಗೆ ಹೋದಾಗ ಇರಲು ಅವಕಾಶ ನೀಡುವ ಅವಧಿ ಎರಡು ಅಥವಾ ಮೂರುದಿನ ಹಾಗೂ ಅಲ್ಲಿರುವಾಗ ನಿಯಮ, ಸದಾಚಾರಗಳಿಂದಿರಬೇಕೆಂಬ ನಿಯಮವಿರುವ ಅಂಶ ಎಲ್ಲರಿಗೂ ವೇದ್ಯ. ಈ ನಿಯಮವನ್ನು ಪಾಲಿಸಿದರೆ ಆ ಕ್ಷೇತ್ರದ ಪಾರುಪತ್ಯದಾರರಿಗೆ ಅಂದರೆ ಮೇಲ್ವಿಚಾರಕರಿಗೆ ಸಂತಸ ಹಾಗೂ ಮೆಚ್ಚುಗೆಯಾಗುತ್ತದೆ. ವಿಧಿಸಿದ ನಿಯಮವನ್ನು ಪಾಲಿಸದಿದ್ದಲ್ಲಿ, ಬಲತ್ಕಾರವಾಗಿ ಹೊರಹಾಕುವ ವ್ಯವಸ್ಥೆ ಜಾರಿಯಲ್ಲಿದೆಯೆಂಬ ಅಂಶವೂ ತಿಳಿದಿದೆ. ಪಾರಮಾರ್ಥಿಕ ಜೀವಿಯಾದ ಡಿ.ವಿ.ಜಿ.ಯವರು ನಮ್ಮ ಬದುಕನ್ನು ಯಾತ್ರೆಗೆ ಹೋಲಿಸಿ, ಈ ಜೀವನದ ಅವಧಿಯಲ್ಲಿ ನೇಮ ಧರ್ಮಾಚರಣೆ, ಭಗವಂತ್ಪಜ್ಞೆಗಳಿಂದೊಡಗೂಡಿ ಬದುಕ ಸಾಗಿಸಿ, ಕಾಲನ ಕರೆ ಬಂದಾಗ ನಗುನಗುತ್ತಾ, ಜಗದ ತ್ಯಾಗ ಮಾಡಿರೆಂಬುದೇ ಹೊರತು ಅಳುತ್ತಾ, ದುಃಖಿಸುತ್ತಾ ಅರ್ಜಿಸಿದ ಹಣವನ್ನು ಹಾಗೂ ಪಡೆದ ಬಂಧುಗಳನ್ನು ತೊರೆಯಲಳಬೇಡಿರೆಂಬುದಾಗಿದೆ. ತತ್ಕಾರಣ ಸರ್ವರ ಪ್ರಿಯಕ್ಷೇತ್ರದ ಸಹಕಾರವನ್ನು ಬದುಕಿನಲ್ಲಿ ಅಳವಡಿಸಿಕೊಂಡು ಅರ್ಹರಿಗೆ ಸ್ವಲ್ಪವಾದರೂ ನನಗೇನು ಬಂತು, ನನಗೇನು ಸಿಕ್ಕಿತು, ದಕ್ಕಿತು ಎನ್ನುವುದನ್ನು ಬಿಟ್ಟು ಲೋಕಕಲ್ಯಾಣಾರ್ಥ ದೀನದುರ್ಬಲರಿಗೆ ನೆರವನ್ನು ನೀಡಿರೆಂಬುದೇ ಈ ಪದ್ಯದ ಸಾರಾಂಶವಾಗಿದೆ.

# "ತಂದೆ ಬಗೆಯಿಂ ಬಗೆದು ಶಾಸನೋಗ್ರವನಿನಿತು ಕುಂದಿಸಲಿಕಾಗದೇಂ"

ಎಲ್ಲೆಲ್ಲಿ ಜನರು ಬಹು ಸಂಖ್ಯೆಯಲ್ಲಿ ಸೇರಿರುವರೋ ಅಲ್ಲಿ ಕೇಳಿ ಬರುವ ಮಾತೆಂದರೆ, "ಹಿಂದಿನ ನಮ್ಮ ಕಾಲ ನ್ಯಾಯಯುತವಾಗಿತ್ತು. ಇಂದು ಎಲ್ಲೆಡೆ ಅನ್ಯಾಯ, ಭ್ರಷ್ಟಾಚಾರ, ಅನಾಚಾರಗಳು ತಲೆ ಎತ್ತಿ ಕೇಕೆ ಹಾಕುತ್ತಿವೆ" ಎಂಬುದಾಗಿದೆ. ಇಂತಹ ವಿಮರ್ಶೆ ಮಾಡುವ ಜನರೂ ಪ್ರಸಕ್ತದ ದಿವಸಗಳಲ್ಲಿ ಅನ್ಯಾಯವೆಸಗುತ್ತಿರುವವರೇ ಆಗಿರುತ್ತಾರೆ. ಇದಕ್ಕೆಲ್ಲ ಕೊನೆ ನೀಡಿ ಸತ್ಯಸಂಧತೆ, ನ್ಯಾಯಬದ್ಧತೆ ಬಾಳಿನಲ್ಲಿ ಹಾಸುಹೊಕ್ಕಾಗಿ ಬರಬೇಕಾದರೆ ಸರ್ವರೂ ಸಹ ನಾವೆಲ್ಲ ಭಗವಂತನ ಮಕ್ಕಳು, ಇನ್ನೋರ್ವನ ಸರಿ ತಪ್ಪುಗಳನ್ನು ವೈಭವೀಕರಿಸದೇ ಉತ್ಪ್ರೇಕ್ಷೆ ಮಾಡದೇ ಸೂಕ್ತ ನಿರ್ದೇಶನ ಹಾಗೂ ಕಿರು ಶಿಕ್ಷೆ ನೀಡಿ ಅಂತಹ ತಪ್ಪು ದಾರಿಯ ಜನರನ್ನು ಸಹ ಸರಿದಾರಿಗೆ ತರಬಹುದೆಂಬ ಡಿ.ವಿ.ಜಿ.ಯವರ ಈ ಪದ್ಯವನ್ನು ಗಮನಿಸಿ, "ದಂಡನಿರ್ಣಯದಿ ನೀಂ ಕ್ಷಮಿಸೆನಲ್ ನ್ಯಾಯಪತಿ ಹಿಂದಿನಾ ನಿನ್ನೊಳ್ಳನವನ್ ಅಂದಿನಳಲನ್ ತಂದೆಬಗೆಯಿಂ ಬಗೆದು ಶಾಸನೋಗ್ರವನಿನಿತು ಕುಂದಿಸಲಿಕಾಗದೇಂ? – ಮಂಕುತಿಮ್ಮ" "ನಡೆಯುವವನೆಡವುವನಲ್ಲದೇ ಮಲಗಿದವನೆಡಹುವನೆ" ಎಂಬ ಧ್ಯೇಯವಾಕ್ಯ ತಿಳಿಸುವಂತೆ ನಮ್ಮ ನಮ್ಮ ಜೀವನ ಸಮಯದಲ್ಲಿ ಆ ಅನರ್ಥಗಳಿಗೆ, ಅಪರಾಧಗಳಿಗೆ ಭಗವಂತನಲ್ಲಿ ಸರ್ವತ್ರ ಬೇಡಿಕಾ ಪ್ರಾರ್ಥನೆಯನ್ನು ಪ್ರಾಮಾಣಿಕ ಸಂವೇದನಾಶೀಲರಾಗಿ ಸಲ್ಲಿಸಿದಲ್ಲಿ ಜಗತ್ತಿನ ಸರ್ವತ್ರ ತಂದೆ ಸಲಹುವ ಪರಮಾತ್ಮನು ಖಂಡಿತಾ ನಮ್ಮನ್ನು ಕ್ಷಮಿಸುತ್ತಾನೆಂಬುದು ಪದ್ಯದ ಸಾರ. ನ್ಯಾಯ ನಿರ್ಣಯ ನೀಡಿಕೆಯು ಬಾಯಿ ಮಾತಾಡಿದಷ್ಟು ಸುಲಭದ ಮಾತಲ್ಲ. ಒಂದು ಚಿಕ್ಕ ಕಥೆಯೊಡನೆ ಇಂದಿನ ಪದ್ಯ ಸಾರವನ್ನು ಮುಕ್ತಾಯಗೊಳಿಸುತ್ತೇನೆ. ಆಗರ್ಭ ಶ್ರೀಮಂತರೂ ಹಾಗೂ ದೊಡ್ಡ ಮನೆತನವೊಂದರ ಮನೆಯ ತಂದೆಯು ನಿಧನರಾಗಿ ಆ ಮನೆಗೆ ವಾರಸುದಾರನಾಗಿ ಒಂದು ಮಗು ಮಾತ್ರ ಉಳಿದಿರುತ್ತದೆ. ತುಂಬಾ ಧನ ಹಾಗೂ ಆಸ್ತಿಗಳಿದ್ದ ಕಾರಣ ಆ ಮಗುವಿಗೆ ಇಬ್ಬರು ಹೆಂಗಸರು ತಾನು ಇದರ ತಾಯಿ ಹಾಗೂ ತಾನು ಇದರ ತಾಯಿ ಎಂಬ ವಿವಾದವು ತಾರಕಕ್ಕೇರಿ ನ್ಯಾಯಾಲಯದ ಮೆಟ್ಟಿಲೇರುತ್ತದೆ. ವಿಚಾರಣಾ ಹಂತದಲ್ಲಿ ಈರ್ವರ ಕಡೆಯಿಂದಲೂ ಸಾಕ್ಷಿಗಳಾಗಿ ಪ್ರದರ್ಶಿಸಿದ ಜಾತಕವನ್ನೂ, ಮಗುವಿಗೆ ನಾಮಕರಣ ಮಾಡಿದ ಜೋಯಿಸರೆಂಬುವವರನ್ನು ಕರೆದು ಸಾಕ್ಷಿ ವಿಚಾರಣೆಯಾಗಿರುತ್ತದೆ. ಎರಡೂ ಕಡೆಗೂ ಸಮಬಲದ ಸಾಕ್ಷಿಗಳೇ ದೊರೆಯುತ್ತವೆ. ನ್ಯಾಯಾಧೀಶರಿಗೆ ಈ ಬಗ್ಗೆ ಇನ್ನೂ ಸ್ವಲ್ಪ ಸಾಕ್ಷಿ ಬೇಕೆಂದು ರಕ್ತದ ಪರೀಕ್ಷೆಗೂ ಆದೇಶಿಸಲಾಗಿ, ಆ ಪರೀಕ್ಷಾ ವರದಿಗಳೂ ಸಹ ಎರಡೂ ತಾಯಂದಿರ ಮಗುವೆಂದು ದೃಢೀಕರಣ ನೀಡುವಂತಹದ್ದಾಗಿರುತ್ತದೆ. ಗೊಂದಲಕ್ಕೀಡಾದ ನ್ಯಾಯಾಧೀಶರು ಮಗುವಿನ ನೈಜ ತಾಯಿಯ ಪತ್ತೆಹಚ್ಚುವಿಕೆಗಾಗಿ ಒಂದು ವಿಸ್ಮಯಕಾರಿ ಆದೇಶವನ್ನು ನೀಡುತ್ತಾರೆ. ಅದೇನೆಂದರೆ, ಮುಂದಿನ ಸೋಮವಾರದಂದು ಆ ಮಗುವನ್ನು ಸಮನಾಗಿ ಎರಡು ತುಂಡು ಮಾಡಿ ಈರ್ವರೂ ಕಕ್ಷಿದಾರರಿಗೂ ಹಂಚಲಾಗುತ್ತದೆಂದು. ಈ ಆದೇಶ ಹೊರಬೀಳುತ್ತಿದ್ದಂತೆಯೇ ಮಗುವಿಗೆ ಜನ್ಮ ನೀಡಿದ ನಿಜವಾದ ತಾಯಿಯಾಗಿದ್ದವಳು ನ್ಯಾಯಾಧೀಶರಿಗೆ ಕೈ ಮುಗಿದು "ಸ್ವಾಮಿ ನನ್ನ ಮಗು ಸುಖವಾಗಿ ಜೀವಿಸಿದ್ದರೆ ಸಾಕು, ದೂರದಿಂದಲೇ ನೋಡಿ ಸಂತೋಷಪಡುತ್ತೇನೆ. ತುಂಡರಿಸಿ ಹಂಚುವ ಆದೇಶದ ಪ್ರಸ್ತಾವವನ್ನು ಕೈಬಿಡಬೇಕೆಂದು" ಕೋರುತ್ತಾಳೆ. ನ್ಯಾಯಾಧೀಶರಿಗೆ ನಿಜವಾದ ತಾಯಿಯಾರೆಂದು ಅರಿವಾಯಿತು. ಸೂಕ್ತ ಆದೇಶ ಹೊರಡಿಸಿ ನೈಜ ತಾಯಿಗೆ ಮಗುವು ದಕ್ಕತಕ್ಕದ್ದೆಂದು ಆದೇಶಿಸಿದರು. ಭಗವಂತನೂ ಸಹ ದೊಡ್ಡ ನ್ಯಾಯಾಧೀಶನೆ. ನಮ್ಮೆಲ್ಲರ ಮನದ ನೈಜ ವಿಜ್ಞಾಪನೆಯನ್ನು ಪರಿಶೀಲಿಸಿ ಸೂಕ್ತ ನೆರವನ್ನು ಹಾರೈಸುತ್ತಾನೆಂದು ತಿಳಿದು ಸರ್ವಾತ್ಮರನ್ನೂ ತನ್ನ ಸಹೋದರರಂತೆ ಕಾಣುವ ಮೂಲಕ ಉತ್ತಮ "ಸಹಕಾರಿಗಳಾಗಿ"ರೆಂಬುದೇ ಈ ಪದ್ಯದ ಪರಮ ಸಾರಾವಾಗಿದೆ

# “ನಮ್ಮಿಷ್ಟಗಳನರಿತು ನೀಡುವುದವನಿಗರಿದೇಂ?”

ಕವಿ ಡಿ.ವಿ.ಜಿ.ಯವರು ಸಜ್ಜನಿಕೆಯಿಂದ ಬಾಳಿ ಬದುಕಿದವರು ಭಗವಂತನ ಇರುವಿಕೆಯ ಬಗ್ಗೆ ಬಹುದೊಡ್ಡ ಅಭಿಮಾನದ ಮಾತುಗಳನ್ನು ಪದ್ಯರೂಪದಲ್ಲಿ ನೀಡಿದ್ದಾರೆ. ಭಗವಂತನು ಸೃಷ್ಟಿಯದ್ಭುತ ಶಕ್ತಿಯುಳ್ಳವನಾಗಿದ್ದು, ನಮ್ಮಿಷ್ಟಗಳನ್ನು ನಿಷ್ಕಪಟವಾಗಿ ಸಲ್ಲಿಸಿದರೆ ಅವುಗಳನ್ನು ಈಡೇರಿಸುವುದು ಭಗವಂತನಿಗೆ ಕಷ್ಟವಲ್ಲವೆಂದು, ಆದರೆ ಅಂತಹ ಶುದ್ಧ ರೀತಿಯನ್ನು ಭಗವಂತನ ಮುಂದಿಡುವ ಬಗೆಯೇ ನಮಗಿರುವ ಕಷ್ಟವೆಂದಿದ್ದಾರೆ. “ಸೃಷ್ಟಿಯದ್ಭುತ ಶಕ್ತಿಯುಳ್ಳೋರ್ವನಿರಲು ನ ಮ್ಮಿಷ್ಟಗಳನರಿತು ನೀಡುವುದವನಿಗರಿದೇಂ? ಇಷ್ಟವಾತನೊಳುದಿಸುವಂತೆ ಚೋದಿಪುದೆಂತು ಕಷ್ಟ ನಮಗಿಹುದಷ್ಟೇ ॥ಮಂಕುತಿಮ್ಮ॥ ಅದ್ಭುತ ಶಕ್ತಿಯುಳ್ಳ ಸರ್ವ ವ್ಯಾಪಕಶಕ್ತಿಯು ನಮ್ಮ ಆಶೋತ್ತರಗಳನ್ನು ಈಡೇರಿಸಲು ಶಕ್ತಿಯನ್ನು ಹೊಂದಿದ್ದು, ಸರ್ವಾಂತರ್ಯಾಮಿಯಾಗಿ ನಮ್ಮ ನೆರವಿಗೆ ಬರುವವನಾಗಿದ್ದು, ಸರ್ವಜ್ಞನಾಗಿದ್ದು, ಸರ್ವರ ಅಭಿಪ್ರಾಯಗಳನ್ನು ಈಡೇರಿಸುವವನಾಗಿರುವಾಗ ನಾವೇಕೆ ಅನ್ಯಾಯದ ಮಾರ್ಗಗಳನ್ನು ಅನುಸರಿಸಬೇಕು. ಬದಲಾಗಿ ನಮ್ಮ ಪರಿಶ್ರಮದ ದುಡಿಮೆಗಳಿಂದ ಪರಮಾತ್ಮನನ್ನು ಮೆಚ್ಚಿಸಿ ಬೇಕೇಬೇಕಾದ ನೈಜ ಬೇಡಿಕೆಯನ್ನು ಮನದಾಳದಿಂದ ಬೇಡಿದೊಡೆ ತಪ್ಪದೇ ಒದಗಿಸುತ್ತಾನೆಂದು ದೃಢನಂಬಿಕೆಯನ್ನು ತಳೆಯಿರೆಂಬುದೇ ಈ ಪದ್ಯದ ಸಾರಾಂಶ. ಹೀಗೆ ಭಗವಂತನಿಂದ ಪಡೆದ ಸರ್ವಸ್ವವನ್ನು ತನ್ನ ಸಹೋದರರೆನಿಸಿಕೊಂಡವರಿಗೆ ಹಾಗೂ ತುಳಿತಕ್ಕೊಳಗಾಗಿರುವ ಕೆಳವರ್ಗದವರಿಗೆ ಸಹಾಯ ಮಾಡುವ ಕ್ಷೇತ್ರವಾದ ಸಹಕಾರ ಕ್ಷೇತ್ರದಲ್ಲಿ ಜನಸೇವೆಗೆ ಹೆಚ್ಚಿನ ಅವಕಾಶವಿರುವುದರಿಂದ ಅದರಲ್ಲಿ ತಮ್ಮನ್ನು ತೊಡಗಿಸಿಕೊಳ್ಳಿರೆಂಬುದೇ ಈ ಪದ್ಯದ ರಹಸ್ಯ ಸೂಚನೆಯಾಗಿದೆ.

# "ಪ್ರಕೃತಿಯ ಋಣ ತೀರಿಸು"

ಈಗಿತ್ತಲಾಗಿನ ಜಗವು ಜಗಳದ್ದು, ಕಪಟದ್ದು, ಕೃತ್ರಿಮದ್ದೆಂಬ ಜನರ ಮನೋಇಂಗಿತವನ್ನು ಅರಿತ ಡಿ.ವಿ.ಜಿ.ಯವರು ಹಿಂದಿನವರ ಬದುಕಿನ ಉಸಿರುಗಳಲ್ಲಿದ್ದ "ಉದಾರ ಚರಿತಾನಾಂ" "ವಸುದೈವ ಕುಟುಂಬಕಂ" ಎಂಬ ವಾಕ್ಯಗಳಿಂದ ವಿಶ್ವವೇ ಒಂದು ಕುಟುಂಬವೆಂಬ ಭಾವನೆ ತಳೆದವರಾಗಿದ್ದರೆಂದು ತಿಳಿಸುತ್ತಾ ಹೃದಯ ವೈಶಾಲ್ಯತೆಯನ್ನು ಹೆಚ್ಚಿಸಿಕೊಳ್ಳಿ, ಸಮಷ್ಠಿಭಾವವನ್ನು ತಳೆಯಿರೆಂದು ಕರೆಕೊಡುತ್ತಿದ್ದಾರೆ. ಸೂರ್ಯಚಂದ್ರರುಗಳ ಬೆಳಕು ನೀಡುವಿಕೆಯನ್ನು, ಭೂಮಿಗಾಳಿಗಳ ನಿರಂತರ ಸೇವೆಯನ್ನು ನೋಡಿಯಾದರೂ ತಮ್ಮಗಳ ಸ್ವಾರ್ಥಪರ ಜೀವನಕ್ಕೆ "ಹೊಡೆಸಲಾಂ" "ಒಲವಾತ್ಮ ವಿಸ್ತರಣ" ಭಾವವನ್ನು ಹೊಂದುವ ಮೂಲಕ ಸಮಾಜದ ಎಲ್ಲರ ಏಳಿಗೆಗೆ ಕಾರಣನಾಗೆಂದು ಮನೋಜ್ಞನವಾಗಿ ತಿಳಿಸಿದ್ದಾರೆ. ಪದ್ಯದ ಅರ್ಥವನ್ನು ಗ್ರಹಿಸೋಣ. "ವಿಸ್ತಾರದಲಿ ಬಾಳು ವೈಶಾಲ್ಯದಿಂಬಾಳು ಕತ್ತಲೆಯ ಮೊಡಕು ಮೂಲೆಗಳ ಸೇರದಿರು ಭಾಸ್ಕರನನುಗ್ರಹವೆ ನೂತ್ನ ಜೀವನ ಸತ್ವ ಮೃತ್ಯುನಿನಗಲ್ಪತೆಯೋ ಮಂಕುತಿಮ್ಮ" ಯಾವುದೇ ತಂಡದ ಕಾರ್ಯದ ಯಶಸ್ವಿ ನಿರ್ವಹಣೆಯು ಅದರ ನಾಯಕನ ಅಥವಾ ಮುಂದಾಳುವಿನ ಜೀವನ ಧ್ಯೇಯ, ಗುರಿ, ಪರಿಶ್ರಮ, ಪರಿಪಕ್ವತೆ, ತ್ಯಾಗ, ಚಿಂತನ ವೈಶಾಲ್ಯತೆಯನ್ನು ಅವಲಂಬಿಸಿರುತ್ತದೆ. ನಾಯಕನೆಂದರೆ ಜವಾಬ್ಧಾರಿಯನ್ನು ಉತ್ತಮವಾಗಿ ನಿರ್ವಹಿಸುವವನು, ಸಾಧಕರಿಗೆ ಸ್ಫೂರ್ತಿ ನೀಡುವವನು ಹಾಗೂ ನುಡಿದಂತೆ ನಡೆಯುವವನು, ಈ ಮೂರು ಅಂಶಗಳ ಸಂಗಮವೇ ನಾಯಕತ್ವ. ನಾಯಕರು ಉತ್ತಮರಾದರೆ ತಳಹಂತದ ಸಾಧಕರು ಉತ್ತಮರಾಗುತ್ತಾರೆಂಬ ದೂರದೃಷ್ಠಿಯ ಕವಿಗಳು "ಭಾಸ್ಕರನನುಗ್ರಹವೆ ನೂತ್ನ ಜೀವನ ಸತ್ವ" ಎಂಬ ಪದಶ್ರೇಣಿಯಲ್ಲಿ ಅಳವಡಿಸಿರುತ್ತಾರೆ. ಸೂರ್ಯನನ್ನು ಜಗತ್ತಿನ ಕಣ್ಣೆಂದೂ ಅವನ ವ್ಯಾಪಕ ದೃಷ್ಠಿಯಿಂದ ಸಕಲ ಜೀವರಾಶಿಗಳೂ ಸಹ ಜನ್ಮತಾಳುತ್ತವೆಂದೂ ತಿಳಿಸುತ್ತಾ ಸಹಕಾರದ ಬೆಳವಣಿಗೆಗೆ ಸಹಕಾರಿ ಕಕ್ಷೆಯ ನಾಯಕರ ಮನೋಬಾನ್ದಳದ ವಿಸ್ತಾರತೆಗೆ ಕರೆಯಿತ್ತಿದ್ದಾರೆ. ಆದ್ದರಿಂದ, ಈ ಪದ್ಯದ ತಿರುಳಾದ ವಿಸ್ತಾರವಾದ ಮನಸ್ಸನ್ನು ಹೊಂದೋಣ, ಸಂಕುಚಿತ ಭಾವವನ್ನು ತೊಲಗಿಸಿ ಸರ್ವರೂ ಒಂದೆಂಬ ಮನೋಭಿಪ್ರಾಯವನ್ನು ಹೊಂದೋಣ, ತನ್ಮೂಲಕ ಸರ್ವರ ಅಭಿವೃದ್ಧಿಗೆ ನಾಂದಿಯಾದ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಶ್ರಮಿಸೋಣವೆಂಬ ಅಂಶದೊಂದಿಗೆ ಇಂದಿನ ಪದ್ಯರ್ಥದ ವಿಧಿಗೆ ಮುಕ್ತಾಯ ನೀಡೋಣ.

# "ಅದಮ್ಯ ಅಗೋಚರ ಶಕ್ತಿಯ ಆಶ್ರಯಿಸಿ ಸಹಕಾರಿಯಾಗಿ ಬಾಳು"

ವಿಶಾಲ ವಿಶ್ವದದತ್ತ ಹುಡುಕುಕಣ್ಣುಗಳಿಂದ ನಮ್ಮ ವಿಸ್ತೃತ ಗಮನವನ್ನು ಹರಿಸಿದಾಗ ವಿಸ್ಮಯಗಳ ಸರಮಾಲೆಯೇ ವ್ಯಕ್ತವಾಗುತ್ತದೆ. ಹರಿದಾಡುವ ಅತಿ ಕಿರುಪ್ರಾಣಿ ಇರುವೆಗೆ ಹೃದಯ, ಕಣ್ಣು, ಕಾಲು, ಕೈ ಹೀಗೆ ವಿವಿಧಾಂಗಗಳನ್ನು ಜೋಡಿಸಿದವರಾರು? ತೆಂಗಿನಮರದ ಅರಳಾಗಿ ಜನಿಸಿದ ಎಳೆನೀರಿಗೆ ಧರೆಯಿಂದ ಸಿಹಿನೀರು ಅದ್ಯಾವ ಅದ್ಭುತಶಕ್ತಿಯಿಂದ ಮೇಲಕ್ಕೇರಿಸಲ್ಪಟ್ಟು ಮತ್ತೆ ಕೆಳಗೆ ಹರಿಯದಂತೆ ಸಂಗ್ರವಾಯಿತೆಂಬ ಹಲವು ಪರಮಾದ್ಭುತಗಳನ್ನು ವೀಕ್ಷಿಸಿದ ಸಂತಕವಿ ಡಿ.ವಿ.ಜಿಯವರು ಭಗವಂತನ ಅಸ್ತಿತ್ವ ಹರವುಗಳನ್ನು ಈ ಕೆಳಗಿನ ಪದ್ಯದಲ್ಲಿ ವಿವರಿಸಿದ್ದಾರೆ:

**"ಮೇಲೆ ಕೆಳಗೊಳಗೆ ಬಳಿ ಸುತ್ತಲೆತ್ತೆತ್ತಲುಂ**

**ಮೂಲೆ ಮೂಲೆಯಲಿ ವಿದ್ಯುಲ್ಲಹರಿಯೊಂದು**

**ಧೂಲಿಕಣ ಭೂಗೋಳ ರವಿಚಂದ್ರ ತಾರೆಗಳ**

**ಚಾಲಿಪುದು ಬಿಡುಗೊಡದೆ" ॥ಮಂಕುತಿಮ್ಮ॥**

ಇದೇ ಪರಮಾತ್ಮನ ಸರ್ವಾಂತರ್ಯಾಮಿತ್ವವನ್ನು ದಾಸಶ್ರೇಷ್ಠ ಕನಕದಾಸರು, ತನ್ನ ಗುರುಗಳೋರ್ವರು ಎಲ್ಲ ವಿದ್ಯಾರ್ಥಿಗಳಿಗೂ ಬಾಳೆಹಣ್ಣೊಂದಂದನ್ನು ಕೊಟ್ಟು "ಯಾರೂ ಇಲ್ಲದ ಜಾಗದಲ್ಲಿ ತಿಂದುಬನ್ನಿ" ಎಂದಾಗ ಒಬ್ಬೊಬ್ಬ ವಿದ್ಯಾರ್ಥಿಯು ತಾವುಗಳು ಬಾಳೆಹಣ್ಣು ತಿಂದ ವಿವಿಧ ಸ್ಥಳಗಳನ್ನು ಹೆಸರಿಸಿದರೆ ಕನಕಮಹಿಮರು ದೇವರಿಲ್ಲದ ಜಾಗವಿಲ್ಲವೆಂಬ ವ್ಯಾಪಕಸತ್ಯವನ್ನು ಮನಗಂಡು ಹಣ್ಣನ್ನು ತಿನ್ನದೆಯೇ ಹಿಂತಿರುಗಿಸಿದ ಉದಾಹರಣೆ ಸ್ಮರಿಸಬಹುದು.

ಭಗವದ್ಗೀತೆಯ 13ನೇ ಅಧ್ಯಾಯದ 14ನೇ ಶ್ಲೋಕದಲ್ಲಿ ಇದೇ ಅಂಶಕ್ಕೆ ಒತ್ತುನೀಡುತ್ತಾ,

**"ಸರ್ವತಃ ಪಾಣಿಪಾದಂ ತತ್ ಸರ್ವತೋಕ್ಷಿಶಿರೋಮುಖಂ**

**ಸರ್ವತಃ ಶೃತಿಮಲ್ಲೋಕೇ ಸರ್ವಂಮಾವೃತ್ಯತಿಷ್ಟತಿ"**

ಅಂದರೆ ಸರ್ವೋತ್ತಮದೇವನ ಕೈಕಾಲು ಕಣ್ಣು ಬಾಯಿ ಕಿವಿಗಳು ಎಲ್ಲೆಡೆಯೂ ಇದ್ದು ವಿಶ್ವದಲ್ಲಿಯ ಎಲ್ಲವನ್ನೂ ಅವ್ಯಾಹತವಾಗಿ (All Pervading) ವ್ಯಾಪಿಸಿದೆಯೆನ್ನುತ್ತದೆ.

ನಾವಿರುವ ಈ ಪ್ರಪಂಚದ ಎಲ್ಲಾ ಭಾಗಗಳಲ್ಲೂ ಸರ್ವವ್ಯಾಪಕವಾಗಿ, ಸರ್ವಶಕ್ತನಾಗಿ, ಸರ್ವಜ್ಞನಾಗಿ ಮೇಲೆ, ಕೆಳಗೆ, ಒಳಗೆ, ಹತ್ತಿರ, ಸುತ್ತಮುತ್ತಲೂ, ಮಿಂಚಿನ ಹರಿದಾಟದಂತೆ ಆವರಿಸಿಕೊಂಡು ಈ ಸಮಸ್ತ ವಿಶ್ವದ ಅಣುಕಣಗಳಲ್ಲೂ ವ್ಯಾಪಿಸಿರುವುದಲ್ಲದೇ ತಾರಂಬರಾದಿ ಸೂರ್ಯ, ಚಂದ್ರ, ನಕ್ಷತ್ರಗಳನ್ನು ಬಿಡುವಿಲ್ಲದೆ ಚಲಿಸುವಂತೆ ಮಾಡುತ್ತಿರುವ ಅಧಮ್ಯ ಅಗೋಚರ ಶಕ್ತಿ ಯಾವುದೆಂಬುದರತ್ತ ನಮ್ಮ ಗಮನ ಹರಿಸಬೇಕೆಂಬುದು ಡಿ.ವಿ.ಜಿಯವರ ಸಂದೇಶ.

ವಿವಿಧ ಧರ್ಮಗಳ ಸಾಹಿತ್ಯಗಳು ದೇವರ ಕರ್ತೃತ್ವ, ವ್ಯಾಪಕತ್ವ, ಸರ್ವಶಕ್ತತೆ ಹಾಗೂ ಸರ್ವಜ್ಞತ್ವಗಳ ಬಗ್ಗೆ ವಿಷದವಾಗಿ ಮನಮುಟ್ಟುವಂತೆ ವಿವರಿಸಿದ್ದರೂ ಅದ್ಯಾಕೋ ನಾವಿನ್ನೂ ಆತನ ಇರುವನ್ನು ಅರಿಯದವರಾಗಿದ್ದೇವೆಂಬ ಅನಿಸಿಕೆಯನ್ನು ಗ್ರಹಿಸಿದ ಡಿ.ವಿ.ಜಿ.ಯವರು ಭಗವಂತನ ಇರುವನ್ನು ಅರಿತು ನಿಮ್ಮ ನಿಮ್ಮಗಳ ಆತ್ಮದ ಬಗೆಗಿನ ಅರಿವನ್ನು ಪಡೆದು ಸರ್ವಮಾನವರೂ ಸಹೋದರರಂತೆ ಬದುಕಿ "ಭೂ ಉಪಗ್ರಹವನ್ನು ದೈವಾನುಗ್ರಹ"ದ ಕೇಂದ್ರವನ್ನಾಗಿಸಲು ಪ್ರಯತ್ನಿಸಲು ಕರೆಕೊಡುತ್ತಾ ಸರ್ವರ ಶುಭಾಕಾಂಕ್ಷಿ ಕ್ಷೇತ್ರವಾದ "ಸಹಕಾರ" ಜೀವನವನ್ನು ಅನುಸರಿಸಿರೆಂದು "ಒಟ್ಟು ಬಾಳ್ವದ ಕಲಿಯೋ" "ತಬ್ಬಿಕೊಳೊ ವಿಶ್ವವನು" ಎಂಬಂಶಗಳನ್ನರಿಯುವ ಮೂಲಕ ಮೌಲ್ಯಗುಣ ಪೂರ್ಣಪ್ರಜೆಗಳಾಗಿ ಸರ್ವಾಂಗ ಸುಂದರರಾಷ್ಟ್ರ ನಿರ್ಮಾಣಕ್ಕೆ ಆಧಾರ ವ್ಯಕ್ತಿಗಳಾಗಿರೆಂಬುದು ಈ ಪದ್ಯದ ಸಂದೇಶ.

# "ಏಕಾಗ್ರತೆಯಿಂದ ಸಾಧನೆ"

ವಿಶ್ವದ ಆಧ್ಯಾತ್ಮಿಕ ಭೂಪಟದಲ್ಲಿ ಭಾರತಕ್ಕೆ ಗುರುಸ್ಥಾನಮಾನವಿದೆಯೆಂಬ ಅಂಶವನ್ನು ಉಳಿದ ಎಲ್ಲಾ ರಾಷ್ಟ್ರಗಳೂ ಅಂಗೀಕರಿಸುತ್ತವೆಯೆಂದರೆ, ಈ ಫಲಪ್ರದ ಸಾಧನೆ ನಮ್ಮ ಋಷಿಮುನಿಗಳ, ಸಂತರ, ಚಿಂತನಶೀಲರ ಪರತತ್ವವನ್ನರಿವ ಅವಿರತ ಪ್ರಯತ್ನವೆಂಬುದರ ಬಗ್ಗೆ ಎರಡು ಮಾತಿಲ್ಲವೆಂದ ಕವಿ ಡಿ.ವಿ.ಜಿಯವರು ಮುಂದುವರೆದು ಏಕಾಗ್ರತೆಯೆಂಬುದು ಯೋಗಿಗಳಿಗೆ ಮಾತ್ರ ಲಭ್ಯವಾಗಿರುವ ಸೊತ್ತೆಂಬುದನ್ನು ಅಲ್ಲಗಳೆಯುತ್ತಾರೆ. ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಪ್ರತಿಯೊಬ್ಬರಿಗೂ ಏಕಾಗ್ರತೆ ಅವಶ್ಯಕವೆನ್ನುತ್ತಾ, ಕಮ್ಮಾರರಲ್ಲಿ, ಬಡಗಿಗಳಲ್ಲಿ, ಕ್ಷೌರಿಕರಲ್ಲಿ, ಬೇಸಾಯಗಾರರಲ್ಲಿ, ದೊಂಬರಾಟದವರಲ್ಲಿ, ಅಕ್ಕಸಾಲಿಗರಲ್ಲಿ ಹಾಗೂ ನೇಯ್ಗೆಯವರಲ್ಲಿ ಅಡಕವಾಗಿರುವ ಏಕಾಗ್ರತೆಯನ್ನು ಉದಾಹರಿಸುತ್ತಾ, ಕಮ್ಮಾರನ ಸುತ್ತಿಗೆ ಗುರಿತಪ್ಪಿದರೆ ಕೈ ಮುರಿದುಕೊಳ್ಳುವ ಸಂಭವ, ಕ್ಷೌರಿಕನ ಕತ್ತಿ ಸ್ವಲ್ಪ ಜಾರಿದರೂ ಚರ್ಮ ಕತ್ತರಿಸಿ ರಕ್ತ ಸುರಿಯುವ ಸಂಭವ, ಬಡಗಿಗೆ ತನ್ನ ಉಳಿಯ ಮೇಲೆ ಹಿಡಿತವಿಲ್ಲದಿದ್ದರೆ ತನ್ನ ಬೆರಳಿಗೆ ಉಳಿಗಾಲವಿಲ್ಲ. ಇದೇ ರೀತಿ ನೇಯ್ಗೆಯವರ ಕುಶಲತೆಯಿದ್ದರೆ ಮಾತ್ರ ಉತ್ತಮ ವಸ್ತ್ರದ ಆಗಮನ. ಇವರೆಲ್ಲಾ ತಮ್ಮ ಉದ್ಯೋಗದ ಅವಧಿಯಲ್ಲಿ ಅಪಾಯದ ಅಂಚಿನಲ್ಲಿರುವವರೇ. ಏಕಾಗ್ರತೆಯಿಂದ ಕೂಡಿದ ಸಾಧನೆಯಿಂದ ಉತ್ತಮ ಉತ್ಪನ್ನ ಹೊರಬರುತ್ತದೆ. ಅವರುಗಳಿಗೆ ಕರ್ತವ್ಯದ ಕಡೆಯೇ ಮನಸ್ಸು ವಾಲಿರುತ್ತದೆ. ಆದರೆ ಅವರುಗಳಿಗೆ ನಿಜೋದ್ದೇಶದ ಕೆಲಸವನ್ನು ಬಿಟ್ಟರೆ ಅನ್ಯತಾ ಒಣಹರಟೆಗೆ ಬಿಡುವೇ ಇರದು. ತತ್ಕಾರಣ ಊಟದ ಬಗ್ಗೆಯೂ ಹೆಚ್ಚು ತಲೆ ಕೆಡಿಸಿಕೊಂಡವರಲ್ಲ. ಹೀಗಾಗಿ ಅವರಿಗೆ ಜೀವನ ಕಷ್ಟಕರವೆನಿಸಿಯೇ ಇಲ್ಲವೆನ್ನುತ್ತಾ, ಶ್ರಮಜೀವಿಗಳ ಚಿತ್ರಣವನ್ನು ಈ ಕೆಳಗಿನ ಪದ್ಯದಲ್ಲಿ ನೀಡಿದ್ದಾರೆ. ಪದ್ಯವಿನ್ಯಾಸವನ್ನು ಸವಿಯಿರಿ:

**"ಬಡಗಿ ಬೇಸಾಯಿ ಕರ್ಮಿಗರೇನು ಯೋಗಿಗಳೋ।**

**ಮುಡಿಪವರ ಮನಸೆಲ್ಲ ಕೈಯ ದುಡಿತಕ್ಕೆ॥**

**ಬಿಡುವಿರದು ಬಣಗು ಚಿಂತೆಗೆ, ಬುತ್ತಿ ಹಂಗಿರದು ।**

**ಕಡಿದಲ್ಲವರ್ಗೆ ಬಾಳ್" ॥ಮಂಕುತಿಮ್ಮ॥**

ಏಕಾಗ್ರತೆಗೆ ವಿರುದ್ಧವಾದುದು ಚಂಚಲತೆ. ಈ ಚಂಚಲತೆಯ ವಿಚಾರ ಇಂದು ನಿನ್ನೆಯದಲ್ಲ,

ಹಿಂದಿನಿಂದಲೂ ಇದ್ದದ್ದೇ. ಆದರೆ ಈಗಿನ ಅನೀತಿ, ಅಶಿಸ್ತಿನ ಜೀವನದ ಪರಿಣಾಮವಾಗಿ ಚಂಚಲತೆ ಹೆಚ್ಚಾಗಿರಬಹುದು. ಪುರಾಣಜನಿತ ಉದಾಹರಣೆಯಿಂದ ಹೊರಬರುವ ಅಂಶವೆಂದರೆ, ಅಂಥಹ ಧರ್ಮಿಷ್ಟನಾದ ಅರ್ಜುನನ ಮನಸ್ಸೇ ಚಂಚಲವಾಗಿತ್ತೆಂದರೆ, ಇಂದಿನ ಷೋಕಿಲಾಲರ ಮನಸ್ಸು ಸ್ಥಿರವಾಗಿರುವುದುಂಟೆ ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಅರ್ಜುನನು ತನ್ನ ಸರ್ವೋತ್ಕೃಷ್ಟ ಮಾರ್ಗದರ್ಶಕ ಹಾಗೂ ಗುರು ಶ್ರೀಕೃಷ್ಣನಿಗೆ “ಕೃಷ್ಣ ಈ ಮನಸ್ಸು ಮರ್ಕಟದಂತೆ ಚಂಚಲ, ಮದಭರಿತ ಸಲಗನಂತೆ ಬಲಿಷ್ಠ, ಇದನ್ನು ನಿಯಂತ್ರಿಸುವುದೆಂದರೆ ಗಾಳಿಯನ್ನು ಕಟ್ಟಿಡುವಷ್ಟರ ಮಟ್ಟದ ಕಷ್ಟಸಾಧ್ಯಕೆಲಸ”ವೆಂದಾಗ ಕೃಷ್ಣನು,

**“ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂಚಲಂ**

**ಅಭ್ಯಾಸೇನತು ಕೌಂತೇಯ ವೈರಾಗ್ಯೇಣಾ ಚ ಗೃಹ್ಯತೇ”– (6:35 ಭಗವದ್ಗೀತೆ)**

ಇಂತಹ “ಚಂಚಲ ಮನಸ್ಸನ್ನು ಕೂಡಾ ಸತತ ಅಭ್ಯಾಸಬಲದಿಂದ ಹಾಗೂ ವೈರಾಗ್ಯದಿಂದ ನಿಗ್ರಹಿಸಿ ಹತೋಟಿಗೆ ತರಬಹುದೆಂಬುದು ಸತ್ಯವೆಂದೂ ಇದಕ್ಕೆ ಸಂಶಯವೇ ಬೇಡ”ವೆಂದೂ ಉತ್ತರಿಸುತ್ತಾನೆ.

ಪ್ರಸಕ್ತ ಕಾಲದ ಮನಶಾಸ್ತ್ರಜ್ಞನೋರ್ವನು ಮನುಷ್ಯನ ಪ್ರಗತಿಯ ಬಗ್ಗೆ ಚರ್ಚಿಸುತ್ತಾ, “Man is that what he thinks all day long” “ನೀನು ನಿನ್ನ ಮನಸ್ಸಿನಲ್ಲಿ ಏನನ್ನು ಸದಾ ಚಿಂತನೆ ನಡೆಸುತ್ತಿಯೋ ಅದೇ ಆಗುತ್ತೀಯ” ಎಂದು ವ್ಯಾಖ್ಯಾನಿಸಿ, ಮನಸ್ಸನ್ನು ಸತತವಾಗಿ ಧನಾತ್ಮಕ ಚಿಂತನೆಗಳತ್ತ ಹರಿಸಿರೆಂದು ಸಲಹೆ ನೀಡುತ್ತಾರೆ.

ಆದ್ದರಿಂದ, ಸದ್ವಿಷಯವನ್ನೇ ಚಿಂತಿಸುತ್ತಾ, ಸರ್ವರ ಒಳಿತನ್ನೇ ಹಾರೈಸುತ್ತಾ, ಸರ್ವರ ಕ್ಷೇಮಾಭಿವೃದ್ಧಿಯ ಕ್ಷೇತ್ರವಾದ ಸಹಕಾರದಲ್ಲಿ ಉತ್ತಮವಾಗಿ ಪಾಲ್ಗೊಂಡು, ಮುಂದಿನ ಪೀಳಿಗೆಗೆ ಸುಖಜೀವನದ ಮಾರ್ಗವನ್ನು ನೀಡುತ್ತಾ ಸದೃಢ ಹಾಗೂ ಸೃಜನಾತ್ಮಕ ಸಮಾಜ ನಿರ್ಮಾಣಕ್ಕೆ ಸಹಕರಿಸಬೇಕೆಂಬುದೇ ಈ ಪದ್ಯದ ಸಾರಾಂಶವಾಗಿದೆ.

# "ತಾಳ್ಮೆ, ಆತ್ಮವಿಶ್ವಾಸ ಯಶಸ್ಸಿನ ಮೂಲ"

**ಆರು ಮುನಿದು ನಮ್ಮನೇನ ಮಾಡುವರು?**
**ಊರು ಮುನಿದು ನಮ್ಮನೇಂತು ಮಾಡುವರು?**
**ನಮ್ಮ ಕುವರಂಗೆ ಕೂಸ ಕೊಡಬೇಡ**
**ಆನೆಯ ಮೇಲೆ ಹೋಹನ ಶ್ವಾನ ಕಚ್ಚಬಲ್ಲುದೆ?**
**ನಮ್ಮ ಕೂಡಲ ಸಂಗನುಳ್ಳನ್ನಕ್ಕ॥**

ಎಲ್ಲಿಯವರೆಗೆ ಕೂಡಲಸಂಗನ್ನು ನಂಬಿಕೊಂಡಿರುವೆವೋ ಅಲ್ಲಿಯವರೆಗೆ ನಮ್ಮನ್ನು ಯಾರೂ ಏನೂ ಮಾಡಲಾರರು. ಆನೆಯ ಮೇಲೆ ಹೋಗುತ್ತಿರುವವರನ್ನು ಹೇಗೆ ಶ್ವಾನವು ಕಚ್ಚಲಾರದೋ ಹಾಗೆ ಶಿವಪಥದಲ್ಲಿ ತಾಳ್ಮೆವಹಿಸಿ ಆತ್ಮವಿಶ್ವಾಸದಿಂದ ಹೆಜ್ಜೆಗಳನ್ನಿರಿಸಿ ಸಾಗುತ್ತಿರುವವರನ್ನು ಇಡೀ ಊರಿಗೆ ಊರೇ ಮುನಿದು ಕೆಂಡವಾದರೂ ಯಾವುದೇ ಅಪಾಯ ಕಾಡಲಾರದು. ಹೀಗೆ 12ನೇ ಶತಮಾನದ ಬಸಣ್ಣನವರು ನಮ್ಮಲ್ಲಿರುವ ತಾಳ್ಮೆಯೇ ಯಶಸ್ಸಿನ ಹಾದಿ ಎಂದು ತಿಳಿಸಿದ್ದಾರೆ.

ನಮಗೆ ಅನ್ನಿಸುತ್ತದೆ ಯಾರಾದರೂ ನಮ್ಮ ಅರ್ಹತೆಯ ಬಗ್ಗೆ ಸಂದೇಹಪಟ್ಟರೆ ಬೇಸರ ಮಾಡಿಕೊಳ್ಳಬಾರದು ಯಾಕೆಂದರೆ ಚಿನ್ನದ ಪರಿಶುದ್ಧತೆಯ ಬಗ್ಗೆ ಸಂದೇಹಿಸುತ್ತಾರೆಯೇ ಹೊರತು ಕಬ್ಬಿಣದಲ್ಲ. ನಾವು ಮಾಡುವ ಉದ್ಯೋಗ ಅಥವಾ ಕೆಲಸ ಇತರರಲ್ಲಿ ಬೆಳಕು ಚೆಲ್ಲುವ ಮತ್ತು ಒಂದು ಉತ್ತಮ ಪ್ರಪಂಚವನ್ನು ಕಟ್ಟುವ ಒಂದು ಉತ್ತಮ ಅವಕಾಶ ನಮ್ಮದಾಗುವವರೆಗೂ ತಾಳ್ಮೆ ಬೆಳೆಸಿಕೊಳ್ಳುವುದು ಉತ್ತಮ.

ಒಬ್ಬ ತಾಯಿ ತನ್ನ ಇಬ್ಬರು ಮಕ್ಕಳಿಗೆ ಒಂದೇ ಕಂಪನಿಯ ಎರಡು ಬಣ್ಣಗಳ ಪೆನ್ಸಿಲ್‌ನನ್ನು ಕೊಡುತ್ತಾರೆ ಆದರೆ ಅವರಿಬ್ಬರಲ್ಲಿ ಜಗಳ ಉಂಟಾಗಿ ತಮ್ಮ ಅಕ್ಕನಲ್ಲಿ ಪೆನ್ಸಿಲ್‌ನನ್ನು ಕಿತ್ತುಕೊಳ್ಳುವ ಬರದಲ್ಲಿ ಓಡಿ ಕಾಲಿಗೆ ಗಾಯವಾಗುತ್ತದೆ. ಅದರ ಚಿಕಿತ್ಸೆಗಾಗಿ ಆಸ್ಪತ್ರೆಯವರೆಗೆ ಬರುವಂತಾಗುತ್ತದೆ. ಇದೆಲ್ಲ ನೋಡಿ ತಾಯಿ ಕಣ್ಣೀರಿಡುವಂತಾಗುತ್ತದೆ. ಅವನ ಅಕ್ಕ ಇದನೆಲ್ಲ ಒಂದು ಕಡೆ ನಿಂತು ಮೌನವಾಗಿ ನೋಡುತ್ತಿದ್ದಳು. ಇದಾದ ಕೆಲ ದಿನ ಶಾಲೆಯಲ್ಲಿ ಇಬ್ಬರಿಗೂ ಪ್ರಾಜೆಕ್ಟ್‌ಗಾಗಿ ಬಣ್ಣ ಹಾಳೆಗಳನ್ನು ತರಲು ಹೇಳಿದ್ದರು. ತೆಗೆದುಕೊಳ್ಳಿ ಮಕ್ಕಳ ಎಂದು ತಾಯಿ ಮುಂದೆ ಇಟ್ಟಾಗ ಅಕ್ಕ ಹಿಂದೆ ನಡೆದ ಘಟನೆಯನ್ನು ನೆನೆದು ಮೊದಲು ತಮ್ಮ ತೆಗದುಕೊಳ್ಳಲಿ ನಂತರ ನಾನು ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತಾಳೆ. ಇದನ್ನು ಕೇಳಿ ತಾಯಿ, ನನ್ನ ಮಗಳು ತಾಳ್ಮೆ ಹಾಗೂ ತಮ್ಮನ ವಿಶ್ವಾಸ, ಪ್ರೀತಿಯನ್ನು ಗೆಲ್ಲುವಲ್ಲಿ ಯಶಸ್ಸು ಪಡೆಯುವುದು ತಾನಾಗಿಯೇ ಕಲಿತ್ತಿದ್ದಾಳೆ ಎಂದು ತಾಯಿ ಆನಂದ ಭಾಷ್ಪ ಸುರಿಸಿದಳು. ಇದೇ ತಾಳ್ಮೆ.

ವರ್ಷಗಟ್ಟಲೇ ಶ್ರಮಿಸಿ ಬಲ್ಬ್ ಕಂಡು ಹಿಡಿದಿದ್ದ ಥಾಮಸ್ ಅಲ್ವಾ ಎಡಿಸನ್ ಅದನ್ನು ಹೋಲ್ಡರ್‌ಗೆ ಸಿಕ್ಕಿಸಬೇಕಿತ್ತು. ಹೋಲ್ಡರ್ ಇದ್ದುದು ಮಹಡಿಯ ಮೇಲೆ "ಹೋಗಿ ಅದಕ್ಕೆ ಸಿಕ್ಕಿಸಿ ಬಾ ಎಂದು ತನ್ನ ಸಹಾಯಕನೊಬ್ಬನಿಗೆ ಹೇಳಿದ ಎಡಿಸನ್ ಹುಡುಗ ಎಷ್ಟು ನರ್ವಸ್ ಆಗಿದ್ನೇಂದರೆ ಮೆಟ್ಟಿಲು ಹತ್ತುವುದರೊಳಗಾಗಿ ಅವನ ಕೈ ನಡುಗಿ ಆಗಷ್ಟೇ ಕಷ್ಟಪಟ್ಟು ತಯಾರಿಸದ್ದ ಬಲ್ಬ್ ಬಿದ್ದು ಒಡೆದುಹೋಯಿತು."

ಎಡಿಸನ್ ಸಿಟ್ಟಗಲಿಲ್ಲ ಮತ್ತೊಂದು ಬಲ್ಬ್ ತಯಾರಿಸಿದ ಅದಕ್ಕೆ ಪೂರ್ತಿ ಇಪ್ಪಾತ್ನಾಲ್ಕು ತಾಸು ಹಿಡಿದವು. ಅವನ ಟೀಮಿನ ಅಷ್ಟೂ ಸಹಾಯಕರು ಅದಕ್ಕಾಗಿ ದುಡಿದಿದ್ದರು. ಎಲ್ಲಾ ಆದ ಮೇಲೆ ಮತ್ತೆ ಅದೇ ಹುಡುಗನ್ನು ಕರೆದು ಈ ಸಲವೂ ನೀನೇ ಸಿಕ್ಕಿಸಿ ಬಾ ಎಂದ ಉಳಿದ ಸಹಾಯಕರು ಇರಸು ಮುರಿಸಿಗೆ ಒಳಗಾದರು. ಈ ಹುಡುಗ ಮತ್ತೆ ಬಲ್ಬ್ ಒಡೆದರೆ, ಅದನ್ನು ತಯಾರಿಸಲು ಮತ್ತೆ 24 ತಾಸು ಬೇಕು. ಎಡಿಸನ್ ಯಾಕಿಂತ ರಿಸ್ಕು ತೆಗೆದುಕೊಳ್ಳುತ್ತಿದ್ದಾನೆ ಅದಕ್ಕೆ ಎಡಿಸನ್ ಹೇಳಿದ ನೋಡಿ ಅಂಥ ಸಾವಿರ ಬಲ್ಬ್‌ಗಳನ್ನು ಸಾವಿರ ದಿನ ಕೆಲಸ ಮಾಡಿ ತಯಾರಿಸಬಹುದು ಆದರೆ ಆ ಹುಡುಗನ ತಾಳ್ಮೆಯಿಂದ ಮಾಡುವ ಅಭ್ಯಾಸ ಹಾಗೂ ಆತ್ಮವಿಶ್ವಾಸ ನಾಶವಾಗಿ ಬಿಟ್ಟರೆ ಅದನ್ನು ಮತ್ತೆ ತುಂಬಿಕೊಡುವುದು ಸುಲಭವಲ್ಲ ಎಂದು ಹೇಳಿದರು.

# "ಪ್ರದರ್ಶನಬೇಡ, ನಿದರ್ಶನವಿರಲಿ"

ಕೊಳೆಯಾಗಿರುವ ಒಂದು ಕೊಠಡಿಯನ್ನು ಸ್ವಚ್ಛಗೊಳಿಸಿ ಸಂಗ್ರಹವಾದ ಕಸವನ್ನು ಹೊರಹಾಕಿ, ಮತ್ತೆ ಕಸಬೀಳದಂತೆ ಎಚ್ಚರಿಕೆ ವಹಿಸಿದರೆ, ಹಾಗೂ ಮತ್ತೆ ಮತ್ತೆ ಕೊಠಡಿಯನ್ನು ಶುಚಿಗೊಳಿಸುತ್ತಿದ್ದರೆ, ಅಂತಹ ಕೊಠಡಿಯು ಅಚ್ಚುಕಟ್ಟಾಗಿ ಇತರರಿಗೆ ಮೆಚ್ಚಾಗಿ ಕಾಣದಿರದು. ಆದರೆ ನಾವೆಲ್ಲಾ ಇಂದು ಗುಡಿಸಿ ಶುಭ್ರಗೊಳಿಸುವುದಿರಲಿ, ಇನ್ನಷ್ಟು ಹೊಲಸನ್ನು ಹಾಕಿ ಅತಿಮಲಿನ ಮಾಡುತ್ತಿದ್ದೇವೆ. ಈ ಮಲಿನತೆಯು, ಎಲ್ಲಾ ಕ್ಷೇತ್ರದಲ್ಲೂ ಹೆಚ್ಚಾಗುತ್ತಾ ಬಂದು ಧಾರ್ಮಿಕಕ್ಷೇತ್ರವೂ ಮಲಿನತೆಯಿಂದ ಹೊರತಾಗಿಲ್ಲವೆಂಬುದು ಅಂಗೀಕೃತವಿಷಯ. ಇನ್ನು ಖ್ಯಾತಿ ಮತ್ತು ಹೆಸರುಗಳ ವ್ಯಾಮೋಹದ ಬಗ್ಗೆ ಹೊರಟರಂತೂ ಪೈಪೋಟಿಯೇ ಸದೃಶವಾಗುತ್ತದೆ. ಯಾವುದೋ ಒಂದು ಸಭೆಯ ಆಮಂತ್ರಣ ಪತ್ರಿಕೆಯನ್ನು ಮುದ್ರಣ ಮಾಡಿಸುವಾಗ್ಗೆ, ತನ್ನ ಹೆಸರು ಮೇಲಿರಬೇಕು, ದಪ್ಪಕ್ಷರಗಳಲ್ಲಿರಬೇಕು, ನನ್ನ ಹೆಸರೇ ಪತ್ರಿಕೆಯ ತುಂಬಾ ರಾರಾಜಿಸಬೇಕು, ಎಂಬ ಬಯಕೆಗಳೇ ಇಂದಿನ ದಿನಮಾನದಲ್ಲಿ ಎಲ್ಲೆಲ್ಲೂ ಕಂಡುಬರುತ್ತಿವೆ. ಹೆಸರಿನ ವ್ಯಾಮೋಹದ ಬಗ್ಗೆ ಹಾತೊರೆಯುವ ವ್ಯಕ್ತಿಗಳ ಬಗ್ಗೆ ಆಧ್ಯಾತ್ಮಿಕ ಕವಿ ಡಿ.ವಿ.ಜಿ.ಯವರ ಪದ್ಯ ಕೆಳಗಿನಂತಿದೆ:

**ಹೆಸರು ಹೆಸರೆಂಬುದೇಂ ಕಸರು ಬೀಸುವ ಗಾಳಿ।**

**ಹಸೆಯೊಂದು ನಿನಗೇಕೆ ಬ್ರಹ್ಮಪುರಿಯೊಳಗೆ॥**

**ಶಿಶುವಾಗು ನೀಂ ಮನದಿ ಹಸುವಾಗು ಸಸಿಯಾಗು।**

**ಕಸಪೊರಕೆಯಾಗಿಳೆಗೆ ॥ ಮಂಕುತಿಮ್ಮ**

ಯಾವುದೇ ತ್ಯಾಗದ ಮಹತ್ಕಾರ್ಯವನ್ನು ಎಸಗದಿದ್ದರೂ ತನಗೆ ಬಿರುದು ಬಾವಲಿಗಳು ಬೇಕೆಂದು ಹಾತೊರೆಯುವ ಮನುಜರಿಗೆ, ಕವಿಯವರು ಹೆಸರೆಂಬುದೊಂದು ಕೊಳಕನ್ನು ಹೊತ್ತು ಬರುವ ಗಾಳಿ, ಅದಕ್ಕಾಗಿ ಹಾತೊರೆಯುವೇಕೆ? ಭಗವಂತನ ಸನ್ನಿಧಾನವಾದ ಈ ವಿಶ್ವದಲ್ಲಿ ಕೆಲಕಾಲದ ಯಾತ್ರಿಕನಾಗಿ ಬಂದಿದ್ದು ಹೋಗಲಿಹ, ನಿನಗೆ ಹಸೆಮಣೆ ಹಾಕಿ, ಶೃಂಗರಿಸಿ, ಕೂಡಿಸಿ ವಿಜ್ರಂಬಿಸಲೆಂಬ ಬಯಕೆ ಏಕೆ? ಎಂದು ಪ್ರಶ್ನಿಸುತ್ತಾ ಅದರ ಬದಲಾಗಿ ಪೊಳ್ಳು ಬಯಕೆಗಳನ್ನು ತೊರೆದು ಮಗುವಿನಂತಹ ಸರಳತನವನ್ನು ರೂಢಿಸಿಕೋ, ಹಾಲು ಮೊಸರನೀವ ಹಸುವಿನಂತಾಗು ಹಾಗೂ ಹೂ ಹಣ್ಣುಗಳನ್ನು ನೀಡುವ ಸಸಿಯಾಗು, ಯಾವುದಲ್ಲದಿದ್ದರೂ ವಿಶ್ವದ ಕೊಳೆಯನ್ನು ತೊಳೆವ ಶುದ್ಧಿಗೊಳಿಸುವ ಕಸಪೊರಕೆಯಾಗೆಂದು ಕರೆ ಕೊಡುತ್ತಾರೆ. ಕಸಪೊರಕೆಯು ಯಾವುದೇ ಮಹತ್ತರ ಬಯಕೆಗಳನ್ನು ಹೊಂದಿಲ್ಲವೆಂದಲ್ಲ. ಕಸವನ್ನು ತೆಗೆದನಂತರ ತನ್ನ ಪ್ರದರ್ಶನಗೈಯದೇ ಮೂಲೆಗೆ ಹೋಗಿ ತನ್ನ ನಿಜಸ್ಥಾನವನ್ನಲಂಕರಿಸುತ್ತದೆ. ತನ್ಮೂಲಕ "ಪ್ರದರ್ಶನಬೇಡ, ನಿದರ್ಶನವಿರಲಿ" ಎಂಬ ತತ್ವವನ್ನು ಸದ್ದಿಲ್ಲದೇ ಬಿತ್ತರಿಸುತ್ತದೆ.

ಪಾರಮಾರ್ಥಿಕ ಸತ್ಯದ ಕಡೆಗೆ ಒಲವು ಮೂಡಿದ ಕವಿ ಡಿ.ಜಿ.ಜಿ.ಯವರು ವ್ಯಕ್ತಿಗಳು ತಮ್ಮ ಆತ್ಮದ ನಿಜ ಅರಿವನ್ನರಿತು ತಮ್ಮ ತಮ್ಮ ಕಾರ್ಯಗಳನ್ನು ಶುದ್ಧವಾಗಿ ನಿರ್ವಹಿಸಿರೆಂದು ಹಮ್ಮುಬಿಮ್ಮುಗಳನ್ನು ಬದಿಗೊತ್ತಿ ಎಲ್ಲರೊಳಗೊಂದಾಗುವ ಸಮಷ್ಟಿಭಾವವನ್ನು ಪಡೆಯಿರೆಂದು ಕಸಪೊರಕೆ, ಶಿಶು, ಹಸು, ಸಸಿಗಳ ಔಚಿತ್ಯಪೂರ್ಣ ಉದಾಹರಣೆ ನೀಡಿದ್ದಾರೆ. ಈ ಉದಾಹರಿತವಾದ ಯಾರೂ ಅಥವಾ ಯಾವುದೂ ಅಹಂಕಾರದ ಪ್ರದರ್ಶನಕ್ಕೆ, ಹೆಸರಿನ ವ್ಯಾಮೋಹಕ್ಕೆ ಹೋಗುವುದಿಲ್ಲವಾದ್ದರಿಂದ, ನೀವೂ ಸಹ ಎಲ್ಲರ ಅಭ್ಯುದಯಕ್ಕಾಗಿ ಶ್ರಮಿಸುವ ಸಹಕಾರ ಕ್ಷೇತ್ರದ ಸದಸ್ಯರಾಗಿ ಎಲ್ಲರಿಗಾಗಿ ಉತ್ತಮ ಸಾಧನೆಗೈಯುತ್ತಾ, ಸರ್ವರ ಅಭಿವೃದ್ಧಿಗೆ ಶ್ರಮಿಸಿರೆಂದು ಈ ಭೂ ಉಪಗ್ರಹವನ್ನು ದೈವಾನುಗ್ರಹದ ಕೇಂದ್ರವನ್ನಾಗಿಸಿರೆಂದು ಎಚ್ಚರಿಸುತ್ತಿದ್ದಾರೆ.

# "ತಲ್ಲಣಿಸದಿರು ಕಂಡ್ಯಾ ತಾಳು ಮನವೆ"

ಆಧುನಿಕ ಜಗತ್ತಿನ ಮಾನವ ತನ್ನ ವಿಜ್ಞಾನದ ಸಂಶೋಧನೆಗಳಿಂದ ಉತ್ಕೃಷ್ಟ ಸಾಧನೆಗಳನ್ನು ಎಲ್ಲಾ ಕ್ಷೇತ್ರಗಳಲ್ಲಿ ಸಾಧಿಸಿದ್ದರೂ ಆತನಿಗೆ "ಮಾನಸಿಕ ತೃಪ್ತಿ"ಯೆಂಬುದರ ಕೊರತೆಯೆದ್ದು ಕಾಣುತ್ತಿದೆ. "ಹಕ್ಕಿಯಂತೆ ಹಾರುವುದನ್ನು ಕಲಿತ", "ಮೀನಿನಂತೆ ಈಜುವುದನ್ನು ಕಲಿತ", ಆದರೆ, ಮಾನವ ಸಂಬಂಧಗಳ ವೃದ್ಧಿಯ ವಿಷಯದಲ್ಲಿ ತೀರಾ ಬಡವನಾಗುತ್ತಿದ್ದಾನೆಂದರೆ ಅತಿಶಯೋಕ್ತಿಯಾಗುವುದಿಲ್ಲ. ತಾನು ಎಲ್ಲರಿಗಿಂತ ಉತ್ಕೃಷ್ಟದವನಾಗಿರಬೇಕೆಂಬ ಬಯಕೆ ಕೆಟ್ಟದ್ದಲ್ಲ. ಆದರೆ ಅದೇ ಹವಣಿಯಕೆಯಲ್ಲಿ ಮಾನಸಿಕ ತೃಪ್ತಿಯನ್ನು ಬಲಿಕೊಡುತ್ತಿರುವುದನ್ನು ಕಂಡ ಡಿ.ವಿ.ಜಿ.ಯವರು ಇಂದಿನ ಪದ್ಯದಲ್ಲಿ ಕ್ಷಣಕ್ಷಣಕ್ಕೂ ಪುಟಿದೇಳುವ ಆಸೆಗಳ ಸರಣಿಗಳನ್ನು ಪ್ರಸ್ತಾಪಿಸಿ ಅದಕಾಗಿ ಇದಕಾಗಿ ಮತ್ತೊಂದಕಾಗಿ ಹಾತೊರೆಯುತ್ತಾ, ಮನಸ್ಸನ್ನು ಕುದಿಯುವಂತಹ ಸ್ಥಿತಿಯಲ್ಲಿರುವ ಅಂಶಗಳನ್ನು ತುಂಬಾ ವೇದ್ಯವಾಗಿ ಸ್ಪರ್ಶಿಸಿದ್ದಾರೆ. ಪದ್ಯದ ಲಯಬದ್ಧ ಹರಿವನ್ನು ಗಮನಿಸಿ,

**"ಬೆದಕಾಟ ಬದುಕೆಲ್ಲ ಚಣಚಣವು ಹೊಸ ಹಸಿವು।**
**ಅದಕಾಗಿ ಇದಕಾಗಿ ಮತ್ತೊಂದಕಾಗಿ॥**
**ಅಧಿಕಾರ ಸಿರಿ ಸೊಗಸು ಕೀರ್ತಿಗಳ ನೆನೆದು ಮನ।**
**ಕುದಿಯುತಿಹುದಾವಗಂ ॥ ಮಂಕುತಿಮ್ಮ ॥**

ದೈವಾಂಶಸಂಭೂತರೆನಿಸಿದ ಕನಕದಾಸರು ಮನಸ್ಸಿನ ತಲ್ಲಣವನ್ನು ನಿಲ್ಲಿಸಿರೆಂಬ ಬಗ್ಗೆ ಕವನವೊಂದನ್ನು ರಚಿಸಿ, ಮರಗಿಡಗಳ, ಮೃಗಪಕ್ಷಿಗಳ ಹಾಗೂ ಕಪ್ಪೆ ಮುಂತಾದ ಪ್ರಾಣಿಗಳ ಜೀವನ ನಿರ್ವಹಣೆಯ ಸುಗಮತೆಯನ್ನು ಪ್ರಸ್ತಾಪಿಸುತ್ತಾ, "ಬೆಟ್ಟದ ಮೇಲೆ ಹುಟ್ಟಿರುವ ವೃಕ್ಷಕ್ಕೆ ಕಟ್ಟೆಯನು ಕಟ್ಟಿ ನೀರೆರೆದವರು ಯಾರೋ? ಅಡವಿಯೊಳಗಾಡುವ ಮೃಗಪಕ್ಷಿಗಳಿಗೆಲ್ಲಾ ಅಡಿಗಡಿಗಾಹಾರವಿತ್ತವರು ಯಾರು ಹಾಗೂ ಕಲ್ಲೊಳಗೆ ಹುಟ್ಟಿ ಕೂಗುವ ಕಪ್ಪೆಗಳಿಗೆ ಆಹಾರವಿತ್ತವರು ಯಾರೆಂದು ಪ್ರಶ್ನಿಸಿ ಸಾರ್ವತ್ರಿಕ ಉತ್ತರವಾಗಿ, "ಹುಟ್ಟಿಸಿದ ಸ್ವಾಮಿ ಹೊಣೆಗಾರನಾಗಿ ಹಡೆದ ಜನನಿಯ ತೆರದಿ ಬಿಡದೆ ರಕ್ಷಿಪನಿದಕೆ ಸಂದೇಹಬೇಡ, ತಲ್ಲಣಿಸದಿರು ಕಂಡ್ಯಾ ತಾಳು ಮನವೇ", ಎಂದು ಕುದಿಯುವ ಅಶಾಂತ ಉದ್ವಿಗ್ನ ಮನ ಹೊಂದಿದ ಇಂದಿನ ನಮ್ಮಗಳಿಗೆ ಶಾಶ್ವತ ಸಾಂತ್ವನ ನೀಡಿದ್ದಾರೆ. ಅಸೀಮರು, ಅಪ್ರಮೇಯ, ಸ್ವಪ್ರಕಾಶ, ಸೃಷ್ಟಿ, ಸ್ಥಿತಿ ಲಯಕರ್ತನಿರುವಾಗ ನಮ್ಮಿಷ್ಟಗಳ ಈಡೇರಿಕೆಗೆ ಬಹಳಷ್ಟು ಒದ್ದಾಡಿ ನೆಮ್ಮದಿಯನ್ನು ಕಳೆದುಕೊಳ್ಳಬೇಕಾದ ಅಂಶವಿಲ್ಲವೆನ್ನುತ್ತಾರೆ.

ಸಾಧಾರಣ ದೃಷ್ಟಾಂತವಾದ ಪೊರಕೆಯ ಕಡ್ಡಿಗಳು ದಾರದಿಂದ ಕಟ್ಟಲ್ಪಟ್ಟಿದ್ದರೆ ಕಸವನ್ನು ಗುಡಿಸಬಹುದು. ಆದರೆ, ಕಡ್ಡಿಗಳೇ ಉದುರಿದರೆ ಅವೇ ಕಸವಾಗುವುವು. ಆದ್ದರಿಂದ ನಾವು ಬಿಡಿಯಾಗಿ ಬೀಳದೇ ಇಡಿಯಾಗಿ ಉಳಿದು ಸಹಕಾರ ಎಂಬ ದಾರದಿಂದ ಒಂದಾಗಿ ಅದ್ವಿತೀಯವಾದುದನ್ನು ಸಾಧಿಸೋಣ. ತತ್ಕಾರಣ ನಿಮಿಷ ನಿಮಿಷಕ್ಕೂ ಶ್ವಾಸೋಚ್ಛ್ವಾಸಗಳಲ್ಲಿ ಭಗವಂತನ ಸ್ಮೃತಿಯನ್ನಿಟ್ಟುಕೊಂಡು, "ನಾವೆಲ್ಲರೂ ಭಗವಂತನ ಮಕ್ಕಳು, ಒಂದೇ ಸಂಸಾರದ ಸದಸ್ಯರು", ಎಂಬ ಭಾವನೆಯಿಂದ ಬದುಕಿದಲ್ಲಿ ಬೆದಕಾಟಕ್ಕೆ ಎಡೆಯಿರದೆ, ಸಾಂತ್ವನ ಪ್ರಶಾಂತಗಳೇ ಮೂಡಿಬಂದು ಈ ಧರೆಯೇ ಸ್ವರ್ಗವಾಗುತ್ತದೆಂಬುದು ಈ ಪದ್ಯದ ಸಾರಾಂಶ.

# “ಪರರ ಸುಖವನ್ನು ತನ್ನದಾಗಿಸಿಕೊಳ್ಳುವ ಪರರ ಸುಖ ಹಾಗೂ ಭಾಗಿಯಾಗುವ ಮನೋಭಾವದಲ್ಲಿ ಪರಿವರ್ತನೆ”

ಈಗತ್ತಲಾಗಿನ ಜಗದ ಜನರ ಸ್ವಾರ್ಥಪರ ಬದುಕಿನ ಶೈಲಿಯನ್ನು ನಿರೀಕ್ಷಿಸಿದ ಕವಿ ಡಿ.ವಿ.ಜಿ.ಯವರು “ನಿಮ್ಮ ಸಮಯದಲ್ಲೊಂದಿಷ್ಟನ್ನು ಅನ್ಯರಿಗೆ ಮೀಸಲಿಟ್ಟು ಸುಖವನ್ನು ಅನುಭವಿಸಿರಿ” ಎಂಬ ಸಂದೇಶವನ್ನು ಕೆಳಗಿನ ಪದ್ಯದಲ್ಲಿ ನೀಡಿದ್ದಾರೆ. ತನ್ನ ಮನೆ, ತನ್ನ ಸಂಸಾರ, ತನ್ನ ಆಸ್ತಿ, ತನ್ನ ಸಂಪತ್ತೆಂಬ ಸ್ವಾರ್ಥಾಲಾಪದಲ್ಲಿ ಸದಾ ಮುಳುಗಿರುವ ಇಂದಿನ ವ್ಯಕ್ತಿಗಳಿಗೆ ಅನ್ಯರ ಜೀವನದ ಕಡೆ ಕಣ್ಣು ಹಾಯಿಸುವಷ್ಟು ಸಮಯವಿಲ್ಲ ಹಾಗೂ ನೆರವನ್ನಿತ್ತು, ಅವರ ನೋವಿನಲ್ಲಿ ಭಾಗಿಯಾಗಿ ನೆರವಾಗಬೇಕೆಂಬ ಭಾವನೆ ಅದೃಶ್ಯವಾಗುತ್ತಿದೆಯೆಂದರೆ ಅತಿಶಯೋಕ್ತಿಯಲ್ಲ. ಇತರರಿಗೆ ನೆರವಾಗೆಂದರೆ ತನ್ನನ್ನು ಬಿಟ್ಟುಬಿಡೆಂಬುದರ್ಥವಲ್ಲ. ತನ್ನ ಕೈಲಾದ ನೆರವನ್ನು ನೀಡಿ ಇತರರ ಶ್ರೇಯೋಭಿವೃದ್ಧಿಗೆ ಶ್ರಮಿಸೆಂದು ಅರ್ಥ. ಆಂಗ್ಲಕವಿ ಖಚಿಟಠಿ ಘಾಚಿಟಜಂ ಇಟಜಢಿಂಟಿ ಎಂಬಾತ ಹೇಳುವಂತೆ “Rejoice with the good of others and don’t feel jealous and thus feel contended”. ಇತರರ ಶುಭವನ್ನು ಗುರಿಯಾಗಿಟ್ಟುಕೋ, ಸುಖವು ತನ್ತಾನೇ ನಿನಗೊದಗಿ ಬರುವುದು ಖಾತ್ರಿಯೆಂದಿದ್ದಾರೆ. “ಕೊಟ್ಟುಪಡೆ, ಪಡೆವ ಸಿರಿಯನರಿ” ಎಂಬುದರ ಒಳಾರ್ಥವನ್ನು ಬಿಂಬಿಸುವ ದೃಷ್ಟಾಂತವಾಗಿ ದ್ರೌಪದಿಯು ಕೃಷ್ಣನಿಗೆ ಸ್ವಲ್ಪ ಗಾಯವಾದಾಗ ಬೆರಳಿಗೆ ತನ್ನ ಸೀರೆಯ ಸೆರಗನ್ನು ಕಿತ್ತು ಕಟ್ಟಿದ ಕಾರಣ ಅವಶ್ಯಕವಾದಾಗ, ಸಂಕಷ್ಟದಲ್ಲಿದ್ದಾಗ ಅಪರಿಮಿತ ವಸ್ತ್ರ ಪಡೆದು, ಮಾನಉಳಿಸಿಕೊಂಡ ಪುರಾಣದ ಉದಾಹರಣೆ ನಮಗೆಲ್ಲಾ ತಿಳಿದೇ ಇದೆ. ತಂದೆಮಗನ ಹಾಗೂ ಇತರರ ಕ್ಷೇಮಸಂಬಂಧೀ ಪದ್ಯವನ್ನು ಗಮನಿಸಿ,

**“ತನಗೆ ಬಾರದ ಲಾಭ ತನಯಂಗೆ ಬಂದಾಗ ।**
**ಜನಕನ್ ಅದು ತನದೆಂದು ಸಂತಸಿಪ ತೆರದಿ ॥**
**ಜನದೊಳಾರ್ಗಾವ ಸೊಗವಾದೊಡಂ ತನದೆನ್ನು।**
**ತನುಭವಿಪನೋ ಜ್ಞಾನಿ ॥ ಮಂಕುತಿಮ್ಮ ॥**

ತಂದೆಯಾದವನೋರ್ವನು ವೈದ್ಯಕೀಯ ಶಿಕ್ಷಣ ಪಡೆಯಲಾಗದಿದ್ದರೂ ತನ್ನ ಮಗ ಎಂ.ಬಿ.ಬಿ.ಎಸ್ ಓದಿದರೆ ತಾನೇ ವೈದ್ಯನಾದಷ್ಟು ಸಂತೋಷಭರಿತನಾಗುತ್ತಾನೆ. ತನ್ನ

ಜೀವಿತಕಾಲದಲ್ಲಿ ಐ.ಎ.ಎಸ್ ಪರೀಕ್ಷೆ ಪಾಸು ಮಾಡಲಾಗಲಿಲ್ಲ. ಆದರೆ ತನ್ನ ಮಗ ಐ.ಎ.ಎಸ್ ಮಾಡಿ ಜಿಲ್ಲಾಧಿಕಾರಿಯಾಗಿದ್ದಾನೆಂದರೆ ತಂದೆಯಾದವನಿಗೆ ಅಪರಿಮಿತ ಆನಂದ. ತನಗೆ ಸ್ವಯಂ ಈ ಎರಡೂ ಲಾಭಗಳು ದಕ್ಕದಿದ್ದರೂ ತನ್ನ ಮಗನಿಗೆ ದಕ್ಕಿದ್ದಕ್ಕಾಗಿ ತನ್ನದೆಂದೇ ಸಂತುಷ್ಟನಾಗುತ್ತಾನೆ.

ಈ ಸಂತೋಷದ ಪರಿಧಿಯನ್ನೇ ವಿಸ್ತರಿಸುತ್ತಾ ಕವಿಗಳು ಶುಭವಾಗುವುದು ತನಗೆ, ತನ್ನ ಮಗನಿಗೆಂಬ ಸೀಮಿತ ವ್ಯಾಪ್ತಿಯನ್ನು ಬಿಟ್ಟು, ಯಾರಿಗಾದರೂ ಆಗಲಿ, ಅದೂ ಸಹ ತನಗೇ ಸಂದ ಶುಭವೆಂದು ವಿಸ್ತರಿತ ಆತ್ಮ ತೃಪ್ತಿಯನ್ನು ಹೊಂದಲು ತನ್ಮೂಲಕ ವಿಶ್ವಪ್ರಜ್ಞೆಯನ್ನು ಹೊಂದಲು ಕರೆಕೊಡುತ್ತಿದ್ದಾರೆ. ಈ ವಿಶ್ವದ "ಅಸದೃಶ್ಯ ಆಡಳಿತಗಾರ" **(Invisible Administrator**)ನಾದ ಭಗವಂತನ ವಿಸ್ತೃತರೂಪಗಳೇ ತಾವೆಲ್ಲರೂ ಎಂದು ವಿಶ್ವಕುಟುಂಬ ಪ್ರಜ್ಞೆಯನ್ನು ಹೊಂದಲು ಈ ಹಿಂದಿನ ನಮ್ಮ ಸಂತರ, ಸಾಧುಗಳ ಚಿಂತನಶೀಲರ "ಸರ್ವೇಜನಾ ಸುಖಿನೋಭವಂತು" ಮತ್ತು "ವಸುದೈವ ಕುಟುಂಬಕಂ" ವಿಶ್ವೋಕ್ತಿಗಳನ್ನು ನೆನಪಿಸುತ್ತಾ ಜಗದೊಳ್ ಯಾರಿಗಾದರೂ ಶುಭವಾಯಿತೆಂದರೆ, ಅದನ್ನು ತನದೆಂದು ಅನುಭವಿಸುವವನು ಜ್ಞಾನಿ ಎಂದಿದ್ದಾರೆ.

ಹಣತೆಯ ಬತ್ತಿಯೊಂದು ಉರಿದು ಇತರರಿಗೆ ಬೆಳಕ ನೀಡಿ ತನ್ನ ಬದುಕಿನ ಸಾರ್ಥಕತೆಯನ್ನು ಕಾಣುತ್ತದೆ. ಅಂತೆಯೇ ನೆಲದಲ್ಲಿ ಬಿತ್ತಲ್ಪಟ್ಟ ಬೀಜವೊಂದು ಮೊಳಕೆಯೊಡೆದು, ತನ್ನ ಆಸ್ತಿತ್ವವನ್ನು ಇಲ್ಲವೆನಿಸಿಕೊಂಡು ವೃಕ್ಷವಾಗಿ ಜಗತ್ತಿಗೆ ನೆರಳು, ಹೂವು, ಹಣ್ಣು ನೀಡಿ ಜನ್ಮಸಾಫಲ್ಯತೆಯನ್ನು ಕಾಣುತ್ತದೆ. ಸಮಸ್ತ ವಿಶ್ವಕ್ಕೆ ಬೆಳಕೀವ ಸೂರ್ಯ ಚಂದ್ರರುಗಳೂ ಸಹ ಜಗತ್ತಿನವರ ಸುಖಕ್ಕಾಗಿ ಸೇವೆ ನೀಡುತ್ತಿದ್ದಾರೆ.

ಈ ಮೂಲಕ ನಾವುಗಳೆಲ್ಲರೂ ವಿಸ್ತರಿತ ಮನೋಭಾವವನ್ನು ಹೊಂದಿ, ಉತ್ತಮ ಸಹಕಾರಿಗಳಾಗಿ, ಸರ್ವರ ಅಭಿವೃದ್ಧಿಯನ್ನು ಬಯಸುತ್ತಾ, ನಮ್ಮ ದೈನಂದಿನ ಮನೋಭಾವದಲ್ಲಿ ಪರಿವರ್ತನೆ ತಂದು, ಇತರರ ನೆರವಿಗೂ ಸಹಾಯದ ಹಸ್ತವನ್ನು ಚಾಚುತ್ತಾ ಹೃದಯವಂತರಾಗೋಣ ಎಂಬುದೇ ಈ ಪದ್ಯದ ಸಾರಾಂಶವಾಗಿದೆ.

# "ಸ್ವಾರ್ಥವ ತೊರೆದು ವಿಶ್ವಪ್ರೇಮಿಯಾಗು"

"ಸರ್ವೇಜನಾ ಸುಖಿನೋ ಭವಂತು" ಹಾಗೂ 'ವಸುದೈವ ಕುಟುಂಬಕಂ' ಎನ್ನುವ ಲೋಕೋಕ್ತಿಗಳ ಮೂಲಕ ವಿಶ್ವವನ್ನೇ ಒಂದು ಕುಟುಂಬವೆಂದು ಭಾವಿಸಿರೆಂದು ವೇದೋಪನಿಷತ್ತುಗಳು ಕರೆ ನೀಡುವ ಮೂಲಕ ವಿಶ್ವಪ್ರೇಮವನ್ನು, ವಿಶ್ವಭ್ರಾತೃತ್ವವನ್ನು ಬೆಳೆಸಿಕೊಳ್ಳಲು ಸೂಚಿಸಲಾಗಿದೆ. ಬಹಳ ಹಿಂದಿನದೇನಲ್ಲ 50 ವರ್ಷಗಳ ಹಿಂದಿನ ಅವಧಿಗೆ ನಮ್ಮ ಮನಃಸ್ಥಿತಿಯನ್ನು ಹರಿಸಿದಾಗ ಅಂದು ಮಾನವ ಸಂಬಂಧಗಳು ಸಮೃದ್ಧವಾಗಿದ್ದವು. ಒಬ್ಬರನ್ನೊಬ್ಬರು ಪ್ರೀತಿ ಸಲುಗೆಗಳಿಂದ ವರ್ತಿಸುತ್ತಾ, ರಕ್ತಸಂಬಂಧಿಗಳಂತೆ ಇದ್ದುದಿನ್ನೂ ನಮ್ಮ ಸ್ಮೃತಿಪಟದಲ್ಲಿದೆ. ಆದರೆ ಇತ್ತೀಚೆನ ದಿನಗಳಲ್ಲಿ ಮಾನವ ಸಂಬಂಧಗಳು ತೀರಾ ಕೃಷವಾಗಿವೆ, ಹಗುರವಾಗಿವೆ. ತಾನಾಯಿತು, ತನ್ನದಾಯಿತು ಮತ್ತು ತನ್ನ ಆಸ್ತಿ, ಸಂಸಾರ, ವೈಭೋಗಗಳ ಕಡೆಗೇ ಹೆಚ್ಚು ಕೇಂದ್ರೀಕೃತವಾಗಿದ್ದು, ಪಕ್ಕಾ ಸ್ವಾರ್ಥಿಗಳಾಗುತ್ತಿರುವುದು ಕಂಡುಬರುತ್ತಿದೆ. ಏನನ್ನೇ ಮಾಡಿದರೂ ಯಾವುದನ್ನೇ ನಿರ್ವಹಿಸಿದರೂ ನನಗೆ ಇದರಿಂದೇನು ಲಾಭ ಎಂದು ಯೋಚಿಸುವ ಪರಿ ಸೃಷ್ಟಿಯಾಗಿದೆಯೆಂಬ ಬಗ್ಗೆ ಆಧಾತ್ಮ ಕವಿ ಡಿ.ವಿ.ಜಿ.ಯವರು ಈ ಕೆಳಗಿನ ಪದ್ಯದಲ್ಲಿ ತನ್ನದನ್ನು ಬಿಟ್ಟು ಜಗದ ಒಳಿತಿಗೆ ಒಂದಷ್ಟು ಚಿಂತಿಸಿ ಎಂದಿರುವ ಪದ್ಯ ಕೆಳಗಿನಂತಿದೆ:

**"ಗತಿಯೇನು ಎನಗೆನುತ ಕೇಳ್ವವರೆ ಎಲ್ಲರುಂ ।**
**ಹಿತವೆಂತು ಜಗಕೆಂದು ಕೇಳುವವರಾರು?**
**ಮತಿಯ ವಿಶ್ವದಿ ಬೆರೆಸಿ ಜೀವಿತವ ವಿಸ್ತರಿಸೆ।**
**ಪಥ ಮುಕ್ತಿಗಾಗಲೇ ॥ ಮಂಕುತಿಮ್ಮ ॥**

ಭವಿಷ್ಯದ ಬಗ್ಗೆ ಅತಿ ಚಿಂತನೆ ಮಾಡಿ ಪ್ರತಿನಿತ್ಯ ಇಷ್ಟರಮತ್ತಷ್ಟರ ಆಸೆ ಪಡುವ ಜನರೇ ಹೆಚ್ಚಾಗಿದ್ದಾರೆಂದಿದ್ದಾರೆ. ನಾನಾಯಿತು, ನನ್ನ ಪಾಡಾಯಿತು ಜಗದ ಗೊಡವೆ ನನಗೇಕೆ ಎಂಬ ಸಾರ್ವತ್ರಿಕ ಭಾವ ಆವೃತವಾಗಿರುವುದನ್ನು ಮೇಲಿನ ಪದ್ಯದಲ್ಲಿ ವಿವರಿಸಿದ್ದಾರೆ. ಯಾವುದೇ ವರ್ಗದ ಜನರ ನಿರೀಕ್ಷೆಗಳನ್ನೇ ಆಗಲಿ ಪರಿಶೀಲಿಸಿದಾಗ ಹೊರಬರುವ ಅಂಶವೆಂದರೆ, ಈ ಕೆಲಸ ಮಾಡುವುದರಿಂದ ನನಗೇನು ಬರುತ್ತದೆ ಎಂಬ ಪ್ರಶ್ನೆಯನ್ನು ಮುಂದಿಡುವವರೇ ಹೊರತು ಜಗದ ನಿರ್ವಹಣೆಗೆ ಏನು ಗತಿ ನಮ್ಮಿಂದಲೇನಾದರೂ ಸೇವೆ ಶ್ರಮಗಳು ಬೇಕಿವೆಯಾ ಎಂದು ಕೇಳುವ ವರ್ಗದ ಜನಗಳೇ ಕಡಿಮೆಯಾಗಿದ್ದಾರೆಂದು ತಿಳಿಸುತ್ತಾ, ಕವಿಯವರು ಮನದ ಆಲೋಚನೆಯನ್ನು ವಿಸ್ತಾರಗೊಳಿಸಿ, ಸ್ವಾರ್ಥವನ್ನು ಬಿಟ್ಟು ಜಗಚ್ಚಿಂತನೆಯಲ್ಲಿ ಸರ್ವರ ಹಿತ ಅಡಗಿದೆಯೆಂದೂ ಅಂಥಹ ಸ್ಥಿತಿಯನ್ನು ವೃದ್ಧಿಸಿಕೊಂಡಲ್ಲಿ ವ್ಯಕ್ತಿಯ ಮುಕ್ತಿಗೆ ದಾರಿ ಎಂದಿದ್ದಾರೆ.

ನಾವೆಲ್ಲರೂ ಸಹಕಾರ ಭಾವವನ್ನು ಹೊಂದಿ ಸರ್ವರ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇವೆಂಬ ಭಾವವನ್ನು ತಳೆಯೋಣವೆನ್ನುವುದೇ ಈ ಪದ್ಯದ ಸಾರಾಂಶ.

# "ಪರಿಶ್ರಮದಿಂದ ಮಾತ್ರ ಫಲವೇ ಹೊರತು ಪಲಾಯನದಿಂದಲ್ಲ"

ದುಷ್ಟಶಿಕ್ಷಣೆ, ಶಿಷ್ಟ ರಕ್ಷಣೆ ಹಾಗೂ ಧರ್ಮಸಂಸ್ಥಾಪನೆ ಉದ್ದೇಶಗಳನ್ನು ಹೊಂದಿದ್ದ ಗೀತಾಚಾರ್ಯ ಶ್ರೀಕೃಷ್ಣನು ಶಿಷ್ಯನಾದ ಅರ್ಜುನನಿಗೆ ಫಲಾಪೇಕ್ಷೆಯನ್ನು ನಿರೀಕ್ಷಿಸದೇ, ಹೃದಯ ದೌರ್ಬಲ್ಯಕ್ಕೊಳಗಾಗದೇ, ಧೈರ್ಯೋತ್ಸಾಹಗಳಿಂದ ಸಮರವನ್ನೆದುರಿಸಲು ನಿರ್ದೇಶನ ನೀಡುತ್ತಾ, ನಿಷ್ಕಾಮ ಕರ್ಮದ ಮಹತ್ತನ್ನು ವರ್ಣಿಸಿದ್ದಾನೆ. ಸೋಲು ಗೆಲುವುಗಳಿಗೆ ಹೆದರದೇ, ಅಂಜದೇ ಯುದ್ಧಗೈದಿದ್ದಾದರೆ, ತನ್ನ ಬೆಂಬಲದಿಂದ ಗೆಲುವು ನಿಶ್ಚಿತವೆಂಬ ಭರವಸೆಯನ್ನು ಸಹ ನೀಡುತ್ತಾನೆ. ಆದರೆ ಇಂದಿನ ದಿನಮಾನದವರಾದ ನಾವುಗಳು ಪರಿಶ್ರಮವಿಲ್ಲದೇ ಫಲ ಬರಬೇಕು, ಶ್ರಮವಿರದೇ ಲಾಭಬೇಕೆಂಬ ನಮ್ಮ ಜೀವನ ಸುಖವಾಗಿರಬೇಕೆಂಬ ಹೆಬ್ಬಯಕೆ ನಮ್ಮದು. ನಾವೆಷ್ಟು ಸುಖಾಭಿಲಾಷಿಗಳೆಂಬುದರ ಉದಾಹರಣೆ ನೀಡುತ್ತಾ, ಓರ್ವ ಉಪನ್ಯಾಸಕರು "ಭಾರತರತ್ನ ಪ್ರಶಸ್ತಿ ಈ ಸಾರಿ ನಿಮಗೆ ದಕ್ಕಿದೆ" ಎಂದೇನಾದರೂ ಸುದ್ದಿ ಕೊಟ್ಟರೆ, "ನಾನು ಅದಕ್ಕೆ ಅರ್ಹನಲ್ಲ, ಅಂಥಹದ್ದೇನನ್ನೂ ಸಾಧಿಸಿಲ್ಲ" ಎನ್ನುವವರು ತೀರ ವಿರಳ. ಬದಲಾಗಿ ಕೊರಳು ಕೊಟ್ಟು ಹಾರ, ತುರಾಯಿ, ಪ್ರಶಸ್ತಿ, ಪದಕಗಳನ್ನರಸುವವರೇ ಹೆಚ್ಚೆನ್ನುತ್ತಾರೆ. ಬಹು ಮುಖ್ಯವಾದದ್ದೊಂದನ್ನು ಪಡೆಯಲು ಪರಿಶ್ರಮ, ತ್ಯಾಗ, ಬಿಡದ ಛಲಗಳು ನಿಜವಾಗಿ ಅಗತ್ಯ ಅಪವರ್ತ್ಯಗಳು. ಇಂದಿಗೆ ನಮ್ಮಲ್ಲಿ ಮನೆ ಮಾಡಿರುವ ಜಾಡ್ಯ, ನಿರಾಸೆ, ಪರಾವಲಂಬಿತನ, ಸಾಹಸರಹಿತತೆ, ಜೀವನವನ್ನು ಎದುರಿಸಲು ಒದಗಿ ಬರುತ್ತಿರುವ ಹೆದರಿಕೆಗಳನ್ನು ಕಂಡ ಡಿ.ವಿ.ಜಿ.ಯವರು ಜೀವನವೊಂದು ಯುದ್ಧವೆಂದೂ, ಅದರಲ್ಲಿ ನಾವು ಸೆಣಸಾಡಬೇಕಾದ ಸೈನಿಕರು, ವಿಧಿಯೇ ಎದುರಾಳಿ ಎಂದೂ ಇದನ್ನು ಎದುರಿಸುವ ಬದಲು ಅಂಜಿ ಓಡಿದೊಡೆಯೂ ಅಂಥಹವನು ವಿಧಿಯ ಬಾಯಿಗೆ ಆಹಾರವಾಗಿಯೇ ಆಗುತ್ತಾನೆಂದೂ ಇದರ ಶಾಶ್ವತತೆಯನ್ನರಿತು ಎದೆಯನ್ನು ಉಕ್ಕಿನಂತೆ ಗಟ್ಟಿಯಾಗಿಸಿ ಸೆಣಸಿದೊಡೆ ವಿಧಿಯೇ ನಿನ್ನನ್ನು ಮೆಚ್ಚಿ "ಶಹಬ್ಬಾಸ್" ಎಂದು ನಿನಗೊಲಿದು ಮನದಾಳದ ಬೇಡಿಕೆಗಳನ್ನು ಈಡೇರಿಸುತ್ತಾನೆಂಬರ್ಥದ ಬದುಕಿನ ಸ್ವಾರಸ್ಯಕರ ಪದ್ಯವನ್ನು ಈ ಕೆಳಗಿನಂತೆ ಜನತೆಗಿತ್ತಿದ್ದಾರೆ.

**"ಬದುಕೊಂದು ಕದನವೆಂದಂಜಿ ಬಿಟ್ಟೋಡುವನು ।**

**ಬಿದಿಯ ಬಾಯಿಗೆ ಕವಳವಾಗದುಳಿಯುವನೆ?**

**ಎದೆಯನುಕ್ಕಾಗಿಸುತ ಮತಿಗದೆಯ ಪಿಡಿದು ನೀ ।**

**ನೆದುರು ನಿಲೆ ಬಿದಿಯೊಲಿವ" ॥ಮಂಕುತಿಮ್ಮ॥**

ಜೀವನವೆಂಬ ಯುದ್ಧದಲ್ಲಿ ವಿಧಿಯೇ ನಮ್ಮ ಎದುರಾಳಿಯಾಗಿದ್ದು,

ಜೀವನವನ್ನೆದುರಿಸುವ ಯತ್ನಗೈಯದೇ ಬಿಟ್ಟು ಫಲಾಯನ ಸೂತ್ರವನ್ನು ಅನುಸರಿಸಲು ಎತ್ತ ಓಡಿದರೂ ಬಿಡನವನು, ಸಾಹಸದಿಂದ ಬದುಕೆಂಬ ಸಮರವನ್ನು ಎದುರಿಸಿದಲ್ಲಿ "ಕೊಲ್ಲಿಪನೆ ಬೆಳೆಯಿಪನು" ಎಂಬಂತೆ ಪ್ರತಿಸ್ಪರ್ಧಿಯಾಗಿದ್ದ ವಿಧಿಯೇ ಪ್ರೋತ್ಸಾಹಕನಾಗಿ ನಿನ್ನೆದುರಿಗಿದ್ದ ತೊಡಕು, ತೊಂದರೆ, ಕಂಟಕ ಅಡಚಣೆಗಳನ್ನು ನಿವಾರಿಸಿ ನಿನ್ನ ಶ್ರೇಯಸ್ಸಿಗೆ ಅಭಯವನ್ನು ಪ್ರಧಾನಿಸುತ್ತಾನೆ. ಇಲ್ಲಿ ಕವಿಯವರು ಬದುಕಿನ ಶಾಶ್ವತತೆಯ ಹಾಗೂ ನಮ್ಮ ಮತ್ತು ವಿಧಿಯ ಮಧ್ಯೆ ಬರುವ ಕಷ್ಟನಷ್ಟಗಳು ಸೋಲು-ಗೆಲುವುಗಳು ಏರು-ತಗ್ಗುಗಳನ್ನು ಲೆಕ್ಕಿಸದೇ ಸರ್ವವನ್ನೂ ನಿಯಂತ್ರಿಸುವ ಸರ್ವವ್ಯಾಪಕ ವಿಶ್ವಶಕ್ತಿಯಾದ ಭಗವಂತನನ್ನೇ ನಂಬಿ ಕಾರ್ಯದಲ್ಲಿ ಮುಂದುವರಿದಲ್ಲಿ ಮನದಾಳದಲ್ಲಿ ನವನವೋನ್ವೇಷಣಾ ಶಾಲಿಯಾದ ಪುಟಿದೇಳುವ ಸಾಹಸವನ್ನು ಪತ್ತೆ ಹಚ್ಚಿ, ಗೆಲುವೆಂಬ ವರವನ್ನು ಖಂಡಿತ ದಯಪಾಲಿಸುತ್ತಾನೆನ್ನುತ್ತಾರೆ.

ಚಿಕ್ಕಂದಿನಲ್ಲಿ ಕೇಳಿದ ಒಂದು ಕಿರುಕಥೆ. ಒಂದೂರಿನಲ್ಲಿ ಸೋಮಾರಿಗಳ ಸಂಘವೊಂದು ಅಸ್ತಿತ್ವಕ್ಕೆ ಬಂದು ಅದರ ಅಧ್ಯಕ್ಷರ ಆಯ್ಕೆಯ ಸಂದರ್ಭ. ಅಧ್ಯಕ್ಷರು ಯಾರಾಗಬೇಕೆಂಬ ಬಗ್ಗೆ ತೀವ್ರ ಸ್ಪರ್ಧೆಯೇರ್ಪಟ್ಟಾಗ ದಾರಿಯಲ್ಲಿ ಬರುತ್ತಿದ್ದ ಓರ್ವ ಬುದ್ಧಿವಂತ ವ್ಯಕ್ತಿಯನ್ನು ಕಂಡು ಸೋಮಾರಿ ಸದಸ್ಯರೆಲ್ಲರೂ ತಮ್ಮ ಸಂಘದ ಅಧ್ಯಕ್ಷರ ಆಯ್ಕೆ ಮಾಡಿಕೊಡಬೇಕೆಂಬ ಕೋರಿಕೆಯನ್ನು ಸಲ್ಲಿಸಿದಾಗ, ಆತನು ಒಪ್ಪಿಕೊಂಡು, ಆಕಾಂಕ್ಷಿ ಅಭ್ಯರ್ಥಿಗಳಿಂದ ಸ್ಪರ್ಧೆಯ ಬಗ್ಗೆ ಕೈಎತ್ತಲು ಸೂಚಿಸಿದಾಗ ಎಲ್ಲರೂ ಕೈ ಎತ್ತಿ ಓರ್ವ ಮಾತ್ರ ಕೈ ಎತ್ತಿರಲ್ಲಿಲ್ಲ. ಚಕಿತನಾದ ಬುದ್ಧಿವಂತ ವ್ಯಕ್ತಿಯು ಕೈ ಎತ್ತಿದ್ದವರನ್ನೆಲ್ಲ ಕೈ ಕೆಳಗಿಳಿಸಲು ತಿಳಿಸಿ, ಕೈ ಎತ್ತದೇ ಇದ್ದ ವ್ಯಕ್ತಿಯನ್ನು ಪ್ರಶ್ನಿಸುತ್ತಾ, ಎಲ್ಲರಿಗೂ ಅಧ್ಯಕ್ಷರಾಗುವ ಬಯಕೆಯಿದೆ. ಆ ಬಯಕೆ ನಿಮಗಿಲ್ಲವೇ? ಎಂದು ಪ್ರಶ್ನಿಸಿದಾಗ ಆತ "ನನಗೂ ತೀವ್ರವಾದ ಆಸೆಯಿದೆ. ಆದರೆ ಯಾವನು ಕೈ ಎತ್ತುತ್ತಾನೆಂಬ ಉದಾಸದಿಂದ ನಾನು ಕೈ ಎತ್ತಲ್ಲಿಲ್ಲ" ಎಂದು ಉತ್ತರ ನೀಡುತ್ತಾನೆ. ಬುದ್ಧಿವಂತನಾದ ವ್ಯಕ್ತಿಯು ಸೋಮಾರಿಗಳ ಸಂಘಕ್ಕೆ ಅತಿಸೋಮಾರಿಯಾದವನೇ ಆಧ್ಯಕ್ಷಸ್ಥಾನಕ್ಕೆ ಅರ್ಹನೆಂದು ಆತನನ್ನೇ ಅಧ್ಯಕ್ಷನೆಂದು ಘೋಷಿಸಿದ. ಹೀಗೆ ಮುಗಿಯಿತು ಅಧ್ಯಕ್ಷರ ಆಯ್ಕೆಯ ಪ್ರಕ್ರಿಯೆ. ಪ್ರಯತ್ನಶೂನ್ಯರಾಗಿ ಫಲಾಕಾಂಕ್ಷಿಗಳಾಗಿರುವ ನಾವೇನೂ ಈ ಉದಾಹರಣೆಗಿಂತ ಭಿನ್ನರಲ್ಲವೆಂದರೆ ಅತಿಶಯೋಕ್ತಿಯಾಗಲಾರದು.

ಈ ಚೇತೋಹಾರಿ ಸಂದೇಶವನ್ನು ನಮ್ಮ ಮನದಾಳಕ್ಕಿಳಿಸಿ ನಾವೆಲ್ಲರೂ ಒಬ್ಬ ಭಗವಂತನ ಮಕ್ಕಳು, ಸಹನೆ, ಧೈರ್ಯ, ಉತ್ಸಾಹಗಳಿಂದ ಒಂದು "ಸಹಕಾರ" ಕುಟುಂಬದವರಂತೆ ಬದುಕು ನಡೆಸಿದಲ್ಲಿ, ಈ ಭೂಉಪಗ್ರಹವನ್ನು ದೈವಾನುಗ್ರಹದ ಕೇಂದ್ರವಾಗಿಸಿ ಸಂಪದಕ್ಷಯತೆ, ವಿದ್ಯಾವಸ್ತು ಸಮೃದ್ಧಿರಿತ್ಯಖಿಲ ಸಾಮಾಗ್ರಿಗಳ ಸಮೇತ ಜೀವಿಸಬಹುದೆಂಬುದೇ ಈ ಪದ್ಯದ ಸಾರಾಂಶ.

# "ಸ್ಥಿರತೆಯಿಂದ ಸುಖವನ್ನರಸಿ ನಿನ್ನದಾಗಿಸಿಕೋ"

ಸೃಷ್ಟಿಯಲ್ಲಿ ಹುಟ್ಟಿಬಂದಿರುವ ಪ್ರತಿಯೊಬ್ಬ ಮಾನವನು ಮಾತ್ರವೇ ಏನು ಪ್ರತಿ ಪ್ರಾಣಿಯೂ ಕೂಡ ಸುಖವನ್ನರಸುತ್ತದೆ. ನಿಜವಾದ ಸುಖವೇನೆಂದರಿಯದೆ ಮಿಥ್ಯಾ ಸುಖದ ಭ್ರಮೆಯಲ್ಲೇ ಅಲೆದಲೆದು ಬಸವಳಿದು ಸುಸ್ತಾಗಿ ವ್ಯರ್ಥ ಪ್ರಯತ್ನದಲ್ಲಿ ತೊಡಗುವವರಾಗಿದ್ದೇವೆ. ಸುಖದ ಸೋಪಾನಗಳನ್ನು ಕಟ್ಟುತ್ತಾ ಜಾರಿ ಬೀಳುವವರೇ ಜಾಸ್ತಿಯಾಗಿರುವ ಈ ಜಗತ್ತಿನಲ್ಲಿ ಸೌಭಾಗ್ಯಗಳನರಸಿ ದೌರ್ಭಾಗ್ಯಕ್ಕೀಡಾಗುವುದು ಮನುಷ್ಯ ಜನ್ಮಕ್ಕೆ ದೈವದ ಶಾಪವೆಂದೋ ಎನಿಸಿಬಿಟ್ಟಿದೆ. ಇಂಥಹ ದೈನಂದಿನ ಜೀವನದ ದುರಂತಗಳಿಗೆ ಮಾನವನ ಸತ್ವಯುತ ಚಿಂತನಾ ಕೊರತೆಯೇ ಕಾರಣವೆಂದೂ, ನಿಜವಾದ ಸುಖದ ನೆಲೆಯನ್ನರಿಯದಿರುವುದೇ ಮೂಲ ಕಾರಣವೆಂದು ಅಭಿಪ್ರಾಯಿಸಲಾಗಿದೆ. ಮಾನವನು ಸಹಜವಾಗಿ ಆಸೆಗಳ ರಾಶಿಗಳನ್ನೇ ಹೊಂದಿರುತ್ತಾನೆ. ಜೊತೆಗೆ ಒಂದು ಸುಖ ದೊರೆತಾಗ ಮತ್ತೊಂದನ್ನು ನೆನೆದು ಇದಕ್ಕಿಂತ ದೂರದಲ್ಲಿರುವುದು ಚೆನ್ನವೇನೋ ಎಂದೆಣಿಸಿ ಪ್ರಸಕ್ತ ದೊರಕಿರುವ ಸುಖದ ಲಾಭವನ್ನು ಪಡೆಯದವನಾಗುತ್ತಾನೆ. ದೊರೆತ ಸುಖವನ್ನು ಸುಖಿಸದೇ, ಬರದಿರುವ ಸುಖದ ಭ್ರಮೆಯಲ್ಲೇ ಕಾಲಹರಣ ಮಾಡಿ ಕೊನೆಯವರೆಗೂ ಮರೀಚಿಕೆಯನ್ನು ಅರಸುತ್ತಾ, ಅಲೆದಲೆದು ಅವಿಶ್ರಾಂತನಾಗುತ್ತಾನೆ. ಇಂಥಹ ಮನಃಸ್ಥಿತಿಯ ವ್ಯಕ್ತಿಯ ಅನುಭವವನ್ನು ಒಂದು ಹಸುವಿನ ಕರುವಿನ ಉದಾಹರಣೆಯನ್ನೊಳಗೊಂಡ ಪದ್ಯದ ಮೂಲಕ ಡಿ.ವಿ.ಜಿ.ಯವರು ವಿವರಿಸಿದ್ದಾರೆ. ಪದ್ಯದ ಲಹರಿ ಲಾಲಿತ್ಯಪೂರ್ಣವಾಗಿ ಚೆಂಗುಚೆಂಗೆಂದು ನೆಗೆಯುವ ಕರುವಿನ ಪರಿಯನ್ನೇ ಹೋಲುತ್ತದೆ.

**"ಇಲ್ಲಿ ಚೆನ್ನಲ್ಲಿ ಚೆನ್ನಲ್ಲೋ ಚೆನ್ನೆನುತೆಣಿಸಿ ।**
**ಹುಲ್ಲು ಬಯಲೊಂದೆಡೆಯಿನೊಂದಕ್ಕೆ ನೆಗೆದು**
**ಮೆಲ್ಲದೆಯೆ ಧಾನಿಸುತ ದಣಿವ ಕರುವನು ಪೋಲ್ತೋ ।**
**ಡೆಲ್ಲಿಯೋ ಸುಖ ನಿನಗೆ" ॥ಮಂಕುತಿಮ್ಮ॥**

ದುರಾಸೆಗೊಳಗಾದ ಮನುಷ್ಯನು ಎಂದೂ ಶಾಶ್ವತ ಸುಖವನ್ನು ಪಡೆಯುವುದಿಲ್ಲ. ಬದಲಿಗೆ ಬಳಲಿಕೆಯೇ ಅವನಿಗೊದಗಿ ಅವಿಶ್ರಾಂತನಾಗುತ್ತಾನೆ. ಬಂದದ್ದನ್ನು ಸ್ವೀಕರಿಸುವ ಮನೋಪ್ರವೃತ್ತಿಯನ್ನು ಬೆಳೆಸಿಕೊಂಡಲ್ಲಿ ನಿರೀಕ್ಷಿತ ಸುಖ ದೊರೆಯುತ್ತದೆ. 'ಬಾರದು ಬಪ್ಪದು, ಬಪ್ಪದು ತಪ್ಪದು" ಎಂಬ ದೈವೀ ನಿರ್ಣಯವನ್ನು ನಂಬಿ ಕಾರ್ಯನಿರತರನಾದವನಿಗೆ ಸರ್ವಸೌಭಾಗ್ಯಗಳೂ ಬಂದೊದಗುತ್ತವೆ ಎಂಬುದು ಚಿಂತನಾಶೀಲರ ಅಂಬೋಣ.

"ಜೀವನವನ್ನು ಒಪ್ಪಿಕೋ, ಜೀವನವನ್ನು ಅಪ್ಪಿಕೋ", ಏಕೆಂದರೆ ಅದು ಭಗವಂತನಿಂದ ನೀಡಲ್ಪಟ್ಟಿದ್ದಾಗಿದೆ. ದೊರೆತುದನು ಪ್ರಸಾದವೆಂದುಣ್ಣು, ಬಂದುದನು ಮನಸಾರೆ ಒಪ್ಪಿಕೋ, ಬಂದಿರುವುದಕ್ಕಾಗಿ ಹಾತೊರೆದು, ಬಾರದಿದ್ದಾಗ ನಿರಾಸೆಗೊಳಗಾಗುವುದರ ಬದಲು ಲಭ್ಯವಾಗಿರುವುದರಿಂದ ತೃಪ್ತಿಪಟ್ಟುಕೋ. ಹುಲ್ಲುಗಾವಲಿಗೆ ಬಂದ ಕರು ಹುಲ್ಲು ದೊರೆತ ಕಡೆ ಮೇದು ಸುಖವಾಗಿರುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕು. ಬದಲಾಗಿ ದೂರದ ಹುಲ್ಲನ್ನು ನೋಡಿ ಅದು ಚೆನ್ನಾಗಿದೆಯೆಂದು ದೊರೆತುದ್ದುದನ್ನು ಬಿಟ್ಟು ಅಲೆಯುವುದು ಬೇಡ. ಇದನ್ನರಿತೋ ಏನೋ "ಬೇಕಿನಿಪುದೊಂದೆನಗೆ ವಿಧಿಗೈಯ್ವುದಿನ್ನೊಂದು" ಎಂದು ಉವಾಚಿಸಿರಬೇಕು. ಒಟ್ಟಾರೆ ಸಾರಾಂಶವೆಂದರೆ ವರ್ತಮಾನದಲ್ಲಿ ಮನಸ್ಸನ್ನಿಟ್ಟು ಶುದ್ಧತೆಯತ್ತ ಗಮನಹರಿಸಿ ಸಾರ್ಥಕರಾಗುತ್ತಾ ಗುರಿಯನ್ನು ತಲುಪಿರೆಂಬುದು ಕವಿ ಮಾತಾಗಿದೆ. ಕಳೆದುಕೊಂಡದ್ದನ್ನು ಕಳೆದುಕೊಂಡಲ್ಲಿಯೇ ಹುಡುಕಿದರೆ ಅದು ಸಿಗುವ ಸಾಧ್ಯತೆ ಜಾಸ್ತಿ. ಸ್ಥಿರಪ್ರಯತ್ನದಿಂದ ವಿಚಲಿತನಾಗದೇ ಹಾಗೂ ಪ್ರಾಮಾಣಿಕ ಯತ್ನವನ್ನೆಸಗೆಂಬುದು ಚಿಂತನಶೀಲರ ಅಭಿಪ್ರಾಯ. ತತ್ಕಾರಣ ಈ ಪದ್ಯದ ಸಾರಾಂಶವನ್ನು ಅರ್ಥೈಸಿಕೊಂಡು ಎಲ್ಲಿದ್ದೇವೋ ಅಲ್ಲಿಂದಲೇ ನಮ್ಮ ಕರ್ತವ್ಯದ ಪಾವಿತ್ರ್ಯತೆಯನ್ನು ಹೆಚ್ಚಿಸಿಕೊಂಡು ಸರ್ವಜೀವಿಗಳಿಗೆ ಲೇಸನ್ನು ಬಯಸುವ "ಸಹಕಾರ ಕ್ಷೇತ್ರದ ಗುರಿಯಂತೆ ಎಲ್ಲರಿಗಾಗಿ ತಾನು, ತಾನು ಎಲ್ಲರಿಗಾಗಿ" ಎಂದುಕೊಂಡು ಸರ್ವೇಜನಾಃ ಸುಖಿನೋ ಭವಂತು ಎಂಬ ಉದಾರ ಗುಣವನ್ನು ತಳೆಯೋಣವೆಂಬುದಾಗಿದೆ.

# "ಭಗವಂತನ ಬಹುರೂಪಿತ್ವ"

ಸಮಸ್ತ ಜಗತ್ತಿನ ಒಟ್ಟು ಜನಸಂಖ್ಯೆ ಸುಮಾರು800 ಕೋಟಿಗಳಿರಬಹುದೆಂದು ಅಂದಾಜಿಸಿದ್ದರೂ ಅವರುಗಳೆಲ್ಲರಿಗೆ ಆಹಾರ, ನೀರು ಗಾಳಿಯನ್ನು ಸಮಯಾನುಸಾರ ಸರಬರಾಜು ಮಾಡಿ ಅಷ್ಟೂ ಜನಗಳ ಜೀವಂತಿಕೆಯನ್ನು ಉಳಿಸುತ್ತಿರುವ ವಿಶ್ವದ ಮಹಾಶಕ್ತಿ ಭಗವಂತನೆಂದೂ ಆತನ ಶಕ್ತಿಲೀಲೆಗಳು ಅನೂಹ್ಯ, ಅಚಿಂತ್ಯಗಳೆಂದು ಋಷಿಮುನಿಗಳು, ಚಿಂತನಶೀಲರು, ಆಧ್ಯಾತ್ಮ ಜೀವಿಗಳು ಅಭಿಪ್ರಾಯಿಸಿದ್ದಾರೆ. ದೇವರ ಬಗ್ಗೆ ಹೇಳುತ್ತಾ, "ದೇವನೊಬ್ಬ, ನಾಮ ಹಲವು, ರೂಪ ಹಲವಾರು, ಅಗಣಿತ"ಎಂದು ಬಸವಾದಿ ಶರಣರು ದೃಢೀಕರಿಸಿದ್ದಾರೆ. ಭಗವಂತನ ಶಕ್ತಿಯನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲವೆಂದು ಅವನನ್ನು 'ಅಚಿಂತ್ಯ'ನೆಂದು ಕರೆದರು. ಅಂತೆಯೇ ಭಗವಂತನನ್ನು 'ಅದ್ವೈತಂ, ಅಚ್ಯುತಂ, ಅನಾದಿಂ, ಅನಂತರೂಪಂ, ಆದ್ಯಂ ಪುರಾಣಪುರುಷಂ, ನವಯೌವನಾಂಚ',ಅಂದರೆ ಭಗವಂತನು ಅಪ್ರಮೇಯನು, ಪರಾತ್ಪರನು, ಚ್ಯುತಿಯಿಲ್ಲದವನು, ಆದಿ ಮಧ್ಯ ಅಂತ್ಯ ವಿಲ್ಲದವನು, ಅಪರಿಮಿತ ರೂಪಗಳಲ್ಲಿ ವಿಸ್ತೃತಗೊಂಡ ಪ್ರಾಚೀನನೂ, ಮೂಲಪುರುಷನೂಆಗಿದ್ದರೂ ನವತರುಣನಂತಿದ್ದಾನೆಂದಿದ್ದಾರೆ.

ಆದರೆ, ಇಂದಿನ ದಿನಮಾನದ ನಾವುಗಳು ನಾಗರೀಕತೆಯ ನಾಗಾಲೋಟದಲ್ಲಿ ತಾಂತ್ರಿಕತೆಯ ತಾಕಲಾಟದಿಂದ ಹಾಗೂ ಹೆಚ್ಚಿದ ವೈಜ್ಞಾನಿಕ ಬೆಳವಣಿಗೆಯಿಂದಾಗಿ ದೇವರ ಇರುವಿಕೆಯನ್ನು ಇಲ್ಲವೆನ್ನುವವರೆಗೂ ಹೋಗುವ ದುಸ್ಸಾಹಸಿಗಳಾಗಿದ್ದೇವೆ. ಹಿಂದಿನ ಪೂರ್ವಜರ ಹಾಗು ಈಗಿನ ಜನರ ಅಭಿಪ್ರಾಯಗಳನ್ನು ಅರ್ಥಮಾಡಿಕೊಂಡ ಆಧ್ಯಾತ್ಮಕವಿ ಡಿ.ವಿ.ಜಿ.ಯವರು ಭಗವಂತನ ಬಹುರೂಪೀ ಅಸ್ತಿತ್ವದ ಬಗ್ಗೆ ಒಂದು ಸುಂದರ ಪದ್ಯವನ್ನು ರಚಿಸಿದ್ದಾರೆ. ದೈವದ ಘನಘೋರ ಉಗ್ರ ಸ್ವರೂಪದಿಂದ ಹಸನ್ಮುಖಿ, ಸೌಭಾಗ್ಯದಾಯಿನಿಯಾದ ಎರಡೂ ರೂಪಗಳು ದೈವದ ಸ್ವರೂಪವೇ ಆಗಿದೆಯೆಂಬ ಆ ಪದ್ಯ ಕೆಳಗಿನಂತಿದೆ:

**"ಶ್ಯಾಮ ಸುಂದರನಿವನೆಚಕ್ರಿ ನರಹರಿಯಂತೆ।**
**ಸೋಮಶಿವಶಂಕರನೆ ಭೈರವರುದ್ರನಂತೆ ॥**
**ಹೈಮವತಿ ಶಿವೆ ತಾನೆ ಕಾಳಿಚಂಡಿಕೆಯಂತೆ ।**
**ಪ್ರೇಮ ಘೋರಗಳೊಂದೆ" ॥ಮಂಕುತಿಮ್ಮ॥**

ಹರಸಿ ಹಾರೈಸುವ, ಮನ್ನಿಸಿ ಮುನ್ನಡೆಸುವ, ಕ್ಷಮಿಸಿ ಕಾಪಾಡುವ ಕರುಣಾಮಯಿಯಾದ, ಮಹಾವಿಷ್ಣುವಾಗಲೀ, ಸರಸ್ವತಿ, ಶಾರದಾ, ಮಹಾದೇವಿಯರು ಸದಾ ಹಸನ್ಮುಖಿಗಳಾಗಿ ಶರಣಾಗತರಾಗಿ ಬಂದವರಿಗೆ ಅಭಯವನ್ನೂ, ಎಲ್ಲಾಸ್ತ್ರೀಯರಿಗೆ ಸರ್ವಮಂಗಳೆಯಾಗಿ ಸೌಭಾಗ್ಯಗಳನ್ನು, ವಿದ್ಯಾಪಿಪಾಸುಗಳಿಗೆ ವಿದ್ಯೆ ಜ್ಞಾನಾದಿಗಳನ್ನು ಆಯುಷ್ಯ, ಆರೋಗ್ಯ ಸಂಪತ್ತುಗಳನ್ನು ದಯಪಾಲಿಸುವ ವರದಾಯಿನಿಯರಾಗಿದ್ದಾರೆ.

ಇದೇ ಅಂಶದ ಬಗ್ಗೆ ಪುರುಷ ಸೂಕ್ತದಲ್ಲಿ ವಿವರಿಸುತ್ತಾ, ಭಗವಂತ, ನಾರಾಯಣ, ಪರಮೇಶ್ವರ ದೇವರು ಎನಿಸಿಕೊಂಡ ಪರಬ್ರಹ್ಮನ ವ್ಯಕ್ತ ಸ್ವರೂಪವೇ ಈ ಜಗವೆಂದೂ, ಅಣುರೇಣು ತೃಣಕಾಷ್ಟಗಳಲ್ಲಿ ಭಾವಕೊಳಪಡದಂತೆ, ಅಳತೆಗಳವಡದಂತೆ ಅಂತರ್ಗಾಮಿಯಾಗಿ ವ್ಯಾಪಿಸಿರುವ ಆ ದಿವ್ಯಶಕ್ತಿಯಾದ ಭಗವಂತನು ಸಾಕಾರ ಹಾಗೂ ನಿರಾಕಾರ ಎರಡೂ ರೂಪದಲ್ಲಿ ಅಭಿವ್ಯಕ್ತಿಗೊಳತಕ್ಕವನಾಗಿದ್ದಾನೆ. ಸರ್ವಾಂತರ್ಯಾಮಿಯಾದ ಭಗವಂತನು ನಮ್ಮೆಲ್ಲರ ಆಂತರ್ಯದ ಒಳಗೆ ನೆಲೆಗೊಂಡಿರುವ ಹಿನ್ನೆಲೆಯಲ್ಲಿ ಮೇಲುಕೀಳೆನ್ನದೆ ಸರ್ವರೂ ಸಹೋದರ ಭಾವದಿಂದ ಬದುಕನ್ನು ಸವೆಸಿ ಭ್ರಾತೃತ್ವದಿಂದ"ಸಹಕಾರ"ಜೀವನವನ್ನು ನಿರ್ವಹಿಸೋಣವೆಂಬುದೇ ಈ ಪದ್ಯದ ಸಾರಾಂಶವಾಗಿದೆ.

# "ಭಗವಶ್ಯಕ್ತಿ ಗುಪ್ತಗಾಮಿನಿ"

ವಿಶಾಲ ವಿಶ್ವದತ್ತ ನಮ್ಮ ದೃಷ್ಟಿಯನ್ನು ಹಾಯಿಸಿದಾಗ ಸೂರ್ಯೋದಯದ ಸುಂದರ ದೃಶ್ಯ, ಕೋಡುಗಲ್ಲಿನಂತಹ ಪರ್ವತಸ್ತೋಮಗಳ ಮನಸೆಳೆಯುವ ದೃಶ್ಯ, ಮೈದಾಳಿದ ಸಮುದ್ರ, ಪಾತಾಳ ಸದೃಶವಾದ ಪ್ರಪಾತಗಳು ಇತ್ಯಾದಿಗಳು ನಮ್ಮ ಮನಸ್ಸನ್ನು ಸೂರೆಗೈಯುತ್ತವೆ. ಇವುಗಳನ್ನೆಲ್ಲಾ ಸೃಷ್ಟಿಸಿದ ಸೃಷ್ಟಿಕರ್ತನ ಕೈಚಮತ್ಕಾರ ನಮ್ಮನ್ನು ಚಿಂತನೆಯೊಳಕ್ಕೆ ಕರೆದೊಯ್ದು ಇವುಗಳನ್ನು ಮಾಡಿದವನಾರು, ಆ ಪರಮಾದ್ಭುತ ಶಕ್ತಿ ಯಾವುದು ಎಂಬುದರತ್ತ, ಆ ಶಕ್ತಿಗೂ ನಮಗೂ ಇರುವ ಬಾಂಧವ್ಯವೇನು, ನಮ್ಮ ಬದುಕಿನ ಗುರಿಯೇನು, ನಾನು ಈ ಜಗಕ್ಕೆ ಬರುವ ಪೂರ್ವ ಹೇಗಿದ್ದೆ? ಸಾವೆಂಬ ಘಟನೆ ಬಂದು ನನ್ನನ್ನು ಕರೆದೊಯ್ಯುವಾಗ ಯಾವ ಪಾವಿತ್ರ್ಯತೆಯೊಡನೆ ನಾನು ವಾಪಾಸಾಗಬೇಕೆಂಬ ಹಾಗೂ ಐಹಿಕ ಪ್ರಪಂಚದ ಆಕರ್ಷಣೆಗಳ ಮಧ್ಯೆ ಸಿಲುಕಿರುವ ನಾನು ಪಾವಿತ್ರ್ಯತೆಯನ್ನು ಪಡೆಯಬಲ್ಲೆನೆ ಎಂಬ ಪ್ರಶ್ನೆಗಳ ಸುರಿಮಳೆಯೇ ಬಂದು ಬಿಡುತ್ತವೆ.

ಭಗವಂತನ ನೇರ ನಿರ್ದೇಶನದಲ್ಲಿ ಕಾರ್ಯ ನಿರ್ವಹಿಸುವ ಪ್ರಕೃತಿಯ ಚಟುವಟಿಕೆಯಲ್ಲೊಂದಾದ ನವನವೋನ್ವಾಷಣಾಶಾಲಿ ಗಿಡದ ನೀರು ಹೀರುವಿಕೆ ತನ್ಮೂಲಕ ಚಿಗುರೊಡೆವ ತಳಿರುಗಳ ಮೂಲಕ ನಿತ್ಯ ಹೊಸತನವನ್ನು ಬೀರುವ ಉದಾಹರಣೆಯೊಂದಿಗೆ ಆಧ್ಯಾತ್ಮ ಹಾಗೂ ಪ್ರಕೃತಿಯ ಅರಿವುಳ್ಳ ಕವಿ ಡಿ.ವಿ.ಜಿ.ಯವರು ಗಿಡದ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಅವಲೋಕಿಸಿ, ಅದರ ಹಿನ್ನೆಲೆಯಲ್ಲಿ ನಿತ್ಯನೂತನ ಹೊಸತನವನ್ನು ಜಗತ್ತಿಗೆ ನೀಡುವ ದಯಾಮಯಿ ಭಗವಂತನ ಮಹಿಮೆಯನ್ನು ಅರುಹಿದ್ದಾರೆ. ಪದ್ಯದ ವಿನ್ಯಾಸ ಹೀಗಿದೆ:

**"ಪೊಸರಸಂ ಬೇರಿಗನುದಿನಮೊದವಿ ಧರೆಯಿಂದ ।**
**ಸಸಿಗೆ ಹೊಸತಳಿರ ತಲೆಯಲಿ ಮುಡಿಸುವಂತೆ ॥**
**ಹೊಸ ಸೃಷ್ಟಿ ಸತ್ವ ಮೆತ್ತಣೆನೋ ಬರುತನುದಿನಂ ।**
**ಪೊಸತಾಗಿ ಪುದು ಜಗವ" ॥ಮಂಕುತಿಮ್ಮ॥**

ಪ್ರಕೃತಿಯ ಪ್ರಯೋಗ ಶಾಲೆಯಲ್ಲಿ ನಿತ್ಯ ನಡೆಯುತ್ತಿರುವ ಕಾರ್ಯವೆಂದರೆ ಧರೆಯಲ್ಲಿನ ಹೊಸ ಚೈತನ್ಯಶಾಲಿ ರಸವು ಸಸ್ಯಗಳ ಬೇರುಗಳ ಮೂಲಕ ತಲುಪಿ ಅದರ ಕಾಂಡದಲ್ಲೆಲ್ಲಾ ಎಲೆ, ಹೂ ಹಣ್ಣುಗಳನ್ನು ಪಲ್ಲವಿಸುತ್ತದೆ. ಅಂತಹ ಅಗಮ್ಯಚೇತನ ಶಕ್ತಿಯು ಹೊಸ ಸೃಷ್ಟಿಯ ನಿರಂತರ ಶಕ್ತಿಯಾಗಿ, ಜಗತ್ತಿನೆಲ್ಲೆಡೆ ನಿತ್ಯನೂತನತ್ವವನ್ನು ಪಸರಿಸಿ ಜೀವಜಗತ್ತನ್ನು ಅತ್ಯಾಕರ್ಷಣೆಯಿಂದ ಕಾಣಿಸುತ್ತದೆ. ಬೃಹತ್ ಸಿಟಿಗಳ ಮಾರುಕಟ್ಟೆಗೆ ಹೋಗಿ ವೀಕ್ಷಿಸಿದರೆ ಒಂದೊಂದು ದಿನಕ್ಕೆ ಮಾರಾಟಕ್ಕಾಗಿ ಬರುವ ಹೂವು, ಹಣ್ಣುಗಳ ಪ್ರಮಾಣವನ್ನು ಗಮನಿಸಿದರೆ ಇಷ್ಟೊಂದು ಗಾತ್ರದ ಸರಕನ್ನು ಒಂದು ರಾತ್ರಿಯ ಅಂತರದಲ್ಲಿ ಸೃಷ್ಟಿಸಿದ ಮಾಂತ್ರಿಕ ಶಕ್ತಿಯಾವುದೆಂಬ ವಿಸ್ಮಯ ಮೂಡುತ್ತದೆ. ಇಂತಹ ಅಗೋಚರ ಶಕ್ತಿಯನ್ನೇ ದೇವರು, ಭಗವಂತ, ಪರಮೇಶ್ವರ, ನಾರಾಯಣ ಎಂಬ ಹೆಸರುಗಳಿಂದ ಕರೆಯುತ್ತೇವೆ.

ಇಂಥಹ ಸರ್ವ ವ್ಯಾಪಕ ಹಾಗೂ ಅಚಿಂತ್ಯ ಶಕ್ತಿಯ ಅಸ್ತಿತ್ವವನ್ನರಿತು ನಾವೆಲ್ಲರೂ ಆ ಶಕ್ತಿಯ ಮಕ್ಕಳು, ನಾವೆಲ್ಲರೂ ಸೋದರ ಸೋದರಿಯಂತಿರ ಬೇಕೆನ್ನುತ್ತಾ ಇಂತಹ ಭಾವವನ್ನೇ ಪ್ರದರ್ಶಿಸುವ ಸಹಕಾರ ಜೀವನವನ್ನು ಮೈಗೂಡಿಸಿಕೊಳ್ಳೋಣ, ತನ್ಮೂಲಕ ಈ ಭೂ ಉಪಗ್ರಹದಲ್ಲಿ ದ್ವೇಷ, ಅಸೂಯೆ, ಹಿಂಸೆಗಳನ್ನು ದೂರವಾಗಿಸಿ, ಶಾಂತಿ ನೆಮ್ಮದಿ, ಪರಸ್ಪರ ಸ್ನೇಹಭಾವಗಳನ್ನು ತರೋಣವೆಂಬುದೇ ಈ ಪದ್ಯದ ಸಾರಾಂಶವಾಗಿದೆ.

# "ಧರ್ಮನಿಷ್ಠ ಆಡಳಿತಗಾರರಿಂದ ಮಾತ್ರ ಸಂಪತ್ಸಮೃದ್ಧಿಗಳ ಅಕ್ಷಯತೆ"

ಪುರಾಣ ಪ್ರತಿಷ್ಠಿತ ರಾಜರುಗಳಾದ ದಶರಥ, ಜನಕ, ಪರೀಕ್ಷಿತ, ರಾಮ, ಭರತ ಹಾಗೂ ಧರ್ಮರಾಯರುಗಳ ಆಳ್ವಿಕೆಯ ಗುಣಮಟ್ಟ ನಮ್ಮೆಲ್ಲರ ಮನದಲ್ಲಿ ಹಚ್ಚಹಸುರಾಗಿದೆ. ಶ್ರೀ ಮದ್ಭಾಗವತ ಗ್ರಂಥದಲ್ಲಿ, "As are the rulers so are the citizens-ಯಥಾ ರಾಜಾ ತತಾ ಪ್ರಜಾ" ಎಂಬಂಶವನ್ನು ಸಾರಾಂಶೀಕರಿಸುತ್ತಾ, ಸರ್ಕಾರಗಳ ಹಾಗೂ ಆಳುವ ದೊರೆಗಳ ಅಂದರೆ ಪ್ರಜಾ ಪ್ರತಿನಿಧಿಗಳ ಗುಣಮಟ್ಟದ ವಿವರಣೆಯನ್ನು ಕೆಳಗಿನಂತೆ ನೀಡಲಾಗಿದೆ.

ರಾಜಧರ್ಮವು ಒಂದು ಮಹತ್ವದ ವಿಜ್ಞಾನ. ಅದು ಆಧುನಿಕ ಕಾಲದ ರಾಜಕೀಯ ಮೇಲಾಟಗಳ ಚಮತ್ಕಾರವಲ್ಲ. ಹಿಂದಿನ ರಾಜರುಗಳು ಕೇವಲ ತೆರಿಗೆಗಳನ್ನು ಸಂಗ್ರಹಿಸುವವರು ಆಗಿರುತ್ತಿರಲ್ಲಿಲ್ಲ. ರಾಜರಾಗಬೇಕಾಗಿರುವವರಿಗೆ ಧರ್ಮಾರ್ಥ ಕಾಮ ಮೋಕ್ಷಗಳ ನಡತೆಗಳ ತರಬೇತಿ ನೀಡಲಾಗುತ್ತಿತ್ತು. ಪ್ರಜೆಗಳ ಏಳಿಗೆಗಾಗಿ ಸಮೃದ್ಧ ಮಳೆಬೆಳೆಗಳು ಬರುವುದರ ಸಂಬಂಧ ಯಜ್ಞಗಳನ್ನು ಮಾಡಲು ಅವರಿಗೆ ತರಬೇತಿ ನೀಡಲಾಗುತ್ತಿತ್ತು. ಪ್ರಜೆಗಳನ್ನು ಮೋಕ್ಷದ ಹಾದಿಯಲ್ಲಿ ಕರೆಯೊಯ್ಯುವುದೇ ರಾಜನ ಮಹತ್ವದ ಕರ್ತವ್ಯವಾಗಿರುತ್ತಿತ್ತು. ದೊರೆ ಸಾತ್ವಿಕ, ಧರ್ಮಶೀಲ, ದೀನರಕ್ಷಕ ಉದಾರಿಯಾಗಿದ್ದರೆ ಪ್ರಜೆಗಳು ಸಹಜವಾಗಿಯೇ ಅವನನ್ನು ಅನುಸರಿಸುತ್ತಾರೆ ಹಾಗೂ ಅಪರಾಧಿಗಳನ್ನು ನ್ಯಾಯನಿಷ್ಟವಾಗಿ ಗುರುತಿಸಿ ಅಪರಾಧಕ್ಕೆ ತಕ್ಕ ಶಿಕ್ಷೆಯನ್ನು ನೀಡುತ್ತಿದ್ದುದ್ದರಿಂದ ಅಪರಾಧವನ್ನೆಸಗಲು ಇನ್ನಿತರರು ಧೈರ್ಯ ಮಾಡುತ್ತಿರಲ್ಲಿಲ್ಲ ಎಂಬುದು ಧರ್ಮನಿಷ್ಠ ಚಿಂತನೆಯಾಗಿತ್ತು.

ಆಧುನಿಕ ಕಾಲದ ಜನಪ್ರತಿನಿಧಿಗಳು ತಮ್ಮ ಹಣಬಲ, ತೋಳ್ಬಲಗಳಿಂದ ಮತಗಳ ಭೇಟೆ ಮಾಡಿ ಅಧಿಕಾರದ ಸ್ಥಾನ ಹಿಡಿಯುತ್ತಾರೆ. ರಾಜಧರ್ಮದ ಅರಿವಿಲ್ಲದ ಅಂಥಹವರು ನ್ಯಾಯನಿಷ್ಠ ಆಡಳಿತ ನೀಡದೇ ಪ್ರಜಾಕ್ಷೇಮ ಕಲ್ಯಾಣ ಎಂಬಂಶಗಳನ್ನು ದೂರಕ್ಕೆ ಸರಿಸುತ್ತಾರೆ. ತತ್ಪರಿಣಾಮವಾಗಿ ಸ್ವಾರ್ಥಪರ ಆಲೋಚನೆಗಳು ಸ್ವಜನ ಪಕ್ಷಪಾತ, ತಲೆಮಾರಿನವರೆಗೆ ಹಣ ಕೂಡಿಡಬೇಕೆಂಬ ಸ್ವಾರ್ಥ ಲಾಲಸೆಗಳಲ್ಲಿ ತೊಡಗಿ, ತಮ್ಮ ತಮ್ಮ ಅವನತಿಗೆ ಕಾರಣರಾಗುತ್ತಾರೆಂಬ ಮುಂಗಾಣ್ಕೆ, ಭವಿತವ್ಯತೆಗಳನ್ನು ಅಂದೇ ಕಂಡಿದ್ದ ಆಧ್ಯಾತ್ಮಕವಿ ಡಿ.ವಿ.ಜಿ.ಯವರು ತನ್ನ ಪದ್ಯವೊಂದರಲ್ಲಿ ಪ್ರಸಕ್ತ ಸರ್ಕಾರಗಳ ವ್ಯವಸ್ಥೆಯನ್ನು ಕಣ್ಣಿಗೆ ಕಟ್ಟಿದಂತೆ ಚಿತ್ರಿಸಿದ್ದಾರೆ.

**"ಸರಕಾರ ಹರಿಗೋಲು ತೆರೆಸುಳಿಗಳಿತ್ತಿತ್ತ ।**

**ಸುರೆಕುಡಿದವರು ಕೆಲರು ಹುಟ್ಟು ಹಾಕುವರು ॥**

**ಬಿರುಗಾಳಿ ಬೀಸುವುದು ಜನವೆದ್ದು ಕುಣಿಯುವುದು ।**

**ಉರುಳದಿಹುದಚ್ಚರಿಯೋ" ॥ಮಂಕುತಿಮ್ಮ॥**

ಸರಕಾರವನ್ನು ಒಂದು ಹರಿಗೋಲು ಅಂದರೆ ದೋಣಿಗೆ ಹೋಲಿಸಿ, ಅದನ್ನು ಮುಂದಕ್ಕೆ ಒಯ್ಯಬೇಕಾದರೆ ಸರಿಯಾಗಿ ಕ್ರಮಬದ್ಧವಾಗಿ ಹುಟ್ಟುಹಾಕಬೇಕಾಗಿರುತ್ತದೆ. ಆಗ ಮಾತ್ರ ಸುರಕ್ಷಿತ ಪಯಣ ಹಾಗೂ ನೆಲೆ ಸೇರುವಿಕೆ ಖಚಿತ. ಆದರೆ ಡಿ.ವಿ.ಜಿ.ಯವರ ಪದ್ಯದಲ್ಲಿ ಹುಟ್ಟು ಹಾಕುವವರು ಸುರೆ, ಮದ್ಯಪಾನ ಮಾಡಿದವರಾಗಿದ್ದು, ತಮ್ಮ ಸ್ವಾಸ್ಥ್ಯಗಳನ್ನು ಕಳೆದುಕೊಂಡವರಾಗಿದ್ದಾರೆ. ಇದರ ಜೊತೆಗೆ ಬಿರುಗಾಳಿ ಬೇರೆ ಬೀಸುತ್ತಿದೆ. ತತ್ಪರಿಣಾಮವಾಗಿ ಬೃಹತ್‌ಗಾತ್ರದ ಅಲೆಗಳು ಏರಿಬರುತ್ತಿರುವ ಕಾರಣ ದೋಣಿಯಲ್ಲಿರುವ ಜನರು ಭಯಬೀತರಾಗಿ ಎದ್ದು ರಕ್ಷಣೆಗಾಗಿ ಅರಚುತ್ತಾ, ಇಂತಹ ದುಃಸ್ಥಿತಿ ಬಹಳ ಕಾಲ ಸಂದರೂ ದೋಣಿ ಮಾತ್ರ ಮುಳುಗದೇ ತೇಲುತ್ತಲೇ ಇರುವುದು ಅಚ್ಚರಿಯ ಅಂಶವೆಂದು ಪ್ರಸ್ತಾಪಿಸಿದ್ದಾರೆ. ಈ ಅತಂತ್ರ ವ್ಯವಸ್ಥೆಯು ಕರ್ನಾಟಕಕ್ಕೆ ಮಾತ್ರ ಸೀಮೀತವಾಗಿರದೇ ದೇಶದ ಇತರ ರಾಜ್ಯಗಳಲ್ಲಿಯೂ, ಇತರ ದೇಶಗಳಲ್ಲಿಯೂ ವ್ಯಾಪಿಸಿರುವ ಜಾಡ್ಯವಾಗಿದೆ. ನೂರಕ್ಕೆ ನೂರರಷ್ಟು ಸತ್ಯನಿಷ್ಠ ಆಳ್ವಿಕೆಯನ್ನು ಯಾರೂ ನಿರೀಕ್ಷಿಸುತ್ತಿಲ್ಲ, ನಡೆಸಲು ಕಷ್ಟಸಾಧ್ಯ. ಆದರೆ, ಕೆಡುತ್ತಿರುವ ಬದುಕಿನ ಗುಣಮಟ್ಟ, ಧರ್ಮಾನುಷ್ಠಾನ, ನ್ಯಾಯನಿಷ್ಠುರತೆಗಳು, ಸ್ವಜನ ಪಕ್ಷಪಾತಗಳು ನಿರೀಕ್ಷೆಗೂ ಮೀರಿದ ಮಟ್ಟಕ್ಕೆ ಹೆಚ್ಚುತ್ತವೆಂಬುದನ್ನು ಗಮನಿಸಿ ಈ ಸೂಚನಾ ಪದ್ಯವನ್ನು ಅಂದೇ ಬರೆದಿರುತ್ತಾರೆ.

ಇಂದಿನ ನಾವುಗಳು ಹದಗೆಡುತ್ತಿರುವ ಸ್ಥಿತಿಯನ್ನು ಅವಲೋಕಿಸಿ ತಮ್ಮ ತಮ್ಮ ಹಂತಗಳಲ್ಲಿ ಎಷ್ಟೆಷ್ಟು ಶುದ್ಧ ತತ್ವಗಳನ್ನು ಜಾರಿಗೆ ತರಬಹುದೋ ಅಂಥವುಗಳನ್ನು ತರುವುದರ ಮೂಲಕ ಮುಂದಿನ ಪೀಳಿಗೆಗೆ ಶುದ್ಧ ಸಮಾಜ ನೀಡಲು ಪ್ರಯತ್ನಪಡಬೇಕಾದ್ದುದು ನಮ್ಮ ಕರ್ತವ್ಯವಾಗಿದೆ. ನಾವೆಲ್ಲಾ ಸೇವಾಕ್ಷೇತ್ರ ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರತರಾದ ಸಂಘಗಳ ಸದಸ್ಯರು, ನಿರ್ದೇಶಕರು, ಅಧ್ಯಕ್ಷರುಗಳು ಹಾಗೂ ಸಿಬ್ಬಂದಿವರ್ಗದವರುಗಳು ಜನಸೇವಾ ಕ್ಷೇತ್ರದಲ್ಲಿರುವೆವಾದ್ದರಿಂದ ನಮ್ಮ ತಪ್ಪುಗಳನ್ನು ತಿದ್ದಿಕೊಳ್ಳುತ್ತಾ, ಚಿತ್ತಸ್ವಾಸ್ಥ್ಯವನ್ನು ಕಳೆದುಕೊಳ್ಳದೆ ಸುಸಮೃದ್ಧ ನ್ಯಾಯಯುತ ಆಡಳಿತವನ್ನು ನೀಡಿ ಅಂತಿಮ ಫಲಾನುಭವಿಗಳಾದ ಗ್ರಾಹಕರುಗಳಿಗೆ ಗುಣಮಟ್ಟದ ಸೇವೆಯನ್ನು ನೀಡಲನುವಾಗೋಣವೆಂಬುದೇ ಈ ಪದ್ಯದ ಸಾರಾಂಶವಾಗಿದೆ.

# "ತಾನು ಬಯಸುವುದು ಒಂದು ಆಗುವುದು ಮತ್ತೊಂದು"

ಭಕ್ತ ಭಗವಂತನ ಸಂಬಂಧ ಇಂದು ನಿನ್ನೆಯದಲ್ಲ. ಇದು ಶತಶತಮಾನಗಳಿಂದ ಬೆಳೆದು ಬಂದಿದ್ದು, ಇಂಥಹ ಸಂಬಂಧದಡಿ ನೆರವು ಪಡೆದ ಭಕ್ತರುಗಳಾಗಿ ಬೇಡರ ಕಣ್ಣಪ್ಪ, ಧೃವ, ಪ್ರಹ್ಲಾದ, ನಚಿಕೇತ, ಮಹಾಕವಿ ಕಾಳಿದಾಸ, ಇತ್ಯಾದಿಯವರುಗಳ ಮನಸ್ಸಿನ ಕೆಲವು ಶುದ್ಧ ಪ್ರಾರ್ಥನೆಗಳನ್ನು ಈಡೇರಿಸಿದ ಉದಾಹರಣೆಗಳು ನಮಗೆ ಕಾಣಸಿಗುತ್ತವೆ. ಆದರೆ ಭಕ್ತನ ಎಲ್ಲಾ ಆಸೆಗಳು ಅಥವಾ ಪ್ರಾರ್ಥನೆಗಳು ಈಡೇರಿವೆಯೆಂಬ ನಿದರ್ಶನ ತೀರಾ ಕಡಿಮೆಯೇನೂ ಇಲ್ಲವೇ ಇಲ್ಲವೆನ್ನಬಹುದು. ಹೀಗೆ ತನ್ನೆಲ್ಲಾ ಪ್ರಾರ್ಥನೆಗಳು ಈಡೇರದಿದ್ದಾಗ ಭಕ್ತನಾದವನು ಭಗವಂತನನ್ನು ತಾನೇಕೆ ಬೇರೆಯಿರಬೇಕು ನಮ್ಮೊಂದಿಗೇ ಇದ್ದು ನಮ್ಮೆಲ್ಲಾ ದಿನನಿತ್ಯದ ಪ್ರಾರ್ಥನೆಗಳನ್ನು ಈಡೇರಿಸುತ್ತಾ, "ಎಸಗಬಹುದಾದ ತಪ್ಪುಗಳನ್ನು ನಿರ್ಮೂಲನಗೊಳಿಸಬಹುದಿತ್ತಲ್ಲ", ಎಂಬ ಜಿಜ್ಞಾಸುಗಳ ಮನದಾಳದ ಪ್ರಶ್ನೆಗಳನ್ನು ಕುರಿತು ಆಧ್ಯಾತ್ಮಕವಿ ಡಿ.ವಿ.ಜಿ.ಯವರು ಈ ಕೆಳಗಿನ ಪದ್ಯವನ್ನು ನೀಡಿದ್ದಾರೆ.

**"ಏಕವಾಗವೆ ದೈವ ಚಿತ್ತ ನರಚಿತ್ತಗಳು? ।**
**ಏಕೆನ್ನ ಮನವನಾಳನು ಲೋಕದೊಡೆಯಂ ॥**
**ಬೇಕೆನಿಪುದೊಂದೆನಗೆ ವಿಧಿಗೈಯ್ವುದಿನ್ನೊಂದು ।**
**ಈ ಕುಟಿಲಕೇಂ ಮದ್ದು" ॥ಮಂಕುತಿಮ್ಮ॥**

ವ್ಯಕ್ತಿಗಳು ಸಹಜವಾಗಿ ಏಕಾಂಗಿಯಾಗಿದ್ದಾಗ ತಪ್ಪನ್ನೆಸಗುವುದು ಅಥವಾ ದುರಾಸೆಗಳ ಸೆಳವಿಗೆ ಸಿಕ್ಕಿಹಾಕಿಕೊಳ್ಳುವುದು ಸಹಜ ಪ್ರಕ್ರಿಯೆ. ಸದ್ಯಕ್ಕೆ ಯಾರೂ ಇಲ್ಲದಿದ್ದಾಗ ಕದಿಯುವ ಕಾರ್ಯವನ್ನೆಸಗುವ, ಲೈಂಗಿಕ ಅಕೃತ್ಯವನ್ನೆಸಗುವ, ಹಣದ ಪ್ರಭಾವಕ್ಕೊಳಗಾಗಿ ಪಾಪಬೀರುವಾಗುವ ಪ್ರಸಂಗಗಳನ್ನೆಸಗಿಯೂ, ಎಲ್ಲರ ಮಧ್ಯೆ ತಾನೊಬ್ಬ ಸಂಭಾವಿತನೆಂಬಂತೆ, ಈ ಕೃತ್ಯಗಳ ಬಗ್ಗೆ ಖಂಡತುಂಡವಾಗಿ ಮಾತಾಡುವ ಧೀರರೂ ಇಲ್ಲದಿಲ್ಲ. ಏಕಾಂಗಿಯಾಗಿದ್ದಾಗ ಮಾರ್ಗದರ್ಶನದ ಕೊರತೆ, ಬೆಂಬಲದ ಕೊರತೆ ಹಾಗೂ ದುಷ್ಕೃತ್ಯಗಳ ಎಸಗುವಿಕೆ ಸಂಬಂಧ ಪ್ರತಿಬಂಧಕ ಪ್ರಕ್ರಿಯೆಗಳು ಇಲ್ಲವಾದಾಗ ವ್ಯಕ್ತಿಯು ಅಕೃತ್ಯಗಳಲ್ಲಿ ತೊಡಗಿಕೊಳ್ಳುವುದು ಸಹಜವೆಂಬಂಥಹ.

ಸೇನಾದಂಡನಾಯಕ ಯಾವಾಗಲೂ ಸೈನಿಕರೊಡನಿರಲು ಸಾಧ್ಯವಿಲ್ಲ ಹಾಗೂ ನಿರೂಪಿತ ಪದ್ಧತಿಯೂ ಅಲ್ಲ. ದಂಡನಾಯಕನೆಲ್ಲಿರುತ್ತಾನೋ ಅಲ್ಲಿಂದಲೇ ಆದೇಶಗಳನ್ನು ಕಳುಹಿಸುತ್ತಿರುತ್ತಾನೆ. ಅಂಥಹ ಆದೇಶಗಳನ್ನು ಜಾಣತನದಿಂದ ಅರ್ಥಮಾಡಿಕೊಂಡು ಜಾರಿಗೊಳಿಸಿ ಕದನದಲ್ಲಿ ಜಯಗಳಿಸುವುದು ಸೈನಿಕನ ಗುರಿ ಮತ್ತು ಧರ್ಮ. ಬದಲಿಗೆ ದಂಡನಾಯಕನೇ ನಮ್ಮೊಡನಿರಲಿ ಎಂಬುದು ಯುಕ್ತ ಮತ್ತು ಸಹಜ ಬೇಡಿಕೆಯಾಗುವುದಿಲ್ಲ.

ಪಶುಪ್ರಾಣಿ ಮೃಗಪಕ್ಷಿಗಳಿಗಿಂತ ಉತ್ಕೃಷ್ಟ ಜೀವಿಯಾದ ಮಾನವನು ಇಡೀ ಸೃಷ್ಟಿಯ ಸಮಸ್ತ ಜೀವಿಗಳನ್ನು ಪರಮಾತ್ಮನ ಮಕ್ಕಳೆಂದು ಅವರುಗಳ ಅಭ್ಯುದಯವನ್ನು ಸಾಧಿಸುವ ಕ್ಷೇತ್ರವಾದ ಸಹಕಾರ ಕ್ಷೇತ್ರದಲ್ಲಿ ತನ್ನನ್ನು ತೊಡಗಿಸಿಕೊಂಡು ಭಗವಂತನು ನಮ್ಮೆಲ್ಲ ಚಟುವಟಿಕೆಗಳನ್ನು ವೀಕ್ಷಿಸುತ್ತಿದ್ದಾನೆಂಬ ಭಾವದಿಂದ ಕಾರ್ಯಪ್ರವೃತ್ತವಾದಲ್ಲಿ ಸರ್ವರ ಅಭಿವೃದ್ಧಿಯಾಗಿ ತನ್ಮೂಲಕ ಸಮಾಜದ ಏಳಿಗೆಯಾಗಲಿದೆಯೆಂಬುದೇ ಡಿ.ವಿ.ಜಿ.ಯವರ ಈ ಪದ್ಯದ ಆಶಯವಾಗಿದೆ.

# "ಭಗವಂತನ ಸೃಷ್ಠಿಯಲ್ಲಿ ವ್ಯರ್ಥವೆಂಬುದಿಲ್ಲ. ಭರವಸೆಯೊಂದಿದ್ದರೆ ಸರ್ವವೂ ಸುಖಾಂತ್ಯ"

ಸಮಾಜದತ್ತ ಕಣ್ಣು ಹಾಯಿಸಿದಾಗ ವೈವಿದ್ಯ ರೀತಿಯ ಮನೋಭಾವದ ಜನರನ್ನು ನಾವು ನೋಡುತ್ತೇವೆ, ಕೆಲವರು ಸುರ ದ್ರೂಪಿಗಳು ಮತ್ತೆ ಕೆಲವರು ವಿಕಾರಿಗಳು, ಮತ್ತೆ ಕೆಲವರು ಜಿಪುಣರು ಇನ್ನು ಕೆಲವರು ದುಂದು ವೆಚ್ಚದವರು. ದುಂದು ವೆಚ್ಚ ಮಾಡುವವನು ಜಿಪುಣನು ಜರಿಯುತ್ತಾನೆ, ಯಾವ ಪುರುಷಾರ್ಥಕ್ಕಾಗಿ ಅಷ್ಟೋಂದು ಉಳಿಸಬೇಕೆಂಬ ಪ್ರಶ್ನೆ ಮಾಡುತ್ತಾನೆ. ಅದೇ ಜಿಪುಣನಾದವನು ಉದಾರಿಯ ವೆಚ್ಚವನ್ನು ಕೆಲವು ಸಾರಿ ಸಾಧಾರಣ, ಅನವಶ್ಯಕವಾದ ಖರ್ಚಗಳೆಂದು ಉಪೇಕ್ಷಿಸುತ್ತಾನೆ. ಅಂತಹದೊಂದು ಸಂದರ್ಭದಲ್ಲಿ ನಮ್ಮ ಜನರು ದೇವರು ಮಾಡಿರುವ ಸೃಷ್ಠಿ ಕಾರ್ಯವನ್ನು ನೊಡಿ ಇಷ್ಟೊಂದು ಕ್ರಿಮಿ ಕೀಟಕಗಳು, ಪ್ರಾಣಿ ಪಕ್ಷಿಗಳು, ಕ್ರೂರ ಪ್ರಾಣಿಗಳು ಏಕೆ ಬೇಕಿದ್ದವು, ದಾರಿಯಲ್ಲಿ ಹೋಗುವಾಗ ಕೆಲವೊಂದು ಮರಗಳ ಕೆಳಗೆ ಬಿದ್ದಿರುವ ಹೂವು ರಾಶಿಯನ್ನು ನೋಡಿದಾಗಲೂ ಹೀಗೆಯೇ ತಾತ್ಸಾರಪೂರ್ವಕ ಮಾತುಗಳನ್ನು ಹೇಳುವ ಜನರಿದ್ದಾರೆ. ಇಂಥವರನ್ನು ಗಮನಿಸಿಯೇ ಡಿ.ವಿ.ಜಿ.ಯವರು ಈ ಮುಂದಿನ ಪದ್ಯವನ್ನು ಬರೆದಿದ್ದಾರೆ.

**ವ್ಯರ್ಥವೇಂದನಿಪುದು ಸೃಷ್ಠಿಯ ಬಹುಭಾಗ**
**ಅರ್ಥವೇಂ ಕ್ರಿಮಿಕೀಟಕ ಕೋಟಿ ರಚನೆಯಲಿ**
**ಕರ್ತನಾಯೋಜಿಸಿದ ದುಂದಿನವನೆಂಬ ನುಡಿ**
**ಯರ್ಥ ದೃಷ್ಠಿಯ ವಿವರ/ಮಂಕುತಿಮ್ಮ/**

ಆ ಸೃಷ್ಠಿ ಕರ್ತನು ಈ ಸೃಷ್ಠಿಯನ್ನು ರಚಿಸಿದಾಗ ತನ್ನ ಶಕ್ತಿಯನ್ನು ದುರ್ವ್ಯಯ ಮಾಡಿದ್ದಾರೆಂಬ ಆರೋಪವನ್ನು ತಿಳುವಳಿಕೆ ಇಲ್ಲದವರ ಅರ್ದಂಬರ್ದ ತಿಳುವಳಿಕೆಯುಳ್ಳ ಜನಗಳ ಜ್ಞಾನವೆನ್ನುತ್ತಾರೆ. ಅತಳ, ವಿತಳ, ಸುತಲ, ಪಾತಾಳಗಳನ್ನು ಸೃಷ್ಠಿಸಿದ ಅಪ್ರಮೇಯ ಸೃಷ್ಠಿ ಸ್ಥಿತಿಲಯ ಕರ್ತನು ತುಂಬಾ ಯೋಚನೆ ಮಾಡಿ ಎಲ್ಲ ಜೀವಿಗಳಿಗೂ ಅವಶ್ಯಕವಾದಂತೆ ಸೃಷ್ಠಿಸಿರುವ ಔಧಾರ್ಯ ಸರ್ವೋತ್ತಮನದ್ದು. ಆದರೆ ಏನೂ ಅರೆಯದ ನಾವುಗಳು ದೇವರಿಗೆ ಬೇರೆ ಕೆಲಸವಿಲ್ಲವೆಂದು ಕಾಣುತ್ತೆ, ಬೇಕಿಲ್ಲವಾದುದ್ದನ್ನು ಬಹಳ ಸೃಷ್ಠಿಸಿದ್ದಾನೆ ಬೇಕಾದಕ್ಕಿಂತ ಬೇಡವಾದದ್ದುನ್ನು ಬಹಳವಾಗಿ ಸೃಷ್ಠಿಸಿದ್ದಾನೆಂದು ಜ್ಞಾನಿಗಳಂತೆ ವಿಮರ್ಶೆ ಮಾಡುತ್ತೇವೆ.

ಇತ್ತೀಚಿನ ವೈಜ್ಞಾನಿಕ ಸಂಶೋಧನೆಗಳಿಂದ ಈ ಮನುಕುಲದ ಸಂರಕ್ಷಣೆಗೆ ಈ ಕ್ರಿಮಿಕೀಟಗಳು ಅವಶ್ಯಕ ಎನ್ನುವ ಅಂಶ ಪ್ರಕಟವಾಗುತ್ತಿರುವ ಸಂಶೋಧನಾ ವರದಿಗಳಿಂದ ತಿಳಿದು ಬರುತ್ತಿವೆ. ಭಗವಂತನು ಅಪ್ರಮೇಯ ಸ್ವಪ್ರಕಾಶ, ಸರ್ವಾಂತರ್ಯಾಮಿ ಸರ್ವಶಕ್ತ, ಸರ್ವಜ್ಞ, ಎಂಬುದನ್ನು ಅರಿಯದೇ ಅಲ್ಪಮತಿಗಳು ಮಾತಾಡುತ್ತವೆ. ಇದನ್ನು ಬಿಟ್ಟು ಭಗವಂತನನ್ನು ಸರ್ವಜ್ಞ ಎಂಬುದನ್ನ ಅರಿಯಿರಿ ಎಂಬುದೇ ಈ ಪದ್ಯದ ಸಾರಾಂಶ.

ವಿಮಾನ ಪ್ರಾಯಣದಲ್ಲಿ ಓರ್ವ ಹಿರಿಯರು ತನ್ನ ಪಕ್ಕದ ಬಾಲಕನ ಮುಗ್ದತ್ತೆಯನ್ನು ಗಮನಿಸಿದಾಗ ಆ ಹುಡುಗನು ಭಗದ್ಗೀತೆಯ ಓದಿನಲ್ಲಿ ತಲ್ಲಿನನಾಗಿರುವುದನ್ನು ಕಂಡು ನಂತರ ಗಗನ ಸಖಿಯರು ತಂದುಕೊಟ್ಟ ತಿಂಡಿ ತಿನಿಸುಗಳನ್ನು ತಿಂದು ಮತ್ತೆ ತಕ್ಷಣವೇ ಓದಿನಲ್ಲಿ ಮಗ್ನನಾಗುತ್ತಾನೆ. ಪ್ರಯಾಣ ಮುಂದುವರೆಯುತ್ತಿದ್ದಂತೆ, ಪ್ರಕಟನೆಯೊಂದು ಬಂದು ವಿಮಾನ ಸ್ವಲ್ಪ ಹವಾಮಾನ ವ್ಯತ್ಯಯದಿಂದ ವಿಮಾನ ದಿಕ್ಕು ತಪ್ಪುತ್ತಿದೆ ಪ್ರಕಾಣಿಕರು ಸೀಟ್ ಬೆಲ್ಟ್ ಹಾಕಿಕೊಳ್ಳಿ ಎಂದು ತಿಳಿಸಿದರೂ ಬಹಳಷ್ಟು ಜನ ಸೂಚನೆಗೆ ಬೆಲೆಕೊಡಲಿಲ್ಲ. ಸ್ವಲ್ಪ ಸಮಯದಲ್ಲಿಯೇ ಮತ್ತೊಂದು ಪ್ರಕಟನೆ ಬಂದು ವಿಮಾನ ದುರಂತದತ್ತ ಸಾಗುತ್ತಿದೆ ನಿಮ್ಮ ನಿಮ್ಮ ಮನದಲ್ಲಿ ನಿಮ್ಮ ದೇವರನ್ನು ಪ್ರಾರ್ಥಿಸಿ ಒಳ್ಳೆಯದಾಗಬಹುದೆಂದು ಎಚ್ಚರಿಸುತ್ತಾರೆ, ಆಗ ಎಲ್ಲರ ಮನದಲ್ಲಿ ತವಕ, ಭಯ, ತಾಂಡವವಾಡುತ್ತಿದ್ದರೂ ಆ ಹುಡುಗ ಮಾತ್ರ ಸ್ಥಿತ ಪ್ರಜ್ಞನಂತೆ ಇದ್ದ ಮತ್ತೆ ಸ್ವಲ್ಪ ಹೊತ್ತಿನಲ್ಲಿ ವಿಮಾನ ಸುಖಕರವಾಗಿ ನಿಲ್ದಾಣದಲ್ಲಿ ಇಳಿಯಿತು ಆಗ ಎಲ್ಲರ ಮನಸ್ಸಿನಲ್ಲಿ ಸಂತಸ. ಹಿರಿಯರು ತಮ್ಮ ಪಕ್ಕದಲ್ಲಿದ್ದ ಹುಡುಗನ್ನು ಗಮನಿಸಿ ಮೆಚ್ಚುಗೆಯಿಂದ ಕೇಳಿದರು, "ಏನು ನೀನು ತುಸು ಮಟ್ಟಿಗೆಯಾದರೂ ಗಾಬರಿಯಾಗಲ್ಲಿಲ್ಲ ಏಕೆ" ಎಂದುದಕ್ಕೆ ,ಅವನು ನನಗೇಕೆ ಗಾಬರಿ ಚಾಲಕನು ನನ್ನ ತಂದೆ, ನನ್ನ ತಂದೆ ಸಾಮಥ್ಯ, ಶಕ್ತಿಗಳು ನನಗೆ ಗೊತ್ತಿದೆ ಎನ್ನುತ್ತಾನೆ, ಹಿರಿಯರು ಮುಂದುವರೆದು ಏನು ಚಾಲಕರು ನಿಮ್ಮ ತಂದಯೆ ಎಂದು ಕೇಳಿದ್ದಕ್ಕೆ , ಹೌದು ವಿಶ್ವದ ತಂದೆ ಭಗವಂತ ನನ್ನ ತಂದೆ, ನಮ್ಮ ನಿಮ್ಮೆಲರ ತಂದೆ, ಎಲ್ಲರನೂ ಉಳಿಸುವವನೂ, ಅಳಿಸುವವನೂ ಅವನೇ, ಆದರೆ ಅವನ್ನಲ್ಲಿ ಇರಬೇಕಾದ ಭರವಸೆಯೊಂದಿದ್ದರೆ ಸರ್ವವೂ ಸುಖಾಂತ್ಯವೆನಿಸುತ್ತದೆ.

# “ಬದುಕಿನ ಶ್ರೇಷ್ಠತೆಗೆ ಪರಮಾತ್ಮ ನೆನಪು ಅತ್ಯಗತ್ಯ”

“ಪರಮಾತ್ಮನನ್ನು ಪರಮಾಪ್ತನನ್ನಾಗಿಸಿಕೋ, ನಿನ್ನ ಕಷ್ಟ ಕಾರ್ಪಣ್ಯಗಳು ನಾಶವಾಗಿ, ಸುಖ ಶಾಂತಿ, ನೆಮ್ಮದಿಗಳ ಬದುಕು ದತ್ತವಾಗುತ್ತದೆ”ಂಬುದು ಹಿರಿಯರ, ಚಿಂತನಶೀಲರ ಸಧ್ಬೋದನೆ. ಇದಕ್ಕೆ ತದ್ವಿರುದ್ಧವಾಗಿ ನಮ್ಮ ಬದುಕು ಸಾಗಿದೆ. ಬಾಲ್ಯದಲ್ಲಿ ಆಟಪಾಠ, ಯೌವನದಲ್ಲಿ ವಿವಾಹ, ಐಶ್ವರ್ಯ ಸಂಗ್ರಹಣಾ ಕಾಳಜಿ, ವೃದ್ಧಾಪ್ಯದಲ್ಲಿ ಚಿಂತೆಯ ಸಂತೆ. ಒಟ್ಟಾರೆ ನಮ್ಮನ್ನು ಸೃಷ್ಟಿಸಿದ ಪಿತನಾದ ಭಗವಂತನ ಆರಾಧನೆಗೆ ಸಮಯ ನೀಡದಿರುವ ಇಂದಿನ ಜನರ ನಡೆನುಡಿಗಳ ಬಗ್ಗೆ ಕೆಳಗಿನ ಪದ್ಯವನ್ನು ಕವಿ ಡಿ.ವಿ.ಜಿ.ಯವರು ರಚಿಸಿದ್ದಾರೆ. ಪ್ರತಿಯೊಬ್ಬನ ಬದುಕು ಆಶೆ, ಆಕಾಂಕ್ಷೆ, ನಿರಾಸೆ, ಸೋಲು, ಸಂಶಯ, ಸೇಡು, ಸಂಗ್ರಹಣೆ ಇತ್ಯಾದಿ ಭಾವಗಳ ಸುಳಿಯಲ್ಲಿ ಸಾಗುತ್ತಿದ್ದು, ಮೂಲತಃ ನಮ್ಮನ್ನೆಲ್ಲಾ ಸೃಷ್ಟಿಸಿದಾತನ ನೆನಪು ಮರೆಯಾಗಿ ಬಿಟ್ಟಿರುತ್ತದೆ. ಹಬ್ಬ, ಹರಿದಿನಗಳಲ್ಲಿಯೋ, ಮನೆದೇವರುಗಳ ವಾರಗಳ ದಿನಗಳಲ್ಲಿಯೋ ಬಲವಂತನಾಗಿ ನೆನಪು ಬಂದಾಗ ದೇವಸ್ಥಾನಕ್ಕೆ ಹೋಗುವವರನ್ನು ಕುರಿತು ಕಣ್ಮುಂದೆ ಚಿತ್ರಿತವಾಗಿರುವ ರೀತಿಯಲ್ಲಿ ಪದ್ಯ ರಚಿತವಾಗಿದೆ.

**“ಮನೆಯ ಸಂಸಾರದಲಿ ವಾಸವಿರುತಾಗಾಗ ।**
**ನೆನೆದು ನೀಂ ದೇಗುಲಕೆ ಪೋಗಿ ಬರುವಂತೆ ॥**
**ದಿನವೆಲ್ಲ ದೇವ ಸನ್ನಿಧಿಯೊಳಿರುತಾಗಾಗ ।**
**ಮನೆಗೆ ಬರುವನವೊಲಿರು” ॥ಮಂಕುತಿಮ್ಮ॥**

ಕ್ರಿಕೆಟ್ ಆಟದಲ್ಲಿ ಬ್ಯಾಟ್ ಮಾಡುವ ಪಡೆಯ ಬ್ಯಾಟ್ಸ್‌ಮ್ಯಾನ್ ಚೆಂಡುಗಳನ್ನು ವ್ಯರ್ಥ ಮಾಡಿ, ಇನ್ನೇನು ಪಂದ್ಯ ಗೆಲ್ಲಲು 20 ರನ್ ಬೇಕು ಒಂದೇ ಒಂದು ಓವರ್ ಬಾಕಿಯಿದ್ದು, ಆ ಆರು ಚೆಂಡೆಸೆತಗಳನ್ನು ಅತಿ ಎಚ್ಚರದಿಂದ ಎದುರಿಸಿ 20 ರನ್‌ಗಳ ಗುರಿಯನ್ನು ದಾಟುವ ಆಟಗಾರನ ಸ್ಪರ್ಧಾ ಮನೋಭಾವವನ್ನು ಗಮನದಲ್ಲಿರಿಸಿಕೊಂಡು, ಜೀವನವನ್ನು ಎದುರಿಸಿ ಎಂಬರ್ಥ ಬರುವ ಈ ಪದ್ಯ ತುಂಬಾ ಸ್ವಾರಸ್ಯಕರವಾಗಿದೆ. ಜೀವನದುದ್ದಕ್ಕೂ ಹಣ ಪೋಲು ಮಾಡಿ ಜೀವನ ಸಂಜೆಯಲ್ಲಿ ದುಡ್ಡಿನ ಉಳಿತಾಯದ ಬೆಲೆಯನ್ನು ಅರಿಯುವವನ ಜೀವನದಂತೆ ನಾವೆಲ್ಲರೂ ಈ ಪದ್ಯದಿಂದ ಪ್ರೇರಿತರಾಗಿ ಐಹಿಕ ಹಾಗೂ ಆಧ್ಯಾತ್ಮಿಕ ಜೀವನಕ್ಕೆ ಸಮಾನ ಮುಖ್ಯತೆಯನ್ನು ನೀಡಿ ಬದುಕನ್ನು ಅರ್ಥಪೂರ್ಣಗೊಳಿಸೋಣ ಹಾಗೂ ‘ಜನಸೇವೆಯೇ ಜನಾರ್ಧನ ಸೇವೆ’ ಎಂಬ ಸದುದ್ದೇಶದ, ಸಹಕಾರ ಜೀವನ ಶೈಲಿಯನ್ನು ಅನುಷ್ಠಾನಗೊಳಿಸೋಣ. ತನ್ಮೂಕ ಉತ್ತಮ ಗುಣಮಟ್ಟದ ಸಮಾಜ ನಿರ್ಮಾಣಕ್ಕೆ ಕಾರಣೀಭೂತರಾಗೋಣ ಎಂಬುದೇ ಈ ಪದ್ಯದ ಸಾರಾಂಶವಾಗಿದೆ.

# "ಕಾಲಗತಿಯಿಂದಾಗಿ ಅಚಿಂತ್ಯ ದುಷ್ಕೃತ್ಯಾವಲೋಕನ"

ಕಾಲಚಕ್ರದ ಉರುಳುವಿಕೆಯಿಂದ ಸಂವತ್ಸರಗಳ ಆಗಮನ ಮತ್ತು ನಿರ್ಗಮನವೆಂಬ ನಿರಂತರ ಪ್ರಕ್ರಿಯೆ. ಇಂದಿನ ಕಾಲಘಟ್ಟದಲ್ಲಿ ಪಕ್ಷಾಂತರ ವೆಂಬುದೊಂದು ದೊಡ್ಡ ಸುದ್ದಿ ಮಾಡುತ್ತಿದ್ದು, ಈ ಪಿಡುಗು ನೆನ್ನೆ ಮೊನ್ನೆಯದಲ್ಲ ಇದಕ್ಕೆ ಹಲವು ದಶಕಗಳ ಇತಿಹಾಸವು ಇದೆಯೆಂದರೆ ಒಪ್ಪತಕ್ಕ ವಿಷಯ. ಸರ್ಕಾರಗಳನ್ನು ರಚಿಸಲು ಅವಶ್ಯಕವಿರುವಷ್ಟು ಸಂಖ್ಯಾಬಲವಿಲ್ಲದಿದ್ದಾಗ ಇತರ ಪಕ್ಷಗಳ ಕೆಲವು ಶಾಸಕರುಗಳಿಂದ ಪಕ್ಷಾಂತರ ಮಾಡಿಸಿಯೋ ರಾಜಿನಾಮೆ ನೀಡಿಸಿಯೋ ಸರ್ಕಾರ ರಚನೆ ವಿಷಯ ನಮ್ಮೆಲ್ಲರ ಕಣ್ಮುಂದೆ ಚಿತ್ರಿತವಾಗಿದೆ ಇದೆಲ್ಲದರ ಮೂಲ ಅಧಿಕಾರದ ಗದ್ದುಗೆಯ ಹಂಬಲ ಸೆಳೆತವೆಂಬುದು ಸರ್ವ ವಿಧಿತ.

ಅಂದಿನ ರಾಮಾಯಣ ಜನಿತ ಉತ್ಕೃಷ್ಟ ಉದಾಹರಣೆಯಾಗಿ ತನಗೆ ಅನಾಯಸವಾಗಿ ಒಲಿದು ಬಂದ  ರಾಜ್ಯಾಭಿಷೇಕ ಪಟ್ಟವನ್ನು ತ್ಯಜಿಸಲು ಸಿದ್ದನಾಗಿದ್ದ ಭರತನ ಹಾಗು ಪಿತೃವಾಕ್ಯ ಪಾಲನೆಯನ್ನೇ ತತ್ವ ಸಿದ್ಧಾಂತವನ್ನಾಗಿಟ್ಟುಕೊಂಡು ರಾಜ್ಯಭಾರವನ್ನು ಕೈಕೇಯಿಯ ನಿರ್ದೇಶನದಂತೆ ಭರತನಿಗೆ ವಹಿಸಬೇಕೆಂಬ ದೃಢನಿರ್ಧಾರದ ರಾಮನಲ್ಲಿ? ಆದರೆ ಇಂದಿನ ದಶಮಾನದಲ್ಲಿನ ಅಧಿಕಾರಕ್ಕಾಗಿ ಕಿತ್ತಾಟ ರಂಪಾಟ ನಡೆಯುತ್ತಿರುವ ದುರ್ದಿನಗಳೆಲ್ಲಿ ? ಎಂಬ ಮಹಾವೈಪರೀತ್ಯದ ಭರಸಿಡಿಲು ನಮ್ಮ ಮುಂದೆ ನಿಲ್ಲುತ್ತದೆ. ಈ ಅಂಶವನ್ನು ಅಭಿವ್ಯಕ್ತಪಡಿಸುವ ಈ ಕೆಳಗಿನ ಆಧ್ಯಾತ್ಮ ಕವಿ ಡಿ.ವಿ.ಜಿ ಯವರ ಪದ್ಯವನ್ನು ಪಠಿಸಿರಿ.

**ರಾಮನುಂ ಭರತನುಂ ತಬ್ಬಿಕೊಂಡತ್ತಂದು**

**ಪ್ರೇಮಾಶ್ರುವುಕ್ಕಿ ನದಿಯಾಗಿ ಪರಿದಂದು**

**ಸೀಮೆಯಂ ಮುಟ್ಟಿತಲ ಭಾಂಧ್ಯವ್ಯ ಸೌಂಧರ್ಯ**

**ಕ್ಷೇಮವದು ಜೀವಕ್ಕೆ ;; ಮಂಕುತಿಮ್ಮ ::**

ವಾಸ್ತವದಲ್ಲಿ ಒಂದೇ ತಾಯಿಯ ಮಕ್ಕಳಾದವರಲ್ಲಿ ಅಭಿಪ್ರಾಯ ಭೇದಗಳಲ್ಲಿರುವುದಿಲ್ಲ. ಎಲ್ಲವನ್ನೂ ಸಹಿಸಿಕೊಂಡು ನಿಭಾಯಿಸುತ್ತಾರೆ ಆದರೆ ಮಲತಾಯಿಯ ಮಕ್ಕಳುಗಳು ಸಣ್ಣ ಸಣ್ಣದರಲ್ಲಿಯೂ ಕ್ಲೇಷ ದೋಷಗಳನ್ನು ಕಾಣುವುದು ಸ್ವಾಭಾವಿಕ. ಆದರೆ ರಾಮ ಭರತರ ಆದರ್ಶ ನಡೆನುಡಿಗಳು ಉಧಾರಣಾರ್ಥ ಘಟನೆಗಳಾಗಿ ನಿಲ್ಲುತ್ತವೆ.

ಭರತನಿಗೆ ರಾಜ್ಯಭಾರ ವಹಿಸಿ ವನವಾಸಕ್ಕೆ ಹೋದ ರಾಮನನ್ನು ಅರಸಿಕೊಂಡು

ಭರತನು ಚಿತ್ರಕೂಟದಲ್ಲಿ ಭೇಟಿಯಾಗಿ ವಾಪಸ್ ಬಂದು ರಾಜ್ಯಭಾರ ಮುಂದುವರೆಸಲು ಕೋರುವುದರ ಮೂಲಕ ತಾನು ಅಧಿಕಾರ ತ್ಯಾಗಕ್ಕೆ ಸಿದ್ಧನೆಂಬುದನ್ನು ದೃಢಪಡಿಸುತ್ತಾನೆ. ಇದಕ್ಕೆ ರಾಮನು ಒಪ್ಪದಿದ್ದಾಗ 14 ವರ್ಷಗಳ ವನವಾಸದ ನಂತರ ತನ್ನ ಅಣ್ಣ ಬರುವುದನ್ನೇ ಕಾಯುತ್ತಿದ್ದ ಭರತನು ನಂದಿ ಗ್ರಾಮದಲ್ಲಿ ಬಂದು ಅಣ್ಣನನ್ನು ಸಂಧಿಸುತ್ತಾನೆ. ಈ ಎರಡೂ ಸಂಧರ್ಭಗಳಲ್ಲಿಯೂ ಅನುರೂಪ ಹಾಗು ತ್ಯಾಗಮಯಿ ಸಹೋದರರುಗಳು ಒಬ್ಬರನ್ನೊಬ್ಬರು ಆತ್ಮೀಯತೆಯಿಂದ ಭಾವವೇಷದಿಂದ ತಬ್ಬಿಕೊಳ್ಳುತ್ತಾರೆ. ಅಂಥಹ ತಬ್ಬುವಿಕೆಯಲ್ಲಿ ಆನಂದಾಶ್ರು ಪ್ರೇಮದ ಕಡಲು ನದಿಯಾಗಿ ಹರಿದಿತ್ತೆನ್ನುತ್ತಾರೆ. ಇಂತಹ ಅಂದಿನ ಆದರ್ಶ ಪ್ರಾಯವಾದ ದಿನಗಳಿಗೂ ಇಂದಿನ ಅಧಿಕಾರದಾಹದ ದಿನಗಳಿಗೂ ಹೋಲಿಕೆಯು ಎಂಥಹ ವಿಪರ್ಯಾಸವೆನ್ನಿಸದಿರದು.

ಕಣ್ಣಿನಿಂದ ಅತಿ ಆನಂದದಿಂದ ಬರುವ ಪ್ರೇಮಾಶ್ರು ಆರೋಗ್ಯಕರ ಹಾಗೂ ಕಣ್ಣಿನ ಸುಸ್ಪಷ್ಟತೆಗೆ ಸಹಾಯಕಾರಿ ಎಂಬ ಬಗ್ಗೆ ವೈಜ್ಞಾನಿಕವಾಗಿ ಅಂಗೀಕೃತವಾಗಿದೆಯನ್ನುತ್ತಾರೆ. ಈ ಪದ್ಯದಿಂದ ನಾವು ಕಲಿಯ ಬೇಕಾದ ಪಾಠವೆಂದರೆ ನಮ್ಮ ಅಣ್ಣತಮ್ಮಂದಿರು ಮಾತ್ರವಲ್ಲ ಸಮಾಜದ ಎಲ್ಲಾ ಸಹೋದರ ಸಹೋದರಿಯರನ್ನು ಸರ್ವೋತ್ಕೃಷ್ಟ ಭಗವಂತನ ಪುತ್ರರೆಂದು ತನ್ಮೂಲಕ ನಮ್ಮಗಳ ಸಹೋದರ ಸಹೋದರಿಯರೆಂದು ಭಾವಿಸಿ ಉತ್ಕೃಷ್ಟ ಸಮಾಜದ ಬೆಳವಣಿಗೆಗೆ ದಾರಿ ಮಾಡೋಣವೆಂಬುದೇ ಆಗಿದೆ. ಸಹಕಾರ ಕ್ಷೇತ್ರ ಅಂತಹ ಒಂದು ವಿಸ್ತೃತ ಭಾವವನ್ನು ಹೊಂದಿರುವ ಕ್ಷೇತ್ರವಾಗಿದ್ದು ಇದರಲ್ಲಿರುವ ನಾವೆಲ್ಲರೂ ಸಮೃದ್ಧ ಸಹಕಾರದ ಬೆಳವಣಿಗೆಗೆ ಕಾರಣೀಭೂತವಾಗುತ್ತಾ ರಾಮರಾಜ್ಯವನ್ನು ತರೋಣವೆಂಬುದೇ ಈ ಪ್ರೇರಣಾ ಪದ್ಯದ ಸಾರಾಂಶವಾಗಿದೆ.

# "ಹುದ್ದೆಯ ಆಡಂಬರಕ್ಕಿಂತ ಕರ್ತವ್ಯ ನಿರ್ವಹಣಾ ಉತ್ಕೃಷ್ಟತೆಗೆ ಆದ್ಯತೆ"

ವಿಶ್ವದ ಆದ್ಯಾತ್ಮಿಕ ಭೂಪಟದಲ್ಲಿ ಭಾರತಕ್ಕೆ ಅಗ್ರಸ್ಥಾನವಿದೆ ಎಂಬ ಅಂಶ ಸರ್ವವಿಧಿತ. ಹಿಂದಿನ ಋಷಿಮುನಿಗಳಿಗೆ ಸಂತರು, ಚಿಂತನಶೀಲರುಗಳೂ ಭೌತಿಕ ಜೀವನ ನಡೆಸುತ್ತಲೇ ಆದ್ಯತ್ಮಿಕ ಜೀವನದ ಉತ್ತುಂಗಕ್ಕೆ ವಂದಿತರಾಗಿದ್ದರು. ಆತ್ಮ ಸ್ಥಿತಿಯ ಅನುಭವ, ಬದುಕಿನ ಅಂತಿಮ ಗುರಿಗಳ ಆಳವಾದ ಅರಿವಿದ್ದತರಾಗಿದ್ದ ಅವರುಗಳು ತಮ್ಮ ಕರ್ತವ್ಯಗಳ ಶ್ರೇಷ್ಠತೆಗೆ ಒತ್ತು ಕೊಟ್ಟವರೇ ಹೊರತು ಅಬ್ಬರ ಅಡಂಬರ, ಗತ್ತು ಗಮ್ಮತ್ತುಗಳಿಗೆ ಪ್ರಾಮುಖ್ಯತೆ ನೀಡಿದವರಲ್ಲವೆಂಬುದರ ದ್ಯೋತಕವಾಗಿಯೇ ರಾಮಾಯಣದ ರಾಮಭರತದ ರಾಜ್ಯ ಭಾರ ಹಸ್ತಾಂತರ ನಿರ್ವಹಣಾ ಗುಣಮಟ್ಟಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಪದ್ಯವನ್ನು ಆಧ್ಯಾತ್ಮರವ ಡಿವಿಜಿ ಯವರು ನೀಡುತ್ತ ಇಂದಿನ ಬಗುಮಾನದ ನಮಗೆ ವರ್ತನಾ ಪರಿವರ್ತನೆಯನ್ನು ತಂದುಕೊಳ್ಳರೆಂದು ಸೂಚ್ಯವಾಗಿ ನಿರ್ದೇಶಿಸಿರುತ್ತದೆ. ಪದ್ಯದ ಓಟ ಈ ಕೆಳಗಿನಂತಿದೆ.

**ಅರಸಡವಿಗೈದಿದೊಡಮ ಅವನಿತ್ತ ಪಾದುಕೆಗೆ**

**ಓರೆಯದೊಡಮೇನನಂ ತಾಂ ವರದಿಯಾರೆದು**

**ದೊರೆತನದ ಭಾರತನು ಹೊತ್ತು ದೊರೆಯಾಗದಾ**

**ಭರತನ ವೊಲರು ನೀನು ॥ ಮಂಕುತಿಮ್ಮ॥**

ಮಲತಾಯಿಯಾದ ಕೈಕೇಯಿಯನ್ನು ತಾಯಿಯೆಂದೇ ಪರಿಗಣಿಸಿದ್ದ ಶ್ರೀರಾಮನು ಪಿತೃವಾಕ್ಯ ಪರಿಪಾಲನೆಗಾಗಿ 14 ವರ್ಷಗಳ ವನವಾಸಕ್ಕೆ ತೆರಳಿದಾಗ ಭರತನಿಗೆ ರಾಜ್ಯಭಾರವಹಿಸಿದ ನಂತರ ಭರತನ ಕೋರಿಕೆಯ ಮೇರೆಗೆ ರಾಮನ ಪಾದುಕೆಗಳನ್ನು ಪಡೆದು ಅರಥಹ ಪಾದುಕೆಗಳನ್ನೇ ಸಿಂಹಾಸನದ ಮೇಲೆರಿಸಿ ರಾಮನ ಹಸಂನಲ್ಲಿ ರಾಜ್ಯಭಾರವನ್ನು ಸ್ವಲ್ಪವೂ ಕುಂದು ಬಾರದಂತೆ ರಾಜ್ಯಭಾರ ರೂಡಿ "ರಾಮರಾಜ್ಯಕ್ಕೆ ಭರತಖಂಡನೆಂಬ ಹೆಸರು ಬರಲು ಕಾರಣವಾಗುವಷ್ಟು ಶ್ರೇಷ್ಟಗುಣಮಟ್ಟದ ಆಡಳಿತವನ್ನು ನೀಡಿದ ಭರತನು ತಾನೆಂದು ರಾಜನೆಂಬ ಗರ್ವ ಗಮ್ಮತ್ತುಗಳನ್ನು ಪ್ರದರ್ಶಿಸದೇ ಶ್ರೀ ರಾಮನ ಪ್ರತಿನಿಧಿಯಾಗಿ ಆಳ್ವಿಕೆ ನಡೆಸಿದ ಅಂಶ ನಿಜಕ್ಕೂ ಹೆಗ್ಗಳಿಕೆಯದು, ಪ್ರಶಂಶನೀಯವಾದುದು. ದೊರೆತನದ ಎಲ್ಲ ಕರ್ತವ್ಯಗಳನ್ನು ಶ್ರೇಷ್ಠ ರೀತಿಯಲ್ಲಿ ನಿರ್ವಹಿಸಿದ ಭರತನು ರಾಜ್ಯ ತನದಲ್ಲವೆಂಬ ಆಂತರಿಕ ತ್ಯಾಗದ ಭಾರವನ್ನು ಸರ್ವತ್ರ ನಿರ್ವಹಿಸಿರುವುದು ಆದ್ಯತೀಯವೆನಿಸಿದೆ.

ಇದಕ್ಕೆ ತದ್ವಿರುದ್ದವಾಘಿ ಇಂದಿನ ನಾವುಗಳು ಕೇವಲ ಒಂದು ಸಣ್ಣ ಹುದ್ದೆ ದೊರತರೂ ಸಾಕು ಅದನ್ನು ಗುಣಮಟ್ಟದಲ್ಲಿ ನಿರ್ವಹಿಸುವವರಲ್ಲಿ ಅದಕ್ಕೆ ಸಂಬಂಧಿಸಿದ ಗತ್ತು ಗಾಣೆಯನ್ನು ಮೆರೆಯುವುದರಲ್ಲಿ ಅಥವಾ ಅಂಥಹ ಹುದ್ದೆಗೆ ಸಂಬಂಧಿಸಿದ ಪ್ರತಿಫಲಗಳನ್ನು ಪಡೆಯುವುದರಲ್ಲೇ ಆಸಕ್ತಿ ತೋರಿಸುತ್ತೇನೆಂಬುದು ವಿಕ್ಷೀಸಬೇಕಾದ ಹಾಗೂ ಪರಿವರ್ತನೆಗೊಳ್ಳಬೇಕಾದ ಅಂಶ.

ಈ ಪದ್ಯವು ನಮಗೆಲ್ಲರಿಗೂ ನೀಡುತ್ತಿರುವ ಸಂದೇಶವೇನೆಂದರೆ ಈ ಜಗತ್ತಿಗೆ ಬಂದಿದ್ದೇವೆ. ಕೆಲವೇ ಕಾಲ ಇಲ್ಲಿರುತ್ತೇವೆ ಮತ್ತೆ ಜಗದತ್ಯಾಗ ಮಾಡಲೇ ಬೇಕಾದ ತತ್ಕಾರಣ ನಮ್ಮ ನಮ್ಮಗಳ ಕರ್ತವ್ಯ ನಿರ್ವಹಣೆಯಲ್ಲಿ ಪಾವಿತ್ರ್ಯತೆಯನನು ತರೋಣ, ಸ್ವಾರ್ಥ ಪರತೆಯನ್ನು ತೋರೆಯೋಣ. ಸಮಾಜದ ಎಲ್ಲ ವ್ಯಕ್ತಿಗಳನ್ನು ಸಹೋದರರಂತೆ ಕಾಣುತ್ತ ಸಹಕಾರ ಭಾರದಿಂದ ಅಭಿವೃದ್ದಿಯತ್ತ ಸಾಗೋಣವೆಂಬುದೇ ಆಗಿದೆ. ಹಮ್ಮು ಬಮ್ಮುಗಳನ್ನು ತೊರೆಯೋಣ ಸತ್ಪ್ರಜ್ಞೆಗಳಾಗಿ ಇತರರನ್ನು ಸನ್ಮಾರ್ಗದತ್ತ ನಡೆಸೋಣವೆಂಬುದೇ ಈ ಪದ್ಯದ ಪರಮೋಚ್ಚ ಗುರಿಯಾಗಿದೆ.

# "ನಿನ್ನ ದುಡಿಮೆಯಿಂದ ತೃಪ್ತಿ ಪಡೆ"

ಸತ್ಯ ಶುದ್ಧ ಕಾಯಕಧಾರಿಯಾಗಿದ್ದ ಭಕ್ತಿ ಭಂಡಾರಿ ಬಸವಣ್ಣನವರು ತಮ್ಮ ಶುದ್ಧ ನಡೆಯ ಮೂಲಕವೇ ಜನಾದರ್ಶಿಗಳಾಗಿ "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲ ಸಂಗಮನನೊಲಿಸುವ ಪರಿ" ಎನ್ನುವ ಮೂಲಕ ಭಗವಂತ ನೀಡಿರುವ ಪಂಚಭೂತಗಳ ನೆರವಿನಿಂದ ದೇಹಶ್ರಮವನ್ನಾಧರಿಸಿ ಪರಾವಲಂಬಿಗಳಾಗದೇ ಸ್ವಾವಲಂಬಿ ಹಾಗೂ ಸ್ವಾಭಿಮಾನಿಗಳಾಗಿರೆಂದು ತತ್ವಭೋಧನೆ ಮಾಡಿರುತ್ತಾರೆ. ಆದರೆ ಇದಕ್ಕೆ ತದ್ವಿರುದ್ಧವಾಗಿ ಇಂದಿನ ನಾವುಗಳು ಸ್ವಂತ ದುಡಿಮೆಯ ಗೊಡವೆಗೆ ಹೋಗದೆ ಭ್ರಷ್ಟಾಚಾರ, ಲಂಚಗುಳಿತನ ಹಾಗೂ ಇತರರ ಶ್ರಮಗಳಿಂದ ಹಣ ಲಪಟಾಯಿಸುವುದನ್ನು ಕಂಡ ಆಧ್ಯಾತ್ಮಕ ಕವಿ ಡಿ.ವಿ.ಜಿ.ಯವರು ಇದೇ ತತ್ವಕ್ಕೆ ಸಮಾನಾಂತರವಾಗಿ ಪ್ರಾಯೋಗಿಕ ಉದಾಹರಣೆಯನ್ನು ನೀಡುತ್ತಿದ್ದಾರೆ. ತಮ್ಮ ತಮ್ಮ ಶ್ರಮದಿಂದ ದುಡಿದ ಅನ್ನವನ್ನು ಸಂತೋಷದಿಂದ ಸ್ವೀಕರಿಸಿ ದೇಹದಾರ್ಡ್ಯತೆಯನ್ನು ಪಡೆಯಿರಿ ಮತ್ತು ಇತರರ ದುಡಿಮೆಗೆ ಕೈಹಾಕದಿರಿ ಎಂಬ ಸಂದೇಶದ ಮೂಲಕ ಬೇರೆಯವರ ಶ್ರಮದ ಫಲವನ್ನು ತಿನ್ನುವಿರಾದರೆ ಅದು ಜೀರ್ಣವಾಗದ ಋಣವಾಗಿ ಉಳಿಯುತ್ತದೆಯೆಂಬ ಎಚ್ಚರಿಕೆ ಸಂದೇಶವನ್ನು ಈ ಕೆಳಗಿನ ಪದ್ಯದಲ್ಲಿ ಸೊಗಸಾಗಿ ಚಿತ್ರೀಕೃತವಾದಂತೆ ಬಣ್ಣಿಸಿದ್ದಾರೆ.

**ಅನ್ನವುಣುವಂದು ಕೇಳ್: ಅದನು ಬೇಯಿಸಿದ ನೀರ್**
**ನಿನ್ನ ದುಡಿಮೆಯ ಬೆವರೋ ಪೆರರ ಕಣ್ಣೀರೋ**
**ತಿನ್ನು ನೀ ಜಗಕೆ ತಿನಲಿತ್ತನಿತ ಮಿಕ್ಕೂಟ**
**ಜೀರ್ಣಿಸದ ಋಣಶೇಷ ॥ ಮಂಕುತಿಮ್ಮ ॥**

ಪದ್ಯದಲ್ಲಿ ಪ್ರಸ್ತಾಪಿತವಾಗಿರುವ ಸಂದರ್ಭ ಊಟದ ಸಮಯ. ಊಟ ಮಾಡುವ ಸಂದರ್ಭದಲ್ಲಿ ಅನ್ನದ ಮುಂದೆ ಕುಳಿತಾಗ ನಿನ್ನನ್ನೇ ನೀನು ಕೇಳಿಕೋ ಅದು ನಿನ್ನ ದೇಹ ಶ್ರಮದಿಂದ ದುಡಿದದ್ದೋ ಅಥವಾ ಇನ್ನಾರದೋ ಶ್ರಮದಿಂದ ಪಡೆದದ್ದೋ ? ನಿನ್ನ ದುಡಿಮೆಯಿಂದ ಬಂದದನ್ನ ಭುಜಿಸುವ ಕಾರ್ಯತತ್ಪರತೆಯನ್ನು ತಂದುಕೋ. ತನ್ಮೂಲಕ ತಮ್ಮ ತಮ್ಮ ಶ್ರಮದಿಂದ ಬದುಕಲು ಕಲಿತೊಡನೆಯೇ ಸುಂದರ ಸಮಾಜ ನಿರ್ಮಾಣವಾದಂತೆ ಎನ್ನುವ ಮೂಲಕ "ನೀನು ಬದುಕು ಇತರರನ್ನು ಬದುಕಲು ಬಿಡು" (Live and Let Live) ಎಂಬ ಸಂದೇಶವನ್ನು ಸಾರಿದ್ದಾರೆ. ಹಾಗೂ ಮುಂಬರುವ ಸಮಾಜದ ಶುದ್ಧತೆಗೆ ಕರೆಯುತ್ತಿದ್ದಾರೆ. ಈ ಉದಾಹರಣಾರ್ಥ ಸಂದೇಶವನ್ನು ನೈಜ ಅನುಷ್ಠಾನಕ್ಕೆ ತರುವ ಮೂಲಕ ಮುಂದಿನ ಪೀಳಿಗೆಗೆ ಉತ್ತಮ ಸಮಾಜವನ್ನು ನೀಡೋಣವೆಂಬುದೇ ಈ ಪದ್ಯದ ಸಂದೇಶವಾಗಿದೆ. ತತಕ್ಕಾರಣ ಕವಿ ವಾಣಿಯನ್ನು ಅನುಸರಿಸೋಣ, ಆದರ್ಶದತ್ತ ಹೆಜ್ಜೆ ಹಾಕೋಣ.

# "ಮಾತಲ್ಲಿ ಸತ್ಯವಿರಲಿ, ಮೊಗದಲ್ಲಿ ನಗುವಿರಲಿ"

ಆಧುನಿಕ ಜಗತ್ತಿನ ಬಾಹ್ಯ ಆಕರ್ಷಣೆಗೊಳಗಾಗಿರುವ ಇಂದಿನ ನಾವುಗಳು ಸುಖವನ್ನರಸುತ್ತಾ ಅತ್ಯಾಧುನಿಕ ಟಿವಿ, ಬಹುಕೋಟಿ ಮೌಲ್ಯದ ಸುಸಜ್ಜಿತ ಕಾರು, ಬೆಲೆ ಬಾಳುವ ಉಡುಪು, ಒಡವೆಗಳು ಹಾಗೂ ವೈಭವೋಪೇತ ಗೃಹ ಇತ್ಯಾದಿಗಳನ್ನು ಹೊಂದಿದ್ದರೂ ಸುಖಶಾಂತಿ ನೆಮ್ಮದಿಗಳಿಂದ ದೂರವೇ ಉಳಿಯುತ್ತಿದ್ದು ಮುಖದಲ್ಲಿ ಸಿಡುಕು, ಅಸಹನೆ ಆಡುವ ಮಾತಿನಲ್ಲಿ ಸುಳ್ಳು, ಠಕ್ಕು, ಕೊಳ್ಳುಬಾಕುತನ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಹಾಗೂ ಜಗಳವೇ ಜಗದ ಜನರ ಜಾಯಮಾನವೆನಿಸಿರುವ ಅಂಶವನ್ನು ಅಂದೇ ಗಮನಿಸಿದ್ದು ಆಧ್ಯಾತ್ಮ ಕವಿ ಡಿ.ವಿ.ಜಿ ಯವರು ಹೊರಗಿನ ವಸ್ತುಗಳ ಸಂಗ್ರಹಣೆಯಿಂದ ಸುಖಶಾಂತಿ ನೆಮ್ಮದಿ ಸಿಗದು, ಬದಲಾಗಿ ಆಡುವ ಮಾತಿನಲ್ಲಿ ಸತ್ಯಸಂಧತೆಯಿರಲಿ, ವದನದಲ್ಲಿ ಮಂದಹಾಸ ಹೊರಸೂಸುತ್ತಿರಲಿ. ಸುಖಾನುಭವದ ಕೋರಿಕೆಯಲ್ಲೂ ಮಿತಿಗಳಿರಲೆಂಬ ಹಾಗೂ ಅತಿಯಾದ ಉದ್ವೇಗ ಯಾವುದೇ ಕಾರಣಕ್ಕೂ ಬೇಡವೆಂಬ ಹಿತವಚನದ ಸುಂದರ ಸಂದೇಶವನ್ನು ನಮಗೆ ದೊರಕಿಸಿಕೊಟ್ಟಿದ್ದಾರೆ. ಆ ಪದ್ಯದ ಸೌಂದರ್ಯ, ಲಯ ಬದ್ಧತೆಗಳನ್ನು ನೋಡಿದರೆ ಇವುಗಳನ್ನು ಪಾಲಿಸಬೇಕೆಂಬ ಆಸೆ ಎಲ್ಲರಲ್ಲಿಯೂ ಮೂಡುವುದರಲ್ಲಿ ಸಂಶಯವಿಲ್ಲ.

**ಸ್ಮಿತವಿರಲಿ ವದನದಲಿ ಕಿವಿಗೆ ಕೇಳಿಸದಿರಲಿ**
**ಹಿತವಿರಲಿ ವಚನದಲಿ ಋತವ ಬಿಡದಿರಲಿ**
**ಮಿತವಿರಲಿ ಮನಸಿನುದ್ವೇಗದಲಿ ಭೋಗದಲಿ**
**ಅತಿ ಬೇಡವೆಲ್ಲಿಯುಂ ॥ಮಂಕುತಿಮ್ಮ॥**

ದೇವತೆಗಳ ಭಾವಚಿತ್ರಗಳನ್ನು ನಾವು ವೀಕ್ಷಿಸಿದಲ್ಲಿ ಅವರ ಮುಖವು ಮಂದಹಾಸದಿಂದ ಹೊರಸೂಸುತ್ತಿರುತ್ತದೆ. ನಗುವೆಂದರೆ ದೈತ್ಯ ಪಾತ್ರದಾರಿಯ ಗಹಗಹಿಸುವ ಕೇಕೆಯಾಗಿರಕೂಡದು. ನಗುವಿನ ಭಾವ ಹೊಂದಿದವರ ಕಿವಿಗೂ ಸಹ ಕೇಳಿಸದಂಥಹ ನಗುವದಾಗಿರಬೇಕು. ಇಂದಿನ ಜನರ ಮೊಗದಲ್ಲಿ ನಗುವೇ ಇರದೆ ನಗಿಸಲೋಸುಗವೇ 'ನಗೆಜಾಗರಣೆ' ಹಾಸ್ಯಸಂಭ್ರಮ' ಕಾರ್ಯಕ್ರಮಗಳನ್ನು ಹುಟ್ಟು ಹಾಕಿ ಬಲವಂತದಿಂದ ನೋಡಬೇಕಾದ ಸ್ಥಿತಿಯೊದಗಿದೆ ಎಂಬುದರ ಅರಿವು ಮೂಡುತ್ತದೆ. ಆಡುವ ಮಾತಿನಲ್ಲೋ ಹಿತವೆಂಬುದರ ಅಂಶವೂ ಇಲ್ಲದೇ ಸತ್ಯರಹಿತವಾಗಿದೆ. ಆಸೆಗಳ ಸುರಿಮಳೆಯೇ ಅಸಂಖ್ಯಾತವಾಗಿ ಬೆಳೆದು ಯಾವುದನ್ನು ಪಡೆದುಕೊಂಡರೂ ನೆಮ್ಮದಿಯಿಲ್ಲ. ಇನ್ನಷ್ಟು ಬೇಕೆಂದು ದುಂಬಾಲು ಬೀಳುವ ಸಾದೃಶ್ಯತೆಯೇ ಕಾಣಸಿಗುತ್ತದೆ. ಬೇಕಾದ್ದಕ್ಕಿಂತ ಹೆಚ್ಚಿನದನ್ನು ಪಡೆಯುವ ಈ ಆಸೆಬುರುಕುತನ ಎಲ್ಲರಲ್ಲಿಯೂ ನೈತಿಕ ಬಡತನವನ್ನು ಸೃಷ್ಟಿಸಿದೆ.

ಕೊಡುವ ಭಗವಂತನು ಬಡವನಲ್ಲ. ಪಡೆವ ನಾವು ನಮ್ಮ ನಮ್ಮ ಮನಸ್ಥಿತಿಯಿಂದ ದಿನದಿಂದ ದಿನಕ್ಕೆ ದೈನ್ಯತೆಯತ್ತ ಸಾಗುತ್ತಿದ್ದೇವೆ. ಇದನ್ನು ಬಿಟ್ಟು ನಾವೆಲ್ಲರೂ ಒಂದು ಸಂಸಾರದ ಸದಸ್ಯರು, ಸಿಕ್ಕದೆಲ್ಲವನ್ನು ಎಲ್ಲರೂ ಹಂಚಿ ತಿನ್ನೋಣ ನಗುನಗುತ್ತಾ ಬಾಳೋಣ, ವೈರಮತ್ಸರಗಳನ್ನು ದೂರವಿಡೋಣ ಎನ್ನುತ್ತಾ ಬದುಕನ್ನು ನಡೆಸಿದಲ್ಲಿ ನಿಜಕ್ಕೂ ನಮ್ಮಗಳ ಮನದಾಳದಲ್ಲಿ ಶಾಂತಿಯೇರ್ಪಟ್ಟು ಮೊಗದಲ್ಲಿ ನಗುವೂ ವಚನದಲಿ ಸತ್ಯವೂ ಬಯಕೆಗಳಲ್ಲಿ ಮಿತಿಯೂ ತಲೆದೋರಿ ಶಾಂತಿಯ ಜಗತ್ತು ನಿರ್ಮಾಣವಾಗಿರುತ್ತದೆ. ಇಂಥಹ ಒಂದು ಸುಸ್ಥಿಯ ಜಗತ್ತನ್ನು ನಿರ್ಮಿಸಲು ಈ ಮೇಲಿನ ಪದ್ಯವು ನೀಡುವ ಸಂದೇಶವು ದಾರಿದೀಪವಾಗಲೆಂದು ಭಗವಂತನನ್ನು ಪ್ರಾರ್ಥಿಸೋಣ.

# "ಜೀವನವದೆಷ್ಟು ಕ್ಷಣಭಂಗುರ"

ಕಣ್ಣು ಮಿಟುಕಿಸಿ ಬಿಟುವುದರೊಳಗೆ ಕಂಡು ಕೇಳಿರಿಯದ ಸ್ಥಿತಿಯನ್ನು ತಂದೊಡ್ಡಿ ಸುಖದ ಸುಪ್ಪತ್ತಿಗೆಯಲ್ಲಿ ಬೀಗುತ್ತಿದ್ದ ನಮ್ಮಗಳಿಗೆ ಇದ್ದಕ್ಕಿಂದತೆಯೇ ಚೀನಾ, ಇಟಲಿ, ಅಮೇರಿಕಾ ಭಾರತದೇಶಗಳನ್ನೊಳಗೊಂಡಂತೆ ವಿಶ್ವದ 196 ದೇಶಗಳಲ್ಲಿ ಕೊರೋನಾ ಖಾಯಿಲೆ ತನ್ನನ್ನು ವಿಸ್ತರಿಸಿಕೊಂಡು ಸಾವಿನ ರಣಕೇರಿಯಿಂದ ಜನರನ್ನು ಭಯಭೀತರನ್ನಾಗಿ ತತ್ಸಂಬಂಧೀ ಲಾಕ್‌ಡೌನ್ ವ್ಯವಸ್ಥೆಗಳನ್ನು ನಿರ್ಮಿಸಿರುವುದನ್ನು ನೋಡುವಾಗ ಹಳೆಯ ಕಾಲದ ವಿಷ್ಣುವರ್ಧನ್ ಲಕ್ಷ್ಮೀ ಜೋಡಿಯ "ಅವಳಹೆಜ್ಜೆ" ಚಿತ್ರದಲ್ಲಿನ ಪರಮಾತ್ಮನ ಲೀಲಾ ವಿನೋದದ ಪದ್ಯವೊಂದು ನೆನಪಿಗೆ ಬರುತ್ತದೆ.

**ದೇವರ ಆಟ ಬಲ್ಲವರಾರು**

**ಆತನ ಎದಿರು ನಿಲ್ಲುವರಾರು**

**ಕೇಳದೆ ಸುಖವಾ ತರುವಾ**

**ತಿಳಿಸಿದೆ ದುಃಖವಾ ಕೊಡುವಾ**

**ತನ್ನ ಮನದಂತೆ ಕುಣಿಸಿ ಆಡುವಾ**

ಮಾನವನ ಜೀವನದಲ್ಲಿ ಬಂದೊದಗುವ ಆಪತ್ತು, ವಿಪತ್ತು, ಕಷ್ಟಕಾರ್ಪಣ್ಯ, ದುರ್ದೆಶಿ ಮತ್ತು ದುರ್ಘಟನೆಗಳೂ ಕೂಡಾ ಪರಮಾತ್ಮದೇಶಗಳೆಂದೇ ಕುಂತಿಯಧರ್ಮಭೋ ಇಂಬ ಮಸ್ತಕವನ್ನು ಪ್ರಸ್ತಾಪಿತವಾಗಿರುವುದನ್ನು ಕಾಣುತ್ತೇವೆ.

ಇದೇ ಸಾರಾಂಶವನ್ನು ಜನರಿಗೆ ತಿಳಿಸಲುದ್ದೇಶಿಸಿದ ಆಧ್ಯಾತ್ಮ ಕವಿ ಡಿ.ವಿ.ಜಿ ರವರ ಕೆಳಗಿನ ಪದ್ಯದಲ್ಲಿ ಭಗವಂತನ ವಿವಿಧ ಲೀಲಾವಿನೋದಗಳನ್ನು ಚಿತ್ರಿಸಿದ್ದಾರೆ.

**ಹಾಸ್ಯಗಾರನೊಬೊಮ್ಮೆ ವಿಕಟ ಪರಿಹಾಸವದು**

**ಆಸ್ಯ ಗಂಭೀರ ಬೆರಲಿಂದ ಚರಳಗುಳಿ**

**ವಿಶ್ವಾಸದುಪಚಾರ ಹುಣಸೆ ಮೆಣಸಾಹಾರ**

**ವಿಶ್ವಪಾಲನೆಯಿತು ॥ಮಂಕುತಿಮ್ಮ॥**

ಸೃಷ್ಠಿ ಕ್ಷತಿಲಯ ಕರ್ತನಾದ ಭಗವಂತನು ತನ್ನ ಮಕ್ಕಳಾದ ಪ್ರಜೆಗಳೊಡನೆ ವೈವಿಧ್ಯಮಯ ರೀತಿಯಲ್ಲಿ ಹಾಸ್ಯಗಾರನಾಗಿ ತಮಾಷೆಮಾಡುತ್ತಾ, ಬೆರಳಿನಿಂದ ಚರಕವ ಇಟ್ಟು ನೇಣಸುವುದರ ಜೊತೆಗೆ ಹುಳಿಖಾರಗಳಿಂದ ಕೊಡಿದಂತಹ ಕಷ್ಟ ಸನ್ನಿವೇಶಗಳನ್ನು ನಿರ್ಮಿಸಿ ವಿಶ್ವ ಪಾಲನಾ ಕಾರ್ಯವನ್ನು ಮಾಡುತ್ತಾನೆಂದಿದ್ದಾರೆ. ಹೊರನೋಟಕ್ಕೆ ಕಾಣುವ ದೃಶ್ಯವೇನೇ ಇರಲಿ ಇವೆಲ್ಲವನ್ನು ಸೃಷ್ಠಿಸುವ ಪರಮಾತ್ಮನೊಬ್ಬನಿದ್ದಾನೆ ಅವನೇ ಪಾರು ಮಡುತ್ತಾನೆಂಬ ಅಚಲ ಶ್ರದ್ದೆಯೊಂದಿಗೆ ಕೊರೋನಾದ ಬಗ್ಗೆ ವೈದ್ಯರು, ವಿಷಯತಜ್ಞರು ಹಾಗೂ ಭೂಗರ್ಭಶಾಸ್ತ್ರಜ್ಞರುಗಳು ನೀಡಿರುವ ಸಲಹೆಗಳನ್ನು ತಪ್ಪದೇ ಪಾಲಿಸುತ್ತಾ ಒದಗಿ ಬಂದಿರುವ ವಿಪತ್ತನ್ನು ಎದುರಿಸೋಣವೆಂಬ ಆಂತರಿಕ ವಿಜಯಾಭಾವ ಮೂಡಬೇಕೆಂಬುದೇ ಲೇಖಕರ ಇಂಕಿತವಾಗಿದೆ.

ಇಂತಹ ದುಸ್ಥಿತಿಯ ಆಗಮನದಿಂದ ಬದುಕಷ್ಟು ಕ್ಷಣಭಂಗುರದ್ದು ಎಂಬುದು ಅರ್ಥವಾಗಿ ಕೆಲವೇ ದಿವಸಗಳಲ್ಲಿ ಇಂಥಹ ಅಘಾತಕಾರೀ ದಿವಸಗಳು ಬಂದೊದಗಿದವು ಎಂಬುದನ್ನು ಅರಿತು ನಮ್ಮ ದುರಾಸೆ, ಸ್ವಾರ್ಥಗಳನ್ನು ಶೂನ್ಯಗೊಳಿಸಿಕೊಳ್ಳುತ್ತ ಸರ್ವರ ಅಭಿವೃದ್ಧಿಗೆ ಶ್ರಮಿಸೋಣವೆಂಬ ಸಂದೇಶ ನೀಡಿದ ಪದ್ಯವಿದಾಗಿದೆ.

# "ಕಣ್ಣುಂದಿರುವವರು ಕೈಬಿಟ್ಟಾಗ ಕಾಣದವನು ಕೈ ಹಿಡಿಯುತ್ತಾನೆ"

ಎಲ್ಲದಕ್ಕೂ ಔಷಧವಿದೆಯೆಂಬ ವಿಜ್ಞಾನಿಗಳ ಗರ್ವಕ್ಕೆ ಮರ್ಮಾಘಾತ ನೀಡಿ, ವೈದ್ಯಕೀಯ ಕ್ಷೇತ್ರಕ್ಕೆ ಸವಾಲೆಸೆದು ವಿಶ್ವದ ಎಲ್ಲ ದೇಶಗಳ ಜನತೆಯ ಎದೆಯೊಳದಲ್ಲಿ ಜೀವಭಯದ ಭುಗಲೆಬ್ಬಿಸಿರುವ ಈಗತ್ತಲಾಗನ "ಕೋವಿಡ್–19"ರ ಕರಾಳ ಚಿತ್ರಣವು ಯಾವುದೇ ಕಥೆಯಲ್ಲೋ, ಕನಸಿನಲ್ಲೋ ಕೇಳಿದ ಘಟನೆಯ ನೆನಪನ್ನು ತರುತ್ತದೆ. ನಿಜಕ್ಕೂ ಇದೊಂದು ವಿಸ್ಮಯವೇ. ಕೆಲವೇ ದಿವಸಗಳ ಅಂತರದಲ್ಲಿ ಊಹಿಸಲಾಗದ ಸನ್ನಿವೇಶದ ಸೃಷ್ಟಿ.

ಜಗತ್ತಿನ ಸೃಷ್ಟಿ, ಸ್ಥಿತಿ ಲಯಗಳಿಗೆ ಕರ್ತನಾದ ಭಗವಂತನು ಗುಟ್ಟು, ಪಾಲನೆ ಹಾಗೂ ವಿನಾಶಗಳೆಂಬ ಮೂರು ಕರ್ತವ್ಯಗಳನ್ನು ನಿರ್ವಹಿಸುತ್ತಾ ಅಧರ್ಮ ಹೆಚ್ಚಾದಾಗ ಲಯದ ಗುರಿಯನ್ನಿಟ್ಟುಕೊಂಡು, ಆಗಾಗ್ಯ ಇಂತಹ ಪ್ರಾಕೃತಿಕ ವಿಕೋಪಗಳನ್ನು ಬರ, ಕ್ಷಾಮ, ಪ್ರವಾಹ, ಖಾಯಿಲೆ ಹಾಗೂ ಭೀಕರ ಯುದ್ಧಗಳ ರೂಪದಲ್ಲಿ ಘಟಿಸಲು ಏರ್ಪಡು ಮೂಡುತ್ತಿರುತ್ತಾನೆಂಬ ಬಗ್ಗೆ ಭಗವದ್ಗೀತೆಯ "ಯದಾಯದಾಹ ಧರ್ಮಸ್ಸ ಗ್ಲಾನಿರ್ಭವತು ಭಾರತ, ಅಭ್ಯುತ್ತಾನಾಂ ಅಧರ್ಮಶ್ಚ ತದಾತ್ಮಾನಂ ಸೃಜಾ ಮ್ಯಹಂ" ಎಂಬ ಸತ್ಸವಾಕ್ಯಗಳ ಮೂಲಕ ಇಂಥಹ ದುರ್ಘಟನೆ ಮತ್ತು ವಿಕೋಪಗಳನ್ನು ಪರಮಾತ್ಮನ ನಿರ್ದೇಶನವೆಂದೇ ಪರಿಗಣಿಸಲು ಸೂಚಿಸಲಾಗಿದೆ. ಇಂದಿನ ರೋಗದ ವಿಸ್ತರಣೆ, ಸಾವಿನ ಸಂಖ್ಯೆ, ಮಾಧ್ಯಮಗಳಲ್ಲಿ ಭಿತ್ತರವಾಗುವ ಸುದ್ಧಿ ಪ್ರತಿಯೊಬ್ಬರ ತಲೆಕಡಿಸುತ್ತಿದೆ ಹಾಗೂ ದಿಗಲುಬೀಳಿಸುತ್ತಿದೆಯೆಂಬಂಶವನ್ನು ಚಿತ್ತೀಕರಿಸುವ ಡಿವಿಜಿ ಯವರ ಪದ್ಯ ಪ್ರಸಕ್ತ ವಿದ್ಯಮಾನಕ್ಕೆ ಕನ್ನಡಿ ಹಿಡಿದಂತಿದೆ.

**ಮುತ್ತಿರುವುದಿಂದು ಭೂಮಿಯನದೊಂದು ದುರ್ದೈವ**

**ಮೃತ್ಸು ಕುಣೀಯುತಲಹನು ಕೇಕೆ ಹಾಕುತಲಿ**

**ಸುತ್ತಿಪುದು ತಲೆಯವನುದಿನದ ಲೋಕದ ವಾರ್ತೆ**

**ಎತ್ತಲಿಕದೆಲ್ಲ ಕಡೆ? ॥ಮಂಕುತಿಮ್ಮ॥**

ಇಂದು ಭೂಮಿಯನ್ನು ಒಂದು ದುರ್ದೈವ ಮುತ್ತಿಕೊಂಡಿದೆ. ಪತ್ರಿಕೆಗಳನ್ನು ಓದಿದರೆ ಪ್ರತಿದಿನವೂ ತಲೆ ಸುತ್ತಿ ಬೀಳುವಂಥಹ ಸುದ್ಧಿಗಳೆ ಕೇಳಸಿಗುತ್ತವೆ. ಪ್ರಸಕ್ತದ ಸಾಂಕ್ರಾಮಿಕಕ್ಕೆ ಔಷದಿ ಇನ್ನೂ ದೊರೆತಿಲ್ಲವಾದ ಕಾರಣ "ಸಾಮಾಜಿಕ ಅಂತರ ನಿರ್ವಹಣೆಯೇ" ಔಷದವೆಂದಾಗಿ ನಿರೂಪಿತವಾಗಿದೆ.

ಇಂತಹ ಆಪತ್ತು, ವಿಪತ್ತು ಹಾಗೂ ದುರ್ದೆಶಿಯ ಅನಿಷ್ಠಗಳನ್ನು ನಿರ್ನಾಮಮಾಡಿ ಎಲ್ಲರಿಗೂ ಸಂಪದ್ಭರಿತತೆಯನ್ನು ತಂದೊದಗಸುವವನು ಸರ್ವಶತ್ತ ದೇವರೆಂಬುದನ್ನು ನಾವು ಮನಗಾಣಬೇಕಾಗಿದೆ. ಹೇಗೂ ಸಂದರ್ಭದ ಅನಿವಾರ್ಯತೆಯಿಂದ ಮನೆಯಲ್ಲಿರಬೇಕಾದ ಪಂಪಾಠಕ್ಕೆ ಒಣ್ಣಿಕೊಂಡಿರುವ ನಾವುಗಳು ಮನೆಯಲ್ಲಿರುವ ಎಲ್ಲ ಕ್ಷಣಗಳಲ್ಲೂ ಭಗವಂತನ ಲೀಲೆಗಳ ನೆನಪು ತರುವ ಸಚಿಂತನೆ, ಸತ್ಸಂಗ, ಭಜನೆ ಪೂಜಾದಿ ಕಾರ್ಯಕ್ರಮಗಳನ್ನು ತೊಡಗಿಸಿಕೊಂಡು ಸ್ವಾರ್ಥಪರ ಚಿಂತನೆಗಳನ್ನು ಬದಿಗಿಟ್ಟು ಮನಸ್ಸನ್ನು ಸತ್ಫಲಗಳ ಹೊದೋಟವಾಗಿ ಪರಿವರ್ತಿಸಿಕೊಳ್ಳುವ ಮೂಲಕ ಜೀವನ ಸಫಲತೆಯನ್ನು ಪಡೆಯತಕ್ಕದ್ದಾಗಿದೆ.

"ಕೊಲ್ಲಿಪನೆ ಬೆಳೆಯಪನು" ಎಂದು ತಿಳಿದು ಹರಸಿ ಹಾರೈಸುವ ಸರ್ವಶಕ್ತನಲ್ಲಿ ಶರಣು ಹೊಂದಿದಾಗ ಎಲ್ಲ ಆಂತಂಕಗಳು ಮರೆಯೊಣ ಶುಭವು ತಂತಾನೇ ಪ್ರತ್ಯಕ್ಷವಾಗುವುದೆಂಬದೇ ಈ ಪದ್ಯದ ಸಾರಾಂಶವಾಗಿದೆ. ಇದೇ ಅಂಶವನ್ನು ಆಂಗ್ಲ ಲುಕ್ತಿಯೊಂದು ಹೀಗೆ ನಿರ್ದೇಶಿಸುತ್ತದೆ.

**"Those who leave everything in GOD's hands**

**will eventually see GOD's hand in every thing"**

ಪದ್ಯದ ಅಂತರಾರ್ಥವನ್ನು ಅರಿತು ಸರ್ವಭಾರವನ್ನು ಭಗವಂತನ ಪದತಲಕ್ಕೆ ಸಮರ್ಪಿಸೋಣ.

# "ಭವಿಷ್ಯದ ಉನ್ನತಿಗೆ ವರ್ತಮಾನವನ್ನು ಗೌರವಿಸಿ"

ಆಂಗ್ಲ ಕವಿಯೋರ್ವ "Morning is the youthood of the day" ಎನ್ನುವ ಮೂಲಕ ದಿನದ ಬದುಕಿನ ಉತ್ಕೃಷ್ಟತೆಗೆ ಬೆಳಗಿನ ಸಮಯದ ಸದುಪಯೋಗ ಪ್ರಮುಖವೆಂಬ ಅಂಶವನ್ನು ವ್ಯಕ್ತಪಡಿಸುತ್ತ ಭವಿಷ್ಯದ ಉಜ್ವಲತೆಗೆ ವರ್ತಮಾನದ ಸದುಪಯೋಗ ಅತಿಮುಖ್ಯವೆಂಬ ಅಂಶವನ್ನು ಜನತೆಗೆ ಸಾರಿದ್ದಾರೆ.

ಇಂದಿನ ಯುವ ಪೀಳಿಗೆಯೂ ತನ್ನ ದುಡುಕಿನಿಂದಾಗಿ ತಳಪಾಯ ಭದ್ರವಿಲ್ಲದ ಹಾಗೂ ನ್ಯಾಯನಿಷ್ಠುರವಲ್ಲದ ಕನಸುಗಳ ಮೂಲಕ ಭವಿಷ್ಯವನ್ನು

ಹಾಳುಗಡವಿಕೊಂಡಿರುವುದನ್ನು ಅಂದಿನ ದಿನಗಳಲ್ಲೇ ಮನಗಂಡ ಆಧ್ಯಾತ್ಮ ಕವಿ ಡಿವಿಜಿಯವರು, ಭವಿಷ್ಯದ ಬಗ್ಗೆ ಅತಿ ಚಿಂತಿಸುವ ಬದಲಾಗಿ ವರ್ತಮಾನ ಸಮಯವನ್ನು ಗುಣಾತ್ಮಕವಾಗಿ ಬಳಸಲು ತನ್ಮೂಲಕ ಮುಂದಿನ ಭವಿಷ್ಯವನ್ನು ಕಟ್ಟಿಕೊಳ್ಳಲು ಸೂಚಿಸಿರುತ್ತಾರೆ. ಪದ್ಯದ ಸಾರ ಹೀಗಿದೆ.

**ಮುಂದೇನೋ ಮತ್ತೇನೋ ಇಂದಿಗಾ ಮಾತೇಕೆ?**

**ಸಂದರ್ಭ ಬರಲಿ ಬಂದಾಗಲಾ ಚಿಂತೆ**

**ಹೊಂದಿಸುವನಾರೋ ನಿನ್ನಾಳಲ್ಲ ಬೇಂಹನು**

**ಇಂದಿಣಂದಿನ ಬದುಕು ॥ ಮಂಕುತಿಮ್ಮ ॥**

ಮುಂದೆ ಏನಾಗುತ್ತದೋ ಹೇಗಾಗುವುದೋ ಎಂದು ಅತಿಯಾಗಿ ತಲೆಕಡಿಸಿಕೊಳ್ಳುವ ಅವಶ್ಯಕತೆಯಿಲ್ಲ. ಆದರೆ ಪ್ರಾಜ್ಞ ಚಿಂತನೆಯಿರಲೆಂದು ತಿಳಿಸುತ್ತ, ನೀವೆಷ್ಟೇ ಚಿಂತಿಸಿದರೂ ಊಹಿಸಿದಂತೆ ಅವೆಲ್ಲವನ್ನೂ ಹೊಂದಿಸಲು ವಿಧಿಯೋನು ನಿಮ್ಮ ಆಳಲ್ಲ ಎಂಬ ಅಂಶವನ್ನು ಸೂಚಿಸಿರುತ್ತಾರೆ.

ನಾಳೆಯು ಇಂದಿನ ಪರಿಶ್ರಮ ಹಾಗೂ ಪ್ರಜ್ಞತೆಯ ಪ್ರತಿಫಲವಾಗಿದ್ದು ಈ ಕಾರಣದಿಂದ ವರ್ತಮಾನವನ್ನು ಕಡೆಗಣಿಸದೇ, ದೈವದಲ್ಲಿ ನಂಬಿಕೆ ಹಾಗೂ ಶ್ರದ್ಧೆಗಳನ್ನಿಟ್ಟು, ದೃಢನಿಶ್ಚಯದಿಂದ ಕಾರ್ಯತತ್ಪರಾದಲ್ಲಿ ಉತ್ತಮ ನಾಳೆಯು ನಮ್ಮ ಫಲಶೃತಿಯಾಗುತ್ತದೆಂದು ಒತ್ತಿಹೇಳುವ ಮೂಲಕ, ಸಮಾಜದ ಎಲ್ಲಾ ಪ್ರಜೆಗಳನ್ನು ಸಹೋದರರಂತೆ ಭಾವಿಸುತ್ತ ದೈವೋಪಾಲನೆಯಲ್ಲಿ ನಂಬಿಕೆಯಿಟ್ಟು ಕಾರ್ಯನಿರತರಾದಲ್ಲಿ "Glorious harvest" ಉತ್ತಮ ಸುಗ್ಗಿ ನಿಮ್ಮದಾಗುತ್ತದೆಂದಿದ್ದಾರೆ.

# ಮನದ ತೃಪ್ತಿಗೆ ಭಗವಂತನ ಪೂಜೆ ಪ್ರಸಾದ ಅತ್ಯವಶ್ಯಕ ?"

ಪ್ರತಿಯೊಬ್ಬರೂ ಆರೋಗ್ಯ, ನೆಮ್ಮದಿ, ಸುಖ ಶಾಂತಿಗಳಿಂದ ಬಾಳಬೇಕೆಂದು ಇಚ್ಛಿಸುವುದು ಸಹಜ. ಆದರೆ ಯಾವುದೋ ಕಾರಣದಿಂದಾಗಿ ಆರೋಗ್ಯ ತಪ್ಪಿ ರೋಗಿಯಾದ ಓರ್ವ ವ್ಯಕ್ತಿಯು ತಕ್ಷಣವೇ ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆ ಪಡೆದು ಪಥ್ಯಗಳನ್ನು ಅನುಸರಿಸಿದಲ್ಲಿ ತಾನು ಮರಳಿ ಆರೋಗ್ಯವಂತನಾಗುತ್ತಾನೆಂಬುದು ನಿರೀಕ್ಷೆ.

ಅಂತೆಯೇ ಜಂಜಾಟ, ಕಿರುಕುಳ ಮತ್ತು ತಾಪತ್ರಯಗಳಿಂದ ಕೂಡಿದ ಈ ಬದುಕಿನಲ್ಲಿ ಅವುಗಳಿಂದ ಬಿಡುಗಡೆ ಹೊಂದಿ ಸುಖಮಯ ಜೀವನವನ್ನು ಹೊಂದಲು ದೈವಾರಾಧನೆ ಪೂಜೆ, ಭಜನೆ, ಪ್ರಸಾದ ಸ್ವೀಕೃತಿ ಇತ್ಯಾದಿಗಳನ್ನು ಶ್ರದ್ಧೆಯಿಂದ ಅನುಷ್ಠಾನಗೊಳಿಸುವ ಮೂಲಕ ಸುಸ್ಥಿರ ಶಾಂತಿಯನ್ನು ಪಡೆದುಬಹುದೆಂಬುದೇ ಚಿಂತನ ಶೀಲದ ಅನಿಸಿಕೆ ಹಾಗೂ ವಿವಿಧ ಧರ್ಮಗ್ರಂಥಗಳ ನಿರ್ದೇಶನ ಈ ಅಂಶವನ್ನೇ ಒತ್ತಿ ಹೇಳಲು ಬಯಸುವ ಡಿ.ವಿ.ಜಿಯವರ ದೇವರ ಒಲುಮೆಗೆ ಇಂಥಹದೇ ನಿರ್ದಿಷ್ಟವಾದ ಮಾರ್ಗವೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳದೇ ಪೂಜೆ, ಭಜನೆ, ಮತ್ತು ಪ್ರಸಾದ ಸ್ವೀಕೃತಿ ಇವುಗಳಲ್ಲಿ ಯಾವುದನ್ನಾದರೂ ಆಯ್ಕೆ ಮಾಡಿಕೊಂಡು ಮನಶ್ಯಾಂತಿಯನ್ನು ಪಡೆಯರೆಂಬ ನಿರ್ದೇಶನದ ಗೀತೆ ಈ ಕೆಳಗಿನಂತಿದೆ.

**ದೇವಮಂದಿರ ಭಜನೆ ಪೂಜೆಪ್ರಸಾದಗಳು**
**ಜೀವನದಲಂಕಾರ ಮನಸಿನುದ್ಧಾರ**
**ಭಾವವಂ ಕ್ಷುಲ್ಲಜಗದಿಂ ಬಿಡಿಸಿ ಮೇಲೊಯ್ಯು**
**ದಾವುದಾದೊಡ ಮೊಳಿತು – ಮಂಕುತಿಮ್ಮ.**

ಅನಾರೋಗ್ಯ ಪೀಡಿತನಿಗೆ ವೈದ್ಯ ಚಿಕಿತ್ಸೆ ಹೇಗೆ ಫಲಕಾರಿಯೇ ಹಾಗೆಯೇ ಭೋಗ ಲಾಲಸೆಗಳಿಗೊಳಗಾಗಿ ತನ್ನ ಜೀವನವನ್ನು ದಾರುಣ ಸ್ಥಿತಿಗೆ ತಂದುಕೊಂಡಿರುವ ಓರ್ವ ವ್ಯಕ್ತಿಯೂ ಕೂಡ ಮೇಲೆ ಸೂಚಿತವಾದ ಮಾರ್ಗಗಳನ್ನು ಅನುಸರಿಸಿದ್ದು ಸರ್ವಶಕ್ತ ಪರಮಾತ್ಮನಿಗೆ ಅಂಥಹವನ ಮೊರೆ ತಲುಪಿ ಮಾನಸಿಕ ಶಾಂತಿ ದೊರೆಯುವುದರಲ್ಲಿ ಸಂದೇಹ ವಿಲ್ಲವೆಂದಿರುತ್ತಾರೆ.

ಕೆಳೆಗೆ ಬಿದ್ದವನು ಮೇಲೇಳಬಲ್ಲ ತನ್ನ ಸ್ಥಿತಿಯನ್ನು ಊರ್ಧ್ವಮುಖಿಯಾಗಿ ಬೆಳೆಸಬಲ್ಲ ಎಂಬರ್ಥದ ಆಂಗ್ಲವಾಣಿಯೊಂದು **"Each saint had a past and every sinner has a future"** ಪ್ರತಿ ಸಂತನೂ ತನ್ನದೇ ಆದ ಪೂರ್ವ ಇತಿಹಾಸವನ್ನು ಹೊಂದಿರುತ್ತಾನೆ ಹಾಗೂ ಪ್ರತಿ ಪಾಪಿಯೂ ತನ್ನ ಬದುಕನ್ನು ಪುಣ್ಯಮಯವನ್ನಾಗಿಸಿಕೊಳ್ಳಬಲ್ಲ ಭವಿಷ್ಯವನ್ನು ಹೊಂದಿರುತ್ತಾನೆ ಎನ್ನುತ್ತದೆ.

ಇಂದಿನ ಬದುಕು ನಿಜಕ್ಕೂ ಸಂಘರ್ಷ ನಿರಾಸೆ, ಕಾತರ, ದ್ವೇಷ, ಭಯ ಹಾಗೂ ಖಿನ್ನತೆಗಳಿಂದ ರೂಡಿದ್ದಾಗಿರುವುದರಿಂದ ಅದನ್ನು ಸರಿಪಡಿಸಲು ಸರ್ವರನ್ನೂ ಭಗವಂತನ ಸಂತಾನರೆಂದು ಭಾವಿಸುತ್ತ ಪ್ರೇಮಮಯ ಬದುಕನ್ನು ಸಾಗಿಸೋಣವೆಂಬುದೇ ಈ ಕಗ್ಗದ ಸಾರವಾಗಿದೆ.

# "ಗುಪ್ತ ಗಾಮಿನಿಯೋ ಋಣ"

ದೈವ ಸೃಷ್ಠಿಯಲ್ಲಿ ಉದಿಸಿ ಬಂದ 84 ಲಕ್ಷ ಜೀವ ಪ್ರಭೇದಗಳಲ್ಲಿ ಮಾನವನು ಅತ್ಯುನ್ನತ ಪರಮ ಜೀವಿಯಾಗಿರುವುದು ಪರಮಾತ್ಮನ ಕೃಪಾಕಟಾಕ್ಷ ವಿಶೇಷ. ಪರಮೋನ್ನತ ಸೃಷ್ಠಿಯಾದ ಮಾನವನು ತನ್ನ ಆರೋಗ್ಯವರ್ಧನೆಗೆ ಉತ್ತಮ ಆಹಾರ, ಜೀವನೋತ್ಕೃಷ್ಟತೆಗಾಗಿ ಆಧುನಿಕ ವಿಜ್ಞಾನ ಉತ್ಪನ್ನಗಳನ್ನು ಬಳಸುತ್ತಾನೆ. ತಾನು ತಿನ್ನುವ ಅನ್ನದ ಮೂಲವಾದ ಅಕ್ಕಿಯನ್ನು ಬೆಳೆಸಿದವರು ಯಾರು? ಆ ಭತ್ತವನ್ನು ಬೆಳೆಸಲು ಯಾವ್ಯಾವ ಗೊಬ್ಬರ ಹಾಕಲಾಯ್ತು? ಆ ಬೆಳೆಗೆ ನೀರು ಹಾಯಿಸಿದವರು ಯಾರು? ಎಂಬ ರಹಸ್ಯಗಳ ಮೂಲಕ್ಕೆ ಹೋದಾಗ ತನಗೆ ದೊರೆಯುವ ಪ್ರತಿಯೊಂದು ವಸ್ತುವೂ ಕೂಡಾ ಋಣದ ಆಧಾರದ ಮೇಲೆ ಎಂಬ ಅಂಶವನ್ನು ಆಧ್ಯಾತ್ಮ ಕವಿ ಡಿ.ವಿ.ಜಿ ಯವರು ಈ ಕೆಳಗಿನ ಪದ್ಯದಲ್ಲಿ ಋಣಗಳ ರಹಸ್ಯಗಳನ್ನು ಹೊರಗಡೆವಿದ್ದಾರೆ. ಪದ್ಯದ ಓಟ ಈ ಕೆಳಗಿನಂತಿದೆ.

**ಭುಕ್ತಿ ವಿನಗೆಲ್ಲಿಯದೋ? ಭತ್ತ ತಾನೆಲ್ಲಯದೋ?**<br>
**ಎತ್ತಲ್ಲಿನ ಗೊಬ್ಬರವೋ? ಎತ್ತಲಿನ ನೀರೋ?**<br>
**ಭಕ್ತವಾರಾರ ದುಡಿತದಿನೊ ನಿನಗಾಗಹುದು**<br>
**ಗುಪ್ತ ಗಾಮಿನಿಯೋ ಋಣ ॥ ಮುಂಕುತಿಮ್ಮ ॥**

ಗಂಗಾವತಿಯಿಂದ ಬಂದ ಅಕ್ಕಿಯನ್ನು ಯಾರು ಬೆಳೆದರೋ? ಆ ಬೆಳೆಗೆ ಡ್ಯಾಮಿನ ಕಾಲುವೆಯ ನೀರನ್ನು ಬಟ್ಟವರು ಯಾರೋ ? ಬೆಳೆಗೆ ಗೊಬ್ಬರವನ್ನು ಯಾರು ಸುರಿದರೋ? ಸಿದ್ಧವಾದ ಅಕ್ಕಿಯಿಂದ ಅನ್ನವನ್ನು ಮಾಡಲು ಶ್ರಮಿಸಿದವರು ಯಾರೋ? ಸುಖಾಸೀನರಾಗಿ ಕುಳಿತು ಗಾಳಿ ಬೀಸುವ ಫ್ಯಾನನ್ನು ಯಾರು ತಯಾರು ಮಾಡಿದರೋ ? ಅಂತೆಯೇ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಿದವರು ಯಾರೋ ?

ಹೀಗೆ ನಮ್ಮ ಜೀವನದ ಸರ್ವ ಲಭ್ಯತೆಗಳನ್ನು ಅವಲೋಕಿಸಲಾಗಿ ಇವುಗಳಲ್ಲವೋ ನಮಗೆ ಗುಪ್ತಗಾಮಿನಿಯ ರೂಪದಲ್ಲಿ ಕಾಣಿಸದಂತೆ ಒಂದೊದಗುತ್ತಿವೆ. ಆದ್ದರಿಂದ ಸೌಲಭ್ಯಗಳನ್ನು ಸ್ವೀಕರಿಸಿದ ನಾವುಗಳಿಗೆ ಸಹ ಸಮಾಜದ ಸಹೋದರ ಆತ್ಮಗಳಿಗೆ ನಮ್ಮ ನಮ್ಮ ಕೈಲಾಗುವ ಸೇವೆಗಳನ್ನು ಸಲ್ಲಿಸುವ ಮೂಲಕ ಇತರರ ಶುಭವನ್ನು ಕೋರುತ್ತಾ ಅಷ್ಟೊಂದು ಸೌಲಭ್ಯಗಳನ್ನು ದೊರಕಿಸಿದ ಸರ್ವೇಶ್ವರ ಭಗವಂತನಿಗೆ ಋಣಿಯಾಗರೋಣವೆನ್ನುವುದೇ ಈ ಪದ್ಯದ ಸಾರಾಂಶವಾಗಿದೆ.

# “ಪ್ರಕೃತಿ ಮಹಾತ್ಯಾಗಿ”

ಜನ್ಮತಃ ತನ್ನಸಂರಕ್ಷಣೆಗಾಗಿ ಸೂರ್ಯದೇವನಿಂದ ಕೊಡಮಾಡಲ್ಪಟ್ಟ ಕವಚ ಕುಂಡಲಗಳನ್ನೇ ದಾನಗೈದು ಇಂದ್ರದೇವನನ್ನು ತೃಪ್ತಿಗೊಳಿಸಿದ ಕೀರ್ತಿ ದಾನಶೂರ ಕರ್ಣನಿಗೆ ಸಲ್ಲುತ್ತದೆ. ಮಹಾಬಲಿ ರಾಜನು ತನ್ನ ದಾನ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ವಾಮನಾವತಾಲಿಯಾದ ಶ್ರೀ ವಿಷ್ಣುವಿನ ಪಾದವನ್ನೇ ತನ್ನ ತಲೆಯ ಮೇಲಿರಿಸಿಕೊಂಡು ಪ್ರಾಣವನ್ನು ತೆತ್ತ ಅಮರ ಖ್ಯಾತಿಯ ವಿಷಯವನ್ನು ಅಂತಿದ್ದೇವೆ. ಈ ಪ್ರಕ್ರಿಯೆಗಳಲ್ಲಿ ಸ್ವಾರ್ಥದ ಲವಲೇಶವೂ ಇಲ್ಲದೇ ಸ್ವಯಂ ಘೋಷಿತವಾದ ತಮ್ಮ ಬದುಕಿನ ಪರಿಶುದ್ಧತೆಯನ್ನು ನಿರ್ವಹಿಸಿರುವ ಪರಿಯಾಗದೆ ಇಂಥಹವರನ್ನು ತ್ಯಾಗಜೀವಿಗಳೆನ್ನುತ್ತೇವೆ.

ಆದರೆ ಇಂದಿನ ನಮ್ಮ ಕಥೆಯೇ ಬೇರೆ, ನೋಡಿದ, ಮಾಡಿದ ಪ್ರತಿಯೊಂದು ಕ್ರಿಯೆಗಳಲ್ಲೂ ನನಗೇನು ಬರುತ್ತದೆ. ಎಂಬ ಸ್ವಾರ್ಥದ ರಸಾಯನ ಉಕ್ಕಿಬರುವುದನ್ನು ನಮ್ಮ ನಡೆನುಡಿಗಳಲ್ಲಿ ಕಾಣುತ್ತೇವೆ. ಇಷ್ಟಕ್ಕೇ ಸದಾ ನಮ್ಮ ಹಪಹಪಿ ನಿಲ್ಲದೇ ಬೇರೆಯವರ ಗಂಟನ್ನು ಲಪಟಾಯಿಸುವ ಕಪಟತಂತ್ರಗಾರಿಕೆ ಹೆಚ್ಚಾಗಿರುತ್ತದೆ. ಬಹುಗಾತ್ರದ ಲಾಭಬೇಡಿಕೆ, ಕಾರ್ಯದಕ್ಷತೆಯಲ್ಲದೇ ಸ್ಥಾನ ಗಿಟ್ಟಿಸುವಿಕೆ, ಸುಳ್ಳು ಆಶ್ವಾಸನೆಗಳ ಮೇಲೆ ಬದುಕನೂಕುವುದೇ, ಕಲಬೆರಕೆ ಆಹಾರ ವಸ್ತು ವಿತರಣೆ ಹಾಗೂ ಸುಳ್ಳು ಔಷಧಿಗಳನ್ನು ದುಬಾರಿ ಬೆಲೆಗೆ ಮಾರುವುದು ಇತ್ಯಾದಿ ಪ್ರಕ್ರಿಯೆಗಳು ನಮ್ಮ ಸ್ವಾರ್ಥಕ್ಕೆ ಹಿಡಿದ ಕೈಗನ್ನಡಿಯಾಗಿವೆ.

ಆಧ್ಯಾತ್ಮ ಕವಿ ಡಿವಿಜಿಯವರು ಪ್ರಕೃತಿ ಮಾತೆಯನ್ನು ಉದಾಹರಿಸಿ ಆ ತಾಯಿಯ ಮಹಾತ್ಯಾಗದ ಸೃಷ್ಠಿ ಪ್ರಕ್ರಿಯೆಯನ್ನು ಅತ್ಯುಕೃಷ್ಟ ಹಾಗೂ ಉದಾಹರಣಾರ್ಥವೆಂದಿದ್ದಾರೆ. ಆಪದ್ಯದ ಓಟ ಈ ಕೆಳಗಿನಂತಿದೆ.

**ಅರಣ್ಯಕದ ಪುಷ್ಪಗಳ ಮೂಸುವರಾರು?**
**ಆರಿಹರು ಪತಗಡುಪನು ಹುಡಿಕಿ ಮೆಚ್ಚಲ್?**
**ಬೇರೊಬ್ಬರಣೆಕೆಯಲ್ಲದೆ ಪ್ರಕೃತಿ ತನಗೆಂದೆ**
**ಸ್ವಾರಸ್ಯವೆಸಗುವಳೊ ॥ ಮಂಕುತಿಮ್ಮ॥**

ಕಾಡಿನಲ್ಲಿನ ಪುಷ್ಪಗಳ ಸುಗಂಧವನ್ನು ಆಘ್ರಾಣಿಸುವವರು ಯಾರಿದ್ದಾರೆ? ಬಣ್ಣಬಣ್ಣದ ಆಕರ್ಷಣೆಯ ಪತಂಗಗಳನ್ನು ಹುಡುಕಿ ಮೆಚ್ಚುವರಾರಿದ್ದಾರೆ ನಾವುಗಳು ನಮ್ಮ ಹೂದೋಟದಲ್ಲಿ ಬೆಳೆದ ಒಂದು ಗುಲಾಬಿಯ ಮಾದರಿಯ ಉತ್ಕೃಷ್ಟತೆಯ ಬಗ್ಗೆ ಅನೇಕರನ್ನು ಕರೆಸಿ ತಾವೇ ಬೆಳೆದೆವೆಂಬಂತೆ ಜಂಬ ಕೊಚ್ಚಿಕೊಳ್ಳುತ್ತೇವೆ. ಆದರೆ ಸುಂದರವನ, ಸೂರ್ಯಕಿರಣ, ಸುಗಂಧ ಅಲೆಗಳ ಆಕರ್ಷಣೀಯ ನರ್ತನ, ಗಿಡಬಳ್ಳಿ ಬಳುಕು, ಮೇಘವರ್ಣಚ್ಛಾಯ ಇಂತೀ ಅತ್ಯಾತಿ ಸುಂದರ ದೃಶ್ಯಗಳನ್ನು ನಿರ್ಮಿಸಿದ ಪ್ರಕೃತಿ ಮಹಾಮಾತೆ ಯಾರಿಂದಲೂ ಮೆಚ್ಚುಗೆಯನ್ನು ನಿರೀಕ್ಷಿಸುವುದಿಲ್ಲ. ಇಂಥಹ ತ್ಯಾಗಮಯ ಕಾರ್ಯ ಸರ್ವೋತ್ಕೃಷ್ಟ ಭಗವಂತನಿಂದ ನಿತ್ಯನಿರಂತರವೂ ನಡೆಯುತ್ತಿರುವುದನ್ನು ಗಮನಿಸುತ್ತೇವೆ. ಅಣುರೇಣು ತೃಣಕಾಷ್ಟಗಳಲ್ಲಿ ತನ್ನ ಅಸ್ತಿತ್ವವನ್ನು ಪ್ರಕಟಿಸುತ್ತ ನಿತ್ಯನೂತನ ಫಲಪುಷ್ಪ, ಬೆಳೆಗಳನ್ನು ನೀಡಿ ನಮ್ಮನ್ನು ಸಲಹುತ್ತಿರುವ ಪ್ರಕೃತಿ ಮಾತೆಗೆ ಭಯಭಕ್ತಿಗಳಿಂದ ವಂದಿಸುತ್ತಾ ನಮ್ಮತನದ ಸ್ವಾರ್ಥವನ್ನು ಬದಿಗೊತ್ತಿ, ಸಮಾಜದ ಪ್ರತಿ ಜೀವಿಯೂ ತನ್ನ ಸಹೋದರರೆಂಬ ಭಾವದಿಂದ ಬದುಕಿ ಮೇಲೆ ಉದಾಹರಿಸಲ್ಪಟ್ಟ ಕರ್ಣ, ಮಹಾಬಲಿಗಳಂತೆ ದಾನಶೀಲರಾಗಿ ಸಮಾಜದ ನಿರ್ಮಾಣಕ್ಕೆ ಸಹಕರಿಸೋಣವೆನ್ನುವುದೇ ಈ ಪದ್ಯದ ಸಾರಾಂಶವಾಗಿದೆ.

# “ಮಾನವನು ಅಂತಿಮವಾಗಿ ಒಂಟಿಯೇ

ಸರ್ವೇಜನಾ ಸುಖಿನೋಭವಂತು, ವಸುದೈವ ಕುಟುಂಬ ಮತ್ತು ಮಾನವ ಸಂಘಜೀವಿಯೆಂದೆಲ್ಲಾವನೇ ಹೇಳಿದರೂ ಮಾನವನ ಹುಟ್ಟು, ಸಾವು, ಕರ್ಮಫಲ, ಕಷ್ಟಗಳ ಎದುರಿಸುವಿಕೆಗಳ ದೃಷ್ಠಿಯಿಂದ ಈತನನ್ನು ಒಂಟಿ ಎಂದೇ ಪರಿಗಣಿಸಬೇಕಾದ ಅನಿವಾರ್ಯತೆಯನ್ನು ಆಧ್ಯಾತ್ಮ ಕವಿ ಡಿವಿಜಿಯವರ ಪದ್ಯವು ವಿವರಿಸುತ್ತದೆ.

ಈ ಜಗತ್ತಿನ ಎಲ್ಲ ಜನಗಳ ಸಂಬಂಧಗಳನ್ನು ಪರಿಶೀಲಿಸಲಾಗಿ ಒಬ್ಬರಿಗೊಬ್ಬರಿಗೆ ಯಾವುದಾದರೂ ರೀತಿಯ ಸಂಬಂಧ ಇದ್ದೇ ಇರುತ್ತದೆ. ಮಾಡುವ ಊಟದ ವಿಚಾರವನ್ನೇ ತೆಗೆದುಕೊಳ್ಳಿ, ಬೆಳೆ ಬೆಳೆದವರು ಯಾರೋ, ಸುಗ್ಗಿ ಮಾಡಿದವರ್‍ಯಾರೋ, ಧಾನ್ಯ ಹಸನುಗೊಳಿಸಿದವರು ಯಾರೋ, ಅಡಿಗೆ ಒಲೆ ಹಚ್ಚಿದವರು ಯಾರೋ, ಕಾರ ಅರೆದವರು ಯಾರೋ, ಒಗ್ಗರಣೆ ಹಾಕಿದವರು ಯಾರೋ, ಹೀಗೆ ಒಬ್ಬೊಬ್ಬರ ಪರಿಶ್ರಮದಿಂದ ಕ್ರೂಡೀಕರಣದಿಂದ ಊಟ ತಯಾರಾಗಲಿದೆ.

**ನಂಟು ತಂಟೆಗಳ ಗಂಟೀ ಬ್ರಹ್ಮಭಂಡಾರ**

**ಅಂಟಿಲ್ಲವೆನಗಿದರೊಳೆನ್ನದಿರದೆಂದುಂ**

**ಒಂಟಿ ನೀನೊಳಜಗಕ್ಕೆ ಭಂಟ ಹೊರಜಗಕಾಗಿ**

**ಒಂಟಿಸಿಕೊ ಜೀವನವ ॥ ಮಂಕುತಿಮ್ಮ ॥**

ನನಗೆ ಇದರ, ಇಂಥಹವರ ಸಂಬಂಧವಿಲ್ಲವೆಂದು ನಿರಾಕರಿಸುವಂತೆಯೂ ಇಲ್ಲ, ಸರ್ವರೂ ಸಂಬಂಧಿಗಳೆಂಬ ಭಾವದಿಂದ ಬದುಕುವುದರ ಜೊತೆಗೆ ತಾನು ಎಸಗಿದ ಕಾರ್ಯದ ಗುಣಮಟ್ಟ ಉತ್ತಮವಾಗಿ ತನಗೆ ಸತ್ಫಲ ಬರಲೆಂಬ ಉದ್ದೇಶದಿಂದ, ತಾನು ಒಂಟಿ ತನ್ನ ಕಾರ್ಯದ ಉತ್ಕೃಷ್ಠಯೇ ತನ್ನ ಮೋಕ್ಷಕ್ಕೆ ದಾರಿಯೆಂದು ತಿಳಿ ಎಂಬುದೇ ಈ ಪದ್ಯದ ಸಾರಾಂಶ.

# "ಸೋಲೊಪ್ಪಿಕೊಳ್ಳದೇ ಪ್ರಕೃತಿಯಿಂದ ನಿತ್ಯನಿರಂತರ ಪ್ರೇರಿತವಾಗುತ್ತಿರು"

ಸಾವು ನೋವುಗಳ, ರೋಗ ರುಜಿನಗಳು, ಲಾಭ ನಷ್ಟಗಳು ಮತ್ತು ಮಾನಾಪಮಾನಗಳು ನಿರಂತರವಾಗಿ ಮುಗಿಬಿದ್ದಾಗ ಜೀವನವನ್ನೇದುಯಿರಿಸುವುದು ಕಷ್ಟಸಾಧ್ಯವೇ ನಿಜ ಇದನ್ನು ಯಾರೂ ಅಲ್ಲಗಳೆಯುವುದಿಲ್ಲ. ಆದರೆ ಅವುಗಳನ್ನು ಎದುರಿಸುವ ಸಂಬಂಧ ಒಂದು ಉತ್ತಮ ನಿರ್ದೇಶನ ಪದ್ಯವನ್ನು ಆಧ್ಯಾತ್ಮ ಕವಿ ಡಿವಿಜಿಯವರು ನೀಡಿ ಮಹದುಪಕಾರ ಗೈದಿದ್ದಾರೆ. ಪದ್ಯ ಹೀಗಿದೆ.

**ಸತ್ತೆ ನೆಂದನಬೇಡ ಸೋತನೆಂದೆನಬೇಡ**
**ಬತ್ತಿತೆನ್ನೊಳು ಸತ್ವದೊಟೆಯಡನಬೇಡ**
**ಮೃತ್ಯುವೆನ್ನುವುದೊಂದು ತೆರೆಯಿಳೀತ ತೆರೆಯೇರು**
**ಮತ್ತೆ ತೋರ್ಪುದು ನಾಳೆ ॥ ಮಂಕುತಿಮ್ಮ॥ 593**

ಸಿಂಹವೊಂದು ತನ್ನ ಭೇಟೆಯ ಪ್ರಕ್ರಿಯೆಯಲ್ಲಿ ಶೇ.25% ರಲ್ಲಿ ಮಾತ್ರ ಯಶಸ್ಸು ಸಾಧಿಸಿ ಇನ್ನೂಳಿದ 75% ಪ್ರಯತ್ನದಲ್ಲಿ ಸೋಲನ್ನನುಭವಿಸುತ್ತದೆಂಬುದು ಪ್ರಾಣಿ ಭೇಟಿ ವಿಶ್ಲೇಷಣೆ ಕಾರರ ವರದಿಯ ಸಾರಾಂಶ. ಇಷ್ಟು ಕಡಿಮೆ ಶೇಕಡಾವಾರು ಗೆಲುವಿನ ಸಾಧನೆಯಿದ್ದರೂ ಸಿಂಹವು ತನ್ನ ವೈಫಲ್ಯವು ಸಾರಾಂಶ. ಇಷ್ಟು ಕಡಿಮೆ ಶೇಕಡಾವಾರು ಗೆಲುವಿನ ಸಾಧನೆಯಿದ್ದರೂ ಸಿಂಹವು ತನ್ನ ವೈಫಲ್ಯದ ಭಾಗವನ್ನು ಪರಿಗಣಿಸದೇ ಶಿಕಾರಿ ಮುಂದುವರಿಸಿ ತನ್ನ ಜೀವನ ನಿರ್ವಹಣೆ ಮಾಡಕೊಳ್ಳುತ್ತದೆ. ಇಂತಹ ಅನಿವಾರ್ಯ ಶಿಕಾರಿ ಮುಂದುವರಿಕೆಗೆ "ಹಸಿವೊಂದೇ" ಮುಖ್ಯಕಾರಣ ವೆನಿಸದೇ ಪ್ರಾಣಿ ಪ್ರಕೃತಿಗಳ ಮಧ್ಯೆ ಏರ್ಪಟ್ಟಿರುವ ಪ್ರಯತ್ನ ಶೀಲತಾ ನಿರಂತರತೆ ಯ (ಐಚಿತಿ ಠಜಿ ತಿಂಣಜಜ ಜಜಿಜಿಠಿಡಿಣ) ಒಪ್ಪಂದವೇ ಮುಖ್ಯ ಕಾರಣವಾಗಿ ಹೊರಹೊಮ್ಮುತ್ತದೆ. ನಿಸರ್ಗದೊಡಲಲ್ಲಿ ಸಂಭವಿಸುವ ಇನ್ನೂ ಕೆಲವು ನಷ್ಟವೆಂಬಂತೆ ತೋರುವ ಪ್ರಕ್ರಿಯೆಗಳನ್ನು ನಮ್ಮ ಗಮನ ಹರಿಸೋಣ.

1. ಮೀನುಗಳಿಂದ ಉತ್ಪತ್ತಿಯಾದ ಮೀನು ಮೊಟ್ಟೆಗಳಲ್ಲಿ 50% ಗಳಿಗಿಂತ ಹೆಚ್ಚಿಗೆ ಭಾಗ ತಿನ್ನಲ್ಪಡುತ್ತವೆ.

2. ಕರಡಿಗಳ ಮರಿಗಳಲ್ಲಿ 50% ಸಾವನ್ನಪ್ಪುತ್ತವೆ.

3. ಆಕಾಶದಿಂದ ಸುರಿವ ಮಳೆ ನೀರು 50% ಕ್ಕಿಂತ ಹೆಚ್ಚಿಗೆ ಭಾಗ ಸಮುದ್ರದ ಮೇಲೆ ಸುರಿಯುತ್ತದೆ.

4. ಮರ ಗಿಡಗಳ ಬೀಜಗಳಲ್ಲಿ ಬಹುಪಾಲು ಹಕ್ಕಿ ಪಕ್ಷಿಗಳ ಪಾಲಾಗುತ್ತದೆ.

ವಿಜ್ಞಾನಿಗಳ ಅಧ್ಯಯನದನ್ವಯ ಪ್ರಾಣಿಗಳು, ಸಸ್ಯಗಳು ಹಾಗೂ ಪ್ರಕೃತಿಯ ಇತರ ಶಕ್ತಿಗಳು ತಮ್ಮ ಉತ್ಪಾದನಾ ಕಾರ್ಯಗಳಲ್ಲಿ ಆಗಬಲ್ಲ ನಷ್ಟಗಳಿಗೆ ಹೊಂದಿಕೊಂಡು ಸ್ವೀಕೃತಭಾವ ವ್ಯಕ್ತಪಡಿಸಿವೆ. ಆದರೆ ಮನುಷ್ಯ ಜೀವಿಯೊಬ್ಬನೇ ತನ್ನ ಪ್ರಯತ್ನಗಳಲ್ಲಿ ಕಂಚಿತ್ ವಿಫಲತೆ ಕಂಡರೂ ಅದನ್ನ ಸೋಲು ಅಥವಾ ತನ್ನ ಪರಾಭವವೆಂದು ಪರಿಗಣಿಸುವವನಾಗಿದ್ದಾನೆ.

ಸಾವಿಲ್ಲದ ಮನೆ ಇಲ್ಲವೆಂಬಂತೆ ಸೋಲಿಲ್ಲದ ಮನುಷ್ಯನೇ ಇಲ್ಲವೆನ್ನಬಹುದು. ಸೋಲನ್ನು ಸವಾಲಾಗಿ ತೆಗೆದುಕೊಂಡು ಬದುಕನ್ನು ಬದಲಿಸಿಕೊಂಡು ಕಾರ್ಯ ನಿರ್ವಹಿಸಿದಾಗ ಜಯ ಕಟ್ಟಿಟ್ಟಬುತ್ತಿ. ಆದ್ದರಿಂದ ನಮ್ಮ ಮನಸ್ಸಿನಾಳದಲ್ಲಿ **"Confidance is our best weapon, Never leave home without it. It may not bring success but it gives power to face challenges "** ಎಂಬ ನಿರಂತರ ಶಕ್ತಿ ಮಂತ್ರವನ್ನು ಪಠಿಸುತ್ತಾ ಪ್ರಯತ್ನ ಶೀಲರಾಗೋಣವೆಂಬದೇ ಈ ಪದ್ಯದ ಸಾರಾಂಶವಾಗಿದೆ.

# "ಹೊಸ ಚಿಗುರು ಮತ್ತು ಹಳೆಬೇರಿನಿಂದ ಮರದ ಸೊಬಗು"

ಒಗ್ಗೂಡಿದ ಅಥವಾ ಸಂಘಟಿತ ಪ್ರಯತ್ನದ ಮೂಲಕವೇ ಶ್ರೇಯಸ್ಸು ಸಾಧ್ಯವೆಂಬುದರಲ್ಲಿ ಎರಡು ಮಾತಿಲ್ಲ. ದೇಹಶಕ್ತಿ ಮತ್ತು ಬುದ್ಧಿಶಕ್ತಿಗಳೆರಡರ ಕ್ರೋಡೀಕರಣದಿಂದ ಜನಜೀವನ ಯಶಸ್ಸಿನತ್ತ ಸಾಗುತ್ತದೆ. ಎಲ್ಲ ಉತ್ಕೃಷ್ಠ ಸಾಧನೆಗಳೂ ಬಹು ಮೆದುಳುಗಳ ಕೊಡುಗೆ **(All Outstanding and miraculous achievements are the contribution of many minds)** ಎಂಬ ಜನಪ್ರಿಯ ಮಾತಿದೆ.

ಹೇಗೆ ಯಾವುದೇ ಒಂದು ಮನೆತನದ ಖ್ಯಾತಿಗೆ ಆ ಮನೆಯ ಹಿರಿ ಕಿರಿಯರ ಪರಿಶ್ರಮಕಾರಣವಾಗಿರುತ್ತದೆ. ಹಾಗೆಯೇ ಸಂಸ್ಥೆಯ ಬೆಳವಣಿಗೆಗೆ ಮಾಲೀಕ ನೌಕರರ ಪರಿಶ್ರಮ ಕಾರಣವಾಗುತ್ತದೆ. ಹೊಸತು ಹಳೆತರ ಜೊಡಣೆಯೇ ಉತ್ಕೃಷ್ಠತೆಗೆ ದಾರಿ ಎಂಬ ಅಂಶದ ಬಗ್ಗೆ ಆಧ್ಯಾತ್ಮ ಕವಿ ಡಿ.ವಿ.ಜಿ ಯವರು ಕೆಳಗಿನ ಪದ್ಯವನ್ನು ನೀಡುವ ಮೂಲಕ ಸಾಂಸ್ಥಿಕ ಬೆಳವಣಿಗೆಗೆ ಹಳೆಯ ತತ್ವಗಳ ಹಾಗೂ ನೂತನ ವಿಜ್ಞಾನದ ಅಂಶಗಳ ಅವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ ಪದ್ಯ ಹೀಗಿದೆ.

**ಹೊಸ ಚಿಗುರು ಹಳೆ ಬೇರು ಕೂಡಿರಲು ಮರಸೊಬಗು**
**ಹೊಸಯುಕ್ತಿ ಹಳೆ ತತ್ವ ದೊಡಗೊಡಿ ಧರ್ಮ**
**ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೊಳವಿಸಿ**
**ಜನವು ಜನಜೀವನಕೆ ॥ ಮಂಕುತಿಮ್ಮ ॥**

ವೇದಗಳು ಜ್ಞಾನದ ರಾಶಿಗಳು, ಉಪನಿಷತ್‌ಗಳು ಸತ್ಯ ಧರ್ಮಗಳ ಆಧಾರ ಸ್ತಂಭಗಳು ಜಗದ ಸೃಷ್ಠಿಯ ಪ್ರಾರಂಭದಲ್ಲಿ ಮನುಕುಲಕ್ಕೆ ಜ್ಞಾನದ ಸುಳುವನ್ನು ನೀಡಿದ ಮೂಲ ಗ್ರಂಥಗಳೇ ವೇದ ಮತ್ತು ಉಪನಿಷತಗಳು.

ಯಾವುದೇ ಸಾಂಸ್ಥಿಕ, ಧರ್ಮದ ಅಥವಾ ಜನಜೀವನದ ಉತ್ಕೃಷ್ಠತೆಗೆ ಹಳದು ಹೊಸತರ ಸಮ್ಮಿಳಿತತೆಯೇ ಬಹು ಮುಖ್ಯವೆಂದು ಒಪ್ಪಬೇಕಾದ ಅಂಶ. ಬುದ್ಧಿಯ ಬೆಳವಣಿಗೆ ಮತ್ತು ಅದರ ಸದ್ಬಳಕೆಯ ಬಗ್ಗೆ ಹಿರಿಯರ ಬುದ್ಧಿವಾದ ಎಷ್ಟು ಅವಶ್ಯಕವೋ ಅಂತೆಯೇ ಶಕ್ತಿಯುತ ಹಾಗೂ ದೃಢ ಚಿಂತನೆಯ ಮೂಲಕ ಕಾರ್ಯೋನ್ಮುಖರಾಗಲು ಯುವಶಕ್ತಿಯ ಬಳಕೆಯೂ ಅವಶ್ಯಕವೆನಿಸಿದೆ. ಈ ಅಂಶದ ಅನುಷ್ಠಾನವೇ ಸರ್ಕಾರಗಳಿಂದ ಅಧಿಕಾರಿಗಳ ಆಯ್ಕೆಯಲ್ಲಿ ಹೊಸರಕ್ತದ ತರುಣರನ್ನು ತುಂಬಲು **probationers** ಆಯ್ಕೆ ವ್ಯವಸ್ಥೆ ಜಾರಿಗೆ ಬಂದಿದೆ. ಹಿರಿ ಕಿರಿಯರೆಲ್ಲರೂ ವರ್ಗ ಸಂಘರ್ಷ ಮರೆತು ದುಡಿಯೋಣವೆಂಬದೇ ಇದರ ಸಾರಾಂಶ.

# "ಇರುವ ಭಾಗ್ಯವ ನೆನೆದು ಬಾರದೆಂಬುದನು ಬಿಡು"

**"Life is not a bed of roses but contains thorns and stones** " ಎಂಬ ಆಂಗ್ಲ ಉಕ್ತಿಯನ್ವಯ ಮಾನವನ ಜೀವನ ಸುಖದ ಸುಪತ್ತಿಗೆಯಾಗಿರದೇ ಕಲ್ಲುಮುಳ್ಳುಗಳಿಂದಲೂ ಕೂಡಿದೆ ಎಂಬ ಕಟುಸತ್ಸವನ್ನು ಅಂತವರ ಪಾಲಿಗೆ ಜೀವನ ಸಂತೃಪ್ತಿಯಿಂದ ಕೂಡಿರುತ್ತದೆಂಬುದು ಚಿಂತನಶೀಲರ ಇಂಗಿತ, ವ್ಯಕ್ತಿಯದೇಹದ ಸರ್ವ ಅಂಗಾಂಗಳನ್ನು ನಿಯಂತ್ರಿಸಿ ಚಾಲನಾ ಶಕ್ತಿ ನೀಡಿ ಪ್ರಗತಿಯೆಡೆಗೆ ಕೊಂಡೊಯ್ಯುವ ಮುಖ್ಯಾಂಗವಾದ ಮೆದುಳನ್ನು ಶುಭಾಶಭ ಆಶೆಗಳ "ತಯಾರಿಕಾ ಕಾರ್ಖಾನೆ **(Factory of Multiplied Desires)** ನಿರೂಪಿಸಲಾಗಿದೆ.

ಆಶೆಗಳನ್ನು ಮಿತಿಯಲ್ಲಿಟ್ಟುಕೋ ಅವುಗಳ ಪೈಕಿ ಈಡೇರಿಕೆಯಾಗಿರುವವನು ಮಾನ್ಯಮಾಡಿ ತೃಪ್ತಿ ತಂದುಕೋ ಈಡೇರದಿದ್ದುದನ್ನು ಸ್ಮೃತಿ ಸತಲದಿಂದ ಕಿತ್ತೆಸೆದು ನಿಶ್ಚಿಂತನಾಗಿರು ಎಂಬ ಅಂಶವನ್ನು ಬಿತ್ತರಿಸುವ 'ಡಿವಿಜಿಯವರ ಈ ಕೆಳಗಿನ ಪದ್ಯ ಬಹುಜನಪ್ರಿಯ ಹಾಗೂ ಜೀವನದ ಅಡಿಗಲ್ಲಾಗುತ್ತದೆಂದೂ ಭಾವಿಸಿದ ಸರ್ಕಾರ ಈ ಪದ್ಯವನ್ನು ಎಲ್ಲ ಕೆ.ಎಸ್. ಆರ್.ಟಿ.ಸಿ ಬಸ್ಸುಗಳಲ್ಲಿ ಬರೆಸಿ ಸರ್ವ ಪ್ರಯಾಣಿಕರು ಪ್ರಯಾಣದ ಅವಧಿಯಲ್ಲಿ ಓದಿ ಜೀರ್ಣಿಸಿಕೊಳ್ಳಲೆಂದು ಸದಭಿಲಾಶೆಯನ್ನು ತಳೆಯಲಾಗಿದೆ. ಪದ್ಯದ ಓಟ ಈ ಕೆಳಗಿನಂತಿದೆ.

**ಬರದಿಹುದರೆಣಿಕೆಯಲಿ ಬಂದಿಹುದ ಮರೆಯದಿರು**
**ಗುರುತಿಸೊಳಿ ತಿರುವುದನು ಕೇಡುಗಳ ನಡುವೆ**
**ಇರುವ ಭಾಗ್ಯವ ನೆನೆದು ಬಾರದೆಂಬುದನ್ನು ಬಿಡು**
**ಹರುಷಕಿದೆ ದಾರಿಯಲೋ ॥ ಮಂಕುತಿಮ್ಮ ॥**

"ಬಾರದು ಬಪ್ಪದು ಬಪ್ಪುದು ತಪ್ಪದು ಎಂಬ ಧ್ಯೇಯೋಕ್ತಿಯು ನಮ್ಮ ಪಾಪಪುಣ್ಯಗಳ ಆಧಾರದ ಮೇಲೆ ನಮ್ಮ ಸಾಧನೆಗಳ ಲಭ್ಯತೆಯೆಂಬುದನ್ನು ದೃಡೀಕರಿಸುತ್ತಾರೆ. ಆಶೆಗಳು ತಪ್ಪಲ್ಲ, ಆದರೆ ಆಶೆಗಳ ಈಡೇರದಿದ್ದಾಗ ಕೈಚೆಲ್ಲಿ ಕುಳಿತು ಕೊರಗುತ್ತಾ ಜೀವನವೇ ವೈಫಲ್ಯವೆನ್ನುವುದು ತಪ್ಪೆನ್ನುತ್ತಾರೆ ಜ್ಞಾನಿಗಳು. ಪಡೆಯಬೇಕಾದ್ದನ್ನು ಪಡೆಯಬೇಕೆಂಬ ಮಹತ್ವಾಕಾಂಕ್ಷೆಯನ್ನು ಯಾರೂ ಅಲ್ಲಗಳೆಯುವುದಿಲ್ಲ. ಆದರೆ ಈಡೇರದ ಆಶೆಗಾಗಿ ಹಲುಬುವುದು ದೌರ್ಬಲ್ಯದ ಲಕ್ಷಣವಲ್ಲದೇ ಭವಿಷ್ಯದ ಬಗ್ಗೆ ಅತೃಪ್ತಿ ಹೊಂದಿ ಜೀವನವು ಸೂತ್ರ ಕಳೆದುಕೊಂಡು ಗಾಳಿಪಟವಾಗದಂತೆ ಎಚ್ಚರಿಕೆ ವಹಿಸಬೇಕೆನ್ನುತ್ತದೆ. ಈ ಕಗ್ಗ ಕೈಯಲ್ಲಿರುವ ಒಂದು ಹಕ್ಕಿಯುಪೊದೆಯಲ್ಲಿರುವ ನೂರು ಹಕ್ಕಿಗಳಿಗಿಂತ ಉತ್ತಮವೆಂಬ ಸಂತೃಪ್ತಿ ನಮ್ಮನ್ನು ಸಾಧನೆಯತ್ತ ಪ್ರೇರೇಪಿಸುತ್ತದೆ.

ಆದ್ದರಿಂದ ವೈಫಲ್ಯಗಳನ್ನು ಪಟ್ಟಿಯನ್ನು ಬೆಳೆಸಿಕೊಳ್ಳದೇ ಪ್ರಸಕ್ತ ಸಾಧ್ಯವಾಗಿರುವ ಸಾಧನೆಯ ತೃಪ್ತಿಯಿಂದ ಮುಂದುವರಿದಾಗ ಜೀವನ ಸಾರ್ಥಕವಾಗುತ್ತದೆಂಬುದೇ ಈ ಪದ್ಯದ ಸಾರಾಂಶ.

## "ಜನ್ಮ ತಾಳಿದ ಪ್ರತಿ ವಸ್ತು, ವ್ಯಕ್ತಿಗೂ ನಾಶವಿದ್ದೇ ಇದೆ "

ಅವ್ಯಕ್ತನಾಗಿದ್ದರೂ ವಿಶಾಲ ವಿಶ್ವದ ಮೂಲ ಸೃಷ್ಠಿಗೆ ಕಾರಣನೆನಿಸಿರುವ ಭಗವಂತನನ್ನು ವಿವಿಧ ಹೆಸರುಗಳಿಂದ ದಾತ, ವಿಧಾತ, ಬ್ರಹ್ಮ, ವಿಧಿ ಹಾಗೂ ಸರಬ್ರಹ್ಮ ಎಂಬತ್ಯಾದಿ ನಾಮಧ್ಯೇಯಗಳಿಂದ ಕರೆಯಲ್ಪಡುವ ದೇವರು ಮೂಲಶಕ್ತಿ ಹಾಗೂ ಸರ್ವನಿಯಂತ್ರಕ, ಸೃಷ್ಠಿ, ಸ್ಥಿತಿ, ಲಯ ಕರ್ತವ್ಯಗಳನ್ನು ಕರಾರುವಾಕ್ಯಾಗಿ ನಿರ್ವಹಿಸುವ ಸರ್ವೇಶ್ವರನು ಯಾರಿಗೂ ಭೇದಭಾವ ತೋರಿಸದೇ ಸರ್ವಸಮಾನವಾಗಿ ಪ್ರತಿ ಜೀವಿಗೂ ನೀಡುತ್ತಾ ಋಷಿ ಮುನಿಗಳು, ಶ್ರೇಷ್ಠಮಠಾಧೀಶ್ವರರು, ಉತ್ತಮೋತ್ತಮವೈದ್ಯರು, ದಕ್ಷ ಆಡಳಿತಗಾರರು, ಚತುರವಿಜ್ಞಾನಿ, ವಿಶ್ವವಿಖ್ಯಾತ ಕುಸ್ತಿಪಟು ಮತ್ತು ಕ್ರೀಡಾಪಟುಗಳೆಂಬ ವ್ಯತ್ಯಾಸ ತೋರದೇ ಸರ್ವರಿಗೂ ನಿರ್ದಿಷ್ಟ ವಯೋಮಾನದ ನಂತರ ಸಾವನ್ನು ನೀಡುತ್ತಿದ್ದು ಆಧ್ಯಾತ್ಮ ಕವಿ ಡಿ.ವಿ.ಜಿ ಯವರು ಈ ಸಾವಿನ ಪ್ರಕ್ರಿಯೆಯನ್ನು ಸವಿಸ್ತಾರವಾಗಿ ವೀಕ್ಷಿಸಿ ಈ ಜಗತ್ತಿನಲ್ಲಿ ಹುಟ್ಟಿ ಬಂದ ನಮ್ಮನ್ನೆಲ್ಲಾ ಭಗವಂತನು ಗಾಣದಣ್ಣೆಯ ಎಳ್ಳು ಕಾಳೆಂತಲೂ, ನಮ್ಮೆಲ್ಲರನ್ನು ತಪ್ಪದೇ ಅರೆಯುವ ಗಾಣದ ಪ್ರಕ್ರಿಯೆಯನ್ನು ಈ ಕೆಳಗಿನ ಪದ್ಯದಲ್ಲಿ ಶೃತ ಪಡಿಸಿದ್ದಾರೆ.

**ದಾತನೆಣ್ಣೆಯ ಗಾಣದೆಳ್ಳು ಕಾಳಲೆ ನೀನು**
**ಆತನೆಲ್ಲರನರೆವನ : ಆರನುಂ ಬಿಡನು**
**ಆತುರಂಗೊಳದೆ ವಿಸ್ಮೃತಿಬಡದುಪೇಕ್ಷಿಸದೆ**
**ಘಾತಿಸುವನೆಲ್ಲರನು – ಮಂಕುತಿಮ್ಮ ॥ 357 ॥**

ತಾಕಿಕ ಜಗತ್ತಿನಲ್ಲಾದರೆ ಯಾವುದೇ ಒಂದು ಶಿಕ್ಷೆಯನ್ನು ನೀಡುವ ಪ್ರಕ್ರಿಯೆಯಲ್ಲಿ ಶಿಕ್ಷೆ ನೀಡಬಲ್ಲ ಪ್ರಾಧಿಕಾರಗಳು ಪರಪಕ್ಷ ಧೋರಣೆ ತಳೆದು ಕೆಲವರಿಗೆ ದಾಕ್ಷಿಣ್ಯ ಮುಲಾಜ ತೋರುತ್ತದುಂಟು. ಆದರೆ ವಿಶ್ವದೊಡೆಯನಾದ ಭಗವಂತನು ಜೀವಿಗಳನ್ನು ಸಾವಿಗೊಳಪಡಿಸುವ ಪ್ರಕ್ರಿಯೆಯಲ್ಲಿ ವ್ಯತ್ಯಾಸೀಕರಣ ತೋರದೆ, ಮರೆಯದೇ, ಆತರುಪಡದೇ ಆತನ ಗಾಣದ ಎಳ್ಳು ಕಾಳುಗಳಾಗಿರುವ ನಮ್ಮನ್ನು ಅರೆದು ಘಾಸಿಗೊಳಿಸುತ್ತಾನೆಂಬ ಸಾರ್ವತ್ರಿಕ ಸತ್ಯವನ್ನು ಪ್ರಕಟಪಡಿಸಲಾಗಿದೆ. ಹೊರ ಜಗತ್ತಿನ ಬಿರುದು ಬಾವಲಿಗಳು ಉದ್ಯೋಗ ನಾಮಗಳು, ಹೊಂದಿರುವ ದೇಹ ಸೌಂದರ್ಯ, ಹಣಬಲ, ಸ್ಥಿರಸಂಪತ್ತು ಇವ್ಯಾವನ್ನು ಪರಿಗಣಿಸದೇ ನಾಶಪಡಿಸುವ ನಿರಂತರ ಪ್ರಕ್ರಿಯೆಯನ್ನು ಮನದಲ್ಲಿರಿಸಿಕೊಂಡು, ಸರ್ವಾತ್ಮರುಗಳನ್ನು ವಿಶ್ವದೇವನ ಮಕ್ಕಳೆಂಬ ವಿಶಾಲ ದೃಷ್ಠಿಯಿಂದ ಸಹಕಾರ ಮನೋಭಾವ ತಳೆದು ಬಾಳಿ ನಿಮ್ಮ ಬದುಕನ್ನು ಸಾರ್ಥರಪಡಿಸಿಕೊಳ್ಳಿರೆಂಬದೇ ಈ ಪದ್ಯದ ಸಾರವಾಗಿದೆ.

ನಿನಗಾಗಿ ಮಾತ್ರ ಬದುಕುವುದಕ್ಕಿಂತ ಇತರರಿಗಾಗಿ ಬದುಕಲು ಕಲಿ. ನಿನ್ನನ್ನು ಸರ್ವಕಾಲಕ್ಕೂ ಸ್ಮರಿಸುವರು.

# "ಕಣ್ಣಿದುರಿಗಿರುವವರೆಲ್ಲಾ ಕೈಬಿಟ್ಟಾಗ ಕಾಣದವನೊರ್ವ ಕೈ ಹಿಡಿಯುತ್ತಾನೆ"

ಶತಶತಮಾನಗಳು ಮನುಕುಲದ ಇತಿಹಾಸವನ್ನು ಪರಶೀಲಿಸುತ್ತಾ ಹೊರಟಾಗ ಮಾನವನ ಏಳಿಗೆಗೆ ಅಥವಾ ಅವನ ಅವನತಿಗೆ ಆತನ ಆಯ್ಕೆಗಳೇ ಮೂಲಕಾರಣವೆಂದು ನಮ್ಮ ಋಷಿಮುನಿಗಳು. ಸಂತರು ಹಾಗೂ ಚಿಂತನ ಶೀಲರುಗಳು ತಿಳಿಸುತ್ತಾ ಬಂದಿದ್ದು ಉತ್ತಮ ಆಯ್ಕೆಗಳಿಂದ ಬದುಕಿನ ಔನ್ನತ್ಸವನ್ನು ಸಾಧಿಸಬೇಕೆಂದು ನಿರ್ದೇಶನವಿತ್ತಿರುತ್ತಾರೆ. ಆಯ್ಕೆಗಳ ಪ್ರಾಮುಖ್ಯತೆಯನ್ನು ಮನ್ನಿಸಿ ಸದ ಆಯ್ಕೆಗಳನ್ನು ಅರಸಿದಲ್ಲಿ ಬಾಳಯಾಸ ಸುಸೂತ್ರವೆಂಬ ಅಂಶ ಸರ್ವವೇದ್ಯ.

ಧರ್ಮನಿರತರಾದ ನಮ್ಮ ಪೂರ್ವಿಕರು ಪೂಜೆ, ಜಪ. ತಪ, ದೈವ ಚಿಂತನೆಗಳನ್ನು ತಮ್ಮ ಜೀವನದ ಅವಿಭ್ಯಾಜ್ಯ ಅಂಗಗಳನ್ನಾಸಿಕೊಂಡಿದ್ದರ ಕಾರಣ ಅವರ ಜೀವನ ಸುಖ ಶಾಂತಿಗಳಿಂದ ಕೂಡಿದ ಸಮುದ್ರದಂತಿತ್ತು. ಆದರೆ ಇಂದಿನ ತಾರಕದ ನಾವುಗಳು ದೈವ ಚಿಂತನ, ಜಪತಪಗಳಿಂದ ದೂರವಾಗುತ್ತಿರುವ ಕಾರಣ ನಮ್ಮ ಬುದುಕು ಸಂಘರ್ಷಕ್ಕೊಳಗಾಗಿ ಅಶಾಂತಿ ಅಸೂಯೆಗಳ ಆಗರವಾಗಿದೆಯೆಂದು ಇದನ್ನು ಸರಿಪಡಿಸಲು ಯೋಗ್ಯಮಾರ್ಗವಾದ ದೈವ ನಿರ್ದೇಶನಗಳನ್ನು ಪಾಲಿಸಲಿ ನಿರ್ದೇಶನ ನೀಡುವ ಡಿ.ವಿ.ಜಿ ಯವರ ಪದ್ಯ ಈ ಕೆಳಗಿನಂತಿದೆ.

**ಹೊನ್ನೆಂದು ಜಗದಿ ನೀಂ, ಕೈಗೆ ಕೊಂಡುದನು ವಿಧಿ**
**ಮಣ್ಣೆನುವನ್: ಅವನ ವರ ಮಣ್ಣೆನುವೆ ನೀನು**
**ಭಿನ್ನವಿಂತಿಕೆ ವಸ್ತು ಮೌಲ್ಯಗಳ ಗಣನೆಯೇ**
**ಪದ್ಯಕ್ಕೆ ಗತಿಯೆಂತೋ ॥ ಮಂಕುತಿಮ್ಮ ॥**

ನಾವು ಚಿನ್ನವೆಂದು ಭಾವಿಸಿದ ವಸ್ತು ಮಣ್ಣಾಗಿ ಏನೂಬೆಲೆಯಿಲ್ಲದ ವಸ್ತುವಾಗುತ್ತದೆ. ಆದರೆ ವಿಧಿಯ ನಮಗೆ ಕೊಟ್ಟವರ ಅದು ಚಿನ್ನವಾಗಿದ್ದರೂ

ನಮಗೆ ಮಣ್ಣಿನಂತೆ ಬಾಸವಾಗುತ್ತದೆ. ಇದಕ್ಕೆ ಉತ್ತಮ ಉದಾಹರಣೆ ಕುರುಕ್ಷೇತ್ರ ಯುದ್ಧ ಪೂರ್ವದಲ್ಲಿ ಸಮರ ಏರ್ಪಟ್ಟಾಗ ಯಾದವ ಸೈನ್ಯದ ಬಲವನ್ನು ಕೋರಲು ಶ್ರೀ ಕೃಷ್ಣನಲ್ಲಿಗೆ ದುರ್ಯೋಧನನ ಮತ್ತು ಅರ್ಜುನರುಗಳು ಬರುತ್ತಾರೆ. ಆದರೆ ಆಯ್ಕೆಯನ್ನು ಮಂಡಿಸುವ ಅವಕಾಶ ಅರ್ಜುನನಿಗೆ ಬಂದಾಗ ದೈವ ಪ್ರೇಮಿಯಾದ ಅರ್ಜುನನು ಸೈನ್ಯವಿಲ್ಲದ ಏಕಾಂಗಿಯಾದ ಶ್ರೀ ಕೃಷ್ಣನನ್ನೇ ತನಗಿರಲೆಂದು ಆಯ್ಕೆ ಮಾಡಿಕೊಳ್ಳುತ್ತಾನೆ. ಆದರೆ ಅದೇ ದುರ್ಯೋಧನ ತನಗೆ ಯಾದವ ಸೈನ್ಯದ ಬಲ ದೊರೆಯಿತೆಂದು ಆಯ್ಕೆ ಮಾಡಿಕೊಳ್ಳುತ್ತಾನೆ. ಆದರೆ ಅದೇ ದುರ್ಯೋಧನ ತನಗೆ ಯಾದವ ಸೈನ್ಯದ ಬಲ ದೊರೆಯಿತೆಂದು ಹಂ ಹಂ ಹಿಗ್ಗುತ್ತಾನೆ. ಆದರೆ ಆಂತರ್ಯದಲ್ಲಿ ವಿಚಾರಮಾಡಿ ನೋಡಿದಾಗ ಲಾಭವಾದದ್ದು ಅರ್ಜುನನಿಗೆಂದು ತಿಳಿಯುತ್ತದೆ.

ದಾನಶೂರ, ಮಹಾಕಲಿ ಕರ್ಣ ಅದಷ್ಟೇ ಶೌರ್ಯಪರಾಕ್ರಮಗಳನ್ನು ಹೊಂದಿದ್ದರೂ ದುರ್ತ ದುರ್ಯೋಧನನಿಗೆ ಮಿತ್ರನಾದ ಕಾರಣ ದೈವಕೃಪೆ ವಂಚಿತನಾಗುತ್ತಾನೆ. ದೈವವನ್ನು ನಂಬಿ ತಮ್ಮ ಬಾಳನ್ನು ಬಂಗಾರ ಮಾಡಿಕೊಂಡವರಲ್ಲಿ ವಿಭೀಷನಾ ಪ್ರಹ್ಲಾದ, ಪಾಂಚಾಲಿ, ಗಜೇಂದ್ರ ಧೃವ ಮತ್ತು ಅಹಲ್ಯೆಯರ ಉದಾಹರಣೆಗಳು ನಮ್ಮ ಕಣ್ಮುಂದೆ ಸುಳಿಯುತ್ತವೆ.

ಆದ್ದರಿಂದ ಧರ್ಮಶಾಸ್ತ್ರಗಳ ನಿರ್ದೇಶನದನ್ವಯ ಬಳ್ಳೆಯದಾವುಬೆಂಬುದನ್ನು ತಿಳಿದು ಒಳ್ಳೆಯ ಆಯ್ಕೆಯ ಮೂಲಕ ಬಾಳನ್ನು ಹಸನುಗೊಳಿಸಿಕೊಳ್ಳಿರೆಂಬುದೇ ಈ ಪದ್ಯದ ಸಾರಾಂಶವಾಗಿದೆ.

# "ನ್ಯಾಯಾಧಿಪತಿಯಂತೆ ಜಗದ ಶ್ರೇಯಸ್ಸಿಗೆ ಶ್ರಮಿಸು"

ಪ್ರಜಾಕಲ್ಯಾಣ, ಆರ್ಥಿಕಾಭಿವೃದ್ಧಿ ಹಾಗೂ ಸಮಾಜದ ಸ್ವಾಸ್ತ್ಯವನ್ನು ಸಾಧಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಮ್ಮ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳ ಮೂಲಕ ಗುಣಾತ್ಮಕ ಸೇವೆಗಳನ್ನೊದಗಿಸಲು ಶ್ರಮಿಸುತ್ತಿವೆ. ಒಂದು ದೇಶದ ಸಮೃದ್ಧತೆ, ಶಾಂತಿ ಹಾಗೂ ಪ್ರಜಾಧರ್ಮನೀತಿಗಳು ಆ ದೇಶದ ನ್ಯಾಯಾಂಗ ವ್ಯವಸ್ಥೆಯ ಕಾರ್ಯನಿರ್ವಹಣಾ, ಗುಣಮಟ್ಟವನ್ನು ಅವಲಂಬಿಸಿರುತ್ತದೆ. **"Let hundred culprits escape but one innocent should not be pun¬ished"** ನೂರು ಜನ ಅಪರಾಧಿಗಳು ಶಿಕ್ಷೆಯಿಂದ ತಪ್ಪಿಸಿಕೊಂಡರೂ ಸರಿ ಆದರೆ ಓರ್ವ ನಿರಪರಾಧಿಗೆ ಶಿಕ್ಷೆಯಾಗಲಾರದು ಎಂಬುದು ನ್ಯಾಯಾಶಾಸ್ತ್ರದ ಮೂಲೋದ್ದೇಶ, ಗುಣಾತ್ಮಕ ನ್ಯಾಯಾದಾನ ಪ್ರಕ್ರಿಯೆಯಲ್ಲಿ ನ್ಯಾಯಾಧೀಶರ ಕಾರ್ಯನಿರ್ವಹಣೆಯು ಉತ್ತಮ ಗುಣಮಟ್ಟದ್ದಾಗಿರಬೇಕೆಂದು, ಕಕ್ಷಿದಾರರುಗಳೀಗೆ ನ್ಯಾಯ ಸಿಗುವಂತೆ ಯಾರಿಗೂ ಅನ್ಯಾಯವಾಗದಂತೆ ನ್ಯಾಯಯುತ ತೀರ್ಪು ನೀಡಲು ನ್ಯಾಯಾಧೀಶರು ತನ್ನ ಸ್ವಾರ್ಥ ಪ್ರಲೋಭಗಳನ್ನು ಬದಿಗಿಟ್ಟು ತನ್ನ ಸಮಗ್ರ ಬುದ್ಧಿ ಮತ್ತು ಮನಸ್ಸುಗಳನ್ನು ಕಕ್ಷಿದಾರರಿಗೆ ನ್ಯಾಯ ದೊರೆಯುವಂತೆ ಚಿಂತಿಸಿ ತೀರ್ಪನ್ನು ನೀಡುವಂತೆ ನಾಗರೀಕರುಗಳಾದ ನಾವುಗಳು ಸಹ ಸಮುದಾಯದ ಸಹೋದರ ಆತ್ಮಗಳಿಗೆ ದೂರ್ರತಕ್ಕ ನ್ಯಾಯಯುತ ಬೇಡಿಕೆಗಳನ್ನು ದೊರಕಿಸುವ ದಿಸೆಯಲ್ಲಿ ಕಾರ್ಯನಿರ್ವಹಿಸಬೇಕೆಂದು ಆಧ್ಯಾತ್ಮ ಕವಿ ಡಿ.ವಿ.ಜಿ ಯವರು ಕಣ್ಣಿಗೆ ಕಟ್ಟುವಂತೆ ಈ ಕೆಳಗಿನ ಪದ್ಯದಲ್ಲಿ ಚಿತ್ರೀಕರಿಸಿದ್ದಾರೆ.

**ನ್ಯಾಯಾಧಿಪತಿ ತನ್ನ ಮತಿ ಮನಸುಗಳನೆಲ್ಲ**
**ಸ್ವೀಯಲಾಭ ಸ್ಮರಣೆಯುಳಿದು ವಿವದಿಗಳಾ**
**ದಾಯ ನಿರ್ಣಯಕೆ ಯೋಚಿಸುವಂತೆ ನೀಂ ಜಗದ**
**ಶ್ರೇಯಸ್ಸಿಗುಜ್ಜಗಿಸು ॥ ಮಂಕುತಿಮ್ಮ ॥**

ನ್ಯಾಯಾ ನೀಡಿಕೆ ಪ್ರಕ್ರಿಯೆಯ ಬಗ್ಗೆ ವಿಳಂಬ ಸಲ್ಲದು ಹಾಗೂ ಆತರವೂ ಸಲ್ಲದೆಂಬ ಅಂಶಗಳಿಗೆ ಪೂರಕವಾದ ಆಂಗ್ಲ ವಾಕ್ಯಗಳು **Justice deleyed in justice denied** ಮತ್ತು **Justice hurried is justice burried** ಎಂದು ವ್ಯಾಕ್ಯನಿಸಲ್ಪಟ್ಟಿವೆ. ವಿವಾದದ ಇತ್ಯರ್ಥಕ್ಕೆ ಅವಶ್ಯವಾದ ಸಾಕ್ಷ್ಯದಾರಗಳನ್ನು ಸಮಗ್ರ ಪರಿಶೀಲನೆ ಮಾಡಿ ಅಂತಿಮ ತೀರ್ಪನ್ನು ನೀಡಲು ಹೇಗೆ ನ್ಯಾಯಾಧಿಪತಿಗಳು ತನ್ನ ಸ್ವಾರ್ಥದ ಲಾಭವನ್ನು ಚಿಂತಿಸದೆ ವಿವಾದದ ಕಕ್ಷಿದಾರರುಗಳು ಶ್ರೇಯಸ್ಸಿಗೆ ಶ್ರಮಿಸುತ್ತಾರೋ ಹಾಗೆ ಆಸೆ ಮತ್ತು ಅವಶ್ಯ್ಕತೆಗಳ **(Greed and need)** ಪರಿವ್ಯಾಪ್ತಿಯನ್ನರಿತು ಸಮಾಜದ ಶ್ರೇಯಸ್ಸಿಗೆ ನೀನೂ ಶ್ರಮಿಸು ತನ್ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಕಾರಣೀಭೂತವಾಗೆಂಬುದೇ ಈ ಪದ್ಯದ ಸಾರಾಂಶವಾಗದೆ.

# "ಸದ್ದು ಗದ್ದಲಕ್ಕೆಡೆಗೊಡದೇ ಸೇವಾನಿರತನಾಗು"

ಸರ್ವದಯಾಳು ವಿಶ್ವದ ತಂದೆ ಭಗವಂತನು ಸರ್ವಜೀವಿಗಳಿಗೆ ಬೇಕಾಗುವ ಎಲ್ಲ ಅವಶ್ಯಕತೆಗಳನ್ನೂ ಸದ್ದು ಗದ್ದಲವಿಲ್ಲದೇ ನಿರಂತರವಾಗಿ ಪ್ರಕೃತಿಯ ಮೂಲಕ "ಕಾಣದ ಕೈ"ಯಾಗಿ ಎಸಗುತ್ತಿದ್ದರೂ ತಾನು ಇವುಗಳೆಲ್ಲವನ್ನು ಮಾಡುತ್ತಿದ್ದೇನೆಂಬಕಿರು ಅಹಮಿಕೆಯನ್ನೂ ಪ್ರದರ್ಶಿಸದೇ ಎಸಗಲ್ಪಡುತ್ತಿರುವ ನೈಸರ್ಗಿಕ ಕ್ರಿಯೆಗಳಾದ ಗಾಳಿಯ ಶುದ್ಧೀಕರಣ, ಮರಗಿಡಗಳ ಹೂಹಣ್ಣುಗಳ ಬಿಡುವಿಕೆ, ಭೂಜಲ ತನ್ಮೂಲಕ ಹರಿಯವ ನದಿಗಳು, ಸುರಿದ ಮಳೆ, ಗ್ರಹ ನಕ್ಷತ್ರ ಸೇರಮಂಡಳಗಳ ನಿರಂತರ ಸುತ್ತುವಿಕೆ, ಜೀವಿಗಳ ಜನನ ಮರಣ ಹಸಿವು ಬಾಯಾರಿಕೆಗಳೇ ಅಲ್ಲದೇ ಇಂದಿನ ನಮ್ಮ ಕೃತಕ ಅರ್ಭಟಗಳ ಪ್ರಕ್ರಿಯೆಗಳನ್ನು ವೀಕ್ಷಿಸಿದ ಆಧ್ಯಾತ್ಮ ಕವಿ ಡಿ.ವಿ.ಜಿಯವರು ಮಾಡುವ ಕಾರ್ಯದಲ್ಲಿ ಅನವಶ್ಯಕ ಅಬ್ಬರ ಬೇಡವೆಂದು ಪ್ರಕೃತಿಯಂತೆ ನಿಶ್ಯಬ್ದವಾಗಿ ಕಾರ್ಯಶೀಲನಾಗೆಂದು ಸಂದೇಶ ನೀಡುವ ಈ ಕೆಳಗಿನ ಪದ್ಯವು ಪ್ರಕೃತಿ ಪ್ರಕ್ರಿಯೆಗಳನ್ನು ಉದಾಹರಿಸಿ ಮಾರ್ಮಿಕವಾಗಿ " ಸದ್ದುಮಾಡುವ ಬದಲು ಬಾಕಿ ಮುಚ್ಚಿಕೊ" ಎಂದು ಖಾರವಾಗಿ ಪ್ರತಿಕ್ರಿಯಿಸಿದ್ದಾರೆ. ಪದ್ಯ ಹೀಗಿದೆ.

**ಇಳೆಯಿಂದ ಮೊಳಕೆಯೊಗವೆಂದು ತಮಟೆಗಳಲ್ಲ**
**ಫಲಮಾಗುವಂದು ತುತ್ತೂರಿ ದನಿಯಲ್ಲ**
**ಬೆಳಕೀನ ಚಂದ್ರಿರದೊಂದು ಸದ್ದಿಲ್ಲ**
**ಹೊಲಿ ನಿನ್ನ ತುಟಿಗಳನು ॥ಮಂಕುತಿಮ್ಮ॥**

ವಾಸ್ತವದ ಚಿತ್ರಣವನ್ನು ಕಾಣ್ಮುಂದೆ ತಂದಿದ್ದಾರೆ. ಭೂಮಿಯಿಂದ ಮೊಳಕೆಯೊಡೆದಾಗ ಅದರ ಆಗಮನವನ್ನು ತಮಟೆ ಬಡಿದು ಬರಮಾಡಿಕೊಳ್ಳುವುದಿಲ್ಲ. ಹಾಗೆಯೇ ಗಿಡಮರಗಳಲ್ಲಿ ಹೂ ಹಣ್ಣುಗಳು ಬಂದಾಗ ಡೋಲು ಬಾರಿಸಿ ಸಂಭ್ರಮ ಪಡುವುದಿಲ್ಲ. ಜಗತ್ತಿಗೇ ಬೆಳಕು

ಕೂಡುವ ಸೂರ್ಯ ಚಂದ್ರರು ಯಾವ ಸದ್ದುಗದ್ದಲವಿಲ್ಲದೇ ತಮ್ಮ ಕಾರ್ಯಗಳಲ್ಲಿ ತೊಡಗಿರುವುದು ನಮಗೆ ಕಾಣುವ ಸತ್ಯದೃಶ್ಯಗಳು.

ಇವುಗಳನ್ನು ವೀಕ್ಷಿಸಿಯೂ ಪ್ರಕೃತಿಯನ್ನು ಸರಿಸದೇ ಆರ್ಭಟ ರಂಪಾಟಕ್ಕೊಳಗಾಗಿರುವ ಮಾನವರಿಗೆ ಈ ಹಿಂದಿನಿಂದಲು ಹಿರಿಯರಿಂದ ಬುದ್ದಿ ಮಾತುಗಳಾಗಿ ಹೇಳಲ್ಪಟ್ಟಿವೆ.

1. ಎಡಗೈಯಲ್ಲಿ ಕೊಟ್ಟದಾನ ಬಲಗೈಗೆ ಗೊತ್ತಾಗಬಾರದು.
2. ಸಡಗರ ಗದ್ದಲ ಭಾಜಾಭಜಂತ್ರಿಗಳೊಡನೆ ಹಮ್ಮೆಯ ಪ್ರದರ್ಶನ ನೀಡದೇ ಆತ್ಮ ಸ್ಥಿತಿಯ ಅನುಭವ ಮಾಡುತ್ತಾ ನಿಶ್ಶಬ್ದ ಸೇವೆಯಲ್ಲಿ ತೊಡಗು.
3. ಈ ಪ್ರಪಂಚವು ಸುದ್ಧಿ ಜಗತ್ತು. ಪ್ರಚಾರದ ಹಂಬಲ ಬಿಟ್ಟುಬಿಡು.
4. ಮೆಚ್ಚುಗೆ ಪುರಸ್ಕಾರಗಳ ಹಂಬಲ ಬಿಡು. ದೈವಕ್ಕೆ ಶರಣಾಗಿ ಕಾರ್ಯನಿರ್ವಹಿಸು.
5. ಪ್ರಕೃತಿ ಸಹಜ ಕ್ರಿಯೆಗಳಂತೆ ಕಾರ್ಯತತ್ಪರನಾಗು ಬೂಟಾಟಿಕೆ ಬೇಡ ಇತ್ಯಾದಿ.

ಈ ಅಂಶವನ್ನೇ ಶಂಕರ ಭಗವತ್ಪಾದರು ತಮ್ಮ "ಭಜಗೋವಿಂದಂ" ಪದ್ಯಗುಚ್ಛದಲ್ಲಿ ಓರ್ವನು ಮಾಡಿದ ಪೂಜಾ ಕೈಂಕರ್ಯವನ್ನು ಉದಾಹರಿಸಿ ಜ್ಞಾನಿಯಾಗೆಂದಿದ್ದಾರೆ. ಪದ್ಯ ಹೀಗಿದೆ.

**ಗಂಗಾಸಾಗರ ತಾಣಕೆ ತೆರಳ ವ್ರತದಾನಗಳನ್ನು ಮಾಡಿದರೇನು**
**ಜ್ಞಾನಿಗಳಲ್ಲದ ಯಾರೇ ಇರಲಿ ಶತಜನ್ಮಕ್ಕೂ ಲಭಿಸದು ಮುಕ್ತಿ.**

ಬೆಳಿಗ್ಗೆ ಎದ್ದಂದಿನಿಂದ ಪ್ರಕೃತಿಯಲ್ಲಿ ನಡೆಯುವ ಕಾರ್ಯಗಳನ್ನು ವೀಕ್ಷಿಸು ಅದರಂತೆ ಮೌನದಿಂದ ಸೇವಾ ನಿರತನಾಗಿ ಕಾರ್ಯ ತತ್ಪರನಾಗಿ ಜಗತ್ತಿನ ಒಳಿತನ್ನೆಸಗು ಎನ್ನುವುದೇ ಈ ಪದ್ಯದ ಸಾರಾಂಶ.

# "ಧರ್ಮೋ ರಕ್ಷತಿ ರಕ್ಷಿತ"

ದೈವ ನಿರ್ಮಿತ ಪ್ರಕೃತಿಗೂ ಮತ್ತು ಮಾನವನನ್ನೊಳಗೊಂಡು ಸಕಲ ಜೀವ ಸಂಕುಲಕ್ಕೂ ಅವಿನಾಭಾವ ಸಂಬಂಧವಿರುವುದನ್ನು ಪರಿಗಣಿಸದೇ ಮಾನವನು ಪ್ರಕೃತಿನಾಶ, ಧರ್ಮ ಸತ್ಯಗಳ ಧಿಕ್ಕರಿಸುವಿಕೆಗಳಿಂದ ಹಿಂದೆಂದೂ ಕಂಡು ಕೇಳರಿಯದ ಕೊರೋನಾ ರೂಪದ ದುರ್ದೆಶೆಯು ಧರೆಯನ್ನು ಆವರಿಸಿ ಮೃತ್ಯು ರೂಪದಲ್ಲಿ ಕೇಕೆಹಾರಿ ಕುಣಿಯುತ್ತಿರುವ ಪರಿಣಾಮವಾಗಿ ಘಟಿಸುತ್ತಿರುವ ಸಾವು ನೋವುಗಳ ದಾರಣ ಸ್ಥಿತಿಯು ನಮ್ಮೆಲ್ಲರನ್ನು ಭಯದ ರೂಪಕ್ಕೆ ತಳ್ಳಿದೆಯೆಂಬುದು ವಾಸ್ತವಾಂಶ. ಇಂಥಹ ಭೀಭಿತ್ಯ ಸ್ಥಿತಿಯ ಪಕ್ಕರಿಸುವಿಕೆಯ ಭವಿತವ್ಯತೆಯನ್ನು ಅರಿತೋವನೋ ಆಧ್ಯಾತ್ಮ ಕವಿ ಡಿ.ವಿ.ಜಿ ಯವರು ಪ್ರಕೃತಿಯು ತಾಯಿಯಂತೆ ಮನುಕುಲವನ್ನು ತಿದ್ದುತ್ತಾ, ವಿಕಾಶಗೊಳಿಸುತ್ತಾ ಬಂದಿದ್ದರೂ ದಯಾಹೀನವಾದ ಮಾನವನು ಮಾತ್ರ ಕೃಷಿ, ವಿಜ್ಞಾನ, ಗಣಿಗಾರಿಕೆ, ಶಿಲ್ಪಕಲೆ, ವಾಹನ ಮತ್ತು ಕೃತಕಗೊಬ್ಬರ ತಯಾರಿಕೆ ಮುಂತಾದ ಕಾರಣಗಳನ್ನೊಡ್ಡಿ ಬೆಟ್ಟ ಗುಡ್ಡಗಳನ್ನು ವಿಧ್ವಂಸಗೊಳಿಸಿ ಪ್ರಕೃತಿಯು ನಿರಂತರ ನಾಶದಲ್ಲಿ ತೊಡಗಿಕೊಳ್ಳಬಹುದೆಂಬುದನ್ನು ಮುಂದೃಷ್ಟಿಯಿಂದ ಗ್ರಹಿಸಿ ಪ್ರಕೃತಿ ಸಂರಕ್ಷಣೆಯತ್ತ ಗಮನ ಹರಿಸಲು ತನ್ಮೂಲಕ ಈ ಭೂ ಉಪಗ್ರಹವನ್ನು ದೈವಾನುಗ್ರಹದ ಕೇಂದ್ರವಾಗಿ ಅಭಿವೃದ್ಧಿಗೊಳಿಸಲು ಕರೆಕೊಡುವ ಮೌನ ಸಂದೇಶದ ಪದ್ಯ ಈ ಕೆಳಗಿನಂತಿದೆ.

**ಪ್ರಕೃತಿಯನವಂತ ಮನುಜನ ತಿದ್ದುತಿರುವಂತೆ**
**ವಿಕೃತಿಗೊಳಿಸುವನವನುಮ್ ಆಕೆಯಂಗಗಳ**
**ಭೂಕೇಷಿಕ ರಸತಂತ್ರಿ ಶಿಲ್ಪಿ ವಾಹನ ಯಂತ್ರಿ**
**ವ್ಯಾಕೃತಿಸರೇನವಳ ॥ ಮಂಕುತಿಮ್ಮ ॥ 859**

ಕಾಲಚಕ್ರ ಉರುಳುತ್ತಿದೆ. ಕಾಲದ ಓಟಕ್ಕನುಸಾರವಾಗಿ ಮಾನವ ಬುದ್ಧಿ ಗ್ರಾಹ್ಸನಾಗಬೇಕೆಂಬ ಆಂಗ್ಲ ವ್ಯಾಕ್ಯ ನಮ್ಮನ್ನು ಎಚ್ಚರಿಸುತ್ತದೆ. **"Age is not the flight of years but the down of wisdom"** ಸಂವತ್ಸರಗಳುರುಳಿದಂತೆ ವಿಜ್ಞಾನ, ವೈದ್ಯಕೀಯ, ರಕ್ಷಣೆ, ಆಕಾಶಯಾನ ಇತ್ಯಾದಿ ಕ್ಷೇತ್ರಗಳಲ್ಲಿ ಅಪರಿಮಿತ ಪ್ರಗತಿ ಸಾಧಿಸಿದ ಮಾನವ ಆದೇಕೋ ಸತ್ಯಪಾಲನೆ, ಧರ್ಮಶ್ರದ್ಧೆ ಮತ್ತು ಪ್ರಕೃತಿ ರಕ್ಷಣೆಗಳ ಬಗೆಗಿನ ಕಾಳಜಿಯನ್ನು ಶೂನ್ಯವಾಗಿಸಿ ಕೊಂಡಿದ್ದಾನೆನ್ನಬಹುದು. ಮಾನವನು ಪ್ರಕೃತಿಯ ಕೂಸು **(Man is the child of environment)** ಎಂಬುದು ಅಂಗೀಕೃತ ಸತ್ಯ. ಆದರೆ ಪ್ರಕೃತಿ ರಕ್ಷಣೆ ವಿಷಯದಲ್ಲಿ ಕಂಚಿತ್ತೂ ಆದ್ಯತೆ ವಹಿಸುತ್ತಿಲ್ಲ ಎಂಬುದೂ

ಅಷ್ಟೇ ಸತ್ಯಾಂಶವಾಗಿದೆ. ನಮ್ಮ ದೈನಂದಿನ ನಡೆಯನ್ನು ಅವಲೋಕಿಸೋಣ. ನಮ್ಮ ವಾಹನವನ್ನು ನಿಲುಗಡೆ ಮಾಡಲು ನೆರಳನ್ನು ಹುಡುಕಿ ನಿಲ್ಲಿಸಿ ವಾಹನವನ್ನು ರಕ್ಷಿಸುವ

ಎಚ್ಚರಿಕೆಯನ್ನು ವಹಿಸುತ್ತೇನೆ. ಆದರೆ ಅದೇಕೋ ಮರ ಬೆಳೆಸುವ ಉಳಿಸುವ ಬಗ್ಗೆ ಕಾಳಜಿ ವಹಿಸುತ್ತಿಲ್ಲವೆಂಬುದು ಸತ್ಯಾಂಶ. ಇದು ನಿಜಕ್ಕೂ ದುರ್ದೈವ ನಮಗೆ ಬೇಕಾದಾಗ ಮಾತ್ರ ನೆರಳಿನ ರಕ್ಷಣೆಗಾಗಿ ಪರದಾಡುವ ನಾವುಗಳು ಶಾಶ್ವಾತವಾಗಿ ಮರಗಳ ಬೆಳವಣಿಗೆಗೆ ಇಂಬು ನೀಡುತ್ತಿಲ್ಲ. ಇಂದಿನ ಅತಿ ಅವಶ್ಯಕತೆಯಾದ ಆಮ್ಲಜನಕದ ಲಭ್ಯತೆಯೂ ಅರಣ್ಯಾಭಿವೃದ್ಧಿಂ ಯನ್ನವಲಂಬಿಸಿದೆಯೆಂಬುದೂ ಕಠೋರ ಸತ್ಯ.

ಪ್ರಸಕ್ತ ಆಪತ್ತಿನ ಸಂದರ್ಭದಿಂದಲಾದರೂ ಈ ಭೂಮಿಯ ಮೇಲೆ ವಾಸಿಸಬೇಕಾದ ನಾವು ಈ ಜಾಗದ ಸಮೃದ್ಧಿಗೆ ತನ್ಮೂಲಕ ನಮ್ಮ ಸುಖಕರ ವಾಸ್ತವ್ಯಕ್ಕೆ ನಲೆ ಮಾಡಿಕೊಳ್ಳಲು ನಮ್ಮ ಮನೋ ನಿರ್ಧಾರಗಳಲ್ಲಿ ಕೆಳಗಿನ ಅಂಶಗಳಿಗೆ ಒತ್ತು ನೀಡುವ ಅವಶ್ಯಕತೆಯಿದೆಯೆನಿಸಿದೆ ಅವುಗಳೆಂದರೆ 1. ಅರಣ್ಯ ಸಂರಕ್ಷಣೆ ನಮ್ಮೆಲ್ಲರ ಹೊಣೆ. 2. ಪರಿಸರನಾಶ ನಮ್ಮ ಭವಿಷ್ಯದ ನಾಶ. 3. ಹಸಿರೇ ಉಸಿರು 4. ಧರ್ಮ ಸಂರಕ್ಷಣೆ 5. ಗುರುಹಿರಿಯರಿಗೆ ಗೌರವ ನೀಡಿಕೆ 6. ಎಲ್ಲರೂ ಭಗವಂತನ ಮಕ್ಕಳೆಂಬ ವಿಶಾಲ ದೃಷ್ಟಿ 7. ಪಠ್ಯಪುಸ್ತಕಗಳಲ್ಲಿ ಅರಣ್ಯಾಭಿವೃದ್ಧಿ ಸಂಬಂಧಿತ ಶಿಕ್ಷಣಾ ನೀಡಿಕೆ.

ಇಂದು ಕೊರೋನಾ ಊಹಿಸಲಾಗದ ದುಃಸ್ಥಿತಿಯನ್ನುಂಟು ಮಾಡಿರುವುದು ಸುಸ್ಪಷ್ಟ. ನಾವಿರುವ ಧರೆ ಚನ್ನಾಗಿರಬೇಕು. ಉತ್ತವಿಸಬೇಕು. ಉತ್ತಮ ಫಲಿತಾಂಶಗಳು ಉತ್ತಮ ಕಾರ್ಯಗಳಿಂದ ಮಾತ್ರ ಸಾಧ್ಯವೆಂಬ ಅರಿವು ಮೂಡಬೇಕು. "ಧರ್ಮೋ ರಕ್ಷತಿ ರಕ್ಷಿತ" ಎಂಬ ನಾಣ್ಣುಡಿಯಂತೆ ನಮಗೆ ಜನ್ಮ ನೀಡಿ ಪೋಷಣೆ ಮೂಡಿರುವ ಈ ಪ್ರಕೃತಿ ಮಾತೆಗೆ ಸಂಬಂಧಿಸಿದಂತೆ ಮೇಲ್ನಮೂದಿಸಿರುವ ಮನೋ ನಿರ್ಧಾರಗಳನ್ನು ಕಟ್ಟು ನಿಟ್ಟಾಗಿ ಜಾರಿಗೆ ತರುವ ಮೂಲಕ ಉತ್ತಮೋತ್ತಮ ಆರೋಗ್ಯಾಭಿವೃದ್ಧಿ ಕ್ಷೇಮ ಫಲಿತಾಂಶಗಳನ್ನು ನಿರೀಕ್ಷಿಸೋಣವೆನ್ನುವುದೇ ಈ ಪದ್ಯದ ಸಾರಾಂಶವಾಗಿದೆ.

# "ಹುಟ್ಟು ಆಕಸ್ಮಿಕ – ಮರಣ ಖಚಿತ"

ದೈವನಿರ್ಮಿತ ನಿಸರ್ಗದಲ್ಲಿ ನೀರು ಹರಿಯುವುದು, ಗಾಳಿಬೀಸುವುದು, ಭೂಮಿ ತಿರುಗುವುದು, ಬೆಂಕಿ ಸುಡುವುದು ಹಾಗೂ ಆಕಾಶದ ನಿಲ್ಕಮತೆಯಂಥಹ ಗುಣಗಳನ್ನು "ಬದಲಾಗದ ಶಾಶ್ವತ" ನಿಯಮಗಳೆಂದು ಕರೆಯುತ್ತೇವೆ. ಅಂತೆಯೇ ಹುಟ್ಟಿದ ಪ್ರತಿ ಜೀವಿಯು ದೇಹನಾಶವೆಂಬ ಪ್ರಕ್ರಿಯೆಯ ಮೂಲಕ ಬಾಹ್ಯಸಾವನ್ನು ಪಡೆಯುವುದು ಸಹಿ ವಿಧಿಯ ಕಠೋರ ನಿಯಮಗಳಲ್ಲೊಂದಾಗಿದೆ. ತನ್ಮೂಲಕ ನಿರ್ದಿಷ್ಟ ಅವಧಿಯ ನಂತರ ಪ್ರತಿ ಜೀವಿಯ ತನ್ನೊಡವಿರುವ ಐಶ್ವರ್ಯವನ್ನು, ಸ್ಥಿರಾಸ್ತಿಗಳನ್ನು ಹಾಗೂ ಬಂಧು ಬಾಂಧವರನ್ನು ತ್ಯಜಿಸಲೇ ಬೇಕು. ಇಂಥಹ ಅನಿವಾರ್ಯ ಸ್ಥಿತಿಯ ಸಾವು ನಮ್ಮೆಲ್ಲರನ್ನೂ ಭಯಕ್ಕೊಳಪಡಿಸಿ ದಿಗ್ಭ್ರಾಂತರನ್ನಾಗಿ ಮಾಡಿಬಿಡುತ್ತದೆ. ಎಂಥಹ ಜ್ಞಾನಿಯೇ ಆಗಿರಲಿ ಅದೇಕೋ ಸಾಯಲು ತನ್ನ ಇಚ್ಛೆಯನ್ನು ವ್ಯಕ್ತಪಡಿಸುವುದಿಲ್ಲ. ಇಷ್ಟವಿರಲಿ ಇಲ್ಲದಿರಲಿ ಸಾಯಲೇಬೇಕೆಂಬ ಕಠಿಣಾತಿ ಕಠಿಣ ನಿಯಮದ ಅಸ್ತಿತ್ವವಿದೆಯೆಂದು ಗೊತ್ತಿದ್ದರೂ ಸಾವನ್ನು ಯಾರೂ ಸ್ವಾಗತಿಸುವುದಿಲ್ಲ.

ಸಾವಿನ ನಂತರ ನಾವು ಏನಾಗುತ್ತೇವೆ ಪ್ರೇತವೋ ಭೂತವೋ ಪುನರ್ಜನ್ಮವೋ ಪರಲೋಕವೋ ಎಂಬುದರ ಅರಿವು ಎಲ್ಲದ ನಮಗೆ ಈ ಹಿಂದೆ ಮರಣ ಹೊಂದಿದವರು ಯಾರೂ ತಿರುಗಿ ಬಂದಿಲ್ಲ ಹಾಗೂ ತದನಂತರದ ಘಟನೆಗಳ ಬಗ್ಗೆ ವರದಿ ನೀಡಿಲ್ಲವಾದ್ದರಿಂದ ಅದರ ಬಗ್ಗೆ ತಲೆಕಡಿಸಿಕೊಳ್ಳದೇ ಕರ್ತವ್ಯಶೀಲನಾಗಿ ಲೋಕಕ್ಕೆ ಉದಾಹರಣಾರ್ಥವಾಗಿ ಬದುಕೆಂಬ ಸಂದೇಶದ ಪದ್ಯವನ್ನು ಆಧ್ಯಾತ್ಮ ಕವಿ ಡಿ.ವಿ.ಜಿಯವರು ನಮಗಿತ್ತಿದ್ದಾರೆ.

**ಮರಣದಿಂ ಮುಂದೇನೋ ಪ್ರೇತವೋ ಭೂತವೋ**

**ಪರಲೋಕವೋ ಪುನರ್ಜನ್ಮವೋ ಅದೇನೋ**

**ತಿರುಗಿ ಬಂದವರಿಲ್ಲ ವರದಿ ತಂದವರಿಲ್ಲ**

**ಧರೆಯ ಬಾಳ್ಗದರಿನೇ ॥ ಮಂಕುತಿಲ್ಲ ॥**

ಸಾವಿನ ಬಗ್ಗೆ ಆತ್ಮಕ್ಕೆ ಯಾವುದೇ ಸ್ವಾತಂತ್ರ್ಯವಿಲ್ಲ ಬದಲಾಗಿ ಈ ವಿಷಯದಲ್ಲಿ ವಿಧಿಯದೇ ಮೇಲೆ, ಆತನ ಇಚ್ಛೆಯಂತೇ ಎಲ್ಲ ಸಾವು ನೋವುಗಳು ಸಂಭವಿಸುತ್ತವೆ. ಸಾವೊಂದು ತಪ್ಪಿಸಲಾಗದ ಘಟನೆಯಾಗಿರುವುದರಿಂದ ಬದುಕಿರುವ ಪ್ರತಿ ಸೆಕೆಂಡನ್ನೂ ಪರಮಾತ್ಮ ಸುತರಾದ ಅನ್ಯ ಜೀವಿಗಳನ್ನು ಪ್ರೀತಿ ಮಮತೆಗಳಿಂದ ನೋಡುತ್ತ ವಿಶ್ವದೊಡೆಯ ಸರ್ವೇಶ್ವರನ ಚಿಂತನೆಯಲ್ಲಿ ತೊಡಗಿಸಕೊಂಡು ಕೆಟ್ಟ ಆಲೋಚನೆಗಳು ಮನಸ್ಸಿನೊಳಗೆ ಪ್ರವೇಶವಾಗುವಂತೆ ಬಾಳಿದರೆ ಕರ್ತನಿಗೆ ಸಂತೋಷವುಂಟಾಗಿ ಸರ್ವಸುಖಗಳನ್ನು ತಪ್ಪದೇ ದಯಪಾಲಿಸಿ ಅಂತಹ ಶುದ್ಧಾತ್ಮ ಜೀವಿಗಳನ್ನು ತನ್ನ ಪಾಲುದಾರರೆಂದು ಭಾವಿಸಿ ಭೂಮ್ಯಾಕಾಶಗಳಲ್ಲಿನ ಯಾವುದೇ ಶಕ್ತಿಗಳು ಅಂಥಹ ಜೀವಿಗೆ ಕೆಡುಕೆಸಗದಂತೆ ನೋಡಿಕೊಳ್ಳತ್ತಾ ಯಾರಲ್ಲಿ ಒಳ್ಳೆಯ ಗುಣಗಳಿವೆಯೇ ಅವುಗಳನ್ನು ಪ್ರಾರ್ಥಿಸುತ್ತಾ, ಇಲ್ಲದಂಥಹ ಶುಭಗುಣಗಳನ್ನು ಅಸ್ತಿತ್ವಗೊಳಿಸಿ **(Developing good qualities and installing what they lack)** ಹರಸಿ ಆಶೀರ್ವಾದಿಸಿ, ಕ್ಷಮಿಸಿ, ಕಾಪಾಡಿ ಶುಭ ಬದುಕನ್ನು ದಯಪಾಲಿಸುತ್ತಾನೆಂಬುದೇ ಈ ಪದ್ಯದ ಸಾರಾಂಶವಾಗಿದೆ.

# "ಒಳ್ಳೆಯವರು ಕೆಟ್ಟವರು ಸದಾಕಾಲಕ್ಕೂ ಇದ್ದವರೇ ಹಾಗೂ ಇರುವವರೇ"

ಭಗವಂತನ ಸೃಷ್ಠಿಯಲ್ಲಿ ಒಳ್ಳೆಯದು ಕೆಟ್ಟದ್ದೆಂಬುದು ಎಲ್ಲ ಕಾಲದಲ್ಲೂ ಇತ್ತೆಂದು ಪುರಾಣ ಗ್ರಂಥಗಳಾದ ರಾಮಾಯಣ ಮಹಾಭಾರತಗಳಲ್ಲಿ ಮೂಡಿ ಬರುವ ಪಾತ್ರಗಳಿಂದಲೇ ವ್ಯಕ್ತವಾಗುವ ಅಂಶವಾಗಿರುವುದರಿಂದ ಪ್ರಸಕ್ತ ಸಮಾಜದಲ್ಲಿಯೂ ಒಳ್ಳೆಯವರು ಕೆಟ್ಟವರು ಇದ್ದೇ ಇರುತ್ತಾರೆನ್ನುತ್ತಾ ಅಂತಹದ್ಯಾವುದನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೇ ವ್ಯಕ್ತಿಯು ತನ್ನಷ್ಟಕ್ಕೆ ತಾನು ರಾಮಭಂಟ ಹನುಮಂತನಂತೆ ಕಾರ್ಯಶೀಲನಾಗಬೇಕೆಂದು ಆಧ್ಯಾತ್ಮ ಕವಿ ಡಿ.ವಿ.ಜಿಯವರು ಈ ಕೆಳಗಿನ ಪದ್ಯದಲ್ಲಿ ಕರೆಕೊಡುತ್ತಿದ್ದಾರೆ. ಜೀವನವೆಂಬುದು ಒಳಿತುಕೆಡುಕುಗಳ ಮಿಶ್ರಣ ಆದಾಗ್ಯೂ ಅದರಲ್ಲಿನ ಒಳ್ಳೆಯದನ್ನು ಆಯ್ದುಕೊಂಡು ಬದುಕನ್ನು ಪ್ರಗತಿಯತ್ತ ಕೊಂಡೊಯ್ಯುವುದು ಸಜ್ಜನರ ಕರ್ತವ್ಯವೆನ್ನುತ್ತಾ ಕೆಟ್ಟವಂದ್ದಾರೆಂಬ ಕಾರಣದಿಂದ ಕಾರ್ಯಸ್ಥಗಿತ ಮಾಡುವುದು ಸರಿಯಲ್ಲವೆಂದೂ ಇರುವ ಕೇಡಿನ ಅಂಶಗಳನ್ನು ಪರಿಹರಿಸಿಕೊಂಡು ಮುನ್ನುಗ್ಗಲು ಕರೆಕೊಡುತ್ತಿದ್ದಾರೆ.

**ರಾಮನಿರ್ದಂದು ರಾವಣನೊಬ್ಬ ನಿದ್ದವಲ**
**ಭೀಮನಿರ್ದಂದು ದುಶ್ಯಾಸನ ನವನೋರ್ವನ್**
**ಈ ಮಹಿಯೊಳನ್ಯಾಯಕಾರಿಯಿಲ್ಲದುದೆಂದು?**
**ರಾಮಭಟನಾಗು ನೀಂ ॥ಮಂಕುತಿಮ್ಮ॥**

ಉಚ್ಚನೀಚ ಸ್ವಭಾವದ ವ್ಯಕ್ತಿಗಳು ಸದಾಕಾಲಕ್ಕೆ ಇದ್ದರೆಂಬ ಅಂಶಕ್ಕೆ ಪುಷ್ಠಿ ನೀಡುತ್ತಾ ರಾಮಾಯಣದ ಉದಾಹರಣೆಯಾಗಿ ಏಕಪತ್ನೀ ವ್ರತಸ್ಥನಾದ ಶ್ರೀ ರಾಮನಿದ್ದಾಗ ವಿಷಯಲಂಪಟ, ವ್ಯಭಚಾರಿ ಮತ್ತು ಕಾಮುಕ ರಾವಣನಿದ್ದನೆಂದೂ ಮಹಾಭಾರತದ ಉದಾಹರಣೆಯಾಗಿ ಭೀಮನಿದ್ದಾಗ ದುರ್ಯೋಧನ, ದುಶ್ಯಾಸನ ಮತ್ತು ಕೀಚಕರಂಥಹ ಕಂಠಕಪ್ರಾಯರಿದ್ದರಿಂದ ಯಾವುದೇ ಕಾಲದಲ್ಲಿಯೂ "ದುಷ್ಟವ್ಯಕ್ತಿಯುಕ್ತ" ಸಮಾಜ ವಿರಲಿಲ್ಲವಾದ್ದಯಿರಿಂದ ಜಾಲಿಯ ಮುಳ್ಳಿನಂಥಹ ಚುಚ್ಚುವ್ಯಕ್ತಿಗಳು ಇದ್ದರೂ ಸಹ ಪರಿಹಾರೋಪಾಯ ಕಂಡುಕೊಂಡು ತಮ್ಮ ಪಥದಲ್ಲಿ ಪ್ರಯತ್ನಶೀಲರಾಗಲು ನಿರ್ದೇಶನ ನೀಡಲಾಗಿದೆ.

ರಾಮಾಯಣದ ಹನುಮಂತನು ಸಮುದ್ರ ಲಂಘನ ಮಾಡಿ ಸೀತಾನ್ವೇಷಣೆ ಕೈಕೊಳ್ಳುವ ಸಂದರ್ಭದಲ್ಲಿ ಅನೇಕ ದುಷ್ಠರನ್ನು ಸದೆ ಬಡಿಯಬೇಕಾಯಿತು. ಹೋರಾಡಬೇಕಾಯಿತು. ಆದಾಗ್ಯೂ ಹನುಮಂತನ ಹೃದಯೊಂತರಾಳದಲ್ಲಿ ರಾಮನಾಮದ ಶುದ್ಧ ಮಂತ್ರದ ತೀವ್ರತೆಯಿಂದ ಕಾರಣ ಬಂದ ಕಷ್ಟಗಳನ್ನೆಲ್ಲಾ ಸಾಸಿವೆ ಕಾಳಿನಂತೆ ಪರಿಹರಿಸಿಕೊಂಡು ತನಗೆ ವಹಿಸಲಾದ ಕಾರ್ಯದಲ್ಲಿ ಉತ್ಕೃಷ್ಟ ಜಯವನ್ನು ಪಡೆಯುವುದರಲ್ಲಿ ಯಶಸ್ವಿಯಾಗುತ್ತಾನೆ. ಆಂತರ್ಯದ ಶುಭ ಚಿಂತನೆಯ ಕಾರಂಜಿ ಶಕ್ತಿಯು ಹೊರಗಿನ ದೈತ್ಯತನವನ್ನು ದಹಿಸಿ

ಯಶಸ್ಸಿನತ್ತ ನಿಮ್ಮನ್ನು ಕೊಂಡೊಯ್ಯುತ್ತದೆಯನ್ನುತ್ತದೆ ಈ ಕಗ್ಗ.

ಆಂಗ್ಲ ಬರಹಗಾರ ಜೋಸೆಫ್ ಮರ್ಫಿಯವರು ಶುದ್ಧಮನಸ್ಸಿನ ಶಕ್ತಿಯ ಬಗ್ಗೆ ಪ್ರಸ್ತಾಪಿಸುತ್ತಾ **"when you sincerely aim at good, God will take you as his partner and there up on no force on earth and heaven can with hold you from success"** ಮನದಾಳದಲ್ಲಿ ಶುಭ ಉದ್ದೇಶವನ್ನು ಹೊಂದಿ ಕಾರ್ಯತತ್ಪರನಾದಲ್ಲಿ ಅಂತಹನನ್ನು ಭಗವಂತನು ತನ್ನ ಪಾಲುದಾರನೆಂದು ಭಾವಿಸಿ ನಂತರದಲ್ಲಿ ಭೂಮ್ಯಾಕಾಶದಲ್ಲಿನ ಯಾವುದೇ ಶಕ್ತಿಗಳು ಅಂತಹವನಿಂದ ಯಶಸ್ಸನ್ನು ಕಸಿಯಲಾರವು ಎನ್ನುತ್ತಾ ಮಹತ್ಮಾಗಾಂಧೀಯಿಜಿಯವರು ತನ್ನ ಉಕ್ತಿಗಳಲ್ಲಿ ನಮ್ಮ ಸರಿತಪ್ಪುಗಳನ್ನು ಅಂತ್ಯ ನಿರ್ಧರಿಸುತ್ತದೆಂದಿದ್ದಾರೆ ಆದ್ದರಿಂದ ಶುಭಚಿಂತನೆಯಿಂದ ಯಶಸ್ಸಿನತ್ತ ಮುನ್ನಡೆಯೋಣವೆನ್ನುತ್ತದೇ ಸಾರಾಂಶ.

# "ನರಳುತ್ತಾ ಶಪಿಸುತ್ತಾ ನರಕ ಸೃಷ್ಟಿಸುವುದಕ್ಕಿಂತ ನಗುನಗುತ್ತಾ ನಂದನವನ ನಿರ್ಮಿಸು"

ಭಗವಂತನ ಸೃಷ್ಟಿಯಲ್ಲಿ ಮೂಡಿಬಂದಂತಹ ಪ್ರಾಣಿವರ್ಗದಲ್ಲಿ ಮಾನವನು ಅತ್ಯುನ್ನತ ಚಿಂತನಶೀಲ ಪ್ರಾಣಿಯೆನಿಸಿಕೊಂಡರೆ ಮಂಗನು ಅತಿಯಾದ ಚುರುಕು ಮತ್ತು ಚೇಷ್ಟೆಗಳಿಗೆ ಹೆಸರಾದ ಪ್ರಾಣಿಯನಿಸಿಕೊಂಡಿದೆ. ಮಾನಸಿಕ ಸ್ಥಿರತೆಯನ್ನು ಹೊಂದದಿರುವ ಮಂಗನು ಅನೇಕ ಅಂಗ ಚೇಷ್ಟೆಗಳನ್ನು ಮಾಡುತ್ತಿರುವ ಪ್ರಾಣಿ ಯಾಗಿರುವುದರಿಂದ ಇದರ ನಡೆಯನ್ನು ಕಪಿಚೇಷ್ಟೆ ಯೆಂಬ ಹೆಸರಿನಿಂದಲೇ ಗುರುತಿಸಲಾಗಿದೆ. ತನಗೆ ಸಂಭವಿಸಿದ ಕಿರಿದಾದ ತರಚನ್ನು ಕರೆಕೆರೆದು ವ್ರಣ ಮಾಡಿ ಅದನ್ನು ಒಂದು ದೊಡ್ಡಗಾಯವನ್ನಾಗಿ ಮಾಡಿಕೊಳ್ಳುತ್ತದೆ. ಇದನ್ನು ಮಂಗನಿರ್ಮಿತ ಗಾಯವೆನ್ನಲಾಗುತ್ತದೆ. ಮನುಷ್ಯನು ಸಹ ಮಂಗನಿಗಿಂತ ಏನೂ ಕಡಿಮೆಯಿಲ್ಲ ತನಗಾದ ಕಿರಿದಾದ ಕೊರತೆಯನ್ನು ಬೃಹತ್ತನ್ನಾಗಿಸಿ ನೆರೆಯವರನ್ನು ಬಂಧು ಬಾಂಧವರನ್ನು ಮುಂದುವರಿದು ದೇವರನ್ನು ಶಪಿಸಿ ಮನವನ್ನು ನರಕ ಸದೃಶವನ್ನಾಗಿಸಿಕೊಳ್ಳುತ್ತಾನೆಂದು ಇಂಥಹದೊಂದು ಬದುಕೇ ಎಂಬ ಪ್ರಶ್ನೆಯ ಪದ್ಯವನ್ನು ಸನ್ಮಾನ್ಯ ಡಿ.ವಿ.ಜಿಯವರು ಈ ಕೆಳಗಿನಂತೆ ಉಲ್ಲೇಖಿಸಿರುತ್ತಾರೆ.

**ತರಚುಗಾಯನ ಕರೆದು ಹುಣ್ಣಾಗಿಪುದು ಕಪಿ**
**ಕೊರತೆಯೊಂದನ್ನು ನೀನು ನನೆನೆನೆದು ಕೆರಳಿ**
**ಧರೆಯೆಲ್ಲವನು ಶಪಿಸಿ ಮನದಿ ನರಕವ ನಿಲಿಸಿ**
**ನರಳುವುದು ಬದುಕೇನೋ ? ಮಂಕುತಿಮ್ಮ**

ಗಾಯಗಳೂ ಸುಮ್ಮ ಸುಮ್ಮನೆ ಆಗುವುದಿಲ್ಲ. ಎಚ್ಚರಿಕೆ ತಪ್ಪಿ ನಡೆದಾಗಲೋ ಅವಸರದ ಮನೋಭಾವದಿಂದಲೋ ಗಾಯಗಳಾದಾಗ ಅದಕ್ಕೆ ಮದ್ದೆರೆದು ಔಷಧ ಹಾಕಿ ಗುಣಪಡಿಸಿಕೊಳ್ಳುವುದು ಉತ್ತಮಮಾರ್ಗ. ಅದಕ್ಕೆ ಬದಲಾಗಿ ಅದನ್ನೇ ಕೆರೆಕರೆದು ಹೆಚ್ಚು ಮಾಡಿಕೊಳ್ಳಬಾರದೆಂದೂ ಇದರಂಥೆಯೇ

ಜೀವನದಲ್ಲಿ ಬಂದೊದಗುವ ನಿರಾಸೆ. ಅತೃಪ್ತಿ, ನಿಯೋಗ ಮತ್ತು ವಿಮರ್ಶೆಗಳನ್ನು ಕೈಗೆತ್ತಿಕೊಂಡು ಸದರಿ ಕೊರತೆಗಳನ್ನು ಮನದಲ್ಲಿ ಅಳೆದು ಸುರಿದು ಜಗತ್ತೆನ್ನೆಲ್ಲಾ ಶಪಿಸುತ್ತಾ ಬದುಕುವುದು ಒಂದು ಬದುಕೇನೋ ಎಂದು ಪ್ರಶ್ನಿಸಿ ಇದಕ್ಕೆ ಬದಲಾಗಿ ಇದ್ದದ್ದರಲ್ಲಿ ತೃಪ್ತಿ ತಂದುಕೊಂಡು ಬಂದ ಕಷ್ಟಕಾರ್ಪಣ್ಯಗಳನ್ನು ಧೈರ್ಯದಿಂದ ಎದುರಿಸಿದಲ್ಲಿ ಬಂದಂಥಹ ಕಷ್ಟಗಳು ಮಾಯವಾಗುತ್ತವೆಯೆಂಬ ಶಾಶ್ವತ ನಂಬಿಕೆಯ ಮೇಲೆ ಬದುಕಿ ನೆಮ್ಮದಿಯ ಬದುಕನ್ನು ರೂಡಿಸಿಕೊಳ್ಳಲು ನಿರ್ದೇಶನ ನೀಡುತ್ತದೆ ಈ ಕಗ್ಗ.

ಭಗವದ್ಗೀತೆಯ ಆರನೇಯ ಅಧ್ಯಾಯದ 34ನೇ ಶ್ಲೋಕದ ಮೂಲಕ ಮಹಾರಥಿ ಅರ್ಜುನನು ಮನಸ್ಸಿನ ನಿಯಂತ್ರಣ ವಾಯುನಿಗ್ರಹದಂತೆ ಕಷ್ಟವೆಂಬ ಅಂಶವನ್ನು "ಚಂಚಲಂ ಹಿ ಮನಃ ಕೃಷ್ಣ ಪ್ರಮಾಥಿಬಲವದ್ದೃಡಂ ತಸ್ಯಾಹಂ ನಿಗ್ರಹಂ ಮನ್ಯೇ ವಾಯೋರಿನ ಸು ದುಷ್ಕರಂ" ಎಂದಾಗ ಭಗವಂತನ ಕೃಷ್ಣನು ಸಹ ಮನಸ್ಸಿನ ನಿಯಂತ್ರಣ ಕಷ್ಟ ಸಾಧ್ಯವೆಂಬ ಅಂಶವನ್ನು ಒಪ್ಪುತ್ತಾ ಸತತ ಪ್ರಯತ್ನದಿಂದ ಹಾಗೂ ವೈರಾಗ್ಯಗಳಿಂದ ನಿಯಂತ್ರಣ ಸಾಧ್ಯವೆಂದು ಆದೇಶಿಸಿರುತ್ತಾರೆ.

ಆದ್ದರಿಂದ ಮನಸ್ಸಿನ ಚಂಚಲತೆಯನ್ನು ಹೋಗಲಾಡಿಸಿ ಸ್ಥಿರತೆಯನ್ನು ಸ್ಥಾಪಿಸುವುದೊಂದೇ ಪರಿಹಾರದ ದಾರಿಯೆಂಬುದನ್ನು ಮನನ ಮಾಡಿಕೊಂಡು ಭಗವಂತನನ್ನು ಕಾಣುವ ಮನೋಭಾವ ಬೆಳಿಸಿಕೊಳ್ಳಿರೆಂಬುದೇ ಈ ಪದ್ಯದ ಸಾರಾಂಶವಾಗಿದೆ.

# "ನಿರಂತರ ಸೃಷ್ಟಿಕಾರ್ಯದಲ್ಲಿ ನಿರತವಾದ ಪರಬ್ರಹ್ಮ"

ಕನ್ನಡಿಯ ಮುಂದೆ ನಿಂತ ಸುಂದರ ಯುವತಿ ಹಾಗೂ ಧ್ವನಿವರ್ಧಕದಮುಂದೆ ನಿಂತ ವಾಗ್ಮಿಗೆ ಹೇಗೆ ಸಮಯದ ಅರಿವಿಲ್ಲದೆ ತಮ್ಮ ಸೌಂದರ್ಯವರ್ಧನೆಯಲ್ಲಿ ಹಾಗೂ ಪ್ರತಿಭಾ ಪ್ರದರ್ಶನಗಳಲ್ಲಿ ಏಕರಸ ಸ್ಥಿತಿಯಲ್ಲಿತನ್ಮಯರಾಗಿರುತ್ತಾರೋ ಹಾಗೆಯೇ ವಿಶ್ವದ ಉತ್ಪತ್ತಿಕಾರ ಭಗವಂತ ಸಹ ತನ್ನಸೃಷ್ಟಲೀಲಾ ವಿನೋದಗಳಲ್ಲಿ ತೊಡಗಿಸಿಕೊಂಡು ತನ್ನ ಮನಸ್ಸನ್ನು ಕೇಂದ್ರೀಕರಿಸಿಕೊಂಡು ಸೃಷ್ಟಿಸ್ಥಿತಿಲಯ ಕಾರ್ಯಗಳು ನಿರ್ವಹಣೆಯಲ್ಲಿ ತೊಡಗಿಸಿಕೊಂಡಭಗವಂತನಿಗೆ ಆದಿ ಮಧ್ಯ ಅಂತ್ಯಗಳ ಪರಿವೆಯೇ ಇಲ್ಲದಂತಾಗಿ ಈ ಜಗತ್ತುಅನಂತವಾಗಿದೆಯೆಂದು ಮತ್ತು ನಿರಂತರ ಮುಂದುವರಿಕೆಗೊಳಪಟ್ಟಿದೆಯೆಂಬಅಂಶ ವನ್ನು ನಿರೂಪಿಸುತ್ತದೆ. ಈ ಕಗ್ಗ ಪದ್ಯದಲಹರಿಯನ್ನು ಗಮನಿಸಿ

**ತರುಣೆ ತನ್ನೊಡವೆಗಳ ತೆಳೆಯತ್ತ ತೆಗೆಯುತ್ತೆ**

**ಪರಕಿಸುತೆ ಮುಕುರದಲಿ ಸೊಗಸುಗಳ ಪರಿಯ**

**ಮರೆತೆಲ್ಲವನು ವಿಲಸಿಪಂತೆ ತಾಂ ವಿಶ್ವದಲಿ**

**ಮರೆಯುವನು ಪರಬೊಮ್ಮ ॥ಮಂಕುತಿಮ್ಮ॥**

ಸಿರಿವಂತ ಮನೆತನದ ಪ್ರಾಯದ ಸುಂದರವಾದ ಯುವತಿಗೆ ತನ್ನದೇಹಸೌಷ್ಟವದ ಬಗ್ಗೆ ಅತೀವ ಹೆಮ್ಮೆಯಿರುತ್ತದೆಯೆಂಬ ಸ್ವಾಭಾವಿಕ ಅಂಶವನ್ನುಇಲ್ಲಿ ಉದಾಹರಣೆಯಾಗಿ ತಂದು ಅವಳು ತನ್ನ ಒಡವೆ ವಸ್ತುಗಳನ್ನುಹಾಕಿಕೊಳ್ಳುತ್ತಾ ಮತ್ತೆ ತೆಗೆಯುತ್ತಾ ಹಾಗೂ ಈ ಪ್ರಕ್ರಿಯೆಯನ್ನು ಎಷ್ಟು ಸಾರಿಪುನರಾವರ್ತಿಸಿದರೂ ಅವಳಿಗೆ ತೃಪ್ತಿಬಾರದೆಂಬ ಅಂಶವನ್ನು ಈ ಪದ್ಯದಲ್ಲಿಕಣ್ಮುಂದೆ ನಡೆಯುತ್ತಿರುವಂತೆ ನೈಜವಾಗಿ ಚಿತ್ರೀಕರಿಸಲಾಗಿದೆ.ಆಕಾಶ. ಭೂಮಿ, ಬೆಂಕಿ, ನೀರು ಹಾಗೂ ಗಾಳಿಗಳೆಂಬ ಪಂಚಭೂತಗಳನ್ನುಸೃಷ್ಟಿಸಿದ ಭಗವಂತ ಸಮುದ್ರ, ಪರ್ವತಗಳು, ಸರೋವರ, ಕೊಳಗಳುಹಾಗೂ ಆಕರ್ಷಣೆಯ ದೃಷ್ಯಜಾಲಗಳನ್ನು ಸೃಷ್ಟಿಸಿ, ಈ ಬಹುಸುಂದರ ವಿಶ್ವದನಿರ್ಮಾತೃತ್ವದ ಕಾರ್ಯದಲ್ಲಿ ಸಂಪೂರ್ಣವಾಗಿ ಲೀನವಾಗಿ ತನ್ನನ್ನೇ ತಾನುಮರೆತಿದ್ದಾನೆಂದು ಆಧ್ಯಾತ್ಮ ಕವಿ ಡಿ.ವಿ.ಜಿಯವರು ಉದಾಹರಿಸಿರುತ್ತಾರೆ.ಸೃಷ್ಟಿಕರ್ತನ ಅಸದಳ ಹಾಗೂ ಅವರ್ಣನೀಯ ಕಾರ್ಯವನ್ನು ವೀಕ್ಷಿಸುತ್ತಾಭಗವಂತನ ತನ್ಮಯತೆಯನ್ನು ಅರಿಯುತ್ತಾ ಆ ಮಹಾದೇವ ಭಗವಂತನಬೃಹತ್ತತೆಯನ್ನು ಮನಸ್ಸಿನಲ್ಲಿ ಚಿತ್ರಿಸಿಕೊಳ್ಳುತ್ತಾ ಸದಾ ಅವನಮಕ್ಕಳಾಗಿರೋಣವೆಂಬುದೇ ಈ ಪದ್ಯದ ಸಾರಾಂಶವಾಗಿದೆ.

# "ಸಂಕಷ್ಟಗಳನ್ನು ಧೈರ್ಯವಾಗಿ ಎದುರಿಸಿದಾಗ ಪರಿಹಾರ ಸುಲಭ"

ಇತ್ತೀಚಿನ ವೃತ್ತಪತ್ರಿಕೆಗಳನ್ನು ದೂರದರ್ಶನ ಮಾಧ್ಯಮಗಳಲ್ಲಿ ಪ್ರಕಟವಾಗುವ ಸುದ್ಧಿಗಳಲ್ಲಿ ಅತಿ ಹೆಚ್ಚಿನ ವಿಷಯವೆಂದರೆ ಬಂದಿಲ್ಲೊಂದು ಕಾರಣಕ್ಕಾಗಿ ಆತ್ಮಹತ್ಯೆಗೆ ಶರಣಾಗುತ್ತಿರುವ ವಿಷಯ. ಬೆಳೆನಾಶ, ಬೆಲೆಯಿಳಿಕೆಯಂಥಹ ಕಾರಣಗಳಿಂದಾಗ ಸಾಲದ ಶೂಲಕ್ಕೋಳಗಾದ ರೈತರು ಹಾಗೂ ವಿವಿಧ ಕಾರಣಗಳೀಗಾಗಿ ಉದ್ಯಮಿಗಳು ಮತ್ತು ಭಗ್ನ ಪ್ರೇಮಿಗಳು ಆತ್ಮಹತ್ಯೆಗೆ ಶರಣಾದ ಸುದ್ಧಿಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಇಂತಹ ವಿಷಯವನ್ನು ಮನಗಂಡ ಆಧ್ಯಾತ್ಮ ಕವಿ ಡಿ.ವಿ.ಜಿಯವರು ಬದುಕಿನ ಸಂಕೀರ್ಣತೆಯೆಂಬ ಯುದ್ದಕ್ಕೆ ಹೆದರದೇ ಎದೆಯನ್ನು ಗಟ್ಟಿಮಾಡಿಕೊಂಡು ಕಷ್ಟ ಮತ್ತು ಅವಮಾನಗಳನ್ನು ಎದುರಿಸಿದರೆ ವಿಶ್ವದೊಡೆಯನಾದ ಆ ವಿಧಿಯೇ ನಮ್ಮನ್ನು ಮೆಚ್ಚಿ "ಷಹಭ್ಯಾಸಗಿರಿ" ನೀಡಿ ಸಂತೈಸುತ್ತಾನೆನ್ನುವ ವಿಷಯವನ್ನೊತ್ತ ಪದ್ಯವನ್ನು ರಚಿಸಿದ್ದಾರೆ. ಪದ್ಯದ ಲಹರಿ ಈ ಕೆಳಗಿನಂತಿದೆ.

**ಬದುಕೊಂದು ಕದನವೆಂದಂಜಿ ಬಿಟ್ಟೋಡುವನು**

**ಬಿದಿಯ ಬಾಯಿಗೆ ಕವಳವಾಗದುಳಿಯುವೆನೆ?**

**ಎದೆಯನುಕ್ಕಾಗಿಸುತ ಮತಿಗದೆಯ ಪಿಡಿದು ನೀ**

**ನೆದುರು ನಿಲೆ ಬಿದಿಯೊಳಿವ ॥ಮಂಕುತಿಮ್ಮ॥**

"ಜಾತಸ್ಯ ಮರಣಂ ಧೃವಂ" ಹುಟ್ಟಿದವರು ಸಾಯಲೇಬೇಕೆಂಬುದು ಕಟು ಸತ್ಯ **"Body is mortal and soul is immortal"** ಈ ಪ್ರಪಂಚಕ್ಕೆ ಖಂಡ ಮೇಲೆ ನಾವುಗಳೆಲ್ಲರೂ ಬದುಕನ್ನು ನಡೆಸಲೇಬೇಕು. ಬೇರಗತಿ ಇಲ್ಲ. ಆದರೆ ಯಾವುದೋ ಆಹರ್ತರ ಘಟನೆಯನ್ನಾಧರಿಸಿ ಆದ ಅವಮಾನಕ್ಕಾಗಿಯೋ, ಸೋಲಿಗಾಗಿಯೋ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದರೂ

ಸಹ ವಿಧಿಯ ಖಾಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದ ಕಾರಣ ವಿಧಿ ನಿಯಮಿಸಿರುವ ಕರ್ಮಗಳನ್ನು ಮಾಡಲೇಬೆಕು. ಬದಲಾಗಿ ತಪಿಸಿಕೊಳ್ಳಲು ಯತ್ನಿಸಿದರೆ ಬಡ್ಡಿ ಸಮೇತ ಮುಂದಿನ ಜನ್ಮದಲ್ಲಿ ತೀರಿಸಲೇಬೇಕಾಗುತ್ತದೆ. ಇದಕ್ಕೆ ಉಪಾಯವೆಂದರೆ ನಮ್ಮ ಎದೆಯನ್ನು ಗಟ್ಟಿ ಮಾಡಿಕೊಂಡು ಕಷ್ಟ ಹಾಗೂ ಅವಮಾನಗಳನ್ನು ಸಹಿಸಿಕೊಂಡು ನಮ್ಮ ಬುದ್ಧಿ ಶಕ್ತಿ ಎನ್ನುವ ಗದೆಯನ್ನು ಹಿಡಿದು ಮುಂದಿರುವ ಕಷ್ಟದ ಸವಾಲುಗಳನ್ನು "ಛಲದರಕ ಮಲ್ಲ" ರಂತೆ ಎದುರಿಸಿದರೆ ಆ ವಿಧಿಯು ನಮ್ಮಗಳ ಸಾಹಸದ ಬುದ್ಧಿಯನ್ನು ಮೆಚ್ಚಿ ಹರ್ಷದಿಂದ ಆಶೀರ್ವಾದ ನೀಡಿ ತಾನೇ ಬಲಿಯುತ್ತಾನೆ. ಆದ್ದರಿಂದ ಬದುಕನ್ನು ಬಿಟ್ಟು ಓಡುವ ಪ್ರಯತ್ನವನ್ನು ಎಂದಿಗೂ ಮಾಡಬೇಡವೆಂಬ ಸಂದೇಶವನ್ನು ನೀಡುತ್ತದೆ ಈ ಕಗ್ಗ. ನಮ್ಮ ಕಣ್ಣಿಗೆ ಕಾಣಿಸಿದ ಆದರೂ ವಿಶ್ವದ ಚಲನೆಯ ಕಾರ್ಯವನ್ನು ಅಚ್ಚುಕಟ್ಟಾಗಿ ನಡೆಸುತ್ತಿರುವ ಒಂದು ಗಹನತತ್ವವೇ ವಿಧಿಯಾಗಿದ್ದು ಇದರ ನಿರ್ದೇಶನದಿಂದ ತಪ್ಪಿಸಿಕೊಳ್ಳಲು ಯಾರಿಗೂ ಸಾಧ್ಯವಿಲ್ಲವಾದ್ದರಿಂದ ಏಕಮನಸ್ಸಿನಿಂದ ಕೇಂದ್ರೀಕೃತ ಶಕ್ತಿಯಾದ ವಿಧಿಯನ್ನೇ ತನ್ನ ಪರವನ್ನಾಗಿಸಿಕೊಳ್ಳಲು ಸತತ ಧನಾತ್ಮಕ ಚಿಂತನೆಯಿಂದೊಡಗೂಡಿ ಸಕಲ ಗ್ರಹ ಸೂರ್ಯ ತಾರೆಗಳನ್ನು ಎಡಬಿಡದೆ ಚಾಲನೆಗೊಳಿಸುವ "ಅಸದೃಶ ತಂದೆಯ ಆರ್ಶೀವಾದ ನಮ್ಮ ಮೇಲಿದೆ ನಾನೇ ಗೆಲ್ಲುವನು ಎಂಬ ಪ್ರೇರಣಾಪೂರಕ ಬುದ್ಧಿಯಿಂದ' ಕಾರ್ಯಪ್ರವೃತ್ತನಾಗಲು ನಿರ್ದೇಶನ ನೀಡುತ್ತದೆ ಈ ಕಗ್ಗ.

# "ಬಂಧನ, ನೋವು, ನರಳಾಟಗಳು ಬಾರದಂತೆ ಜೀವನ ಕ್ರಮವಿರಲಿ"

ಪ್ರಸಕ್ತದ ಜಗತ್ತಿನ ಜನರಲ್ಲಿ ನೂರಕ್ಕೆ ತೊಂಬತ್ತೆಂಟರಷ್ಟು ಜನ ಒಂದಿಲ್ಲೊಂದು ಭಯದಿಂದ ಪೀಡಿತರಾಗಿದ್ದಾರೆಂದರೆ ಅತಿಶಯೋಕ್ತಿಯಲ್ಲ. ಕೊಟ್ಟಿರುವ ಹಣ ವಾಪಸ್ಸು ಬರುತ್ತದೋ ಇಲ್ಲವೋ ಎಂಬ ಭಯವಾದರೆ ಇರುವ ಆರೋಗ್ಯ ಯಾವಾಗ ಕೈಕೊಟ್ಟು ರೋಗಿಯನ್ನಾಗಿಸಿ ಬಿಡುತ್ತದೆಂಬ ಭಯ, ಸಂಬಂಧಗಳ ಸುಲಲಿತ ಮುಂದುವರಿಕೆಯ ಭಯ, ಹಿಡಿದಿರುವ ಉದ್ಯಮದಲ್ಲ ಎಲ್ಲಿ ನಷ್ಟವೊದಗೀತೋ ಎಂಬ ಭಯ, ಒಟ್ಟಾರೆ ಭಯಗಳಲ್ಲಿ ಅತ್ಯಂತ ಭಯಾನಕವಾದ ಭಯವೆಂದರೆ ಸಾವಿನ ಭಯ,. ಹುಟ್ಟಿದ ಪ್ರತಿ ಜೀವಿಯೂ ಸಾಯಲೇಬೇಕೆಂಬುದು ಪ್ರಕೃತಿಯ ಕಠೋರ ನಿಯಮ. ಸಾವನ್ನು ಯಾರೂ ಬಯಸದಿದ್ದರೂ, ಅದು ನಿಗದಿತ ಅವಧಿಗೆ ಬಂದೆರಗುತ್ತದೆ. ಆದರೆ ನೋವಿಲ್ಲದ, ನರಳಾಟವಿಲ್ಲದ, ತನ್ನ ಹಸಿವು ನೀಗಿಸಿಕೊಳ್ಳಲು ಇನ್ನೋಬ್ಬರಿಂದ ನೋವಿಲ್ಲದ, ನರಳಾಟವಿಲ್ಲದ, ತನ್ನ ಹಸಿವು ನೀಗಿಸಿಕೊಳ್ಳಲು ಇನ್ನೋಬ್ಬರಿಂದ ತಿನ್ನಿಸಿಕೊಳ್ಳದ ಹಾಗೂ ಬೇರೆಡೆಗೆ ಹೋಗಬೇಕಾದರೆ ಇನ್ನೋಬ್ಬರಿಂದ ಎತ್ತಿಸಿಕೊಳ್ಳದಂಥಹ ಹಾಗೂ ಯಾವುದೇ ವ್ಯಕ್ತಿ ವಸ್ತುಗಳ ಮೋಹದ ನೆನಪು ಬಾರದಂಥಹ ಸಾವು ಬರಲೆಂಬ ಕೋರಿಕೆಯನ್ನು ಸರ್ವಶಕ್ತನ ಮುಂದಿಡಲು ಸೂಚಿಸುತ್ತ ಈ ಕೆಳಗಿನ ಪದ್ಯವನ್ನು ಆಧ್ಯಾತ್ಮ ಕವಿ ಡಿ.ವಿ.ಜಿ ಯವರು ಬಹು ಮನೋಜ್ಞವಾಗಿ ಸೃಜಿಸಿರುತ್ತಾರೆ.

**ಆರ ಕೈತುತ್ತಿಗಂ ನಿನ್ನ ಕಾಯಿಸದೆ ವಿಧಿ**
**ಯಾರ ಭುಜಕುಂ ನಿನ್ನ ಭಾರವಾಗಿಸದೆ**
**ಆರ ಸೆಲೆ ಸುಳಿವುಮಂಟದವೊಲಾಗಿಸಿ ನಿನ್ನ**
**ಪಾರಗಾಣಿಸ ಬೇಡು ಮಂಕುತಿಮ್ಮ ॥930॥**

ನಾವು ವೃದ್ಧರಾಗುತ್ತಿದ್ದಂತೆಯೇ ನಮ್ಮ ದೈಹಿಕ ಶಕ್ತಿಗಳು ಕುಗ್ಗಿ ಇತರರನ್ನು ಆಶ್ರಯಿಸುವ ಸ್ಥಿತಿಗೆ ತಲುಪುತ್ತೇವೆ. ಅಂಥಹ ಸ್ಥಿತಿಗೆ ತಲುಪಿಸದೇ ಯಾರ ಕೈತುತ್ತಿಗೂ ಕಾಯಿಸದೆ, ಯಾರ ಭುಜಕ್ಕೂ ಭಾರವಾಗಿಸದೆ, ಯಾರ ಸೆಲೆ ಸುಳಿವುಗಳು ಅಂಟದಂತೆ ಈ ಜಗತ್ತಿನಿಂದ ಪಾರು ಮಾಡೆಂಬ ಬೇಡಿಕೆಯನ್ನು ಭಗವಂತನಲ್ಲಿ ಇಡಲು ಸೂಚಿಸಿದ್ದಾರೆ.

ಇದೊಂದು ಅತ್ಸಾತಿ ಉತ್ಕೃಷ್ಟ ಚಿಂತನೆ, "ಅನಾಯಾಸೇನ ಮರಣಂ ವಿನಾ ದೈನ್ಯೇನ ಜೀವನಂ ಎಂಬ ನಾಣ್ಣುಡಿಯನ್ವಯ ಯಾರ ಹಂಗಿಗೂ ತಿರಸ್ಕಾರಕ್ಕೂ ಬಳಪಡದೇ ಇರುವ ಸಾವ ನೀಡೆಂದು ಸೃಷ್ಟಿಸ್ಥಿತಿಲಯ ಕರ್ತನನ್ನು ಬೇಡಲು ಸೂಚಿಸಿರುವ ಡಿ.ವಿ.ಜಿ ಯವರು ಅಂದೇ ವೃದ್ಧಾಶ್ರಮದ ಕಲ್ಪನೆಯನ್ನು ಕಂಡಿದ್ದಾರೆ. **Ralph waldo Emerson ಎಂಬ ಮನೋವಿಜ್ಞಾನಿ ತನ್ನ "The power of your subconscious mind"** ಎಂಬ ಕೃತಿಯಲ್ಲಿ **" MAN BECOMES THAT WHAT HE THINKS ALL DAY LONG"** ಮಾನವನು ನಿರಂತರವಾಗಿ ಏನನ್ನು ಚಿಂತಿಸುತ್ತಾನೋ ಅದೇ ಅಗುತ್ತಾನೆ" ಎಂದು ಉವಾಚಿಸುವ ಮೂಲಕ ಮನಸ್ಸಿನ ಅತ್ಯದ್ಭುತ ಕ್ರಿಯಾಶಕ್ತಿಯ ಫಲ ಪಡೆಯಲು ನಿರ್ದೇಶಿಸಿರುತ್ತಾರೆ. ಆದ ಕಾರಣ ನಾವು ನಿರಂತರ ಭಗವಂತನ ಪ್ರೀತಿ ಪೂರ್ವ ಮಕ್ಕಳೆಂದೂ ನಮಗೆ ಒಳ್ಳೆಯದೇ ಆಗುತ್ತದೆಂಬ ಶುಭಭರವಸೆಯನ್ನು ರೂಢಿಸಿಕೊಳ್ಳೂಣವೆಂಬುದೇ ಈ ಪದ್ಯದ ಸಾರಾಂಶವಾಗಿದೆ.

# "ಸೋಲಿನಿಂದೆದೆಗುಂದದೆ ಮರಮರಳಿ ಪ್ರಯತ್ನಿಸು"

ಅಣುರೇಣು ತೃಣಕಾಷ್ಟಗಳಲ್ಲಿ ತನ್ನ ಉತ್ಪತ್ತಿಶಕ್ತಿಯನ್ನು ಅಡಕಗೊಳಿಸಿಕೊಂಡಿರುವ ಏಕಮೇವ ದ್ವಿತೀಯನಾದ ಪರಮಾತ್ಮನು ಈ ಸೃಷ್ಟಿಯನ್ನು ನಿರ್ಮಿಸಿ, ಜನರ ಬಾಳಿನಲ್ಲಿ ಸೋಲು ಗೆಲವುಗಳೆಂಬ ಹಂತಗಳನ್ನು ಅಳವಡಿಸಿ, ಸೋತವನು ಎದೆಗುಂದದೇ ಮರಮರಳಿ ಶ್ರದ್ಧೆಯಿಟ್ಟು ಶ್ರಮಿಸಿದಲ್ಲಿ ವಿಫಲತೆಯನ್ನು ತೊಡೆದು ಹಾಕಿ ಸಫಲತೆಯನ್ನು ಪಡೆಯುತಾನೆಂಬ ಅಂಶವನ್ನು ಆಧ್ಯಾತ್ಮ ಕವಿ ಡಿ.ವಿ.ಜಿಯವರ ಪೌರಾಣಿಕ ಉದಾಹರಣೆ ಮೂಲಕ ಈ ಕೆಳಗಿನ ಪದ್ಯದಲ್ಲಿ ಬಹು ಮನೋಜ್ಞನಾಗಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

ಕೇಂದ್ರೀಕೃತ ಮನಸ್ಸಿಗೆ ಮಿತಿಯಿಲ್ಲದ ಶಕ್ತಿಯಿದೆ **(There Exist limitless Reservoir of power in the focused mind)** ಎಂಬ ಧೃಡೀಕೃತ ಅಂಶವನ್ನು ಮನಃಶಾಸ್ತ್ರಜ್ಞ ಎಮರ್ಸನ್ ತನ್ನ "ಸುಪ್ತಮನಸ್ಸಿನ ಮಹಾದ್ಭುತಗಳು" ಎಂಬ ಪುಸ್ತಕದಲ್ಲಿ ದಾಖಲಿಸಿರುತ್ತಾರೆ. ಪದ್ಯಹೀಗಿದೆ.

**ಏಸು ಸಲ ತಪವಗೈದೇಸು ಬನ್ನವನಾಂತು**
**ಕೌಶಿಕಂ ಬ್ರಹ್ಮರ್ಷಿ ಪದಕರ್ಹನದಾನ**
**ಘೌಸಿಪಡುತಿನ್ನೊಮ್ಮೆ ಮತ್ತೊಮ್ಮೆ ಮರಮರಳಿ**
**ಲೇಸಾಗಿಸಾತ್ಮವನು ಮಂಕುತಿಮ್ಮ ॥ 699 ॥**

ಪದ್ಯದಲ್ಲಿ ವಿಶ್ವವಿಖ್ಯಾತ "ಗಾಯಿತ್ರಿ ಮಂತ್ರ" ದ ರಚನೆಕಾರ ಮಹರ್ಷಿ ವಿಶ್ವಾಮಿತ್ರರನ್ನು ಉದಾಹರಿಸಿ ಕ್ಷತ್ರಿಯರಾಗಿದ್ದ ವಿಶ್ವಮಿತ್ರು ಪುನರಾವರ್ತಿತ ಪ್ರಯತ್ನಗಳ ಮೂಲಕ ಸೋಲುಗೆಲುವುಗಳ ಸರಪಣಿಯಲ್ಲಿ ಹಾದು ಬ್ರಹ್ಮರ್ಷಿ ಪದವಿಯನ್ನು ಪಡೆದು ಎದುರಾಳಿ ವಶಿಷ್ಠರಿಂದ ಅಭಿನಂದನೆ ಪಡೆದ ಮಹತ್ಸಾಧಕನಾಗಿದ್ದ ಯಶಸ್ಸಿನ ಹಿಂದೆ "ಮರಳೀಯತ್ನವ ಮಾಡು" ತತ್ವೋಪದೇಶದ ಪಾಠವನ್ನು ನೀಡಿದ್ದಾರೆ. ಯಷಿಯು ಒಂದೇ ಸಾರಿ ಯಶಸ್ಸಿನ ಶಿಖರವನ್ನೇರಲಿಲ್ಲ. ದಿನಬೆಳಗಾಗುವುದರೊಳಗೆ ಸಫಲತೆಯನ್ನು ಮುಟ್ಟಲಿಲ್ಲ. ದೇವತೆಗಳ ಕುತಂತ್ರದಿಂದ ಅಪ್ಸರೆ ಮೇನಕೆ ರಂಬೆಯರುಗಳಿಂದ ತಪೋಭಂಗಕ್ಕೊಳಗಾಗಿ ಮರಮರಳಿ ಮನಸ್ಸನ್ನು

ಗಟ್ಟಿಗೊಳಿಸಿಕೊಂಡು ಕಾರಣ ಯಶಸ್ಸಿನ ನಿಲ್ದಾಣವನ್ನು ತಲುಪುತ್ತಾರೆ.

ಮಗುವೊಂದು ಚಿಕ್ಕಂದಿನಲ್ಲಿ ನಡೆಯಲು ಪ್ರಾರಂಭಿಸಿದಾಗ ಎಡವಿಬಿದ್ದದ್ದನ್ನು ನೆನಪಿಸಿಕೊಂಡು ಪ್ರಯತ್ನವನ್ನೇ ಬಿಟ್ಟರೆ ಮುಂದೆ ನಡೆಯುವುದನ್ನೇ ಕಲಿಯಲಾರದವನಾಗುತ್ತಾನೆ. ಸೋಲು ಯಶಸ್ಸಿನ ಮೆಟ್ಟಿಲು **(Failure is a Stepping stone to success)** ಎಂಬ ಪಾಠವನ್ನು ಮನದಲ್ಲಿರಿಸಿಕೊಂಡು ದೈವಶ್ರದ್ಧೆಯಿಂದ ಪ್ರಯತ್ನಿಸಿದಲ್ಲಿ ಯಶಸ್ಸಿನ ಶಿಖರ ಸಮಾಪಿಸುತ್ತದೆಯೆಂಬುದು ದೈವಾಂಶ ಸಂಭೂತರ ಅಂಬೋಣ.

ಮನಸ್ಸನ್ನು ತಿದ್ದಿತಿದ್ದಿ ಪ್ರಯತ್ನಶೀಲನಾಗಿರುವ ಆತ್ಮೋದ್ಧಾರಿ ಸಾಧಕವನ್ನು ಯಶಸ್ಸು ಕೈಬೀಸಿ ಕರೆಯುತ್ತದೆಯೆಂಬುದು ಜ್ಞಾನಿಗಳ ನುಡಿಯಾಗಿದೆ. ಅಂಥಹ ಪ್ರಯತ್ನಶೀಲ ವ್ಯಕ್ತಿಗೆ ನೈಸರ್ಗಿಕ ದೈವೀಶಕ್ತಿಗಳ ಬೆಂಬಲಿಸಿ ಯಶಸ್ಸನ್ನು ನೀಡುತ್ತದೆಯೆಂಬುದೂ ಗುರುಹಿರಿಯರ ಅನುಭವದ ಮಾತು. ಭಾರೀ ಹಿನ್ನೆಡೆಯಲ್ಲಿದ್ದವನು ತನ್ನ ಅವಿರತ ಪ್ರಯತ್ನದ ಮೂಲಕ ಮುನ್ನಡೆಗೆ ಬಂದಿರುವುದು ಪ್ರಯತ್ನಶೀಲತೆಯ ಸಂಕೇತವೆಂದಿರುತ್ತಾರೆ. ಇದರನ್ವಯ ಪ್ರತಿ ಸಾಧಕನೂ ತನ್ನದೇ ಆದ ಪೂರ್ವೆತಿಹಾಸವನ್ನು ಹೊಂದಿರುತ್ತಾನೆ ಹಾಗೂ ಪ್ರತಿ ಪಾಪಿಯೂ ಸಹ ಉತ್ತಮ ಭವಿಷ್ಯವನ್ನು **(Each Saint had a past and each sin¬ner has a bright future)** ಹೊಂದಿರುತ್ತಾನೆನ್ನುತ್ತದೆ ಸಾಧನಾ ದಿನಚರಿ. "ಸೋಮಾರಿಯೋರ್ವನಿಗೆ ಕುಳಿತುಕೊಂಡಿರುವುದೇ ಕೆಲಸವೆಂದು ಪರಿಗಣೀತವಾದರೆ ಕಾರ್ಯಪ್ರವೃತ್ತನಿಗೆ ಕೆಲಸ ಮಾಡುವುದೇ ವಿರಾಮ" ವೆಂಬ ಮಾತೂ ಇದೆ.

ತತ್ಕಾರಣ "ಕೇಂದ್ರೀಕರಣ ವೈಫಲ್ಯ" **(Concentration lapse)** ಕ್ಕೊಳಗಾಗದೇ ಏಕದಿಕ್ಕಿನಲ್ಲಿ ಅವಿರತವಾಗಿ ಪ್ರಯತ್ನಿಸಿದಲ್ಲಿ ಯಶಸ್ಸು ಕಟ್ಟಿಟ್ಟಬುತ್ತಿಯೆಂಬುದೇ ಈ ಪದ್ಯದ ಸಾರಾಂಶವಾಗಿದೆ.

# "ಉಣೀಸನೀವನು ದನಕೆ ತಣಿಪನೀವನು ಜನಕೆ ಗುಣಶಾಲಿತೃಣಸಾಧು"

ಹಸನ್ಮುಖಿತ್ವದೊಡನೆ ಘನಘೋರ ರೌದ್ರ ರೂಪಗಳನ್ನೊಳಗೊಂಡ ಸರ್ವೇಶ್ವರನಾದ ಜಗದೀಶ್ವರನಾದ ತನ್ನ ಸೃಷ್ಠಿಕಾರ್ಯವನ್ನೆಸುಗುತ್ತಾ, ಅನೇಕ ಕಿರುಗಾತ್ರದಿಂದ ಬಹುಗಾತ್ರದ ಸಮುದ್ರ ಸಸ್ಯ, ವೃಕ್ಷ, ಪ್ರಾಣಿಗಳನ್ನು ಹಾಗೂ ಮನುಷ್ಯನನ್ನು ಸೃಷ್ಠಿಸಿದ ವಿಶಾಲವಾದ ಸಮುದ್ರ, ಅತ್ಯುನ್ನತ ಶಿಖರವುಳ್ಳ ಪರ್ವತ ಶ್ರೇಣಿಗಳನ್ನೊಳಗೊಂಡಂತೆ ಪರಮಾಶ್ಚರ್ಯ ಹಾಗೂ ನಯನಮನೋಹರವಾದ ಸೃಷ್ಠಿಗಳಿಗೂ ಅಸ್ತಿತ್ವ ನೀಡಿದ, ಆಯಾ ವಸ್ತು ವೈವಿಧ್ಯಗಳು ತಳೆದಿರುವ ಗಾತ್ರಗಳಿಂದ ಮಾತ್ರ ಅವುಗಳ ಉಪಯೋಗವನ್ನು ಪರಿಗಣಿಸದೇ ಕಿಂದರಲ್ಲಿ ಕಿರಿದಾದ ಪ್ರಾಣಿ ಹಾಗೂ ಸಸ್ಯಗಳು ಸಹ ಉಪಯುಕ್ತತೆಯನ್ನು ನೀಡಬಲ್ಲವೆಂಬ ಅಂಶವನ್ನು ಆಧ್ಯಾತ್ಮ ಕವಿ ಡಿ.ವಿ. ಜಿಯವರು ಗರಿಕೆ ಹುಲ್ಲಿ ಉದಾಹರಣೆ ನೀಡುತ್ತಾ ಅದು ಜಗತ್ತಿಗೆ ತಂಪನ್ನು ನೀಡುವುದರ ಜೊತೆಗೆ ದನದ ಬಡಲಿಗೆ ಸಂತೃಪ್ತ ಆಹಾರವಾಗುತ್ತಾವೆಂಬ ಅಂಶವನ್ನು ಬಹು ಮನೋಜ್ಞವಾಗಿ ಹಾಗೂ ಭಾವಾವೇಶದಿಂದ ಬಣ್ಣಿಸಿದ್ದಾರೆ. ಗರಿಕೆಯ ಗುಣಶಾಲಿತ್ವ ಮತ್ತು ಅಕ್ಷಯತೆಗಳನ್ನು ಜೀವರಾಶಿಗೆ ಸಾಧುವಾದ ಅಂಶವೆಂದು ಹೊಗಳಿದ್ದಾರೆ. ಪದ್ಯದ ಪುಟ ಈ ಕೆಳಗಿನಂತಿದೆ.

**ಅಣಗಿದ್ದು ಬೇಸುಗೆಯೊಳ ಎದ್ದು ಮಳೆ ಕರೆದಂದು**

**ಗುಣೆಯನದೆ ತಿಟ್ಟೆನದೆ ಸಿಕ್ಕಿದೆಡೆ ಬೆಳೆದು**

**ಉಣೀಸನೀವನು ದನಕೆ ತಣಿಪನೀವನು ಜಗಕೆ**

**ಗುಣಶಾಲಿ ತೃಣಸಾಧು ॥ಮಂಕುತಿಮ್ಮ॥**

ಸುಡು ಬಿಸಿಲಿನ ಬೇಸಿಗೆಯಲ್ಲಿ ತಾಪದಿಂದಾಗಿ ಕಣ್ಣಿಗೆ ಕಾಣಿಸದಷ್ಟು ಅದೃಶ್ಯ ಸ್ಥಿತಿಯಲ್ಲಿದ್ದು ಪ್ರಕೃತಿಯ ಅಮೃತ ಸದೃಶ ವರ್ಷಧಾರೆ ಬಂದೊಡನೆ ನಿಸರ್ಗದ ಕರೆಗೆ ಓಗೊಟ್ಟು ಬೀಜರೂಪವಾಗಿ ಹಳ್ಳ, ತಿಟ್ಟು, ಕಾಡು, ಮೇಡು ಹಾಗೂ ಕಲ್ಲುಪೂಟರೆಗಳ ಸಂದುಸಂಧುಗಳಲ್ಲಿಯೂ ಜನ್ಮತಾಲಿ ಕಾಣಿಸಿಕೊಳ್ಳಲು ಹಸಿರು ಗರಿಕೆ, ಇದೇ ಬಯಲಿಗೆ ಹಸಿರು ಸೀರೆಯುಡಿಸಿದಂತೆ ಭವ್ಯ ಸೌಂಧರ್ಯ ನೀಡುತ್ತದೆಯೆಂದಿದ್ದಾರೆ. ಇಂಥಹ ಗರಿಕೆ ತನ್ನ ಕಸುವನ್ನು, ಜೀವವಾಗುವ ರಹಸ್ಯಶಕ್ತಿಯನ್ನು ಅಷ್ಟೊಂದು ದೀರ್ಘಕಾಲದ ಸುಡು ಬೇಸಿಗೆಯಲ್ಲಿಯೂ ಉಳಿಸಿಕೊಂಡಿರುವುದು ಅದರ ಸೃಷ್ಟಿಗುಣದ ಅಕ್ಷಯತೆಯೆಂದಿದ್ದಾರೆ. ಈ ಗರಿಕೆಯು

ಬಹೋಪಯೋಗಿಯಾಗಿ ಹಾಲು, ಮೊಸರು ನೀಡುವ ದನಗಳಿಗೆ ಮೇವಾಗಿ ತೃಪ್ತಿ ನೀಡುವುದರ ಜೊತೆಗೆ ಪ್ರಾಣಿಪಕ್ಷಿ ಹಾಗೂ ಮನುಷ್ಯನಿಗೆ ತಂಪನ್ನೀಯುತ್ತದೆಯೆಂದಿದ್ದಾರೆ.

ಗಾತ್ರದಲ್ಲಿ ಕಿರಿದಾಗಿದ್ದರೂ ಮಹತ್ವಪೂರ್ಣಸೇವೆ ನೀಡುವ ಗರಿಕೆಯ ಔಷಧೀಯ

ಸಸ್ಯವೂ, ಹೌದು. ಆಯುರ್ವೇದದಲ್ಲಿ ಗರಿಕೆಯ ಔಷಧಗಳಿಗೆ ಬಹಳ ಪ್ರಾಮುಖ್ಯತೆಯಿದೆ. ಅಡ್ಡಪರಿಣಾಮಗಳಿಲ್ಲದೇ ಇಚ್ಛಿತ ಪರಿಹಾರವನ್ನು ನೀಡಬಲ್ಲ ಔಷಧವಾಗಿಯೂ ಜನಸೇವೆಗೆ ತೆರೆದುಕೊಂಡಿದೆ. ಇದರಂತೆಯೇ ಜೇನುದುಂಬಿ ಹಾಗೂ ಅಳಿಲುಗಳನ್ನು ತಮ್ಮ ತಮ್ಮ ಪಾಲಿನ ಸೇವೆ ಗೈಯ್ಯುವುದರಲ್ಲಿ ಹಿಂದೆ ಬಿದ್ದಿಲ್ಲ. ಕಿರಿದಾದ ಜೇನುದುಂಬಿ ಬಹುಪುಷ್ಪಗಳ ಸುರ್ಪವಿರಿಸಿಕೊಂಡು ಮಧುವನ್ನು ಹುಟ್ಟುಹಾಕಿ ಜೇನುಗೂಡಿನಲ್ಲಿ ಸಂಗ್ರಹಿಸಿಟ್ಟಿದ್ದನ್ನು ನಾವು ಮಾನವರು ಅಪಹರಿಸುತ್ತೇವೆ. ಅಂತೆಯೇ ಸೇವೆಯ ವಿಷಯ ಬಂದಾಗ "ಅಳಿಲಸೇವೆ" ಯೆಂದೇ ಹೆಸರು ಪಡೆದಿರುವ ಅಳಿಲು ಧರ್ಮಗ್ರಂಥ ರಾಮಾಯಣದ ನಾಯಕ ಶ್ರೀರಾಮ ರಾವಣರ ಸಮರ ಕಾಲದಲ್ಲಿ ಮಹಾಸೇತುಬಂಧ ಕಾಲದಲ್ಲಿ ಮರಳನ್ನು ತನ್ನ ಮೈಯಿಂದ ತಂದು ಹಾಕಿ ನಿರ್ಮಾಣ ಕಾರ್ಯಕ್ಕೆ ನೆರವಾದದ್ದು ಪೌರಣಿಕ ಸ್ವರಣಾಂಶವಾಗಿದೆ.

ಹೀಗೆ ಯಾವುದೇ ಜೀವಿಯಾಗಲೀ ವ್ಯಕ್ತಿಯಾಗಲೀ ತನ್ನ ಗಾತ್ರ ಸ್ಥಿತಿಯನ್ನವಲಂಬಿಸದೇ ಮಾಡಬೇಕಾದ ಕಾರ್ಯದಲ್ಲಿ ನೆರವಾಗಬೇಕೆಂಬ ಸದುದ್ದೇಶವನ್ನು ಹೊಂದಿದ್ದಲ್ಲಿ ಖಂಡಿತವಾಗಿಯೂ ಗ್ರಾತ್ರ ಹಾಗೂ ಸ್ಥಿತಿ ಅವಲಂಬಿನೆಯಲ್ಲದೇ ನೆರವಾಗ ಬಹುದೆಂಬುದೇ ಈ ಪದ್ಯದ ಸಾರಾಂಶವಾಗಿದೆ. ನನ್ನಿಂದೇನಾದೀತು, ನನಗಷ್ಟು ಶಕ್ತಿಯಲ್ಲಿ ಎಂಬ ಕೀಳರಿಮೆಯನ್ನು ತೊರೆದು ಧೈರ್ಯಶಾಲಿಯಾಗಿ ಕಾರ್ಯೋನ್ಮುಖನಾಗಿ ಸಫಲತೆ ಪಡೆಯನ್ನುವ ಪ್ರೇರಪಣೆ ನೀಡುತ್ತದೆ ಈ ಕಗ್ಗ ಪದ್ಯ.

## ಸಹಕಾರಿ ತತ್ವಗಳು

(1) ಸಹಕಾರಿಗಳು, ತಮ್ಮ ಸೇವೆಯನ್ನು ಬಳಸಿಕೊಳ್ಳಬಲ್ಲ ಹಾಗೂ ಸದಸ್ಯತ್ವದ ಜವಾಬ್ದಾರಿಗಳನ್ನು ತೆಗೆದುಕೊಳ್ಳಲು ಇಚ್ಛೆಯಿರುವ ಎಲ್ಲಾ ವ್ಯಕ್ತಿಗಳಿಗೆ, ಲಿಂಗಬೇಧವಿಲ್ಲದೆ, ಸಾಮಾಜಿಕ, ಜನಾಂಗೀಯ, ರಾಜಕೀಯ ಅಥವಾ ಧಾರ್ಮಿಕ ತಾರತಮ್ಯವಿಲ್ಲದೆ ಮುಕ್ತವಾಗಿರುವ ಸ್ವಯಂಸೇವಾ ಸಂಸ್ಥೆಗಳಾಗಿರುತ್ತವೆ.

(2) ಸಹಕಾರಿಗಳು ಪ್ರಜಾಸತ್ತಾತ್ಮಕ ಸಂಸ್ಥೆಗಳಾಗಿದ್ದು, ಅವುಗಳ ಕಾರ್ಯನೀತಿಯನ್ನು ರೂಪಿಸುವ ಹಾಗೂ ನಿರ್ಧಾರಗಳನ್ನು ಕೈಗೊಳ್ಳುವ ಕಾರ್ಯದಲ್ಲಿ ಕ್ರಿಯಾತ್ಮಕವಾಗಿ ಪಾಲ್ಗೊಳ್ಳುವ ಸದಸ್ಯರಿಂದ ನಿಯಂತ್ರಿತವಾದ ಸಂಸ್ಥೆಗಳಾಗಿರುತ್ತವೆ. ಚುನಾಯಿತ ಪ್ರತಿನಿಧಿಗಳಾಗಿ ಸೇವೆ ಸಲ್ಲಿಸುವ ಪುರುಷರು ಮತ್ತು ಮಹಿಳೆಯರು ಸದಸ್ಯತ್ವಕ್ಕೆ ಜವಾಬ್ದಾರರಾಗಿರುತ್ತಾರೆ. ಪ್ರಾಥಮಿಕ ಸಹಕಾರಿಗಳ ಸದಸ್ಯರು ಸಮನಾದ ಮತಚಲಾವಣೆ ಹಕ್ಕನ್ನು ಹೊಂದಿರುತ್ತಾರೆ (ಒಬ್ಬ ಸದಸ್ಯ, ಒಂದು ಮತ) ಮತ್ತು ಇತರ ಹಂತಗಳಲ್ಲಿ ಸಹಕಾರಿಗಳನ್ನು ಪ್ರಜಾಸತ್ತಾತ್ಮಕ ರೀತಿಯಲ್ಲಿ ಸಂಘಟಿಸಲಾಗಿದೆ.

(3) ಸದಸ್ಯರು ತಮ್ಮ ಸಹಕಾರಿಗೆ ನ್ಯಾಯಸಮ್ಮತವಾಗಿ ವಂತಿಗೆ ನೀಡುತ್ತಾರೆ ಮತ್ತು ಅದರ ಬಂಡವಾಳವನ್ನು ಪ್ರಜಾಸತ್ತಾತ್ಮಕವಾಗಿ ನಿಯಂತ್ರಿಸುತ್ತಾರೆ. ಆ ಬಂಡವಾಳದ ಕಡೇ ಪಕ್ಷ ಒಂದು ಭಾಗ ಸಾಮಾನ್ಯವಾಗಿ ಸಹಕಾರಿಯ ಸಾಮಾನ್ಯ ಸ್ವತ್ತಾಗಿರುತ್ತದೆ. ಸದಸ್ಯತ್ವದ ಷರತ್ತಾಗಿ ಚಂದಾ ನೀಡಲಾದ ಬಂಡವಾಳದ ಮೇಲೆ ಸಾಮಾನ್ಯವಾಗಿ ಅವು ಸೀಮಿತ ಪರಿಹಾರವನ್ನು ಪಡೆಯುತ್ತವೆ. ಸದಸ್ಯರು, ಹೆಚ್ಚುವರಿ ಹಣವನ್ನು ಈ ಮುಂದಿನ ಯಾವುದೇ ಅಥವಾ ಎಲ್ಲ ಉದ್ದೇಶಗಳಿಗೆ ಹಂಚಿಕೆ ಮಾಡುತ್ತಾರೆ; ಕಡೆಯ ಪಕ್ಷ ಮೀಸಲು ನಿಧಿಯ ಒಂದು ಭಾಗ ಅವಿಭಾಜ್ಯವಾಗಿರುವಂತೆ ಅದನ್ನು ಸ್ಥಾಪಿಸುವ ಮೂಲಕ ಸಹಕಾರಿಯ ಅಭಿವೃದ್ಧಿ, ಸಹಕಾರಿಯೊಡನೆ ಸದಸ್ಯರಿಗಿರುವ ವ್ಯವಹಾರಗಳ ಪ್ರಮಾಣಕ್ಕನುಗುಣವಾಗಿ ಸದಸ್ಯರಿಗೆ ಅನುಕೂಲ ಕಲ್ಪಿಸುವುದು ಮತ್ತು ಸದಸ್ಯರಿಂದ ಅನುಮೋದನೆಯಾದ ಇತರ ಚಟುವಟಿಕೆಗಳನ್ನು ಬೆಂಬಲಿಸುವುದು.

(4) ಎಲ್ಲ ಸಹಕಾರಿಗಳು ಅವುಗಳ ಸದಸ್ಯರಿಂದ ನಿಯಂತ್ರಿತವಾದ ಸ್ವಾಯತ್ತ ಸ್ವ-ಸಹಾಯ ಸಂಸ್ಥೆಗಳಾಗಿವೆ. ಸರ್ಕಾರವೂ ಸೇರಿದಂತೆ ಇತರ ಸಂಘ-ಸಂಸ್ಥೆಗಳೊಡನೆ ಸಹಕಾರಿಗಳು ಒಪ್ಪಂದ ಮಾಡಿಕೊಂಡರೆ ಅಥವಾ ಹೊರಗಿನ ಮೂಲಗಳಿಂದ ಬಂಡವಾಳ ಸಂಗ್ರಹಿಸಿದರೆ ಅವು ಅವುಗಳ ಸದಸ್ಯರಿಂದ ಪ್ರಜಾಸತ್ತಾತ್ಮಕ ನಿಯಂತ್ರಣಕ್ಕೊಳಪಡುತ್ತದೆಂಬ ಹಾಗೂ ಅವು ತಮ್ಮ ಸಹಕಾರಿ ಸ್ವಾಯತ್ತತೆಯನ್ನು ಉಳಿಸಿಕೊಂಡು ಬರುತ್ತದೆಂಬ ನಿಬಂಧನೆಗಳ ಮೇಲೆ ಹಾಗೆ ಮಾಡುತ್ತವೆ.

(5) ಸಹಕಾರಿಗಳ ಅಭಿವೃದ್ಧಿಗೆ ತಮ್ಮ ಪರಿಣಾಮಕಾರಿಯಾದ ಕೊಡುಗೆಯನ್ನು ನೀಡಲನುವಾಗುವಂತೆ ಸಹಕಾರಿಗಳು, ತಮ್ಮ ಸದಸ್ಯರಿಗೆ, ಚುನಾಯಿತ ಪ್ರತಿನಿಧಿಗಳಿಗೆ, ವ್ಯವಸ್ಥಾಪಕರಿಗೆ ಮತ್ತು ನೌಕರರಿಗೆ ಶಿಕ್ಷಣ ಮತ್ತು ತರಬೇತಿಯನ್ನು ನೀಡುತ್ತವೆ. ಇದರಿಂದ ಅವರು ಸಹಕಾರಿಯ ಸ್ವರೂಪ ಮತ್ತು ಪ್ರಯೋಜನಗಳ ಬಗ್ಗೆ ಅವು ಸಾರ್ವಜನಿಕರಿಗೆ ಅದರಲ್ಲೂ ವಿಶೇಷವಾಗಿ ಯುವಜನರಿಗೆ ಮತ್ತು ಮುಖಂಡರುಗಳಿಗೆ ತಿಳಿಸುತ್ತವೆ.

(6) ಸಹಕಾರಿಗಳು ತಮ್ಮ ಸದಸ್ಯರಿಗೆ ಹೆಚ್ಚು ಪರಿಣಾಮಕಾರಿ ಸೇವೆಯನ್ನು ಸಲ್ಲಿಸುತ್ತವೆ ಮತ್ತು ಸ್ಥಳೀಯ, ಪ್ರಾದೇಶಿಕ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಘಟಕಗಳ ಮೂಲಕ ಜೊತೆಗೂಡಿ ಕೆಲಸ ಮಾಡುವುದರಿಂದ ಸಹಕಾರಿ ಆಂದೋಲನವನ್ನು ಬಲಪಡಿಸುತ್ತವೆ.

(7) ಸದಸ್ಯರ ಅವಶ್ಯಕತೆಗಳಿಗೆ ಗಮನ ನೀಡುವುದರ ಜೊತೆ ಸಹಕಾರಿಗಳು ಅವುಗಳ ಸದಸ್ಯರು ಒಪ್ಪಿದ ಕಾರ್ಯನೀತಿಗಳ ಮೂಲಕ ಅವರವರ ಕೋಮುಗಳ ಸತತ ಅಭಿವೃದ್ಧಿಗೆ ಶ್ರಮಿಸುತ್ತವೆ.

# ಸಹಕಾರ ಗೀತೆ

ಸಮಾಜ ಹೈ ಆರಾಧ್ಯ ಹಮಾರಾ, ಸೇವಾ ಹೈ ಆರಾಧನಾ !

ಭಾರತ ಮಾತಾ ಕೆ ವೈಭವ ಹಿತ, ಸಹಕಾರಿತಾ ಕೀ ಸಾಧನಾ !!

ಸಹಕಾರಿತಾ ಕೀ ಸಾಧನಾ !!ಪ!!

ಸಮಾಜ ಸೆ ಹೀ ಸಂಸ್ಕೃತಿ ಕೀ ಯಹ್, ಶ್ರೇಷ್ಠ ಧರೋಹರ್ ಹಮೆ ಮಿಲೀ !

ಧನ ಸಾಮರ್ಥ್ಯ, ಜ್ಞಾನ ಕೀ ಪೂಂಜೀ, ಸಮಾಜ ಸೆ ಹೀ ಹಮೆ ಮಿಲೀ !

ಯಹ ಸಮಾಜ್ ಋಣ್ ಪೂರ್ಣ್ ಚುಕಾನೆ, ಜೊ ಪಾಯಾ ಸೊ ಬಾಂಟನಾ !!

ಭಾರತ ಮಾತಾ ಕೆ ವೈಭವ ಹಿತ, ಸಹಕಾರಿತಾ ಕೀ ಸಾಧನಾ !!

ಸಹಕಾರಿತಾ ಕೀ ಸಾಧನಾ !!ಪ!!

ಸಮಾನ್ ಅವಸರ್ ಮಿಲೆ ಸಭೀ ಕೋ, ಕೊಯಿಭೀ ನ ಉಪೇಕ್ಷಿತ್ ಹೋ !

ಸಭೀ ಸ್ವಸ್ಥ ಶಿಕ್ಷಿತ್, ಸಂಸ್ಕಾರಿತ್, ಸಮರ್ಥ ಔರ್ ಸುರಕ್ಷಿತ್ ಹೋ !

ದಯಾ ನಹೀ, ಉಪಕಾರ ನಹೀ ಯಹ್, ಅಪನೆಪನ್ ಕಿ ಭಾವನಾ !!

ಭಾರತ ಮಾತಾ ಕೆ ವೈಭವ ಹಿತ, ಸಹಕಾರಿತಾ ಕೀ ಸಾಧನಾ !!

ಸಹಕಾರಿತಾ ಕೀ ಸಾಧನಾ !!ಪ!!

ಭಾಷಾ, ಪ್ರಾಂತ್, ಜಾತಿ ಜೊ ಭೀ ಹೋ, ಭಾರತ ಮಾ ಕೆ ಪುತ್ರ ಸಭೀ !

ಗ್ರಾಮ್, ನಗರ್, ವನವಾಸಿ ಗಿರಿಜನ್, ಅಪನೆ ತೊ ಹೈ ಬಂಧು ಸಭೀ !

ಜನತಾ ಕೆ ಸುಖ ಮೆ ಹೀ ತೊ ಹೈ, ಸಮಾಜ-ಸುಖ್ ಕೀ ಧಾರಣಾ !!

ಭಾರತ ಮಾತಾ ಕೆ ವೈಭವ ಹಿತ, ಸಹಕಾರಿತಾ ಕೀ ಸಾಧನಾ !!

ಸಹಕಾರಿತಾ ಕೀ ಸಾಧನಾ !!ಪ!!

ಶಾಂತಿ ಮಂತ್ರ

ಸರ್ವೇ ಭವಂತು ಸುಖಿನಃ ಸರ್ವೇ ಸಂತು ನಿರಾಮಯಾ !

ಸರ್ವೇ ಭದ್ರಾಣಿ ಪಶ್ಯಂತು, ಮಾ ಕಶ್ಚಿತ್ ದುಃಖಭಾಗ್ ಭವೇತು !!

## ಸಹಕಾರಿ ಧ್ವಜದಲ್ಲಿನ 7 ಬಣ್ಣಗಳು

- ಸಹಕಾರ ಬೇಸಾಯ
- ಸಹಕಾರಿ ಉದ್ದಿಮೆ
- ಸಹಕಾರಿ ಮಾರಾಟ
- ಸಹಕಾರಿ ಪತ್ತು ಮತ್ತು ಹಣಕಾಸು
- ಸಹಕಾರಿ ಶಿಕ್ಷಣ ಮತ್ತು ಪ್ರಚಾರ
- ಮಾನವನ ಇತರೆ ಸಹಕಾರಿ ಚಟುವಟಿಕೆಗಳು
- ಸಹಕಾರಿ ಆರೋಗ್ಯ

## 7 ಸಹಕಾರಿ ತತ್ವಗಳು

1. ಮುಕ್ತ ಹಾಗೂ ಸ್ವಯಂ ಪ್ರೇರಿತ ಸದಸ್ಯತ್ವ
2. ಪ್ರಜಾಸತ್ತಾತ್ಮಕ ಸದಸ್ಯರ ಹತೋಟಿ
3. ಆರ್ಥಿಕ ಚಟುವಟಿಕೆಗಳ ಸದಸ್ಯರ ಪಾಲು
4. ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ
5. ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಚಾರ
6. ಸಹಕಾರಿಗಳಲ್ಲಿ ಪರಸ್ಪರ ಕ್ರಿಯಾತ್ಮಕ ಸಹಕಾರ
7. ಸಾಮಾಜಿಕ ಕಳಕಳಿ


**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.**

ಸೌಹಾರ್ದ ಸಹಕಾರಿ ಸೌಧ, ನಂ.68, 17&18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560055 ದೂ : 080-23378375-80, ವೆಬ್ ತಾಣ : www.Souharda.coop